ಕರ್ನಾಟಕದ ಭಾವಚಿತ್ರಕಲೆ

(ಉತ್ತರಕರ್ನಾಟಕವನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ



ಸಂಶೋಧಕರು

ವೀರೇಶ್ ಮಹಾಂತೇಶ್ ರುದ್ರಸ್ವಾಮಿ

ಮಾರ್ಗದರ್ಶಕರು

ಡಾ. ಲಕ್ಷ್ಮಣಸಿಂಗ್ ಆರ್.ರಾಥೋಡ್

ದೃಶ್ಯಕಲಾ ವಿಭಾಗ

ಲಲಿತಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೬

ಕರ್ನಾಟಕದ ಭಾವಚಿತ್ರಕಲೆ

(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ

ಸಂಶೋಧಕರು

ವೀರೇಶ್ ಮಹಾಂತೇಶ್ ರುದ್ರಸ್ವಾಮಿ

ಮಾರ್ಗದರ್ಶಕರು

ಡಾ.ಲಕ್ಷ್ಮಣಸಿಂಗ್.ಆರ್.ರಾಥೋಡ್
ಉಪನ್ಯಾಸಕರು
ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು
ಮೈಸೂರು

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–583 276
2016

ಪ್ರಮಾಣ ಪತ್ರ

ಕರ್ನಾಟಕದ ಭಾವಚಿತ್ರಕಲೆ(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಮಾರ್ಗದರ್ಶಕರು **ಡಾ.ಲಕ್ಷ್ಮಣಸಿಂಗ್.ಆರ್.ರಾಥೋಡ್** ಉಪನ್ಯಾಸಕರು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ಮೈಸೂರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಂಪ್ರಬಂಧ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಈ ಸಂಪ್ರಬಂಧ ಯಾವುದೇ ಭಾಗವನ್ನ ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 14-09-2016
ಸ್ಥಳ: ವಿದ್ಯಾರಣ್ಯ

(ವೀರೇಶ್ ಮಹಾಂತೇಶ ರುದ್ರಸ್ವಾಮಿ)
ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ವೀರೇಶ್ ಮಹಾಂತೇಶ ರುದ್ರಸ್ವಾಮಿ. ಇವರು ಬರೆದು ಸಾದರಪಡಿಸಿದ **ಕರ್ನಾಟಕದ ಭಾವಚಿತ್ರಕಲೆ** (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಈ ಎಂ.ಫಿಲ್. ಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಇವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಂಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಈ ಸಂಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕಕರಿಸುತ್ತೇನೆ.

ಮಾರ್ಗದರ್ಶಕರು

ಮಾರ್ಗದರ್ಶಕರು

(ಡಾ. ಲಕ್ಷ್ಮಣಸಿಂಗ್. ಆರ್. ರಾಥೋಡ್)

ಡಾ॥ ಲಕ್ಷ್ಮಣ್ ಸಿಂಗ್ ಆರ್. ರಾಥೋಡ್

ಸಹಪ್ರಾಧ್ಯಾಪಕರು

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು,

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು,

ಮೈಸೂರು

ದಿನಾಂಕ: 14-09-2016

ಸ್ಥಳ: ವಿದ್ಯಾರಣ್ಯ

ದೃಢೀಕರಣ ಪತ್ರ

ವೀರೇಶ ಮಹಾಂತೇಶ ರುದ್ರಸ್ವಾಮಿ ಇವರು ಬರೆದು ಸಾದರಪಡಿಸಿದ **ಕರ್ನಾಟಕದ ಭಾವಚಿತ್ರಕಲೆ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಈ ಎಂ.ಫಿಲ್. ಸಂಶೋಧನಾ ಪ್ರಬಂಧವನ್ನು **ಡಾ. ಲಕ್ಷ್ಮಣಸಿಂಗ್ ಆರ್. ರಾಥೋಡ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದಾರೆ.

ದಿನಾಂಕ:
ಸ್ಥಳ: ವಿದ್ಯಾರಣ್ಯ

(ಡಾ. ಹನುಮಣ್ಣನಾಯಕ ದೊರೆ)
ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಪ್ರಸ್ತಾವನೆ:

ಕಲೆ ಕಲೆಗಾಗಿಯೋ ಅಥವಾ ಕಲೆ ಸಮಾಜಕ್ಕಾಗಿಯೋ ಎಂಬ ಪ್ರಶ್ನೆಗೆ ಉತ್ತರಿಸಲು ಹೋದರೇ, ಮೊಟ್ಟಮೊದಲಿಗೆ ಸಾಮಾನ್ಯವಾಗಿ ಮಾನವನ ಮಾನಸಿಕ ಕಾರ್ಯಪ್ರವೃತ್ತಿಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.ಬುದ್ಧಿ ವಿಚಾರಕ್ಕೆ ಸಂಬಂಧಿಸಿದ್ದು, ಇಚ್ಚೆಗೆ ಸಂಬಂಧಿಸಿದ್ದು, ಭಾವನೆಗಳಿಗೆ ಸಂಭಂಧಿಸಿದ್ದು. ಕಲೆಯು ಮುಖ್ಯವಾಗಿ "ಭಾವನೆಗೆ ಸಂಬಂಧಿಸಿದ್ದು ಇದು ಜೀವನದಲ್ಲಿ ಆಗು ಹೋಗುಗಳಿಗೆ ಸನ್ನಿವೇಶಗಳಿಗೆ ಭಾವನೆ ಪ್ರತಿ ಕ್ರಿಯಾತ್ಮಕ ರೂಪಕವಾಗಿದ್ದು, ಇದು ನೇರವಾಗಿ ಹೃದಯದೊಡನೆ ಸ್ಪಂದಿಸುತ್ತದೆ.

ಫೋಟೊಗ್ರಾಫಿಯ ಅನ್ವೇಷಣೆಯ ಮೊದಲಿಗೆ ಭಾವಚಿತ್ರಗಳು ಹೆಚ್ಚು ರೂಢಿಯಲ್ಲಿದ್ದವು. ರಾಜಮಹಾರಾಜರು, ರಾಣಿಯರು, ಸೈನ್ಯಾಧಿಕಾರಿಗಳ ಅಧಿಕಾರಿ ಈ ಮುಂತಾದ ಸಮಾಜದ ಉನ್ನತ ವರ್ಗದವರು ಬರೆಸಿಕೊಳ್ಳುತ್ತಿದ್ದರು.ಹಳ್ಳಿಗಳ ಮನೆಯಲ್ಲಿ ಕುಟುಂಬ ಸದಸ್ಯರ ಛಾಯಾಚಿತ್ರಗಳು ತೂಗುಹಾಕುವುದು ಸಾಮಾನ್ಯವಾಗಿತ್ತು ಅವು ಕಾಲಾನಂತರ ಹಾಳಾಗಿ ಹೋಗುವ ಸಂದರ್ಭ ಇದ್ದಾಗ ಚಿತ್ರಕಲಾವಿದ ಛಾಯಾಚಿತ್ರ ಕೊಟ್ಟು ಛಾಯಾಚಿತ್ರಗಳನ್ನು ಚಿತ್ರಿಸಿದ್ದನ್ನು ಕಾಣಬಹುದು.

ಕಲಾವಿದರು ತಮ್ಮ ಸಂಬಂಧಿಕರನ್ನು ಸ್ನೇಹಿತರನ್ನು ಸಹಕಲಾವಿದರನ್ನು ಸ್ನೇಹಿತರ ಪತ್ನಿಮಕ್ಕಳ ಭಾವಚಿತ್ರಗಳನ್ನು ರಚಿಸುತ್ತಿದ್ದರು. ರಾಜಮಹಾರಾಜರು ತಮ್ಮ ಸಾಧನೆಯ ನೆನಪಿಗೋಸ್ಕರ ಕಲಾವಿದರಿಂದ ಭಾವಚಿತ್ರಗಳು ವ್ಯಕ್ತಿಚಿತ್ರಗಳು ಚಿತ್ರಿಸಿಕೊಂಡು ಅರಮನೆಯಲ್ಲಿ ತೂಗು ಹಾಕುತ್ತಿದ್ದರು. ಹೀಗೆ ಕಾಲದಿಂದ ಕಾಲಕ್ಕೆ ಹಲವಾರು ಶೈಲಿಗಳ ಜೊತೆಗೆ ಭಾವಚಿತ್ರ ರಚನೆಯಲ್ಲಿ ಸಾಕಷ್ಟು ಪ್ರಯೋಗಗಳು ಪರಿಣಿತಿಯನ್ನು ಸಾಧಿಸಿದೆ. ಅಕಾಡೆಮಿಕ್ ಸಂದರ್ಭದಲ್ಲಿ ಪಠ್ಯದ ಮುಖ್ಯ ವಿಷಯವಾಗಿ ಕಲಾವಿದರು ಭಾವಚಿತ್ರ ರಚನೆಗೆ ಆದ್ಯತೆಯನ್ನು ನೀಡಿದ್ದು ಅಂತ ಕಲಾಶಾಲೆಯಲ್ಲಿ ಕಲಾವಿದರು ಪಕ್ವತೆ ಸಾಧಿಸಿದ್ದಾರೆ. ಅದು ಕರ್ನಾಟಕದಲ್ಲಿ ಭಾವಚಿತ್ರವನ್ನು ಗಂಭೀರವಾಗಿ ಸೃಜನಶೀಲತೆಯಿಂದಚಿತ್ರಿಸಿದ ಕಲಾವಿದರನ್ನು ಗುರುತಿಸಿ ಅಧ್ಯಯನ ಮಾಡಲಾಗುವುದು.

ಒಂದರ ಮೇಲೊಂದು ಪ್ರಯೋಗ ಹಾಗೂ ಪಂಥಗಳು ಬೆಳೆಯಲು ಕಾಲವೆ ಸಂದರ್ಭಗಳೇ ಮುಖ್ಯ.ಉದಾ: ಕಲಾಕೃತಿ ಮಾಡುವ ಕಾಲದಲ್ಲಿ ಯಂತ್ರಗಳು ಫೋಟೋಗ್ರಾಫ್ (ಕ್ಯಾಮರಾ)ಬೆಳಕಿಗೆ ಬಂದವು. ನಂತರ ಚಿತ್ರಮಂದಿರಗಳು. ಚಲನಚಿತ್ರಗಳ ಕಾಲ ಹೀಗೆ ಹಲವಾರು ಕಲಾವಲಯದಲ್ಲಿ ಬದಲಾಗಲು ಕಾರಣೀಭೂತವಾಗುತ್ತದೆ. ಆದ್ದರಿಂದ ಹಲವಾರು ಪಂಥಗಳು ಕಾಲಕ್ಕೆ ತಕ್ಕಂತೆ ಶೈಲಿಯಲ್ಲಿ ಬದಲಾವಣೆಗಳನ್ನು ಕಲಾ ಇತಿಹಾಸದ ಅಧ್ಯಯನದಿಂದ ಕಾಣಬಹುದು. ಹೊಸ ಹೊಸ ಆಯಾಮಗಳು ವೈವಿಧ್ಯಮಯವಾಗಿ ಅನುಭವ.ಚಿಂತನ ಶೀಲತೆಗೆ ಅವಕಾಶ ಮಾಡಿಕೊಟ್ಟು ಭಾವಚಿತ್ರಗಳು. ಸಮಕಾಲೀನ ಸಂದರ್ಭದಲ್ಲಿ ಆಗುವ ಪ್ರಯೋಗಗಳು ಹಾಗೂ ತಾಂತ್ರಿಕ ಪರಿಣಿತಿಯಿಂದ ಚಿತ್ರದ ಭಾವಚಿತ್ರಗಳು ಅಧ್ಯಯನಕ್ಕೆ ಸ್ಪೂರ್ತಿಯಾಗಿದೆ.

ಅಧ್ಯಾಯ ಒಂದು:

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ವಿಧಾನ.

ಅಧ್ಯಾಯ ಒಂದು:

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ವಿಧಾನ.

ಪ್ರಕೃತಿಯಲ್ಲಿನ ಅನೇಕ ಬದಲಾವಣೆಯಿಂದಾಗಿ ಮಾನವ, ಬದಕಲು ಹಲವು ಮಾರ್ಗಗಳನ್ನು ಅನುಸರಿಸಿ ಅವರ ಜೊತೆಯಲ್ಲಿಯೇ ಬೆಳೆದು ಬಂದನು. ನಿಸರ್ಗದೊಡನೆ ನಿಕಟ ಸಂಪರ್ಕವನ್ನು ಹೊಂದಿ ಮನುಷ್ಯ ಬದುಕತೊಡಗಿದ ಮಾನವನ ಜೀವನಕ್ಕೂ ಪ್ರಕೃತಿಗೂ ನಿಕಟವಾದ ಸಂಬಧವಿದೆ. ತಾನು ಅನುಭವಿಸಿದ ಘಟನೆ, ಸ್ಥಿತಿಗತಿಗಳು, ನೋವು-ನಲಿವು ಮುಂತಾದವುಗಳ ಒತ್ತಡದಿಂದ ಒಂದೊಂದು ರೀತಿಯ ಸಂವೇದನೆಯನ್ನು ಪಡೆಯುತ್ತಾನೆ. ಅದಕ್ಕನುಗಣವಾಗಿ ತನ್ನ ಅನಿಸಿಕೆಗಳನ್ನು ಹೇಳಬೇಕು ಎನ್ನುವ ಭಾವನೆ ಪ್ರತಿಯೊಬ್ಬನಲ್ಲಿ ಸ್ವಭಾವಜನ್ಯವಾಗಿರುತ್ತದೆ. ಆದರೆ ಅನುಭವಗಳು ಪ್ರಜ್ಞೆಯ ವಸ್ತುಗಳಾದಾಗ ಅವು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತವೆ. ಈ ಕ್ರಿಯೆಯನ್ನು ಸೃಜನಶೀಲತೆ ಎಂದು ಹೇಳುವರು.[1]

ಕಾಲಕ್ರಮೇಣ ಮನುಷ್ಯನ ಅಭಿವ್ಯಕ್ತಿ ಫಲವೇ **"ಕಲೆ"** ಎಂಬ ಪದದ ವ್ಯಾಪ್ತಿಯಲ್ಲಿ ವಿದ್ವಾಂಸರು ಗಮನಿಸುತ್ತಾರೆ. ಸಮಾಜಶಾಸ್ತ್ರಜ್ಞರು **"ಕಲೆ"** ಯ ಉಗಮವನ್ನು ಮಾನವನ ಸಾಮಾಜಿಕ ಜೀವನದ ವಿಕಾಸದಲ್ಲಿ ಕಾಣುತ್ತಾನೆ. ಒಬ್ಬ ಮನಃಶಾಸ್ತ್ರಜ್ಞನು ಕಲೆಯ ಉಗಮವನ್ನು ಮಾನವನ ಸಾಮಾಜಿ ಜೀವನದ ವಿಕಾಸದಲ್ಲಿ ಕಾಣುತ್ತಾರೆ. ಒಬ್ಬ ಮನಃಶಾಸ್ತ್ರಜ್ಞನು ಕಲೆಯ ಉಗಮವನ್ನು ಮಾನವನ ಮನಸ್ಸಿನಲ್ಲಿ ಕಂಡುಹಿಡಿಯುತ್ತಾರೆ. ಸೂಕ್ಷ್ಮ ಚಲನವಲನಗಳ ಅಭಿವ್ಯಕ್ತಿಯೇ ಕಲೆ ಎಂದು ಹೇಳುತ್ತಾರೆ.

ಒಂದು ಮನಸ್ಸಿನಲ್ಲಿ ಉಗಮಿಸಿ, ಇನ್ನೊಂದು ಮನಸ್ಸನ್ನು ಅದು ತುಂಬುವುದು. ಹಾಗೆ ಬುದ್ಧಿ ಜೀವಿಗಳು ತಮ್ಮ ತಮ್ಮ ದೃಷ್ಟಿಯಿಂದ ಕಲೆಯ ಬಗ್ಗೆ ಒಂದೊಂದು ಪರಿಧಿಯನ್ನು ಕಂಡುಹಿಡಿಯುತ್ತಾರೆ. ಈ ಅಭಿಪ್ರಾಯ ಮನುಕುಲದ ವಿವಿಧ ರಂಗದ ಇತಿಹಾಸ ಮತ್ತು ಇಂದಿನ ಸ್ಥಿತಿಯಲ್ಲಿ ನಿಂತು ನೋಡಿದಾಗ ಮನುಷ್ಯ ಜನ್ಮದ ರಹಸ್ಯದಷ್ಟೆ ಈ ಕಲೆಯ ರಹಸ್ಯ ಕೂಡ ಇಲ್ಲಿ ಕಲೆಯ ಉಗಮ ಮತ್ತು ವಿಕಾಸದ ಬಗೆಗೆ ಸ್ವಲ್ಪ ಸಮೀಪ ಹೋಗಿ ನಿಲ್ಲುವ ಸಾಹಸ ಮಾಡಬಹುದೆ ಹೊರತು ಖಚಿತವಾಗಿ ಹೇಳಲು ಸಾಧ್ಯವಾಗದು.

ಕಲೆಯ ಅರ್ಥ ವಿಶಾಲವಾಗಿದೆ ಮತ್ತು ಇದರಲ್ಲಿ ಹಲವಾರು ಪ್ರಕಾರಗಳಿದ್ದು, ಇಲ್ಲಿ ಚಿತ್ರಕಲೆಯ ಒಂದು ಪ್ರಕಾರದ ಅಭಿವ್ಯಕ್ತಿಯಾದ ಭಾವಚಿತ್ರಕಲೆಯನ್ನು ಕುರಿತು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

ಭಾರತದಲ್ಲಿ ಎಲ್ಲಾ ಕಲೆಗಳಂತೆ ಚಿತ್ರಕಲೆಯು ಅನೇಕ ರಾಜಮಹಾರಾಜರ ಆಶ್ರಯದಲ್ಲಿ ಚಿತ್ರಕಲೆ ಬೆಳೆಯುತ್ತಾ ಬಂದಿತು. ಕರ್ನಾಟಕದಲ್ಲಿ ಬಹಳ ಪ್ರಾಚೀನಕಾಲದಿಂದಲೂ ಚಿತ್ರಕಲೆಯ ಬಗ್ಗೆ ಹಲವು ಸಂಗತಿಗಳಿವೆ. ಕನ್ನಡನಾಡಿನ ಅರಸು ಮನೆತನಗಳು ಇಲ್ಲಿಯ ಪ್ರಜೆಗಳು ಲಲಿತ ಕಲೆಗಳ ಬಗ್ಗೆ ಅಪಾರವಾದ ಆಸಕ್ತಿಯ ಜೊತೆ ಧರ್ಮದ ರೂಪದಲ್ಲಿ ಚಿತ್ರಕಲೆಯನ್ನು ಪೋಷಿಸಿ ಬೆಳೆಸಿದ್ದಾರೆ. ಇದರಿಂದಾಗಿ ಕರ್ನಾಟಕದ

ಕಲೆಗಳು ಭರತಖಂಡದ ಎಲ್ಲಾ ಭಾಗಗಳಲ್ಲಿ ಉತ್ತಮವಾದ ಅಂಶಗಳನ್ನು ಕಾಪಾಡಿಕೊಂಡು ಬಂದಿದೆ. ಒಟ್ಟಾರೆಯಾಗಿ ಕನ್ನಡ ನಾಡಿನ ಕಲಾ ಪರಂಪರೆ ಮತ್ತು ಸಂಸ್ಕೃತಿ ಅಪಾರವಾದುದು.

ಕರ್ನಾಟಕದ ಅನೇಕ ಹಿರಿಯ ಕಲಾವಿದರು ಕಲಾಕ್ಷೇತ್ರಕ್ಕೆ ಅಪಾರವಾದ ಕಾಣಿಕೆಯನ್ನು ನೀಡಿದ್ದಾರೆ. ಅವರಲ್ಲಿ ಉತ್ತರ ಕರ್ನಾಟಕದ ಭಾವಚಿತ್ರ ಕಲಾವಿದರು ತಮ್ಮ ಕಲಾಕೃತಿಗಳಿಂದ ರಾಜ್ಯ–ರಾಷ್ಟ್ರ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿದ್ದಾರೆ. ಭಾರತೀಯ ಕಲಾ ಪರಂಪರೆ ಪಾಶ್ಚಾತ್ಯ ಕಲಾ ಚಿರಿತ್ರಗಳ ಅತ್ಯುತ್ತಮ ಸಮನ್ವಯವನ್ನು ತಮ್ಮ ಚಿತ್ರ ಕೃತಿಗಳಲ್ಲಿ ಅಳವಡಿಸಿಕೊಂಡು ಈ ಭಾಗದ ಕಲಾವಿದರು ಕಲಾಕ್ಷೇತ್ರಕ್ಕೆ ಸೇವೆಯನ್ನು ಸಲ್ಲಿಸಿದ್ದಾರೆ. ಈ ಪ್ರದೇಶದ ಭಾವಚಿತ್ರ ಕಲಾವಿದರ ಸಾಧನೆಗಳು ನಮಗೆ ಹೆಮ್ಮೆಯ ಸಂಗತಿಯಾಗಿದೆ. ಕಲಾವಿದರು ಇಲ್ಲಿಯ ಅನೇಕ ಸಾಧನೆಗಳನ್ನು ಮಾಡಿ ಚಿತ್ರಕಲೆಯನ್ನು ರಾಷ್ಟ್ರ ವ್ಯಾಪ್ತಿಮಾಡಿ ಕಲಾಕ್ಷೇತ್ರಕ್ಕೆ ಹಾಗೂ ಯುವ ಕಲಾವಿದರಿಗೆ ಒಂದು ಹೊಸ ಚೈತನ್ಯವನ್ನು ನೀಡಿದ್ದಾರೆ.ಪ್ರಸ್ತುತ ಅಧ್ಯಾಯನವನ್ನು ಈ ಎಲ್ಲಾ ಅಂಶವನ್ನು ಪ್ರಸ್ತಾಪಿಸುವುದಾಗಿದೆ.

ಅಧ್ಯಯನದ ಉದ್ದೇಶ :

ಪ್ರಸ್ತುತ ಅಧ್ಯಯನದಲ್ಲಿ ಉತ್ತರ ಕರ್ನಾಟಕದ ಭಾವಚಿತ್ರ ಕಲಾವಿದರ ಬಗ್ಗೆ ಮತ್ತು ಅವರು ರಚಿಸಿದ ಕಲಾಕೃತಿಗಳ ಕುರಿತು ವಿವರವಾಗಿ ತಿಳಿದುಕೊಳ್ಳುವಂತ ಮತ್ತು ದಾಖಲಿಸುವಂತ ಉದ್ದೇಶವನ್ನು ಹೊಂದಲಾಗಿದೆ. ಕಲಾವಿದರ ಕಲಾಕೃತಿಗಳು ಜನರಿಗೆ ಹತ್ತಿರ, ಆದರೆ ಅದನ್ನು ರಚಿಸಿದ ಕಲಾವಿದರು ಮಾತ್ರ ಜನರಿಂದ ಯಾವಾಗಲು ದೂರ ಉಳಿದುಕೊಂಡಿರುತ್ತಾರೆ. ಆದ್ದರಿಂದ ಕಲಾವಿದರ ಮತ್ತು ಅವನ ಕಲಾಕೃತಿಗಳನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಪರಿಚಯಿಸುವಂಥ ಪ್ರಮುಖವಾದ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ. ನಮ್ಮ ನಾಡಿನಲ್ಲಿ ಪ್ರಾಚೀನ ಕಾಲದಿಂದಲೂ ಚಿತ್ರಕಲೆ ವಿವಿಧ ಶೈಲಿಯಲ್ಲಿ ಬೆಳೆದು ಬಂದಿದೆ. ಅದರಲ್ಲಿ ಇತಿಹಾಸ ಕಾಲದಿಂದ ಹಿಡಿದು ಪ್ರಸ್ತುತ ಚಿತ್ರಕಲಾವಿದರವರೆಗೂ ಅದೆಷ್ಟೋ ಪ್ರಖ್ಯಾತ ಕಲಾವಿದರು ತಮ್ಮ ಕಲಾಕೃತಿಯನ್ನು ನಾಡಿಗೆ ನೀಡುತ್ತಾ ಬಂದಿದ್ದಾರೆ.

ಅವುಗಳು ಅಂದು ಸಂಯೋಜನಾ ಭಾವಚಿತ್ರಗಳಾಗಿದ್ದವು. ಈ ರೀತಿಯ ಕಲಾಕೃತಿಗಳು ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ಕಾಣಬಹುದು. ಅವುಗಳನ್ನು ಇಂದಿನ ಭಾವಚಿತ್ರದಂತೆ ಅಂದು ಬಳಸುತ್ತಿದ್ದರು. ಆದರೆ ಅವರನ್ನು ದಾಖಲಿಸುವ ಕಾರ್ಯ ಮಾತ್ರ ಸಣ್ಣ ಪ್ರಮಾಣದಲ್ಲಿ ಎಂದು ಹೇಳಬಹುದು. ನಮ್ಮ ನಾಡಿನ ಉತ್ತರ ಕರ್ನಾಟಕದ ಅದೆಷ್ಟೋ ಕಲಾವಿದರು ಇಂದಿಗೂ ತಮ್ಮ ಕಾಯಕದಲ್ಲಿ ತಲ್ಲೀನರಾಗಿದ್ದಾರೆ. ಕೆಲವು ಕಲಾವಿದರು ತಮ್ಮ ಮೌಲ್ಯಯುತ ಕಲಾಕೃತಿಯಿಂದ ಜನರ ಮನದಲ್ಲಿ ಇಂದಿಗೂ ಹಸಿರಾಗಿದ್ದಾರೆ.

ಇಂತವರ ಜೀವನ ಚರಿತ್ರೆ ಮಾತ್ರ ಜನರಿಂದ ದೂರ ಉಳಿದಿದೆ. ಆದ್ದರಿಂದ ಈ ಕಲಾವಿದರ ಕಾಲದ ಅನೇಕ ಸಂಗತಿಗಳು ಅವರ ಬಾಲ್ಯ ಜೀವನ ಶಿಲಾಶಿಕ್ಷಣ ಅವರಿಸಿ ಕಲೆಯಲ್ಲಿ ಆಸಕ್ತಿ ಹುಟ್ಟಿಸಿದ ಅಂಶಗಳು ಅವರ ಸಹಪಾಠಿಗಳು ಕಲಾಗುರುಗಳು ಅವರ ಕಲಾ ಜೀವನ, ಕಲಾಕೃತಿಗಳ ಪರಿಚಯ ಹೀಗೆ

ಮತ್ತು ಹಲವು ವಿಷಯಗಳನ್ನು ದಾಖಲಿಸುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ. ಈ ಸಂಶೋಧನೆ ನಾಡಿನ ಉದ್ದಗಲಕ್ಕೂ ನಮ್ಮ ಕಲಾವಿದ ಸಾಧನೆ, ಕಲಾಜೀವನ ನಮ್ಮ ಗಮನಕ್ಕೆ ಎಷ್ಟೋ ಸಲ ಬಾರದೇ ಹೋಗಿದೆ. ಅವರ ಕಲಾವಿದರನ್ನು ನಿರಂತರವಾಗಿ ಮುಂದಿನ ಜನಾಂಗಕ್ಕೂ ಪರಿಚಯವಾಗಬೇಕಾದರೆ ಅವರ ಕುರಿತು ಅಧ್ಯಯನವನ್ನು ಕಾರ್ಯರೂಪಕ್ಕೆ ತರುವುದು ಅವಶ್ಯಕವಾಗಿದೆ.

ಹೀಗೆ ಚಿತ್ರಕಲಾ ಕ್ಷೇತ್ರದಲ್ಲಿ ಉನ್ನತಮಟ್ಟದ ಸಾಧನೆಗೈದ ಹಿರಿಯ ಭಾವಚಿತ್ರ ಕಲಾವಿದರು ಉತ್ತರ ಕರ್ನಾಟಕ ಭಾಗದಲ್ಲಿ ತಮ್ಮ ಕಲಾಕೃತಿಗಳ ಮೇಲಿನ ಕಲಾವಲಯವನ್ನು ಅಭಿವೃದ್ಧಿಪಡಿಸಿದ ಅನೇಕ ಕಲಾವಿದರಿದ್ದಾರೆ. ಅವರಲ್ಲಿ ಕೆಲವರು ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ. ಇನ್ನು ಕೆಲವರು ಎಲೆಮರೆಯ ಕಾಯಿಯಂತೆ ಬೆಳಕಿಗೆ ಬಾರದೇ ಇದ್ದಾರೆ. ಹೀಗೆ ಬೆಳಕಿಗೆ ಬಾರದ ಕಲಾವಿದರು ಹೆಚ್ಚಾಗಿ ಸ್ವತಂತ್ರ ಪೂರ್ವ ಕಾಲದ ಕಲಾವಿದರಿರುವುದು ವಿಶೇಷ. ಇವರ ರಚಿಸಿದ ಕಲಾಕೃತಿಗಳಿಗೆ ಅನೇಕ ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ. ಆದರೆ ಇವರ ಕಲಾಜೀವನ ಹಾಗೂ ಇತ್ಯಾದಿ ಕಲಾ ಅಂಶಗಳು ಬೆಳಕಿಗೆ ಬಾರದೆ ಇರುವುದು ವಿಷಾದನೀಯ. ಇದಕ್ಕೆ ಒಂದು ಕಾರಣವೂ ಸಹ ಇದೆ. ದೃಶ್ಯಕಲೆಯಲ್ಲಿ ಬರವಣಿಗೆ ಮಾಡುವವರ ಸಂಖ್ಯೆ ವಿರಳ. ಕಾರಣ ನಮ್ಮ ಕಲಾವಿದರು ಯಾವಗಲೂ ಚಿತ್ರ ರಚಿಸುವುದನ್ನು ಬಿಟ್ಟು ಕಲೆಯ ಮತ್ತು ಕಲಾವಿದರ ಬಗ್ಗೆ ಬರವಣಿಗೆ ಸಂಶೋಧನೆಯನ್ನು ಮಾಡುವ ಅವಕಾಶಗಳು ಕಡಿಮೆ.

ಅಂದಿನ (ಸ್ವಾತಂತ್ರ್ಯ ಪೂರ್ವದಲ್ಲಿ) ಕಾಲ ಅನೇಕ ಚಿತ್ರಕಲಾವಿದರು "ಕಲಾವಿದ ಮಾತನಾಡದೇ ಅವನ ಕಲಾಕೃತಿಗಳು ಮಾತನಾಡಬೇಕು". ಎಂಬ ಮಾತಿನಂತೆ ನಡೆದುಕೊಂಡವರು ಕೆಲವರು ಈ ಮಾತಿಗೆ ಅಪವಾದವೆಂಬಂತೆ ಪ್ರಸ್ತುತ ಹಲವರು ತಮ್ಮ ಕಲಾಕೃತಿ ಕಲಾಕ್ಷೇತ್ರದಲ್ಲಿ ಬರವಣಿಗೆಯನ್ನು ಮಾಡಿದ್ದಾರೆ. ಅದು ಕೂಡ ಕಡಿಮೆ ಪ್ರಮಾಣದಲ್ಲಿ ಎಂದು ನಾವು ಹೇಳಬಹುದು.[2]

ಒಬ್ಬ ಕಲಾವಿದನು ತನ್ನ ಕಲಾಕೃತಿಗಳ ಬಗ್ಗೆ ಮಾತನಾಡಲು ಆರಂಭಿಸುವುದು. ತೀರ ಇತ್ತೀಚಿನ ದಶಕಗಳ ಹಿಂದೆ ಎಂದು ಹೇಳಬಹುದು. ಆದ್ದರಿಂದ ಅಂದಿನ ಹಿರಿಯ ಚಿತ್ರಕಲಾವಿದರ ಬಗ್ಗೆ ಇವರು ಅಸ್ಪಷ್ಟವಾದ ಮಾಹಿತಿಯನ್ನು ಪೂರ್ಣ ಪ್ರಮಾಣದಲ್ಲಿ ಅವುಗಳನ್ನು ದಾಖಲಿಸುವುದು ಈ ಸಂಶೋಧನೆಯ ಉದ್ದೇಶಗಳಲ್ಲೊಂದಾಗಿದೆ. ಅದಲ್ಲದೆ ಈ ಸಂಶೋಧನೆಯ ವ್ಯಾಪ್ತಿಯಲ್ಲಿ ಬರುವಂಥ ಹಿರಿಯ ಕಲಾವಿದರುಗಳ ಬಗ್ಗೆ ಅಧ್ಯಯನಗಳು ನಡೆದಿವೆ. ಹೀಗೆ ನಡೆದ ಅಧ್ಯಯನಗಳ ಜೊತೆಯಲ್ಲಿ ಇನ್ನು ಹೆಚ್ಚಿನ ಅಂಶಗಳನ್ನು ಹುಡುಕಿ ಅವುಗಳನ್ನು ಈ ಸಂಶೋಧನೆಯ ಮೂಲಕ ಕ್ರೋಢೀಕರಿಸಲಾಗಿದೆ.

ಭಾವಚಿತ್ರಕಲಾವಿದರು ತಮ್ಮ ಕಲಾಕೃತಿಗಳ ರಚನೆಯಲ್ಲಿ ವಿಶಿಷ್ಟವಾದ ಶೈಲಿಯಿಂದ ನಾಡಿನ ತುಂಬೆಲ್ಲಾ ಪಸರಿಸಿವೆ. ಅವುಗಳ ವಿಶೇಷತೆಯನ್ನು ಹಾಗೂ ಅವುಗಳ ರಚನೆಯ ಚರಿತ್ರೆ ಶೈಲಿ. ಪ್ರಭಾವ ಇತ್ಯಾದಿಗಳನ್ನು ದಾಖಲಿಸುವಂತ ಕಾರ್ಯವನ್ನು ಇಲ್ಲಿ ಮಾಡಲಾಗಿದೆ. ಆದ್ದರಿಂದ ಈ ರೀತಿಯ ಕಾರ್ಯವು ಸಂಶೋಧನೆ ಮುಖ್ಯವಾದ ಉದ್ದೇಶಗಳಲ್ಲಿ ಒಂದಾಗಿದೆ.

ಉತ್ತರ ಕರ್ನಾಟಕದ ಭಾವಚಿತ್ರ ಕಲಾವಿದರ ಬಗ್ಗೆ ಅವರ ಕಲಾಕೃತಿಗಳ ಒಟ್ಟು ಸ್ವರೂಪ, ಕಲಾಬದುಕು ಹೀಗೆ, ಅನೇಕ ವಿಷಯಗಳನ್ನು ತಿಳಿಸುವುದರ ಜೊತೆಗೆ ಈ ಪ್ರದೇಶದ ಭಾವಚಿತ್ರ ಕಲಾವಿದರ ಒಟ್ಟು ಸ್ವರೂಪವನ್ನು ಕಟ್ಟಿಕೊಡುವುದಲ್ಲದೇ ಈ ಪ್ರದೇಶದ ಕಲಾವಿದರ ಭಾವಚಿತ್ರಕಲೆಯ ಮೂಲಕ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಕಲಾವಿದರ ಕಲಾಶೈಲಿಯನ್ನು ಗಮನದಲ್ಲಿಟ್ಟುಕೊಂಡು ಅವರ ಕಲಾಜೀವನ ಹಾಗೂ ವೈಯಕ್ತಿಕ ವಿವರವನ್ನು ದಾಖಲಿಸಿ ಈ ಭಾಗದ ಕಲಾಕ್ಷೇತ್ರದ ಬಗ್ಗೆ ಪರಿಚಯ ಮಾಡಿಕೊಡಲು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಅಲ್ಲದೇ ಭಾವಚಿತ್ರ ಕಲೆಯ ಪ್ರಾಚೀನತೆಯನ್ನು ಹೇಳುವಂತ ಉದ್ದೇಶದ ಜೊತೆಗೆ, ಭಾವಚಿತ್ರ ಕಲೆಯ ಉಗಮವು ಆದಿ ಮಾನವನಿಂದ ಇಂದಿನ ಆಧುನಿಕ ಯುಗದವರೆಗೆ ಅನೇಕ ಬದಲಾವಣೆಯನ್ನು ಕಂಡಿದೆ. ಮುಂದೆ ಈ ಭಾವಚಿತ್ರಕಲೆಯು ಹೇಗೆ ಒಂದು ಚೌಕಟ್ಟಿಗೆ ಬಂದು ನಿಂತಿದೆ ಎಂದು ಅರಿತುಕೊಳ್ಳುವ ಉದ್ದೇಶವನ್ನು ಹೊಂದಲಾಗಿದೆ. ಒಂದು ಕಲಾಕೃತಿಯನ್ನು ರಚಿಸಿದ ಕಲಾವಿದನು ಅವನ ಕಲಾ ಬದುಕನ್ನು ಕಲಾಕೃತಿಗಳಿಂದ ದಾಖಲಿಸುವಂತಹ ಕಾರ್ಯವನ್ನು ಈ ಅಧ್ಯಯನದಲ್ಲಿ ಮಾಡುವ ಉದ್ದೇಶ ಹೊಂದಲಾಗಿದೆ.

ಅಧ್ಯಯನದ ಸ್ವರೂಪ :

ಕರ್ನಾಟಕದ ಭಾವಚಿತ್ರಕಲೆ ಒಂದು ಅಧ್ಯಯನ ಎಂಬ ಅಧ್ಯಯನವನ್ನು ಆರು ಅಧ್ಯಾಯನಗಳನ್ನಾಗಿ ವಿಂಗಡಿಸಲಾಗಿದೆ. ಈ ಆರು ಅಧ್ಯಾಯನಗಳಲ್ಲಿ ಪ್ರತ್ಯೇಕವಾದ ವಸ್ತು ವಿಷಯ, ಕಲಾಕೃತಿಗಳ ವಿವರ ಹೀಗೆ ಸ್ಥೂಲವಾದ ವಿವರಣೆಯನ್ನು ಒಳಗೊಂಡಿರುತ್ತದೆ.

ಅಧ್ಯಾಯ ಒಂದು : ಅಧ್ಯಾಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ವಿಧಾನ.

ಈ ಅಧ್ಯಾಯನದಲ್ಲಿ ಅಧ್ಯಾಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಮತ್ತು ವಿಧಾನವನ್ನು ಒಳಗೊಂಡಿದೆ. ಈ ಅಧ್ಯಾಯನದಲ್ಲಿ ಪ್ರಸ್ತುತ ದಿನಗಳಲ್ಲಿ ಎಷ್ಟು ಅವಶ್ಯಕ ಎಂಬುದರ ಬಗ್ಗೆ ವಿವರಣೆಯನ್ನು ನೀಡಲಾಗಿದೆ. ಮತ್ತು ಅಧ್ಯಯನದ ವ್ಯಾಪ್ತಿಯನ್ನು ಸ್ಪಷ್ಟಪಡಿಸಲಾಗಿದೆ.

ಅಧ್ಯಾಯ ಎರಡು : ಭಾವಚಿತ್ರಕಲೆಯ ಅರ್ಥ, ಸ್ವರೂಪ ಹಾಗೂ ಬೆಳೆದುಬಂದ ಹಿನ್ನಲೆ.

ಭಾವಚಿತ್ರಕಲೆಯು ಒಂದು ಸ್ವತಂತ್ರವಾದ ಕಲಾಪ್ರಕಾರವಗಿ ಹೇಗೆ ಬೆಳೆದುಬಂದಿದೆ ಅದರಲ್ಲಿ ಅಂದಿನ ಆದಿ ಮಾನವನಿಂದ ಗುಹಾಲಯದ ಕಾಲದಲ್ಲಿ ಭಿತ್ತಿ ಚಿತ್ರಗಳಲ್ಲಿ, ಪ್ರಾಚೀನ ಹಸ್ತ ಪ್ರತಿಗಳಲ್ಲಿ, ಸಾಹಿತ್ಯದಲ್ಲಿ, ಸಂಸ್ಕೃತ, ಕನ್ನಡ, ಪರ್ಶಿಯನ್ ಮುಂತಾದ ಕಾವ್ಯ ಸಾಹಿತ್ಯದಲ್ಲಿ ಭಾವಚಿತ್ರ ಕಲೆಯ ಕುರಿತು ಉಲ್ಲೇಖಗೊಂಡಿರುವುದನ್ನು ಹಾಗೂ ಭಾವಚಿತ್ರವು ಒಂದು ವಿಷಯವಾಗಿ ಬಂದ ಹಿನ್ನಲೆ ಅದರ ಸ್ವಭಾರ್ಥ.

ಸ್ವರೂಪ ಮತ್ತು ಐತಿಹಾಸಿಕ ಕಲೆ ಹೀಗೆ ವಿಭಿನ್ನ ಆಯಾಮದಲ್ಲಿ ಬೆಳವಣಿಗೆ ಹೊಂದಿದ ಭಾವಚಿತ್ರಕಲೆ ಬೆಳೆದು ಬಂದ ಹಿನ್ನಲೆಯ ಸ್ವರೂಪವನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಮೂರು : ಭಾವಚಿತ್ರ ರಚನಾ ವಿಧಿ ವಿಧಾನಗಳು ಮತ್ತು ವಿವಿಧ ಮಾಧ್ಯಮಗಳಲ್ಲಿ ಅಭಿವ್ಯಕ್ತಗೊಂಡ ಬಗೆ.

ಈ ಅಧ್ಯಾಯನದಲ್ಲಿ ಆದಿ ಮಾನವನ ಕಾಲದಿಂದ ಪ್ರಸ್ತುತ ದಿನಗಳವರೆಗೂ ವಿವಿಧ ಮಾಧ್ಯಮಗಳಲ್ಲಿ ರಚನೆಯಾದ ಭಾವಚಿತ್ರಗಳು ರಚನೆಗೊಂಡಿರುವ ಬಗೆ ವಿವರಿಸಲಾಗಿದೆ. ರೇಖೆ, ಜಲಾವರ್ಣ, ತೈಲವರ್ಣ, ಪೆನ್ಸಿಲ್, ಚಾರ್ಕೋಲ್ ಮಿಶ್ರ ಮಾಧ್ಯಮದಲ್ಲಿ ಹೀಗೆ ಹಲವಾರು ಮಾಧ್ಯಮದಲ್ಲಿ ರಚನೆಗೊಂಡಿರುವುದನ್ನು ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕು : ಉತ್ತರ ಕರ್ನಾಟಕದ ಪ್ರಮುಖ ಭಾವಚಿತ್ರ ಕಲಾವಿದರು ಮತ್ತು ಕಲಾಕೃತಿಗಳು

ಈ ಅಧ್ಯಾಯನದಲ್ಲಿ ಉತ್ತರ ಕರ್ನಾಟಕದ ಪ್ರಮುಖ ಭಾವಚಿತ್ರಕಲಾವಿದರಾದ ವಿಜಯ ಸಿಂಧೂರ, ವಿ.ಟಿ.ಕಾಳೆ, ಜೆ.ಎಸ್.ಖಂಡೇರಾವ್, ಕೆ.ಬಿ.ಕುಲಕರ್ಣಿ, ಎಂ.ಬಿ.ಪಾಟೀಲ, ಎಂ.ಎ.ಚೆಟ್ಟಿ, ಆರ್.ಎಂ.ಹಡಪದ, ಎಸ್.ಎಂ.ಪಂಡಿತ್, ಶಂಕರ್‌ಗೌಡ ಬೆಟ್ಟದೂರ್, ಡಿ.ವಿ.ಹಾಲಭಾವಿ.ಹಾಗೂ ಎಂ.ಆರ್.ಬಾಳೆಕಾಯಿ, ಅವರ ಕಲಾಬದುಕು ರಚಿಸಿದ ಭಾವಚಿತ್ರದ ವಸ್ತು ವಿಷಯಗಳ ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಐದು : ಕಲಾವಿದರ ಮೇಲಾದ ಪ್ರಭಾವ, ಪ್ರೇರೇಣೆ, ತಂತ್ರಶೈಲಿ

ಉತ್ತರ ಕರ್ನಾಟಕದ ಭಾವಚಿತ್ರ ಚಿತ್ರಕಲಾವಿದರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ ಇವುಗಳನ್ನು ತೌಲನಿಕವಾಗಿ ಚರ್ಚಿಸುವ ಮತ್ತು ಪ್ರಮುಖ ವೈಶಿಷ್ಟ್ಯತೆಗಳನ್ನು ಗುರುತಿಸುವ ಪ್ರಯತ್ನ ಈ ಅಧ್ಯಾಯದಲ್ಲಿ ಮಾಡಲಾಗುವುದು.

ಅಧ್ಯಾಯ ಆರು : ಸಮಾರೋಪ

ಈ ಅಧ್ಯಾಯನವು ಸಮಾರೋಪವಾಗಿದ್ದು, ಮೇಲಿನ ಐದು ಅಧ್ಯಯನಗಳಿಂದ ಕಲಿತುಕೊಂಡಂತಹ ಒಟ್ಟಾರೆ ಸಾರಾಂಶ ಹಾಗೂ ಫಲಿತಾಂಶಗಳನ್ನು ಈ ಅಧ್ಯಾಯನದಲ್ಲಿ ಸಮೀಕ್ಷಿಸಲಾಗಿದೆ.

ಅಧ್ಯಯನದ ವ್ಯಾಪ್ತಿ :

ಈ ಅಧ್ಯಾಯನದ ವ್ಯಾಪ್ತಿಯು ಉತ್ತರ ಕರ್ನಾಟಕದ ಪ್ರಮುಖ ಭಾವಚಿತ್ರಕಲಾವಿದರ ಜೀವನ ಮತ್ತು ಅವರ ಕಲಾ ಬದುಕು, ಹಾಗೂ ಅವರ ಭಾವಚಿತ್ರಕಲಾಕೃತಿಗಳಿಗೆ ಈ ಅಧ್ಯಾಯನ ಸೀಮಿತಗೊಳಿಸಿಕೊಳ್ಳಲಾಗಿದೆ. ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಜನ ಭಾವಚಿತ್ರ ಕಲಾವಿದರಾಗಿದ್ದು, ಪ್ರಸ್ತುತ ಅಧ್ಯಾಯನದಲ್ಲಿ ಉತ್ತರ ಕರ್ನಾಟಕದ ಪ್ರಮುಖ ಭಾವಚಿತ್ರಕಲಾವಿದರ ಅಧ್ಯಯನಕ್ಕೆ ಈ ಪ್ರಬಂಧದ ವ್ಯಾಪ್ತಿ

ಸೀಮಿತಗೊಳಿಸಲಾಗಿದೆ. ಪ್ರಾಸಂಗಿಕವಾಗಿ ಕರ್ನಾಟಕೇತರ ಪ್ರದೇಶದ ಛಾಯಚಿತ್ರ ಕಲಾವಿದರನ್ನು ಅಧ್ಯಯನಕ್ಕೆ ಪೂರಕವಾಗಿ ಪರಿಗಣಿಸಲಾಗಿದೆ.

ಅಧ್ಯಯನದ ವೈಧಾನಿಕತೆ :

ಈ ಸಂಶೋಧನೆಯಲ್ಲಿ ಎರಡು ರೀತಿಯ ಅಧ್ಯಾಯನದ ಆಕರಗಳನ್ನು ಬಳಸಿಕೊಳ್ಳಲಾಗಿದೆ.
೧) ಮೂಲ ಆಕರ ಸಾಮಾಗ್ರಿಗಳು ೨) ಆನುಷಂಗಿಕ ಆಕರ ಸಾಮಾಗ್ರಿ

೧ ಮೂಲ ಆಕರ ಸಾಮಾಗ್ರಿ :

ಮೂಲ ಆಕರ ಸಾಮಾಗ್ರಿಗಳಲ್ಲಿ ಮುಖ್ಯವಾಗಿರುವುದು ಕ್ಷೇತ್ರ ಕಾರ್ಯ ಇದರಲ್ಲಿ ಸಂದರ್ಶನ, ಧ್ವನಿ ಗ್ರಹಣ, ಛಾಯಾಚಿತ್ರಣ, ಕಲಾವಿದರ ಸಮಕಾಲೀನ ವ್ಯಕ್ತಿಗಳ ಸಂದರ್ಶನ ಹಾಗೂ ಸಂಗ್ರಹಿಸಿದ ವಿಷಯಗಳನ್ನು ಬಳಸಿಕೊಂಡು ಅಧ್ಯಯನ ಮಾಡಲಾಗಿದೆ.

೨ ಆನುಷಂಗಿಕ ಆಕರ ಸಾಮಾಗ್ರಿ :

ಸಂಶೋಧನಾ ಮಹಾಪ್ರಬಂಧಗಳು, (ಪ್ರಕಟಿತ ಮತ್ತು ಅಪ್ರಕಟಿತ) ಸಂಶೋಧನ ಕೃತಿಗಳು, ನಿಘಂಟುಗಳು, ಪತ್ರಿಕೆಗಳು ಹಾಗೂ ಛಾಯಾಚಿತ್ರಗಳು ಹಾಗೂ ಕಲಾವಿದರ ಕಲಾಕೃತಿಗಳನ್ನು ಉದ್ದೇಶಿಸಿ ಬಂದ ಕಲಾವಿಮರ್ಶೆ, ಕ್ಯಾಟಲಾಗ್‌ಗಳು, ಕಲಾಲೇಖನಗಳು, ಗ್ರಂಥಾಲಯಗಳನ್ನು ವಿಷಯಕ್ಕೆ ಪೂರಕವಾಗಿ ಬಳಸಿಕೊಂಡು ಈ ಪ್ರಬಂಧವನ್ನು ರಚಿಸಲಾಗಿದೆ.

ಅಡಿ ಟಿಪ್ಪಣಿ

೧. ವರ್ಣಸಂಚಯ: ಡಾ. ಎಸ್.ಸಿ.ಪಾಟೀಲ. ಪುಟ-೨೨

೨. ಹೈದ್ರಾಬಾದ ಕರ್ನಾಟಕದ ಛಾಯಚಿತ್ರ ಕಲಾವಿದರ ಒಂದು ಅಧ್ಯಯನ: ಅಶೋಕ ಸಿ. ನಡುವಿನಮನಿ. ಪುಟ-೫

ಅಧ್ಯಾಯ: ಎರಡು

ಭಾವಚಿತ್ರಕಲೆಯ ಅರ್ಥ, ಸ್ವರೂಪ ಮತ್ತು ಬೆಳೆದು ಬಂದ ಹಿನ್ನಲೆ

ಭಾವಚಿತ್ರಕಲೆಯ ಅರ್ಥ, ಸ್ವರೂಪ ಮತ್ತು ಬೆಳೆದು ಬಂದ ಹಿನ್ನಲೆ

ಕರ್ನಾಟಕದ ಭಾವಚಿತ್ರಕಲೆಯ ಕಲಾವಿದರನ್ನು ಅಧ್ಯಯನ ಮಾಡುವುದಕ್ಕಿಂತ ಪೂರ್ವದಲ್ಲಿ ಭಾವಚಿತ್ರಕಲೆಯ ಅರ್ಥ ಸ್ವರೂಪವನ್ನು ಸ್ಥೂಲವಾಗಿ ತಿಳಿದುಕೊಳ್ಳುವ ಅವಶ್ಯಕತೆ ಇದೆ. ಚಿತ್ರಕಲೆಯ ಹತ್ತು ಹಲವು ರೀತಿಯ ಪ್ರಕಾರಗಳಿದ್ದು, ಭಾವಚಿತ್ರಕಲೆಯ ಚಿತ್ರಕಲೆಯ ಒಂದು ಪ್ರಧಾನವಾದ ಕಲಾಪ್ರಕಾರವಾಗಿದೆ. ಇದರ ಕುರಿತು ಪಾಶ್ಚಿಮಾತ್ಯರಲ್ಲಿ ಮತ್ತು ಭಾರತೀಯರಲ್ಲಿ ಇರುವ ಅರ್ಥ ಸ್ವರೂಪವನ್ನು ಇಲ್ಲಿ ವಿವೇಚಿಸಲಾಗಿದೆ.

ಭಾವಚಿತ್ರಕಲೆಯ ಅರ್ಥ ಮತ್ತು ಸ್ವರೂಪ

ಲ್ಯಾಟಿನ್ ಭಾಷೆಯ ಕ್ರಿಯಾಪದProtrohoವನ್ನು ಮಧ್ಯಯುಗದಲ್ಲಿ "ಪುನರ್ ಸೃಷ್ಟಿಸು" ಎಂಬ ಅರ್ಥದಲ್ಲಿ ಬಳಸಲಾಗುತ್ತಿತ್ತು. "೧೮ನೇ ಶತಮಾನದಲ್ಲಿ ಫ್ರೆಂಚ್ ಭಾಷೆಯ 'Po(u) rtraire ಬಳಕೆಯಲ್ಲಿಇರದೆ ಹೋಯಿತು. 'Portrait' ೧೨ನೇ ಶತಮಾನದಿಂದ ಬಳಕೆಯಲ್ಲಿದೆ.portrait (C) ture ೧೨ಮತ್ತು ೧೩ನೇಶತಮಾನದಿಂದ ಬಳಕೆಯಲ್ಲಿದೆ. ಹೀಗಾಗಿ ಇಂಗ್ಲೀಷಿನ "Portray", "Portrait" ಮತ್ತು "Portriture" ಜರ್ಮನ ಭಾಷೆಯPortrat ಮತ್ತು ಭಾಷೆಯ"Portret"ಪದಗಳು ಬಳಕೆಯಲ್ಲಿವೆ.೧೨ನೇ ಶತಮಾನದಿಂದ ಬಳಕೆಯಲ್ಲಿರುವ ಭಾಷೆಯ'retratoಇಂದ ಮೂಡಿಬಂದಿರುವ ritratto ಹೇಗೂ'Portrait" ಅರ್ಥದಲ್ಲಿ ಸಾಮಾನ್ಯವಾಗಿ ಒಪ್ಪಿತವಾಗಿದೆ."[1] ಹೀಗೆ ಭಾವಚಿತ್ರ ಶಬ್ದದ ಅರ್ಥವೂ ಜಗತ್ತಿನ ವಿವಿಧ ಭಾಷೆಯಲ್ಲಿ ಕಾಲಕ್ಕೆ ತಕ್ಕಂತಹ ಅರ್ಥವನ್ನು ಆಯಾ ಭಾಷೆಯ ಶಬ್ದದ ಅರ್ಥದಲ್ಲಿ ಹೊಂದಿದೆ ಅಲ್ಲದೆ ಭಾವಚಿತ್ರ ಕಲ್ಪನೆಯು ಬದಲಾಗುತ್ತಾ ಸಾಗಿದಂತೆಲ್ಲ ದೃಶ್ಯಕಲೆಯ ಪರಿಭಾಷೆಯಲ್ಲಿ ಈ ಎಲ್ಲ ಪದರೂಪಗಳು ಬದಲಾಗುತ್ತ ಬಂದಿವೆ.

ವಿಶಾಲವಾದ ಅರ್ಥದಲ್ಲಿ 'Image' ಮತ್ತು 'Imitatin' ಎರಡನ್ನು ಬೇರೆಯಾಗಿಯೇ ಬಳಸಲಾಗುತ್ತಿತ್ತು. "೧೨ನೇ ಶತಮಾನದ ಮಧ್ಯಭಾಗದಲ್ಲಿ ದೃಶ್ಯಕಲೆಯ ಬರಹಗಾರರು 'Imitating' ಮತ್ತು 'Portraying' ನಡುವಿನ ಅತೀ ಸೂಕ್ಷ್ಮವಾದ ವ್ಯತ್ಯಾಸಗಳನ್ನು ಕಂಡುಕೊಳ್ಳಲು ಆರಂಭಿಸಿದರು. ಭಾವಚಿತ್ರಕಲೆಯ ಕಲ್ಪನಾತ್ಮಕ ಬದುಕು ಅಲ್ಲದೆ. ಅದನ್ನು ಹೆಚ್ಚು ಕಡಿಮೆ ಬೆಲೆಕಟ್ಟಿ ನೋಡುವಿಕೆ ಅದರ ಇತಿಮಿತಿಗಳ ಮತ್ತು ಆಕರ್ಷಣೆಯ ಆಯಾ ಕಾಲವು ಕಾಣುವ ಗುಣಲಕ್ಷಣಗಳನ್ನು ಅವಲಂಬಿಸಿಯೇ ಉಂಟಾಗಿದೆ.[2]

ಆದಿಮಾನವರು ತಮ್ಮ ಬದುಕಿನ ವೇಳೆಯಲ್ಲಿ ಸಂತೋಷಕ್ಕಾಗಿ ಇಲ್ಲವೆ ಧಾರ್ಮಿಕ ಕಟ್ಟಳೆಗೆ ಸಂಬಂಧಿಸಿದಂತೆ ಚಿತ್ರಗಳನ್ನು ಬರೆಯುತ್ತಿದ್ದ. ಇವುಗಳೇ ಜಗತ್ತಿನ ಮೊದಲ ಚಿತ್ರಗಳು ಎಂದು ಚಿತ್ರಕಲಾ

ಇತಿಹಾಸದಿಂದ ತಿಳಿದುಬರುತ್ತದೆ. ಆದಿಮಾನವರು ರಚಿಸಿದ ಚಿತ್ರಗಳ ವಿವಿಧ ರೀತಿಯ ಪಕ್ಷಿ, ಪ್ರಾಣಿಗಳ ಜೊತೆಯಲ್ಲಿ ಮನುಷ್ಯನಾಕೃತಿಗಳನ್ನು ಒಳಗೊಂಡ ಬೇಟೆಯ ದೃಶ್ಯ, ನೃತ್ಯದ ದೃಶ್ಯ ಹೀಗೆ ವಸ್ತುವಿಷಯಗಳನ್ನು ಹೊಂದಿ ಹಲವಾರು ಚಿತ್ರಗಳನ್ನು ರಚಿಸಿದನು.

ಆದಿಮಾನವ ನಾಗರಿಕತೆಯನ್ನು ಹೊಂದುತ್ತಾ ಸಾಗಿದಂತೆಲ್ಲ ತನ್ನ ಚಿತ್ರಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಂಡುಕೊಂಡನು. ಕುಟ್ಟು, ಗೀರು, ರೇಖಾಚಿತ್ರ ಒಳಗೊಂಡಂತೆ ನಿಸರ್ಗ ವರ್ಣಗಳಿಂದ ಚಿತ್ರಗಳನ್ನು ಅಲಂಕರಿಸಿದನು.ಆದಿಮಾನವನು ತನ್ನ ದಿನನಿತ್ಯದಲ್ಲಿ ಹಲವು ಕಾರ್ಯ ಚಟುವಟಿಕೆಗಳನ್ನು ಕಲೆಯ ದೃಷ್ಟಿಯಿಂದಲೂ ಹಾಗೂ ಸೌಂದರ್ಯ ದೃಷ್ಟಿಯಿಂದ ಕಾಣಲು ನೈಜರೂಪವನ್ನು ರಚಿಸುವಾಗ ಮಾನವನು ಹಲವು ರೀತಿಯ ಬದಲಾವಣೆಗಳನ್ನು ಕಂಡುಕೊಂಡನು.

ಒಟ್ಟಾರೆ ಹೇಳುವುದಾದರೆ 'ಮಾನವನ' ಭಾವಚಿತ್ರಗಳು ಭಾವನೆಗಳು ಇರುವ ಕಾರಣಕ್ಕಾಗಿ ಗುಹೆಗಳಲ್ಲಿ ವಾಸವಿದ್ದ ಕಾಲದಿಂದಲೂ ಕಂಡರು ಸಹಿತ ಪ್ರಸ್ತುತ ಭಾವಚಿತ್ರಗಳಿಗೂ ಆದಿಮಾನವನ ಭಾವಚಿತ್ರಗಳಿಗೆ ತುಂಬಾನೇ ವ್ಯತ್ಯಾಸವಿದೆ. ಆದರೂ ಸಹಿತ ಎಲ್ಲಾ ಚಿತ್ರಕಲಾ ಪ್ರಕಾರಗಳಿಗೆ ಆದಿಮಾನವನ ಚಿತ್ರಗಳೆ ಮೂಲ ಎಂಬಂತೆ ಈ ಭಾವಚಿತ್ರಗಳಿಗೂ ಕೂಡಾ ಆದಿಮಾನವ ಚಿತ್ರಗಳು ಮೂಲ ಎನ್ನಬಹುದು.

ಆದಿಮ ಕಾಲ

ಪ್ರಾಗೈತಿಹಾಸಿಕ ಕಾಲದಲ್ಲಿ ಆದಿಮಾನವರಿಂದ ಗುಹೆಗಳಲ್ಲಿ ರಚನೆಯಾದ ಚಿತ್ರಗಳು ಚಿತ್ರಕಲೆಯ ಪ್ರಾರಂಭಿಕ ಹಂತವನ್ನು ಪ್ರತಿನಿಧಿಸುವುದರ ಜೊತೆಗೆ ಅವರ ಸೌಂದರ್ಯಾನುಭೂತಿಯ, ಜೀವನ ವಿಧಾನ, ಧಾರ್ಮಿಕ ಮತ್ತು ತಾಂತ್ರಿಕ ಆಚರಣೆಗಳಂತಹ ವಸ್ತುವಿಷಯಗಳನ್ನು ತಿಳಿಸಿಕೊಡುವ ಆಕರಗಳಾಗಿವೆ. ಅನೇಕ ರಾಷ್ಟ್ರಗಳಲ್ಲಿ ಈ ರೀತಿಯ ಚಿತ್ರಗಳು ಕಂಡುಬರುತ್ತವೆ. "ಅತ್ಯಂತ ಪುರಾತನ ಗುಹಾಚಿತ್ರಗಳು 'ನೈರುತ್ಯ ಯೂರೋಪಿನಲ್ಲಿ ಕಂಡುಬರುತ್ತವೆ. ಹಾಗೆಯೇ ಗುಹಾವರ್ಣಚಿತ್ರಗಳು ದಕ್ಷಿಣ ಯೂರೂಪಿನಲ್ಲಿ ಹಿಮಯುಗದ ಕಾಲದಲ್ಲಿ ಸುಮಾರು ೧೦೦ ಸ್ಥಳಗಳಲ್ಲಿ ಕಂಡುಬರುತ್ತವೆ. ಆಫ್ರಿಕಾ ಪ್ರಾಂತ್ಯದಲ್ಲಿ ಹೆಚ್ಚಿನ ಚಿತ್ರಗಳು ಕಂಡುಬರುತ್ತವೆ. ಅಲ್ಲದೆ ನಮೀಬಿಯಾ, ಲೆಸೋತೋ, ರಂಭಾಂಬಿಯಾ, ಜಿಂಬಾಂಬೆ ಮತ್ತು ತಾಂಜಾನಿಯಾಗಳಲ್ಲಿ ವಿಫುಲ ಸಂಖ್ಯೆಯ ಗುಹಾ ಚಿತ್ರಗಳ ನೆಲೆಗಳಿವೆ."[೩]

ಭಾರತದಲ್ಲಿ ಗುಹಾಚಿತ್ರಗಳನ್ನು ಹೊಂದಿರುವಂತಹ ಅನೇಕ ನೆಲೆಗಳು ಹೆಚ್ಚಾಗಿ ಕಂಡುಬರುತ್ತವೆ. ಭಿಂಬೇಟ್ಕಾ ಪ್ರದೇಶದಲ್ಲಿ ಗುಹಾಚಿತ್ರಗಳು ಮಿರ್ಜಾಪೂರ, ರಾಯಘಡ್, ಜವಾಡ, ರಾಮಪೂರ, ಗ್ವಾಲಿಯರ್, ಒಸ್ತಾರ್, ಕರ್ನೂಲ್, ಎಡಕಲ್ಲು, ಭೂಪಾಲ್, ಅಲಹಾಬಾದ್, ವಾರಣಾಸಿ, ಬಿಹಾರ,ರೇವಾ, ನರಸಿಂಹಪುರ ಹೀಗೆ ಅನೇಕ ಕಡೆ ಆದಿಮಾನವನ ಚಿತ್ರಗಳು ಕಂಡುಬರುತ್ತವೆ. ಕರ್ನಾಟಕದಲ್ಲಿಯೂ ಸಹ ಅನೇಕ ಸ್ಥಳಗಳಲ್ಲಿ ಆದಿಮಾನವನು ನೆಲೆಸಿ ಅನೇಕ ಚಿತ್ರಗಳನ್ನು ಚಿತ್ರಿಸಿದ್ದಾನೆ. ಅವುಗಳಲ್ಲಿ ಬಳ್ಳಾರಿ, ರಾಯಚೂರು, ಬೆಳಗಾವಿ, ಚಿತ್ರದುರ್ಗ, ಯಾದಗಿರಿ ಹಾಗೂ ಉತ್ತರ ಕರ್ನಾಟಕದ ಹಲವು ಸ್ಥಳಗಳಲ್ಲಿ

ಆದಿಮಾನವನು ಗುಹಾಚಿತ್ರಗಳು ಕಂಡುಬರುತ್ತವೆ. "ಕ್ರಿ.ಪೂ. ೧೦.೦೦೦ ವರ್ಷದಿಂದ ಕ್ರಿ.ಪೂ. ೧.೦೦೦-೨೦೦ ಬೃಹತ್ ಶಿಲಾಯುಗದವರೆಗೂ ಇಲ್ಲಿನ ಚಿತ್ರಗಳು ಬೇರೆ ಬೇರೆ ಕಾಲಗಳಲ್ಲಿ ರಚಿತವಾಗಿವೆ ಎಂದು ವಿದ್ವಾಂಸರ ಅಭಿಪ್ರಾಯಪಡುತ್ತಾರೆ." ಹೀಗೆ ಆದಿಮಾನವನು ಭಾವಚಿತ್ರದ ಪ್ರತಿರೂಪದ ಕಲ್ಪನೆಯನ್ನು ತನ್ನ ಚಿತ್ರದಲ್ಲಿ ಶಿಲಾಮಾಧ್ಯಮದಲ್ಲಿ ಗೀರುವ, ಕುಟ್ಟಿ, ರೇಖಿಸುವ ಹಾಗೂ ವರ್ಣ ಮಾಧ್ಯಮದಲ್ಲಿ ಭಾವನೆಯನ್ನು ತುಂಬಿದ ಚಿತ್ರಗಳನ್ನು ರಚಿಸಿದ್ದಾನೆ.

ಪುರಾತನ ಚಿತ್ರಗಳಿಂದ ಹಿಡಿದು ಮನುಷ್ಯ ನಾಗರಿಕತೆಯ ಹಂತ ತಲುಪಿ ನಂತರ ಒಂದು ಕಡೆ ನೆಲೆ ನಿಂತುಕೊಂಡು ವಾಸವಾಗುವ ಅವಧಿಯ ತನಕ ರಚಿಸಿದ ಚಿತ್ರಗಳು. ಭಾವನೆಯನ್ನು ಅವನು ಆಸ್ವಾಧಿಸಿದ ಭಾವನೆಗಳ ನೆರಳು ಅಥವಾ ಯಾವುದೇ ಒಂದು ಚಿತ್ರ ಅಥವಾ ವಸ್ತುವಿನ ಸಾಂಕೇತಿಕ ರೂಪ ಎಂದು ಕರೆಯಬಹುದು. ಆದಿಮಾನವನ ಚಿತ್ರಗಳು ಮನುಷ್ಯಯನ ಸೂಕ್ಷ್ಮ ಸಂವಾದನೆಯ ಚಲುವಿನ ಸಾಂಕೇತಿಕ ರೂಪ. ಮಾನವಾಕೃತಿಗಳು ನೂತನ ಶಿಲಾಯುಗದ ಹಂತದಲ್ಲಿ ಸಾಮಾಜಿಕವಾಗುತ್ತಾ ನೈಜ ಪ್ರಕೃತಿಯಂತೆ ಅಂದಿನ ಚಿತ್ರಕರ್ಮಿಗಳು ಆದಿಮಾನವರು ಪ್ರಯತ್ನಿಸಿದ್ದಾರೆ. ಈ ಅಂಶವನ್ನು ಮಾನವ ತನ್ನ ಚಿತ್ರವನ್ನು ರಚಿಸುವಂತೆ ಅವಧಿಯಲ್ಲಿ ಬೇಟೆ, ಸಾಕು ಪ್ರಾಣಿಗಳ ಮೇಲಿನ ಪ್ರೀತಿ, ನೃತ್ಯ, ನಂಬಿಕೆ, ಆಚರಣೆ ಹೀಗೆ ಹಲವು ರೂಪದ ಭಾವಚಿತ್ರ ಈ ರೀತಿಯಚಿತ್ರದಲ್ಲಿ ಭಾವನೆ ತುಂಬಿರುವ ಕಾರಣ ಚಿತ್ರಗಳನ್ನು ಚಿತ್ರಿಸಿದ್ದಾನೆ. ಅವುಗಳ ಸಂಯೋಜನೆಯ ರೂಪದಲ್ಲಿವೆ. ಭಾವನೆಯನ್ನು ಹೊಂದಿರುವ ಇವುಗಳನ್ನು ಪ್ರಾಥಮಿಕ ಹಂತದ ಭಾವಚಿತ್ರಗಳು ಎಂದು ಕರೆಯಬಹುದು.

ಆದಿಮಾನವರ ಕಲೆಯ ಅಭಿವ್ಯಕ್ತಿಯಲ್ಲಿನ (ರೂಪದಲ್ಲಿ) ಭಾವಚಿತ್ರಗಳ ಗುಂಪನ್ನು ಉದ್ದೇಶವಾಗಿಟ್ಟುಕೊಳ್ಳದೆ.ನಿರ್ದಿಷ್ಟ ವ್ಯಕ್ತಿಗಳನ್ನೇ ಉದ್ದೇಶವಾಗಿಟ್ಟುಕೊಂಡು ರಚಿಸಿದ ಚಿತ್ರಗಳಾಗಿವೆ. ಇಲ್ಲಿಯ ಚಿತ್ರಗಳು ವ್ಯಕ್ತಿಗಳ ವ್ಯಕ್ತಿತ್ವವನ್ನು ರೂಪಿಸುವ ನೈತಿಕ ಅಥವಾ ದೈವಿಕ ಭಾವಗಳಿಗೆ ಹೆಚ್ಚು ಒತ್ತು ನೀಡಿಲ್ಲ. ಮಾನವನ ರೂಪವೂ ಸಹ ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ, ಭೂಭಾಗದಿಂದ ಇನ್ನೊಂದು ಭೂಭಾಗಕ್ಕೆ ಅಲ್ಪಸ್ವಲ್ಪ ವೈಶಿಷ್ಟ್ಯಗಳನ್ನು ಕಂಡುಬರುತ್ತವೆ. ಈ ರೂಪದಲ್ಲಿ ಈಗಿನ ಭಾವಚಿತ್ರ ಕಲಾ ಪ್ರಕಾರದ ನಿಷ್ಕಟತೆ ಮತ್ತು ವೈಯಕ್ತಿಕಗೊಳಿಸುವ ನಿರ್ದಿಷ್ಟತೆಗಳನ್ನು ನಾವು ಕಾಣಲಾರೆವು. ಹೀಗಾಗಿಯೇ ಮಧ್ಯಭಾರತದ ಭೀಂಬೇಟ್ಕಾ, ದಕ್ಷಿಣದ ಪಾಂಡಿಚೇರಿಯ ಬಳಿ ಇರುವ ಕೀಳ್‌ವಾಳ್ಳೈ, ರಾಯಚೂರಿನ ಕುಮತಿಯ ಗ್ರಾನೈಟ್ ಶಿಲ್ಪಗಳು, ಬಳಿಚಕ್ರದ ಮಾನವ ರೂಪಗಳು, ಹಂಪೆಯ ಸಮೀಪದ ಮಲ್ಲಾಪುರ ಖಾನ್ ಸಾಹೇಬ್ ಚಿತ್ರಗಳು ವಿಶೇಷವೆನಿಸುತ್ತವೆ. ಹೀಗೆ ಆದಿಮಾನವನ ಭಾವನೆಯ ಚಿತ್ರಗಳನ್ನು ತನ್ನ ಕಾಲದ ಕಲಾಸಂವೇದನೆ ಮತ್ತು ಮುಗ್ಧ, ಗಾಢರಿಯ ಭಾವವಿರುವಂತ ಚಿತ್ರಗಳನ್ನು ರಚಿಸಿದ್ದಾನೆ.

ಗುಹಾಲಯ ಕಾಲ

ಮಾನವನು ಗುಹೆಯಿಂದ ಮುಂದೆ ಶಿಲೆಯನ್ನು ಕೊರೆದು ಸುಂದರವಾದ ಗುಹಾಲಯಗಳನ್ನಾಗಿ ಮಾಡಿದ ನಂತರ ಶಿಲ್ಪ ಮತ್ತು ಚಿತ್ರವನ್ನು ಶಾಸ್ತ್ರಬದ್ಧ ಸಂಪ್ರದಾಯಕ್ಕೆ ಒಳಪಡಿಸಿ ಅನೇಕ ಸ್ಥಳಗಳಲ್ಲಿ ಚಿತ್ರಗಳನ್ನು ರಚಿಸಿದನು. ಅವುಗಳಲ್ಲಿ ಮುಖ್ಯವಾಗಿ ಗುಹಾಕಲೆಯ ಶಾತವಾಹನರಿಂದ ಮೊದಲಗೊಂಡು ಕುಶಾನರು. ಗುಪ್ತರು. ವಾಕಾಟಕರು. ಚಾಲುಕ್ಯರು. ಪಲ್ಲವರು. ಚೋಳರು ಹೀಗೆ ಹಲವು ಅರಸು ಮನೆತನಗಳು ಗುಹಾಲಯ ನಿರ್ಮಾಣದಲ್ಲಿ ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ.

ಸಂಯೋಜನಾ ರೂಪದಲ್ಲಿ ಅವುಗಳಲ್ಲಿ ಭಾವಚಿತ್ರಗಳು ಸೇರಿರುವುದು ವಿಶೇಷವಾಗಿದೆ. ಗುಪ್ತರ "ನೃತ್ಯಗಾರರು" ಕ್ರಿ.ಶ. ೫ನೇ ಶತಮಾನ ಬಾಘ. ವಾಕಾಟಕರ "ಮಹಾಜನಕ ಜಾತಕ" ೫ನೇ ಶತಮಾನ ಅಜಂತಾ, ಚಾಲುಕ್ಯರ "ರಾಣಿ ಮತ್ತು ಚಾಮರಗಿತ್ತಿಯರು" ಕ್ರಿ.ಶ.೬ನೇ ಶತಮಾನ ಬಾದಾಮಿ "ಮಹಾಪುರುಷನ ಮುಖ" ಚೋಳರ ಕಾಲ ಕ್ರಿ.ಶ. ೮–೯ನೇ ಶತಮಾನ "ತಿರುನಂದಿಕ್ಕಾರೈ ಹೀಗೆ ಗುಹಾಲಯದ ಭಿತ್ತಿಚಿತ್ರ ಭಾವಚಿತ್ರಗಳನ್ನು ಭಾರತದಲ್ಲಿ ಕಂಡುಬರುತ್ತದೆ. ಈ ರೀತಿಯ ಚಿತ್ರಗಳು ಸಂಯೋಜನೆ ರೂಪದಲ್ಲಿ ಭಾವಚಿತ್ರಗಳು ರಚನೆಗೊಂಡಿವೆ. ಎಂದು ಗುರುತಿಸಬಹುದು. ಏಕೆಂದರೆ ಆ ಕಾಲದಲ್ಲಿ ಭಾವಚಿತ್ರ ಎಂದು ಬೇರ್ಪಟ್ಟು ರಚಿಸಿದ ನಿದರ್ಶನಗಳು ಕಂಡುಬರುವುದಿಲ್ಲ ಎಂದು ಹೇಳಲಾಗಿದೆ.

ಪ್ರಾಚೀನ ಗ್ರಂಥಗಳು

ಭಾರತೀಯ ಚಿತ್ರಕಲೆಯನ್ನು ನೋಡಿದರೆ ಅದು ಕಾಲಕ್ಕೆ ತಕ್ಕಹಾಗೆ ಸ್ವತಂತ್ರವಾಗಿ ಶಿಲ್ಪದೊಂದಿಗೆ ವಾಸ್ತುಕತೆಯಲ್ಲಿ ಕೂಡಿಕೊಂಡು ಬಂದಿದೆ. ಹಾಗೆ ಸಾಹಿತ್ಯದ ಪ್ರಕಾರಗಳಾದ ವೇದ. ಉಪನಿಷತ್ತು. ಮಹಾಕಾವ್ಯ ನಾಟಕ ಇತ್ಯಾದಿ ಪ್ರಕಾರಗಳಲ್ಲಿ ಭಾರತೀಯರು ಸಂಸ್ಕೃತ, ಕನ್ನಡ ಇತ್ಯಾದಿ ಭಾಷೆಯಲ್ಲಿ ಚಿತ್ರಕಲೆಯನ್ನು ಉಲ್ಲೇಖಿಸಿದ್ದಾರೆ. ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯೇಕವಾಗಿ ಚಿತ್ರಕಲೆಯನ್ನು ಕುರಿತು ಹೇಳಲಾಗಿದೆ. ಹಾಗೆಯೇ ಚಿತ್ರವನ್ನು ಕುರಿತು ಹೇಳುವಂತ ಈ ಸಾಹಿತ್ಯ ಪ್ರಕಾರಗಳು. ಭಾವಚಿತ್ರವನ್ನು ಕುರಿತು ಹೇಳುವಂತ ಹಲವು ಗ್ರಂಥಗಳು ಕಂಡುಬರುತ್ತವೆ.

ವಿಷ್ಣುಧರ್ಮೋತ್ತರ ಪುರಾಣ

ಚಿತ್ರಕಲೆಯನ್ನು ಸಮಗ್ರವಾಗಿ ಪರಿಚಯಿಸುವಂತ ಈ ಪುರಾಣದಲ್ಲಿ ೩೫ರಿಂದ ೪೩ನೇ ಅಧ್ಯಾಯದಲ್ಲಿ ಚಿತ್ರದ ಸೂತ್ರಗಳನ್ನು ವಿವರಿಸುತ್ತದೆ. ಚಿತ್ರಕಲೆಯ ಸಮಗ್ರವಾದ ವಿವರವನ್ನು ಈ ಪುರಾಣ ಒದಗಿಸುತ್ತದೆ. ಇದು ಸುಮಾರು ೫ನೇ ಶತಮಾನದಲ್ಲಿ ರಚಿತವಾದ ಗ್ರಂಥವಾಗಿದೆ. ಇದು ವಾದ-ಪ್ರತಿವಾದಗಳಿಂದ (ನಾಟಕ) ಕಂಡುಬಂದಂತ ಗ್ರಂಥವಾಗಿದೆ. ಇದರಲ್ಲಿ ವಜ್ರನೆಂಬ ರಾಜನಿಗೆ ಮಾರ್ಕಂಡೇಯನೆಂಬ ಋಷಿ ಇದ್ದು. ಇವರಿಬ್ಬರ ಸಂವಾದದ ರೂಪದಲ್ಲಿ ಈ ಗ್ರಂಥ ಇದೆ. ಚಿತ್ರದ ಹಾಗೂ ಚಿತ್ರಕಲೆಯ ಹುಟ್ಟಿನ ವಿವರವನ್ನು ಈ ಗ್ರಂಥ ವಿವರಿಸುತ್ತದೆ. ಇದರ ಪ್ರಕಾರ ನರ ನಾರಾಯಣರು ತಪಸ್ಸಿಗೆ ಕುಳಿತಾಗ ತಪಸ್ಸು ಭಂಗಮಾಡಲು ಇಂದ್ರನು ನೂರಾರು ಅಪ್ಸರೆಯರನ್ನು ಕಳಿಸುತ್ತಾನೆ.ಆದರೆ ನಾರಾಯಣ

ಮಾವಿನ ಎಲೆಗಳ ಮೂಲಕ 'ಅಪ್ಸರೆಯ ಚಿತ್ರವನ್ನು ಬರೆಯುತ್ತಾನೆ. ಇದರಿಂದಲೇ ಚಿತ್ರಕಲೆ ಆರಂಭವಾಯಿತು ಎಂದು ಹೇಳುತ್ತದೆ. ಇಲ್ಲಿ ಭಾವಚಿತ್ರವನ್ನು ಅಪ್ಸರೆಯ ರೂಪದಲ್ಲಿ ಕಾಣಲಾಗಿದೆ. ಚಿತ್ರಗಳನ್ನು ರಚಿಸುವಂತ ವಿಧಾನವನ್ನು, ಸಮಾಜದಲ್ಲಿರುವಂತ ವಿವಿಧ ವರ್ಗಗಳ ಜನರ ಚಿತ್ರವನ್ನು ಹೇಗೆ ಬರೆಯಬೇಕು ಎಂದು ವಿವರಿಸುತ್ತದೆ. ಈ ಗ್ರಂಥವು ಸತ್ಯ, ವೈಣಿಕ, ನಾಗರ ಮತ್ತು ಮಿಶ್ರ ಎಂಬ ನಾಲ್ಕು ರೀತಿಯ ಚಿತ್ರಶೈಲಿಯನ್ನು ಹೇಳುತ್ತದೆ.ಸತ್ಯ ಚಿತ್ರದ ಪ್ರಕಾರ ಲೋಕಪ್ರಸಿದ್ಧವಾದ ಮರ-ಗಿಡ, ಬಳ್ಳಿ ಮನುಷ್ಯ ಇವುಗಳನ್ನು ಹೋಲಿಸಿಕೊಂಡು ಬರೆಯಬೇಕೆಂದು ಹೇಳುತ್ತದೆ.

ಚಿತ್ರಲಕ್ಷಣ

ವಿಷ್ಣುಧರ್ಮೋತ್ತರ ಪುರಾಣದ ನಂತರ ಚಿತ್ರಕಲೆಯ ಕುರಿತು ಹೇಳುವಂತ ಎರಡನೇಯ ಪ್ರೌಢ ಗ್ರಂಥವೆಂದರೆ ನಗ್ನಜಿತ್‌ನ ಚಿತ್ರ ಲಕ್ಷಣ ಗ್ರಂಥವನ್ನು ಪೂರ್ವ ಕಾಲದೆಂದು ಭಾವಿಸಲಾಗಿದೆ.(ಪೂರ್ವಮಧ್ಯಕಾಲ) ಮೂರು ಅಧ್ಯಾಯಗಳಿರುವಂತ ಈ ಕೃತಿಯಲ್ಲಿ ಮೊದಲ ಅಧ್ಯಾಯದಲ್ಲಿ ಚಿತ್ರಕಲೆಯ ಹುಟ್ಟಿನ ವರ್ಣನೆಯಿದೆ. "ಈ ಗ್ರಂಥದಲ್ಲಿ 'ಭಯಜಿತ್' ಎಂಬ ಹೆಸರಿನ ರಾಜನ ರಾಜ್ಯದಲ್ಲಿ ಬ್ರಾಹ್ಮಣನು ತನ್ನ ಮಗನ ಶವವನ್ನು ರಾಜನ ಮುಂದೆ ತಂದು ಜೀವಧಾನವನ್ನು ಬೇಡುತ್ತಾನೆ. ಯಮರಾಜ ಜೀವಧಾನ ಮಾಡಲು ಒಪ್ಪುವುದಿಲ್ಲ. ಆಗ ಸ್ವತಃ ಬ್ರಾಹ್ಮಣು ಬಂದು ನಗ್ನಜಿತನಿಗೆ ಬ್ರಾಹಣನ ಪುತ್ರನ ಚಿತ್ರವನ್ನು ಚಿತ್ರಿಸಲು ಹೇಳಿ ಅದರಲ್ಲಿ ಪ್ರಾಣ ತುಂಬಿದನು. ಹೀಗೆ ಸೃಷ್ಟಿಯಾದ ಚಿತ್ರವು ಲೋಕದಲ್ಲಿ ಮೊದಲ ಚಿತ್ರವಾಗಿದೆ."[11] ಹೀಗೆ ಸೃಷ್ಟಿಯಾದ ಭಾವಚಿತ್ರವು ಈಲೋಕದ ಮೊದಲ ಚಿತ್ರ ಎಂದು ಹೇಳಿದೆ. ಮುಂದೆ ಮೂರನೇಯ ಅಧ್ಯಾಯದಲ್ಲಿ ಪಶು, ಪಕ್ಷಿ, ಸ್ತ್ರೀ-ಪುರುಷ, ಪ್ರಕೃತಿಚಿತ್ರ ಇವುಗಳ ರಚನೆಯ ವಿಧಿ-ವಿಧಾನ ಭಾವಪ್ರಧಾನ ಚಿತ್ರಗಳನ್ನು ರಚಿಸುವಂತೆ ವಿಧಾನವನ್ನು ಹೇಳಲಾಗಿದೆ. ಭಾವಪ್ರಧಾನ ಚಿತ್ರಗಳಲ್ಲಿ 'ಬೆಳಕಿನ ಆಂತರಿಕ ಪ್ರತಿಕ್ರಿಯೆಯನ್ನು ಯೋಗ್ಯ ರೂಪದಲ್ಲಿ ಚಿತ್ರಿಸುವ ಮಾರ್ಗವನ್ನು ತಿಳಿಸುತ್ತದೆ.

ಚಿತ್ರಕಲೆಯ ಕುರಿತು ಅನೇಕ ವಿಷಯಗಳನ್ನು ಈ ಗ್ರಂಥವು ಹೇಳುತ್ತದೆ. ಭಾವಚಿತ್ರದ ಬಗ್ಗೆ ವಿಶೇಷವಾಗಿ ಹೇಳುವ ಈ ಗ್ರಂಥವು "ಇಂದು ಭಾವಚಿತ್ರದ ಎಂಬುವುದು ಚಿತ್ರಕಲೆಯಲ್ಲಿ ಪ್ರತ್ಯೇಕ ಪ್ರಕಾರವಾಗಿ ಅಭ್ಯಸಿಸುವಂತಿದ್ದರೂ ಅದರ ತದ್ರೂಪದ ಚಿತ್ರ ಎಂದು 'ಅವಿದ್ಧ' ವೆಂದರೆ ಕೇವಲ ಆಕಾರ ಮಾತ್ರವೆಂದೂ. ಭಾವಚಿತ್ರವೆಂದರೆ ಶೃಂಗಾರಾಧಿ ರಸಗಳು ಯುತ್ಪತ್ತಿಯಾಗುವಂತೆ ಕುತೂಹಲ ಭರಿತ ಚಿತ್ರ'ವೆಂದೂ ಅರ್ಥೈಸಬಹುದು.

ಶಿವತತ್ವ ರತ್ನಾಕರ

ಈ ಶಿವತತ್ವ ರತ್ನಾಕರ ಕೃತಿ ಹಲವು ವಿಷಯಗಳನ್ನು ಪ್ರಸ್ತಾಪಿಸುತ್ತದೆ. ಅಲ್ಲದೆ ಕೃತಿಯ ಎಲ್ಲಾ ಶಿವನ ರಚಿತ ಎಂದು ಹೇಳುತ್ತಾ ಚಿತ್ರಕಲೆಯ ವಿಷಯದಲ್ಲಿ ಶಿಲ್ಪಿ, ಚಿತ್ರ, ವಾಸ್ತು, ನಾಟ್ಯಶಾಲೆ, ಚಿತ್ರಶಾಲೆ ಹೀಗೆ

ಹಲವು ಅಧ್ಯಾಯದಲ್ಲಿ ಚರ್ಚೆಮಾಡಿದೆ. ವಿಶೇಷವಾಗಿ ಭಾವಚಿತ್ರದ ರೂಪ, ವಿಧಾನ, ಆಕೃತಿ ಇತ್ಯಾದಿಗಳನ್ನು ವಿವರಿಸಲಾಗಿದೆ.

"ಚಿತ್ರದಲ್ಲಿ ನಾನಾ ರಸಗಳು ವ್ಯಕ್ತವಾಗಬೇಕು 'ರಸರಹಿತವಾದ ಚಿತ್ರ ಚಿತ್ರವಲ್ಲ' ಎಂದು ಈ ಕೃತಿಯಲ್ಲಿ ಹೇಳಲಾಗಿದೆ."[೬] ಹೀಗೆ ಹಲವು ಪ್ರಾಚೀನ ಗ್ರಂಥಗಳು ಚಿತ್ರಕಲೆಯನ್ನು ಉಲ್ಲೇಖಿಸುತ್ತವೆ.ಮೇಲ್ಕಾಣಿಸಿದ ಗ್ರಂಥಗಳು ಚಿತ್ರಕಲೆಯ ಬಗ್ಗೆ ನೇರವಾಗಿ ಮತ್ತು ಕೆಲವು ಕಡೆ ಸಂದರ್ಭಕ್ಕೆ ಅನುಸಾರವಾಗಿ ಪ್ರಸ್ತಾಪಿಸುತ್ತದೆ. ಸಂಯೋಜನಾ ರೂಪದ ಚಿತ್ರಗಳನ್ನು ವ್ಯಕ್ತಿಚಿತ್ರ, ಭಾವಚಿತ್ರ ಹೀಗೆ ಇತ್ಯಾದಿ ರೂಪದ ಭಾವವಿರುವಂತಹ ಚಿತ್ರಗಳನ್ನು ಪ್ರಸ್ತಾಪಿಸುತ್ತದೆ.

ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ

ಕನ್ನಡ ಕವಿಗಳು ಭಾವಜೀವಿಗಳು, ರಸಿಕರು ಮತ್ತು ಅದರ ಜೊತೆಯಲ್ಲಿ ಸೌಂದರ್ಯದ ನಾನಾ ಮುಖಗಳನ್ನು ಕಂಡವರು. ಎಷ್ಟಾದರೂ ಸಾಹಿತ್ಯಕ್ಕೂ, ಕಲೆಗಳಿಗೆ ನಿಕಟವಾದ ಬಾಂಧವ್ಯವಿದೆ. ಆದ್ದರಿಂದ ಕನ್ನಡ ಸಾಹಿತ್ಯದಲ್ಲಿ ಕಲಾಕೃತಿಯ ನೇರ ವಿಮರ್ಶೆ, ಕಲಾವಿದನ ಬಗ್ಗೆ ಕಲಾಪ್ರಕಾರ, ಪರಿಕರಣದ ಬಗ್ಗೆ ಪ್ರಸ್ತಾಪ ಬರುತ್ತದೆ. ಹೀಗೆ ಈ ರಿತೀಯ ಅನೇಕ ಕಾವ್ಯ ಸಾಹಿತ್ಯದಲ್ಲಿ ಅನೇಕ ಘಟನೆಗಳು ಉಲ್ಲೇಖವಾಗಿದೆ. ಆದರೆ ಭಾವಚಿತ್ರಗಳ ಬಗ್ಗೆ ಈ ಪ್ರಮಾಣ ಬಹಳ ಕಡಿಮೆ ಎಂದು ಹೇಳಬಹುದು. ವಾಸ್ತವವಾಗಿ ಈಗಿನ ಭಾವಚಿತ್ರ ಎಂದು ಹೇಳುವ ಕಲಾಪ್ರಕಾರವು ಅಂದು ಮುಖ್ಯ ಚಿತ್ರಕಲಾ ಪ್ರಕಾರವಾಗಿತ್ತು. ಅಂದರೆಚಿತ್ರಕಲೆಯ ನೈಜರೂಪದಲ್ಲಿ ಸಂಯೋಜನ ಚಿತ್ರಗಳಲ್ಲಿ ಭಾವಚಿತ್ರಕಲೆ ಅಂದು ಕೂಡಿಕೊಂಡಿತ್ತು.

ಕನ್ನಡ ಸಾಹಿತ್ಯದಲ್ಲಿ ಚಿತ್ರಕಲೆಯ ಪ್ರಸ್ತಾಪವನ್ನು ಶ್ರೀ ವಿಜಯನು ತನ್ನ ಗ್ರಂಥ 'ಕವಿರಾಜಮಾರ್ಗ'ದಲ್ಲಿ ಉಪಮೇಯ ರೂಪವಾಗಿ ಸುಮಾರು ಕ್ರಿ.ಶ. ೮೫೦ರಲ್ಲಿ ನೃಪತುಂಗನ ಆಳ್ವಿಕೆಯ ಕಾಲದಲ್ಲಿ ಉಲ್ಲೇಖಿಸಿದ್ದಾನೆ. ಪಂಪನು ನೇರವಾಗಿ 'ಚಿತ್ರಪಟವನ್ನು' ವಿವರಿಸುತ್ತಾನೆ. ಇವನ 'ಆದಿಪುರಾಣ' ಗ್ರಂಥದಲ್ಲಿ ಬರುವ ವಜ್ರದಂತ ಮಹಾರಾಜನ ಮಗಳಾದ ಶ್ರೀಮತಿ ಮತ್ತು ವಜ್ರಜಂಘ ಕತೆಯಲ್ಲಿ ಭಾವಚಿತ್ರವನ್ನು ಬಳಸಿಕೊಂಡು ಕಾವ್ಯರಚನೆ ಮಾಡಿದನು. ಮುಂದೆ ನಾಗಚಂದ್ರ (ಅಭಿನವ ಪಂಪ) ತನ್ನ ಕೃತಿಯಲ್ಲಿ ಚಿತ್ರದ ಪ್ರೌಢವಾದ ವಿವರಣೆ ಹಾಗೂ ವಿಮರ್ಶೆಯನ್ನೂ ಮಾಡಿದ ಗ್ರಂಥ 'ಮಲ್ಲಿನಾಥ ಪುರಾಣ' ಇದರಲ್ಲಿ ನೈಜ ದೃಶ್ಯದ ಜೊತೆಯಲ್ಲಿ ನಿಸರ್ಗ ಚಿತ್ರದ ಪ್ರಸ್ತಾಪವನ್ನು ಮಾಡಿದನು. ನಾಗಚಂದ್ರನ ಕಾಲ ಸುಮಾರು ೧೧೦೦ ಎಂದು ಹೇಳಲಾಗುತ್ತದೆ.

ಕ್ರಿ.ಶ. ೧೧೮೦ರಲ್ಲಿ ಬೊಪ್ಪಣ್ಣ ಪಂಡಿತನು 'ಗೊಮ್ಮಟಸ್ತುತಿ' ಎಂಬ ಗ್ರಂಥವನ್ನು ಬರೆದಿದ್ದಾನೆ. ಇದರಲ್ಲಿ ೨೭ವೃತ್ತಗಳಿವೆ. ಅಲ್ಲದೆ ಇದು ಶಿಲಾಮೂರ್ತಿಯನ್ನು ಉಲ್ಲೇಖಿಸುವಂತದ್ದು. 'ಕಾಳಿದಾಸ'ನ ಮೂಲ ವಿಕಾಗ್ನಿಮಿತ್ರದಲ್ಲಿ ಚೇಟಿಯೊಬ್ಬಳಾದ ಮಾಲವಿಕೆಯ ಭಾವಚಿತ್ರವನ್ನು ನೋಡಿ ದೊರೆ ಪ್ರೇಮ ವಿವಾಹವಾಗುತ್ತಾನೆ. ಇನ್ನೊಂದು ಮಹಾಕೃತಿಯಾದ 'ಶಾಕುಂತಲ' ಇದರಲ್ಲಿ ವ್ಯಸನಪೂರಿತವಾದ ದೊರೆತನ

ಪ್ರೇಯಸಿ ಶಕುಂತಲೆಯ ಚಿತ್ರವೊಂದನ್ನು ನೋಡಿ ಆ 'ಭಾವಚಿತ್ರಕ್ಕೆ'ಇನ್ನಷ್ಟು ಆಭರಣ ಮತ್ತು ಹಿನ್ನಲೆಯು ಇರಬೇಕೆಂದು ಸೇವಕನಿಗೆ ಸಲಕರಣೆಗಳನ್ನು ತರುವಂತೆ ಹೇಳುತ್ತಾನೆ"[೮] ಅಲ್ಲದೆ ಅಗ್ಗಳ,ಪಾರ್ಶಪಂಡಿತ ಸೋಮರಾಜ. ಪೊನ್ನ, ಲಕ್ಷ್ಮೀಶ ಇತ್ಯಾದಿ ಕವಿಗಳ ಭಾವಚಿತ್ರವನ್ನು ಉಲ್ಲೇಖಿಸುತ್ತಾನೆ. ಇದರೆ ಈಚಿತ್ರಗಿಂತಲೂ ಪೂರ್ವವಾಗಿ ಭಾವಶಿಲ್ಪಗಳ ಪ್ರಾಚೀನತೆಯ ಹೆಚ್ಚು ಎಂದು ಆಧಾರ ಸಮೇತ ಕಾಣಬಹುದಾಗಿದೆ. ಯಾವುದೇ ವ್ಯಕ್ತಿಯ ರೂಪವನ್ನು ರೇಖೆ, ವರ್ಣ, ಛಾಯಾಚಿತ್ರ ಅಥವಾ ಶಿಲ್ಪ ಮಾಧ್ಯಮದಲ್ಲಿ ರಚಿಸಿ ಮನೆಯ ಗೋಡೆಯಲ್ಲಿ, ಮಠಗಳಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಛಾಯಾಚಿತ್ರ ಸಂಪುಟಗಳಲ್ಲಿ ಇರಿಸಿದರೆ ಆ ವ್ಯಕ್ತಿಯ ಬದುಕು ಸುದೀರ್ಘತೆಯನ್ನು ಆಕರ್ಷಕ ಶಕ್ತಿಯನ್ನು ಪಡೆದುಕೊಳ್ಳುವ ನಂಬಿಕೆಯ ಹಿಂದೊಮ್ಮೆ ಇತ್ತು.

ಕ್ರಿ.ಪೂ. ೩೦೦ಕ್ಕಿಂತಲೂ ಹಿಂದೆ ಗ್ರೀಕ್‌ನ ನಾಣ್ಯಗಳ ಮೇಲೆ ದೇವತೆಗಳ ಚಿತ್ರಗಳಿರುತ್ತಿದ್ದವು. ನಂತರದಲ್ಲಿ ಅಲೆಕ್ಸಾಂಡರನು ತನ್ನ ಅವಧಿಯಲ್ಲಿ 'ಸ್ವಭಾವಚಿತ್ರಗಳಶಿಲ್ಪಗಳು' ನಾಣ್ಯಗಳ ಮೇಲೆ ಇರುವಂತೆ ಮಾಡಿದನು. ಮುಂದೆ ಅಧಿಕಾರವನ್ನು ಹೆಚ್ಚಿಸಿಕೊಳ್ಳಲು ಕಾಲಕಾಲಕ್ಕೆ ಹಲವಾರು ಮಾಧ್ಯಮಗಳ ಮೇಲೆ ಭಾವಚಿತ್ರಗಳು ರೂಪಗೊಳುತ್ತಾ ಬಂದವು.

"ಪುರಾತನ ಈಜಿಪ್ಟ್‌ನ ಜರು ಬಹುಕಾಲ ಉಳಿಯುವಂತಹ ಶಿಲ್ಪದಲ್ಲಿ ರೂಪಿಸಿದ ಜನರ ರೂಪಗಳೂ ಅಥವಾ ಭಾವಚಿತ್ರಗಳು ಅವರಾತ್ಮಗಳಿಗೆ ದೇವಾಲಯವಾಗಿದ್ದವು ಎಂದು ನಂಬಿದ್ದರು. ಹೀಗೆ ನಿರ್ಮಿಸಿದ ಆಲಯಗಳಲ್ಲಿ ಅವುಗಳು (ಆತ್ಮಗಳು) ಅಮರತ್ವವನ್ನು ಹೊಂದುತ್ತವೆ. ಎಂದು ನಂಬಿದ್ದರು. ಹಾಗೆಯೇ ಶಾಶ್ವತವಾಗಿ ಉಳಿದುಕೊಳ್ಳುವ ಭಾವಚಿತ್ರದ ಪ್ರಕಾರವಾಗಿ ಸ್ಮಾರಕವಾಗಿಯೂ ಭಾವಿಸಲ್ಪಡುತಿತ್ತು. ಐತಿಹಾಸಿಕ ಸ್ಪರ್ಶವನ್ನು ಹೊಂದಿರುತ್ತಿತ್ತು"[೯] ಎಂದು ನಮಗೆ ಪ್ರಾಚೀನ ಸ್ಮಾರಕಗಳನ್ನು ನೋಡಿದರೆ ತಿಳಿಯುವಂತೆಸತ್ಯವಾಗಿದೆ. ಜನರು ಭಾವಚಿತ್ರದ ಪರಿಕಲ್ಪನೆಯನ್ನು ಈ ರೀತಿಯಾಗಿ ಅಂದಿನ ಕಾಲದಲ್ಲಿ ಕಾಣುತ್ತಿದ್ದರು. ಮುಂದೆ ಭವಭೂತಿಯ ಉತ್ತರರಾಮ ಚರಿತೆ, ವರಾಹಮಿರನ 'ಬೃಹತ್ ಸಂಹಿತೆ' ಹಾಗೂ ಇತರ ಕಾವ್ಯಗಳಲ್ಲಿ ಭಾವಚಿತ್ರಗಳ ಪ್ರಸ್ತಾಪವನ್ನು ಕಾಣಬಹುದಾಗಿದೆ. ದೇವ-ದೇವತೆಗಳಭಾವಚಿತ್ರವನ್ನು ಪ್ರೋತ್ಸಾಹಿಸುತ್ತ ಮನುಷ್ಯತ್ವಕ್ಕೆ ಹತ್ತಿರವಾಗುವ 'ಭಾವಚಿತ್ರ'ವನ್ನು ಅದು ಸ್ವರ್ಗ ವಿಮುಖಿ ದೃಷ್ಟಿಯಿಂದು ಪರಿಗಣಿಸಿ ಖಂಡಿರುವ 'ಶುಕ್ರ ನೀತಿಸಾರ' ಗ್ರಂಥವು ಕೂಡ ಕಂಡುಬರುತ್ತದೆ.

"೧೧ ಮತ್ತು ೧೨ನೇ ಶತಮಾನದಲ್ಲಿ ಹೊಯ್ಸಳರ ಕಾಲದ 'ಭಾವಚಿತ್ರ' ಪ್ರಕಾರ ಶ್ರೀಮಂತವಾಗಿತ್ತು. ಇದರಿಂದಾಗಿ ಸಮಕಾಲಿನ ಕನ್ನಡ ಸಾಹಿತ್ಯದಲ್ಲಿ ಭಾವಚಿತ್ರಗಳ ಉಲ್ಲೇಖ ಸಾಕಷ್ಟಿದೆ. ಕನ್ನಡದ ಕವಿಗಳಾದ ಪೊನ್ನ, ರುದ್ರಭಟ್ಟರು 'ಚಿರಭಟ್ಟ' ಎಂಬ ಕಲಾವಿದರ ಹೆಸರನ್ನು ಪ್ರಸ್ತಾಪಿಸಿದ್ದಾರೆ. ರೂಪ ಸಾದೃಶ್ಯವುಳ್ಳ 'ಭಾವಚಿತ್ರ ಪರಂಪರೆ' ಆಗ ಮುಂದುವರಿದಿತ್ತು. ಮತ್ತು 'ಛಾಂದೋಗ್ಯ ಉಪನಿಷತ್' ಮೈತ್ರೆಯಿಂದ ಉತ್ತರ ಶಂತ್ರಗಳ ಕಾಲದಲ್ಲಿ ಲಂಕಾವತಾರ ಸೂತ್ರ,"ಶ್ರೀತತ್ವನಿಧಿ" ಹೀಗೆ ಹಲವಾರು ಗ್ರಂಥಗಳು ಮತ್ತು ಉಪನಿಷತ್‌ಗಳು ಭಾವಚಿತ್ರಗಳನ್ನು ದೈವೀಕರಣ ದೃಷ್ಟಿಗೆ ಗಮನಹರಿಸಿವೆ."[೧೦] ಹೀಗೆ ಭಾರತೀಯ ಪ್ರಾಚೀನ

ಗ್ರಂಥಗಳಲ್ಲಿ ಭಾವಚಿತ್ರಗಳ ಬಗ್ಗೆ ಸುದೀರ್ಘವಾಗಿ ಅಥವಾ ಸಂದರ್ಭಾನುಸಾರವಾಗಿ ಚಿತ್ರ ರಚಿಸುವಂತ ರಚನಾವಿಧಾನ ತಂತ್ರಶೈಲಿ ಅನುಸರಿಸಬೇಕಾದ ಹಲವಾರು ಮಾಹಿತಿಯನ್ನು ನೀಡುತ್ತದೆ.

ಭಾರತದಲ್ಲಿ ೧೫ನೇ ಶತಮಾನದ ಅವಧಿಯಲ್ಲಿ ಮುಖವನ್ನು ಮಾತ್ರ ಭಾವಚಿತ್ರವೆಂದು ಕರೆಯುತ್ತಿದ್ದರು. ೧೬ನೇ ಶತಮಾನದಲ್ಲಿ ಪಾಶ್ಚಾತ್ಯದಲ್ಲಿ ಭಾವಚಿತ್ರಗಳು ಚಿತ್ರಿಸುತ್ತಿದ್ದ ಕಾಲವಾಗಿತ್ತು. ಆದರೆ ಲಿಯೊನಾರ್ಡೊ ವಿಂಚಿಯ 'ಮೊನಾಲಿಸಾ' ಎಂಬ ಭಾವಚಿತ್ರ ಕಲಾಕೃತಿಯ ಹಿನ್ನಲೆಯಾಗಿ ಭೂದೃಶ್ಯವು ಕಾಣಿಸಿಕೊಂಡು ಕುತುಹಲಕಾರಿಯನ್ನುಂಟು ಮಾಡಿತು.

ಕಾಲಗಳು ಕಳೆದಂತೆಲ್ಲ ಭಾವಚಿತ್ರ ಶೈಲಿಯೇ ಸಂಪೂರ್ಣವಾಗಿ ಬದಲಾಗುತ್ತ ಬಂದಿತು. "ಕ್ರಮೇಣ ಕಲಾವಿದರು ಸ್ವ-ಭಾವಚಿತ್ರಗಳನ್ನು ರಚಿಸಲು ಆರಂಭಿಸಿದರು. ರೆಂಬ್ರಾಟ್ ವೆಲಾಸ್ಕತ್ ವ್ಯಾನಗಾಗ್, ಪಾಲಗಾಗಿನ್, ಚೆಕಮನ್, ಡ್ಯೂರರ್ ಇತ್ಯಾದಿ ಕಲಾವಿದರು ತಮ್ಮ ಸ್ವ- ಭಾವಚಿತ್ರಗಳನ್ನು ರಚಿಸಿಕೊಂಡು"[೧೧] ೧೪೯೮ರಲ್ಲಿ ಡ್ಯೂರರ್ ತನ್ನ ಸ್ವಭಾವಚಿತ್ರವನ್ನು ಒಬ್ಬ ಚಿಂತಕ ವಿದ್ವಾಂಸನಂತೆ ಚಿತ್ರಿಸಿಕೊಂಡನು.ಮುಂದೆ ರೂಪದರ್ಶಿಯನ್ನು ಮುಖ್ಯವಾಗಿ ಮುಖದ ಚಹರೆಯಿಂದಲೂ ಒಳಗಿನ ಭಾವನೆಗಳನ್ನು ಮುಖದ ಭಾವನೆಗಳನ್ನು ಅತ್ಯಂತ ತೀವ್ರ ಸ್ವರೂಪದಲ್ಲಿ ಮುಖದ ಭಾವನೆಯನ್ನು ಅಭ್ಯಸಿಸುವಂತ ಪರಿಪಾಠವೂ ಬೆಳೆಯಿತು. ಇದಕ್ಕೆ ವಿರೋಧವೆಂಬಂತೆ ಪೀಟರ್‌ಪಾಲ್. ರುಬೆನ್ಸ್, ಪ್ರಾನ್ಸ್‌ಹಾಲ್ಸ್ ಹೆಚ್ಚಾಗಿ ಎಂಟರ್‌ವಾನ್‌ಡೈಕ್ ಮುಖ ಸಾಮುದ್ರಿಕೆಯ ಅಧ್ಯಯನದ ಮೂಲದ ಗುಣಲಕ್ಷಣಗಳನ್ನು ಹೆಚ್ಚಾಗಿ ರಚಿಸಿದರು. ತನ್ನ ಚಿತ್ರದಲ್ಲಿ ಗಾಢವಾದ ಭಾವನೆಯನ್ನು ಗುಂಪಿನ ಭಾವಚಿತ್ರಗಳಲ್ಲಿ ಮನಶಾಸ್ತ್ರದ ಏಕತೆಯನ್ನು ತಂದುಕೊಳ್ಳಲಿಕ್ಕೆ ಒಂದೇ ಬಣ್ಣದ ಛಾಯಾಂತರಗಳನ್ನು ಮಡಿಸಿಕೊಳ್ಳುತ್ತಿದ್ದ ಕಲಾವಿದ ರೆಂಬ್ರಾಟ್ ಇವನು ಈ ರಿತೀಯ ಚಿತ್ರಗಳನ್ನು ಹೆಚ್ಚಾಗಿ ರಚಿಸಿದನು.

೧೮ನೇ ಶತಮಾನದ ಭಾವಚಿತ್ರಗಳು ರಚನೆಯಲ್ಲಿ ಅತ್ಯಂತ ವೇಗದ ಗತಿಯನ್ನು ಕಂಡಿತು.ಅಲ್ಲದೆ ಹೆಣ್ಣನ್ನು ಅರನಗ್ನವಾಗಿ ಅಥವಾ ಕಡಿಮೆ ಉಡುಗೆಯಲ್ಲಿ ಚಿತ್ರಿಸುವಂತ ಕಾಲವಾಯಿತು. ಕುಟುಂಬದ ಭಾವಚಿತ್ರಗಳಿಗೆ ಅಷ್ಟೆನೂ ಬೇಡಿಕೆಗಳು ಇರುತ್ತಿರಲಿಲ್ಲ. ಇದ ಸಂದರ್ಭದಲ್ಲಿ ಸ್ತ್ರೀ ಸಂವೇದನಾ ಶೀಲತೆಯ ಮಹಿಳಾ ಕಲಾವಿದೆಯರು ಹೆಸರು ಮಾಡುವಂತಾಯಿತು. ರೋಸಲ್ಬಾ ಕಾರಿಯೆರಾ. ಏಂಜಲಿಕಾ ಕಾಫಮನ್ ಪ್ರಮುಖರಾಗಿದ್ದರು.

ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿ "೪ನೇ ವಿಲಿಯಂ'ನ ಕಾಲದಲ್ಲಿ (೧೮೩೫-೧೮೪೦) 'ಭಾವಚಿತ್ರವಿರುವ ನಾಣ್ಯ'ಗಳನ್ನು ಬಿಡುಗಡೆ ಮಾಡಿತ್ತು. ಮುಂದೆ ೧೮೪೦-೧೯೦೧ರ ಅವಧಿಯಲ್ಲಿ 'ವಿಕ್ಟೋರಿಯಾ' ರಾಣಿಯ ನಾಣ್ಯಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಹೀಗೆ ಕಂಪನಿ ಸರಕಾರವು ಬಂಗಾರ ಮತ್ತು ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೊಳಿಸುತ್ತದೆ. ಮುಂದೆ ಕ್ಯಾಮರಾ ಆವಿಷ್ಕಾರದಿಂದ ಛಾಯಾಚಿತ್ರಗಳ ಹಾವಳಿಯುಂಟಾಗಿ ಕಲಾವಿದ ಈ ಛಾಯಾಚಿತ್ರದ ವಿರುದ್ಧವಾಗಿ ಕಲಾವಿದನು ತನ್ನದೆಯಾದ ಸೃಜನಾತ್ಮಕ

ಭಾವಚಿತ್ರಗಳನ್ನು ರಚಿಸಿದನು. ಇವಲ್ಲದೇ ಸಮಾಜದ ಪ್ರತಿಷ್ಟಿತ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿದ್ದ ಭಾವಚಿತ್ರಗಳು ಮುಂದೆ ಕಂಡಕಂಡವರನ್ನೆಲ್ಲಾ ಚಿತ್ರಿಸುವ ಅಭ್ಯಾಸ ಬೆಳೆಯಿತು. ಟಾಲೌಸ ಲಾವಟ್ರೆಕ್ ಹೆಚ್ಚಾಗಿ ಡಾಮಿರ್‌ನ ಕೃತಿಯಲ್ಲಿ ಎಲ್ಲಾ ವರ್ಗದ ಜನ ಕಾಣಿಸಿಕೊಂಡರು. ರೂಪಗಳನ್ನು 'ವಿಕೃತಗೊಳಿಸುವ ಪ್ರವೃತ್ತಿಯ ಪ್ರಾರಂಭವಾಯಿತು.ವ್ಯಾನ್‌ಗೊಗನ ಭಾವಚಿತ್ರಗಳು, ಪಾಲ್‌ಗಾಗಿನ ಭಾವಚಿತ್ರಗಳು. ಸ್ವಭಾವಚಿತ್ರಗಳು ಇದೇ ಅವಧಿಯವು. ಮುಂದೆ ಕ್ಯೂಬಿಸಂ ಹೊತ್ತಿಗೆ ರೂಪ ವಿರೂಪವಾಗಿ ಆಕಾರಗಳು ತುಂಡು ತುಂಡಾಯಿತಾದರೂ, 'ವಿಕೃತಿ' ಸೌಂದರ್ಯವನ್ನು ಅರಗಿಸಿಕೊಂಡಿತು.

ಪ್ರಾರಂಭದಲ್ಲಿ ಭಾವಚಿತ್ರಗಳನ್ನು ಮನೆತನದ ಚಿತ್ರಗಳನ್ನು ಚಿತ್ರಿಸುತ್ತಿದ್ದರು. ನಂತರ ಮಠ–ಮಂದಿರಗಳಲ್ಲಿ, ಚರ್ಚ್‌ನ ಪ್ರಮುಖ ದೈವ ಮತ್ತು ಪ್ರಸಿದ್ಧ ವ್ಯಕ್ತಿಗಳನ್ನು ಮಾತ್ರ ಕಲಾವಿದರು ಚಿತ್ರಿಸುತ್ತಿದ್ದರು. ನಂತರ ಕಾಲದಲ್ಲಿ ಜನಸಾಮಾನ್ಯರ ದಿನನಿತ್ಯದ ಭಾವ–ಭಂಗಿ, ಪ್ರೇಮ, ದ್ವೇಷ ಹೀಗೆ ಹಲವು ವಿಷಯದ ಮೇಲೆ ಕಲಾಕೃತಿಗಳನ್ನು ಬರೆಯುತ್ತಿದ್ದರು. ಅಲ್ಲದೆ ಪ್ರಾರಂಭದ ಅವಧಿಯ ಭಾವಚಿತ್ರಗಳು ಇಸ್ಲಾಂ, ಪರ್ಶಿಯನ್ ಭಾವಚಿತ್ರಗಳು, ವ್ಯಕ್ತಿಗಳ ವ್ಯಕ್ತಿಚಿತ್ರಗಳು ಕ್ಯಾಲಿಗ್ರಾಫಿ ಕಲೆಯ ಮೂಲದವು. ಈ ಮುಖಗಳನ್ನು ಮನುಷ್ಯನ ನೈಜ ಮುಖ ಅನ್ನುವುದುಕ್ಕಿಂತ ಮನುಷ್ಯನ ಮುಖವಾಡ ಎಂದು ಹೇಳಬಹುದಾಗಿದೆ. ಹೀಗೆ ಭಾವಚಿತ್ರಗಳು ಜಗತ್ತಿನಾದ್ಯಂತ ಬೆಳೆದುಬಂದವು.ಈ ಚಿತ್ರಗಳು ಅಂದಿನ ಕಾಲದ ಧಾರ್ಮಿಕ ಚರಿತ್ರೆ, ಐತಿಹಾಸಿಕ ಮತ್ತು ಸಾಂಸ್ಕೃತಿಕದ ಸಂಕೇತವಾಗಿದೆ.

ಭಾರತೀಯ ಚಿತ್ರಕಲೆಯ ದೇವ–ದೇವತೆಗಳ ಅವತಾರಗಳನ್ನು ಅರಿಯಲು ವೇದ, ಉಪನಿಷತ್, ಪ್ರಾಚೀನ ಗ್ರಂಥಗಳನ್ನು ಅಭ್ಯಾಸಿಸಿ ಅವುಗಳಲ್ಲಿ ಧಾರ್ಮಿಕ ಅಂಶಗಳನ್ನು ಚಿತ್ರಗಳ ಮೂಲಕ, ಶಿಲ್ಪಗಳ ಮೂಲಕ, ಹಾಗೂ ಇತರ ಮಾಧ್ಯಮಗಳಮೂಲಕ ಚಿತ್ರಿಸಲು ಆರಂಭವಾಯಿತು.ಮುಂದೆ ರಾಜಮಹಾರಾಜರ ಕಾಲದಲ್ಲಿ ರಾಜನ ಧರ್ಮ ಯಾವುದು, ಆ ಧರ್ಮದಲ್ಲಿ ಬರುವಂತ ಧಾರ್ಮಿಕ ಅಂಶಗಳನ್ನು ಕುರಿತು ಚಿತ್ರಗಳನ್ನು ರಚಿಸುತ್ತಿದ್ದರು. ಉದಾ: ವಿಜಯನಗರ ಕಾಲದಲ್ಲಿ ವೈಷ್ಣವ ಧರ್ಮಕ್ಕೆ ಹೆಚ್ಚು ಒಲವು ಇರುವುದರಿಂದಾಗಿ ವಿಷ್ಣುವಿನ ದಶಾವತಾರಕ್ಕೆ ಸಂಬಂಧಿಸಿದ ಶಿಲ್ಪಗಳನ್ನು, ಚಿತ್ರಗಳನ್ನು ಹೆಚ್ಚಾಗಿ ಕಂಡುಬರುತ್ತವೆ. ಹೀಗೆ ಧಾರ್ಮಿಕವಾದ ಅಂಶವನ್ನು ಆಯ್ದುಕೊಂಡು ಸಂಯೋಜನಾ ರೂಪದ ಚಿತ್ರಗಳನ್ನು ರಚಿಸುತ್ತಿದ್ದರು.

ಮುಂದೆ ಚಿತ್ರ, ಶಿಲ್ಪ ಇತ್ಯಾದಿ ಕಲೆಗಳನ್ನು ಧಾರ್ಮಿಕವಾಗಿ ಕಾಣತೊಡಗಿದರು. ನಂತರ ಗುರುಕುಲ ಪದ್ಧತಿಯಿಂದ ಈ ಕಲಾಶಿಕ್ಷಣದಲ್ಲಿ ಸಾಕಷ್ಟು ಬದಲಾವಣೆಗಳಾದವು. ನಮ್ಮ ದೇಶಕ್ಕೆ ಬ್ರಿಟಿಷರು ವ್ಯಾಪಾರಕ್ಕಾಗಿ ಬಂದು, ನಂತರ ತಮ್ಮ ಸಾರ್ವಭೌಮತ್ವವನ್ನು ನಮ್ಮ ರಾಷ್ಟ್ರದ ಎಲ್ಲಾ ಕ್ಷೇತ್ರಗಳ ಮೇಲೆ ಏರಿದರು. ಇದರಿಂದಾಗಿ ಚಿತ್ರಕಲಾ ಕ್ಷೇತ್ರವು ಸಹಜವಾಗಿ ಬದಲಾವಣೆಯನ್ನು ಕಂಡಿತು. ಬ್ರಿಟಿಷರು ಎಲ್ಲ ಶಿಕ್ಷಣದಂತೆ ಕಲಾಶಿಕ್ಷಣದಲ್ಲಿ ಪ್ರಮುಖವಾದ ಬದಲಾವಣೆಯನ್ನು ತಂದರು. ಭಾರತದಲ್ಲಿ ಪ್ರಮುಖವಾದ ಸ್ಥಳಗಳಲ್ಲಿ

ಮೊದಲ ವಿದ್ಯೋಗಿಕವಾದ ಉದ್ದೇಶದಿಂದ ಕಲಾಶಾಲೆಗಳನ್ನು ಆರಂಭಿಸಿದರು. ಇದರಿಂದಾಗಿ ಭಾರತೀಯ ಕಲಾವಲಯದಲ್ಲಿ ಸಾಕಷ್ಟು ಬದಲಾವಣೆಗಳಾದವು.


ಪಾಶ್ಚಾತ್ಯ ಕಲಾಶಿಕ್ಷಣವನ್ನು ತಮ್ಮ ಕಲಾಶಾಲೆಯ ಮೂಲಕ ಇಲ್ಲಿಯ ಕಲಾವಿದ್ಯಾರ್ಥಿಗಳಿಗೆ ಕಲಿಸಲು ಆರಂಭಿಸಿದರು. ಇದರಿಂದಾಗಿ ಕಲಾಶಿಕ್ಷಣವು ಸಾರ್ವಜನಿಕವಾಗಿ ಎಲ್ಲರೂ ಕಲಿಯುವ ಅವಕಾಶವನ್ನು ಕಲ್ಪಿಸಿದರು. ಹಿಂದೆ ವಂಶಪರಂಪರೆಯಾಗಿ ಕಲಿಯುತ್ತಿದ್ದಂತಹ ಸಮಾಜದ ಉನ್ನತ ವರ್ಗ ಜನರಿಂದ ಕಲಾಶಿಕ್ಷಣವು. ಸಾರ್ವಜನಿಕವಾಗಿ"ಅಕಾಡೆಮಿಕ್" ಪದ್ಧತಿಯಲ್ಲಿ ಕಲಾಶಿಕ್ಷಣವನ್ನು ನೀಡಲು ಬ್ರಿಟಿಷರು ಆರಂಭಿಸಿದರು. ಈ ಬದಲಾವಣೆಯಿಂದಾಗಿ ಕಲಾಶಿಕ್ಷಣದಲ್ಲಿ ಆಸಕ್ತಿ ಇದ್ದ ಕೆಳಸ್ತರದ ಜನರು ಕಲಾಶಿಕ್ಷಣವನ್ನು ಪಡೆಯುವಂತಾಯಿತು.

ನಮ್ಮಲ್ಲಿ ಎರಡು ರೀತಿಯ ಭಾವಚಿತ್ರ ಪ್ರಕಾರಗಳನ್ನಾಗಿ ಗುರುತಿಸಬಹುದು. ಮರಣ ನಂತರ ಪುರೋಹಿತ ಸಂಪ್ರದಾಯ ಮತ್ತು ಉದಾತ್ತ ಭಾವನೆಗಳನ್ನು ಹೊಂದಿ ಮೂಡಿ ಬರುವ ಭಾವಚಿತ್ರಗಳು ಒಂದು ಬಗೆಯಾದರೆ, ಜೀವಪರವಾದ ಮತ, ಧರ್ಮಗಳಿಗೆ ಸಂಬಂಧಿಸಿದ ರಸಭಾವಾತಿರೇಕದ ಭಾವಚಿತ್ರಗಳು ಮತ್ತೊಂದು ಬಗೆಯವು. ವಿಶಾಲ ಅರ್ಥದಲ್ಲಿ ಭಾವಚಿತ್ರ ಎಂದರೆ ನಿಜವಾದ ಅಥವಾ ಕಾಲ್ಪನಿಕ, ಜೀವಂತ ಅಥವಾ ಸತ್ತ ವ್ಯಕ್ತಿಯೊಂದರ ಶಿಲ್ಪ, ವರ್ಣಚಿತ್ರ, ರೇಖಾಚಿತ್ರ ಮತ್ತು ಛಾಯಾಚಿತ್ರ ಮಾಧ್ಯಮಗಳಲ್ಲಿ ಮೂಡಿಬರುವಂತಹ ಪ್ರತಿಬಿಂಬ ಎಂದು ಕರೆಯಬಹುದು."[೨೨]

ರೆನೈಸಾನ್ಸ್ ಕಾಲದಿಂದ ಯುರೋಪ್ ಹಾಗೂ ಅಮೇರಿಕೆಯ ದೇಶಗಳಲ್ಲಿ ಈ ಪ್ರಕಾರ (Genre) ರೂಢಿಗೆಬಂದಿತು. ಭಾವಚಿತ್ರಗಳು ವ್ಯಕ್ತಿಯ(Model) ತದ್ರೂಪ ಚಿತ್ರಣಕ್ಕೆ ಸಹಾಯಕವಾದವು. ರೆನೈಸಾನ್ಸ್ ಕಾಲದಲ್ಲೇ ಬಳಕೆಗೆ ಬಂದುದು ತೈಲ ಮಾಧ್ಯಮ. ಕಲಾವಿದನು ಇತರರ ಭಾವಚಿತ್ರಗಳನ್ನು ಸಾಮಾನ್ಯವಾಗಿ ಹೆಚ್ಚು ತಾಂತ್ರಿಕಪರಿಣಿತಿಯಿಂದ ಚಿತ್ರಿಸಿದ. ಆತನ ಸಾಮಾನ್ಯವಾಗಿ ಒಂದಕ್ಕೊಂದುMerge ಆಗಿರುತ್ತಿತ್ತು. ಪೋಪರ(Pope) ಭಾವಚಿತ್ರಗಳನ್ನು ಇದಕ್ಕೆ ಉದಾಹರಣೆ. ಕ್ರಮೇಣ ಕಲಾವಿದರು ತಮ್ಮ ಚಿತ್ರಗಳನ್ನೆ (Self Portrait) ರಚಿಸಿಕೊಂಡರು.ರೆಂಬ್ರಾಟ್.(Velazquez), ವೆಲಾಸ್ಕ ವ್ಯಾನಗಾಗ್, ಗಾಗಿನ್, ಬೆಕ್‌ಮನ್, ಡ್ಯೂರರ್ ಇವರೇ ಪ್ರಸಿದ್ಧ ಸ್ವ ಭಾವಚಿತ್ರ ಕಲಾವಿದರು.

ಕಲಾವಿದರು ತಮ್ಮ ನೆಂಟರಿಷ್ಟರನ್ನು ಅನೇಕ ಬಾರಿ ಚಿತ್ರಿಸಿದ್ದುಂಟು. ಇಂಪ್ರೆಷನಿಸಂ ಕಾಲದಲ್ಲಿ ಹಿಂದೆಂದೂ ಆಗಿರದಷ್ಟು ವಿಪುಲವಾಗಿ ಸ್ನೇಹಿತರ, ಸಹಕಲಾವಿದರ\ಕಲಾವಿದೆಯರ, ಸ್ನೇಹಿತರ ಪತ್ನಿ-ಮಕ್ಕಳ ಭಾವಚಿತ್ರಗಳುಮೂಡಿಬಂದವು. ಡೆಗಾಸನು ತನ್ನ ಅಕ್ಕ-ಭಾವ, ಅವರ ಮಕ್ಕಳ ಚಿತ್ರ ರಚಿಸಿದ. ಮಾನೆಟ್ (Monet)ತನ್ನ ಸಾಹಿತಿ ಸ್ನೇಹಿತ ಎಮಿಲಿ ಜೋಲನ ಭಾವಚಿತ್ರ ರಚಿಸಿದ. ೧೯ನೇಯ ಶತಮಾನದನಂತರ ಮೂಡಿದ ಭಾವಚಿತ್ರಗಳು ಯಾವ ವ್ಯಕ್ತಿಯ ಚಿತ್ರ ಎಂದಷ್ಟೆ ಹೇಳದೆ, ಚಿತ್ರಣದ ಶೈಲಿಯಲ್ಲಿಯೇ-

ಲಿಯೊನಾರ್ಡೊ ಡ ವಿಂಚಿಯ 'ಮೊನಾಲಿಸಾ' ಭಾವಚಿತ್ರ



ರೆಂಬ್ರಾಟ್‌ರ ಸ್ವ ಭಾವಚಿತ್ರ





ವ್ಯಾನಗಾಗ್‌ನ ಭಾವಚಿತ್ರ

ರುಬೆನ್ಸ್ ಭಾವಚಿತ್ರ



ರೀತಿಯಲ್ಲಿಯೇ ಯಾವ ಕಲಾವಿದನ ಶೈಲಿಯಿದುವೆಂದೂ ಸೂಚಿಸುತ್ತದೆ. ವ್ಯಾನ್‌ಗಾಗ. ಡಾ. ಗೆಚೆಟ್ (Gachet)ಮಿತ್ರ ಟಾಂಗ್ಯ. (Tanguey)ಆಸ್ಕರ್ ಕೊಕೋಶ್ಕ(Kokkasehka) ನ ಕೆಲವು ಭಾವಚಿತ್ರಗಳು ಇವಕ್ಕೆ ಉತ್ತಮ ಉದಾಹರಣೆ, ಆದರೆ ಒಮ್ಮೊಮ್ಮೆ ಭಾವಚಿತ್ರವು ಯಾವ ವ್ಯಕ್ತಿಯನ್ನು ಕುರಿತಿದ್ದು ಎಂದೂ ಹೇಳಲಾಗದು. ಆದರೆ ಕಲಾವಿದ ಯಾರು ಎಂದು ಕೂಡಲೇ ಹೇಳಿಬಿಡಬಹುದು. ಪಿಕಾಸೋನ ಕಾನವವೇಲರ್ (Kahnweiler)ಭಾವಚಿತ್ರ ಪಿಕಾಸೋನದೇ ಎಂದು ಚಿತ್ರಣ ರೀತಿಯಿಂದ ಹೇಳಿಬಿಡಬಹುದು. ಆದರೆ ಆ ಚಿತ್ರದಲ್ಲಿರುವ ವ್ಯಕ್ತಿಯ ಚಹರೆಯೇ ಅಸ್ಪಷ್ಟ ಆಕಾರ ಹೊಂದಿದೆ. ಹೀಗೆ ಭಾವಚಿತ್ರ ಪ್ರಕಾರಗಳು ಶೈಲಿಯುಕ್ತವಾಗಿ ಅತೀ ಭಿನ್ನವಾಗುತ್ತ ಸಾಗಲು ಹಲವು ಕಾರಣಗಳಿವೆ. ಆದರೆ ಇವುಗಳೆಲ್ಲೆಲ್ಲ ಅತ್ಯಂತ ಮುಖ್ಯಕಾರಣವೆಂದರೆ: ಫೋಟೋಗ್ರಫಿಯ ಅನ್ವೇಷಣೆ. ಮೊದಲು ಹಣವಂತರು ಮಾತ್ರ ತಮ್ಮ ಚಿತ್ರಗಳನ್ನು ಬರೆಸಿಕೊಳ್ಳುತ್ತಿದ್ದರು. ಫೋಟೋಗ್ರಫಿ ಬಂದ ನಂತರ ಎಲ್ಲರೂ ತಮ್ಮ ಭಾವಚಿತ್ರ ತೆಗೆಯಿಕೊಳ್ಳುವಂತಾಯಿತಾದರು. ಹಾಗೆಯೇ ಅದಕ್ಕೆ ವೆಚ್ಚವೂ ಅತಿ ಕಡಿಮೆಯಾಗುತ್ತ ಹೋಯಿತು.

ಭಾರತದಲ್ಲಿ ಪಿ.ಸಿ.ಸನ್ಯಾಲ್, ರವೀಂದ್ರನಾಥ ಟ್ಯಾಗೋರ, ಕೆ.ಕೆ.ಹೆಬ್ಬಾರ ಮುಂತಾದ ಕೆಲವೇ ಮಂದಿ ಭಾವಚಿತ್ರ ರಚನಾಕಾರರಿದ್ದಾರೆ. ಭಾವಚಿತ್ರ ರೆನೈಸಾನ್ಸ್ ಕಾಲದಲ್ಲಿ ಪ್ರಾರಂಭಗೊಂಡಾಗ (Profile)ಪಕ್ಕಕ್ಕೆ ತಿರುಗಿಸಿದ ಮುಖದ ಭಾವಚಿತ್ರಗಳು, ಅದರಲ್ಲೂ ಹೆಂಗಸರ ಚಿತ್ರಗಳು ವಿಫುಲವಾಗಿದ್ದವು. Simonetta Vespucciಎಂಬಾಕೆಯ Piero di cosimoಚಿತ್ರೊಂದು ಉತ್ತಮ ಉದಾಹರಣೆ:ನಂತರ ಮುಂದೆ ನಮ್ಮನ್ನೇ ನೋಡುವ (Front Face)ಭಾವಚಿತ್ರಗಳು ರೂಢಿಗೆ ಬಂದವು(ರಾಫೆಲ್ಲನ Angello Doni ಒಂದು ಉದಾಹರಣೆ) ಸ್ವಲ್ಪ ಪಕ್ಕಕ್ಕೆ ತಿರುಗಿದ ಭಾವಚಿತ್ರಗಳು ಇದ್ದವು. ಲಿಯೊನಾರ್ಡೋ ವಿಂಚಿಯ Young woman with anermineಒಂದು ಉದಾಹರಣೆ. ೧೫ನೇ ಶತಮಾನದಲ್ಲಿ ಮುಖವನ್ನು ಮಾತ್ರ ಭಾವಚಿತ್ರವೆಂದು ಚಿತ್ರಿಸಿದರೆ, ೧೯ನೇಯ ಶತಮಾನದಲ್ಲಿ ಇಡೀ ದೇಹವನ್ನು ಭಾವಚಿತ್ರವೆಂದು ಚಿತ್ರಿಸಿದರು. (Bernhard Strigen)(ಕ್ರಿ.ಶ. ೧೪೬೦–೧೫೨೮) ಮೊದಲು ಹೀಗೆ ಚಿತ್ರಿಸಿದ ಕಲಾವಿದ.

ಭಾವಚಿತ್ರ ಇಂದು ಅಕಾಡೆಮಿಕ್ ಸಂದರ್ಭದಲ್ಲಿ ಪಠ್ಯದ ಮುಖ್ಯ ವಿಷಯವಾಗಿ ಪ್ರಚಲಿತದಲ್ಲಿದೆ. ಅಕಾಡೆಮಿಕ್ ಸೂರಿನಡಿಯಲ್ಲೇ ಬೆಳೆದಿರುವುದರಿಂದ ಭಾವಚಿತ್ರ ರಚನೆಯಲ್ಲಿ ಸಾಕಷ್ಟು ಪರಿಣಿತಿಯನ್ನು ಸಾಧಿಸಿದ್ದಾರೆ. ಕಲಾ ಶಿಕ್ಷಣದ ಪರೀಕ್ಷಾ ಪ್ರಮಾಣಪತ್ರ ಪಡೆದದ್ದು ಮುಂಬಯಿಯ ಜೆ.ಜೆ. ಕಲಾಶಾಲೆಗಳಿಂದ ಕಲ್ಕತ್ತ, ಮದ್ರಾಸ (ಚೆನ್ನೈ) ಲಾಹೋರ ಕಲಾಶಾಲೆಯಲ್ಲಿ ಪ್ರಾರಂಭದಿಂದಲೂ ಭಾವಚಿತ್ರ ರಚನೆಗೆ ಆದ್ಯತೆಯನ್ನು ನೀಡಿದ್ದರು. (ಈಗಲೂ ಕೂಡ ಅಲ್ಲಿ ಭಾವಚಿತ್ರ ರಚನೆಗೆ ಆದ್ಯತೆ ಇದೆ.) ಈ ಕಲಾಶಾಲೆಯಲ್ಲಿ ಅಧ್ಯಯನ ಮಾಡಿದ ಬಹುತೇಕ ಕರ್ನಾಟಕದ ಕಲಾವಿದರು ಭಾವಚಿತ್ರ ರಚನೆಯಲ್ಲಿ ಪಕ್ವತೆ ಸಾಧಿಸಿದ್ದಾರೆ. ಅವರಲ್ಲಿ ಕರ್ನಾಟಕದ ಎಸ್.ಎಂ. ಪಂಡಿತ, ಎಂ.ಎ.ಚೆಟ್ಟಿ, ಜೆ.ಎಸ್. ಖಂಡೇರಾವ್, ವಿಜಯ ಸಿಂಧೂರ,

ರವೀಂದ್ರನಾಥ ಟ್ಯಾಗೋರ ಅವರ ಭಾವಚಿತ್ರ



ಕೆ.ಕೆ.ಹೆಬ್ಬಾರ ಸ್ವ ಭಾವಚಿತ್ರ



ಎಂ.ಜಿ.ಪಾಟೀಲ, ಕೆ. ಜಿ. ಕುಲಕರ್ಣಿ, ಶಂಕರಗೌಡ ಬೆಟ್ಟದೂರ, ಡಿ.ವಿ. ಹಾಲಭಾವಿ, ಆರ್. ಎಂ. ಹಡಪದ, ಹೀಗೆ ಹಲವಾರು ಕಲಾವಿದರು ಭಾವಚಿತ್ರಗಳಲ್ಲಿ ಪರಿಣಿತಿ ಹೊಂದಿದವರನ್ನು ಗುರುತಿಸಿಲಾಗುತ್ತದೆ."[೧೩]

ಹೀಗೆ ಮುಂದುವರೆದು ಭಾವಚಿತ್ರಗಳ ಪರಂಪರೆಯು ಮುಂದೆ ಚಿತ್ರಕಲಾವಿದರನ್ನು ಚಿತ್ರರಚನೆಯಲ್ಲಿ ರೂಪದರ್ಶಿಗಳನ್ನು ಕುರಿಸಿಕೊಂಡುಕರ್ನಾಟಕದಲ್ಲಿ ವಿ.ಬಿ.ಹಿರೇಗೌಡರ, ಚಂದ್ರನಾಥ.ಆಚಾರ್ಯ, ಜಿ.ಕೆ.ಘುಷಿ, ಎಂ.ಎಸ್.ಮುನೋಳಿ, ಎ.ಎಸ್.ಪಾಟೀಲ, ಯಶವಂತ.ಹಿಬಾರೆ, ಪಿ.ಎಸ್.ಕಡೇಮನಿ, ಕೆ.ಗಂಗಾಧರ, ವಿ.ಬಾಲು, ಎಂ.ಎಸ್.ಮೂರ್ತಿ, ಜಯಕುಮಾರ.ಜಿ,ಬಾಬುರಾವ ನಡೋನಿ ಹೀಗೆ ಇನ್ನು ಹಲವಾರುಕಲಾವಿದರುಅವರ ಭಾವನೆಯಂತೆ ಅಥವಾ ತನ್ನ ಭಾವನೆಗೆ ತಕ್ಕಂತೆ ರೂಪದರ್ಶಿಯನ್ನು (ಮಾಡಲ್) ಕುರಿಸಿಕೊಂಡು ನೈಜವಾಗಿ ಅಥವಾ ಕಲಾವಿದನ ಸೃಜನಾತ್ಮಕವಾಗಿ ಸ್ವಂತಿಕೆಯನ್ನು ಗುರುತಿಸುವಂತಹ ಚಿತ್ರಗಳನ್ನು ರಚಿಸುವ ಕ್ರಮವೆಂದು ಹೇಳಬಹದು.

ಅಡಿ ಟಿಪ್ಪಣಿ

೧. ಮುಖಗಳೊಂದಿಗೆ ಮುಖಾಮುಖಿ:ಕೆ.ವಿ. ಸುಬ್ರಹ್ಮಣ್ಯಂ: ಪು-೧೦

೨. ಅದೇ ಪು-೧೧

೩. ನಿಜದ ನೆಲೆ, ಡಾ.ಎಸ್.ಸಿ. ಪಾಟೀಲ: ಸತ್ಯಾನಂದ ಪಾತ್ರೋಟಿ (ಸಂ) : ಪು-೪೪೭

೪. ಕಲಾ ಸಂಸ್ಕೃತಿ:ಎಂ.ಎಚ್. ಕೃಷ್ಣಯ್ಯ: ಪು-೫೪

೫. ಸೌಂದರ್ಯಶಾಸ್ತ್ರ: ಡಾ. ಕಾಶಿನಾಥ ಅಂಬಲಗಿ (ಅನು) : ಪು-೨೩೮-೨೩೯

೬. ಕರ್ನಾಟಕ ಭಿತ್ತಿಚಿತ್ರ ಪರಂಪರೆ:ಡಾ.ಅ.ಲ.ನರಸಿಂಹನ್ : ಪು-೧೫೮

೭. ನಿಜದ ನೆಲೆ:ಡಾ.ಎಸ್.ಸಿ. ಪಾಟೀಲ: ಸತ್ಯಾನಂದ ಪಾತ್ರೋಟಿ (ಸಂ) : ಪು-೩೬

೮. ಪಿ.ಆರ್. ತಿಪ್ಪೆಸ್ವಾಮಿ: ಚಿತ್ರಕಲಾ ಪ್ರಪಂಚ, ಪು-೭೫

೯. ಮುಖಗಳೊಂದಿಗೆ ಮುಖಾಮುಖಿ:ಕೆ.ವಿ. ಸುಬ್ರಹ್ಮಣ್ಯಂ: ಪು-೧-೨

೧೦. ಮುಖಗಳೊಂದಿಗೆ ಮುಖಾಮುಖಿ:ಕೆ.ವಿ. ಸುಬ್ರಹ್ಮಣ್ಯಂ, ಪು-೪

೧೧. ಕಲಾಕೋಶ:ಆರ್. ತಿಪ್ಪೆಸ್ವಾಮಿ (ಸಂ): ಪು-೨೩೬

೧೨. ಹೈದ್ರಾಬಾದ್ ಕರ್ನಾಟಕದ ಭಾವಚಿತ್ರ ಕಲಾವಿದರು:ಅಶೋಕ ಸಿ.ನಡುವಿನಮನಿ: ಪು-೨೩-೨೫

೧೩. ಕಲಾ ಅನ್ವೇಷಕ ಆರ್. ಎಂ ಹಡಪದ:ಡಾ. ಸಿದ್ದಲಿಂಗಸ್ವಾಮಿ ಹಿರೇಮಠ: ಪು- ೧೨೨-೧೨೩

ಅಧ್ಯಾಯ-ಮೂರು

ಭಾವಚಿತ್ರ ರಚನಾ ವಿಧಿ ವಿಧಾನಗಳು ಮತ್ತು ವಿವಿಧ ಮಾಧ್ಯಮಗಳಲ್ಲಿ ಅಭಿವ್ಯಕ್ತಗೊಂಡ ಬಗೆ

ಅಧ್ಯಾಯ-3

ಭಾವಚಿತ್ರ ರಚನಾ ವಿಧಿ ವಿಧಾನಗಳು ಮತ್ತು ವಿವಿಧ ಮಾಧ್ಯಮಗಳಲ್ಲಿ ಅಭಿವ್ಯಕ್ತಗೊಂಡ ಬಗೆ

ಭಾವಚಿತ್ರ ರಚನೆ ನೋಡುಗರಿಗೆ ಸಾಧಾರಣವೆನ್ನಿಸಿದರೂ. ಕಲಾವಿದನಿಗೆ ಎಂದೂ ಸುಲಭದ ಕೆಲಸವಾಗಿರಲಿಲ್ಲ. ಇತರ ರೀತಿಯ ಚಿತ್ರರಚನೆಗಳನ್ನು ಪೂರ್ಣ ಖಾಸಗಿ ಕೋಣೆಯಲ್ಲಿ ಅಲ್ಪವಾದರೂ ಮನಸ್ಸಿನ ಮೂಲೆಯೊಂದರಲ್ಲಿ ಚಿಂತಿಸುತ್ತಲೇ ಚಿತ್ರ ಪೂರ್ಣವಾದ ಮೇಲೆ ಅದನ್ನು ಸಾರ್ವಜನಿಕ ಟೀಕೆಗೆ ತೆರೆದಿಡಬಹುದು. ಆದರೆ ಭಾವಚಿತ್ರ ರಚನೆಯನ್ನು ಸಾರ್ವಜನಿಕವಾಗಿ ಮಾಡಬೇಕು. ಇನ್ನು ಕಲಾವಿದನ ಏಕೈಕ ಸಾರ್ವಜನಿಕ ಪ್ರದರ್ಶನ, ಜನರ ಮುಂದೆ ಹಾಡುವ ಗಾಯಕನಂತೆ. ನಟಿಸುವ ನಟನಂತೆ. ಪ್ರೋಕ್ಷಕರಿಂದ ತತ್‌ಕ್ಷಣ ಪ್ರತಿಕ್ರಿಯೆ ಲಭಿಸುತ್ತದೆ. ಇಲ್ಲಿ ಕಲಾವಿದ ತನ್ನ ನಿರ್ಧಾರಗಳೊಂದಿಗಷ್ಟೇ ಅಲ್ಲದೆ ರೂಪದರ್ಶಿಯ ವ್ಯಕ್ತಿತ್ವದೊಂದಿಗೂ ಸೆಣಸ ಬೇಕಾಗುತ್ತದೆ. ಚಿತ್ರ ರಚನೆಯ ಸಾಮಾನ್ಯ ಸಮಸ್ಯೆಗಳೊಂದಿಗೆ ಇಲ್ಲಿ ಚಿತ್ರದ ವಸ್ತುವೇ ಚಿತ್ರದ ಪ್ರಥಮ ಟೀಕಾಕಾರನೂ, ವಿಮರ್ಶಕನೂ ಆಗುವ ಸಂಗತಿ ಬಹಳ ಸಂಕಟಕ್ಕೀಡು ಮಾಡುತ್ತದೆ. ಮುಂದಿರುವ ರೂಪದರ್ಶಿಯನ್ನು ಚಿತ್ರಿಸುವುದಷ್ಟೇ ಅಲ್ಲದೆ ಅವನನ್ನು ತೃಪ್ತಿಪಡಿಸಬೇಕು, ಸಂತೋಷ ಪಡಿಸಬೇಕು.[1]

ಭಾವಚಿತ್ರ ರಚನಾ ವಿಧಿ ವಿಧಾನಗಳನ್ನು ನೋಡಿದಾಗ, ಕಲಾವಿದನ ಕೌಶಲ್ಯ, ತಂತ್ರ, ವಸ್ತು ವಿಷಯ ಮೊದಲಾದ ತತ್ಸಂಬಂಧಿ ಆಯಾಮಗಳ ದೃಷ್ಟಿಯಿಂದ ಭಾವಚಿತ್ರ ರಚನೆಯನ್ನು ನೋಡುವುದು ತುಂಬ ಆಸಕ್ತಿದಾಯಕವಾದುದು.[2]

ಭಾವಚಿತ್ರಗಳ ರಚನಾ ವಿಧಾನದಲ್ಲಿ, ಎರಡು ವಿಧಾನಗಳ ಮೂಲಕ ಚಿತ್ರ ರಚನೆ, ಮಾಡುತ್ತಾರೆ.ರೂಪದರ್ಶಿಯನ್ನು ಎದುರುಗಡೆ ಕಣ್ಮುಂದೆ ಕಾಣುತ್ತಿರುವಂತೆ ಒಂದು ಸ್ಥಳಕ್ಕೆ ಪೂರಕವಾಗಿ ನೆರಳ-ಬೆಳಕನ್ನು ತೋರಿಸುವಾಗ ರೂಪದರ್ಶಿಯನ್ನು ನೋಡಿ ಭಾವಚಿತ್ರ ರಚಿಸುತ್ತಿರುವ ಅಕಾಡೆಮಿಕ್‌ನ ಒಂದು ವಿಧಾನ. ರೂಪದರ್ಶಿಯ ಹೋಲಿಕೆಯ ನೈಜತೆ ಬರಬಹುದು ಅಥವಾ ಬರದೆ ಇರಬಹುದು ರೂಪದರ್ಶಿಯ ಅಂತಃ ಸತ್ವವನ್ನೇ ಹಿಡಿದಿಡುವ ಗುಣ. ಈ ವಿಧಾನದಲ್ಲಿ ನೋಡಬಹುದು. ರೂಪದರ್ಶಿಯ ಪೂರ್ಣ ಪ್ರಮಾಣದ ಆಯಾಮದ ಭಾವಭಂಗಿಯ ಬಾಹ್ಯರೇಖೆಯನ್ನು ಗುರುತಿಸುವ ಮತ್ತು ವ್ಯಕ್ತಿಯೊಂದಿಗೆ ಮಾತುಕಥೆಗಳ ಮೂಲಕ ಕಲಾವಿದ ಚಿತ್ರ ರಚನೆಯಲ್ಲಿ ತೊಡಗುತ್ತಾನೆ.

ನಾಲ್ಕರಿಂದ ಎಂಟು ಅಡಿ ದೂರವು ಭಾವಚಿತ್ರ ರಚನೆಗೆ ಬಹು ಅನುಕೂಲಕಾರಿಯಾದದು. ರೂಪದರ್ಶಿಯ ಅಗಲ, ದಪ್ಪ, ಘನತೆಗಳನ್ನು ನೋಡುತ್ತಲೇ ಮುಂಗಿಡ್ಡಣೆಯ (ಇದಕ್ಕೆ ಆಂಗ್ಲ ಭಾಷೆಯಲ್ಲಿ ಫೋರ್ ಘುಟನ್ನಿಂಗ್ ಎನ್ನುವರು) ಸಮಸ್ಯೆಯನ್ನು ನಿವಾರಿಸಬಹುದು. ನಾವು ಸಾಧಾರಣ ಕುಳಿತು ಸಂಭಾಷಣೆ ನಡೆಸುವ ಈ ಅಂತರದಲ್ಲಿ ರೂಪದರ್ಶಿಯ ವ್ಯಕ್ತಿತ್ವವು ತನ್ನಿಂತಾನೇ ತೆರೆದುಕೊಳ್ಳುತ್ತದೆ ಮೂರು ಅಡಿಗಳಿಗಿಂತ ಕಮ್ಮಿ ಅಂತರವು ಕಲಾವಿದನಿಗೆ ರೂಪದರ್ಶಿಯನ್ನು ನಿರಾಸಕ್ತವಾಗಿ ಅಭ್ಯಾಸಿಸಲು ಬೇಕಾಗುವ ಮುಕ್ತಸ್ಥಿತಿಯನ್ನು ನೀಡುವುದಿಲ್ಲ. ಅಷ್ಟು ಸನಿಹದಲ್ಲಿ ಮುಂಗಿಡ್ಡಣೆಯ ಸಮಸ್ಯೆಯು ಅಧಿಕವಾಗಿರುತ್ತದೆ. ಅಷ್ಟೇ

ಅಷ್ಟೇ ಸ್ಪರ್ಶ, ದೂರದಲ್ಲಿ ಹಿನ್ನಲೆ ಹಾಗೂ ಮುಖ ಚಹರೆಯ ಪ್ರತಿಯೊಂದು ವಿವರವೂ ಮುಖ್ಯವೆಂದೇ ಕಂಡು ಚಿತ್ರವು ಸಪಾಟಾಗಿಬಿಡುವ ಸಂಭವವಿದೆ. ಇದೆಲ್ಲಾ ಮಿಗಿಲಾಗಿ ಸ್ಪರ್ಶ ದೂರದಲ್ಲಿ ಇರುವ ವ್ಯಕ್ತಿಯ ವ್ಯಕ್ತಿತ್ವದ ಪ್ರಭಾವ ಅಗಾಧವಾಗಿದ್ದು, ಕಲಾವಿದನಿಗೆ ಅತ್ಯಗತ್ಯವಾದ ಮಾನಸಿಕ ದೂರವನ್ನು ಗಳಿಸಲು ಅಸಾಧ್ಯ ಮಾಡಿಬಿಡುತ್ತವೆ. ಸ್ಪರ್ಶ ದೂರವು ಚಿತ್ರರಚನೆಯ ಅಂತರವಾಗಿದೆ. ಸರವ್ಯೂಹವನ್ನು ಉತ್ಕಟಾವಸ್ಥೆಗೆ ತರುವ ಅಂತರವಾಗಿದ್ದು. ಮಾನಸಿಕ ಭಾವನೆಗಳನ್ನು ದೈಹಿಕ ಕ್ರಿಯೆಯಲ್ಲಿ ತೋರುವ ವರ್ತನೆಗಳಾದ ಮುಷ್ಠಿಯುದ್ಧ, ಪ್ರೇಮ, ಕಾಮಗಳನ್ನು ನಡೆಸುವ ಅಂತರವಾಗಿದೆ.

ಕಲಾವಿದ ಹಾಗೂ ರೂಪದರ್ಶಿಯ ನಡುವಣ ಅಂತರದಷ್ಟೇ ಗಾತ್ರ ಸಹ ಮುಖ್ಯವಾದುದಾಗಿದೆ. ವಸ್ತುಗಳ ಆಯಾಮಗಳ ನಿರ್ಧರಿತಗಾತ್ರವನ್ನು ಹೊಂದಿವೆಯೆಂಬುದು ನಮಗೆ ತಿಳಿದಿದೆ.[೩] ರೂಪದರ್ಶಿಯ ಗಾತ್ರ, ಪ್ರಮಾಣ ಕುಂತಿರುವ ಭಾವಭಂಗಿಯಆಕಾರವನ್ನುಕಲಾವಿದನಿರೂಪಿಸುವಲ್ಲಿ ಯಶಸ್ವಿಯಾಗುತ್ತಾನೆ.


ರೂಢಿಗತ ಚಿತ್ರಣ. ಚಿತ್ರಣ ಅಂತರದಲ್ಲಿ ಭಾವಚಿತ್ರ ರಚನೆಯೆಂಬುದು ಕಲಾವಿದ ಹಾಗೂ ಮುಂದೆ ಇರುವ ವ್ಯಕ್ತಿ ಈರ್ವರ ನಡುವಣ ಕದನವಾಗುತ್ತದೆ. ಯಾರಲ್ಲಿ ಹೆಚ್ಚು ಅಂತಃಶಕ್ತಿಯಿದೆ. ಎಂಬುದನು ನಿರ್ಧರಿಸಲು, ರೂಪದರ್ಶಿಯ ವರ್ಚಸ್ಸೆಂಬುದು ಆತನ ಸಂಪತ್ತು, ವಯಸ್ಸು, ಸಾಮಾಜಿಕ ಸ್ಥಾನ-ಮಾನ, ಅವನ ಶಕ್ತಿ, ಬುದ್ಧಿಮತ್ತೆ ಇವೆಲ್ಲದರ ಬಗೆಗಿನ ಅವನ ವಿಶ್ವಾಸವನ್ನು ಅವಲಂಬಿಸಿದರೆ, ಕಲಾವಿದನ ವರ್ಚಸ್ಸನ್ನು ಆತನು ತನ್ನ ಕೌಶಲ್ಯದಲ್ಲಿ ಇಟ್ಟಿರುವ ನಂಬುಗೆ ಚಿತ್ರಕಲಾ ಜಗತ್ತಿನಲ್ಲಿ ಅವನ ಕೀರ್ತಿ ಗೌರವಗಳು ಮತ್ತು ಅವನ ಗಿರಾಕಿಗಳ ಸಾಮಾಜಿಕ ಸ್ತರ ಮುಂತಾದವು ನಿರ್ಧರಿಸುತ್ತದೆ.[೪]

ಹೀಗೆ ರೂಪದರ್ಶಿಯು ಮತ್ತು ಕಲಾವಿದನ ಮಧ್ಯೆ ಹೊಂದಾಣಿಕೆಯ ಪೂರಕವಾದ ಭಾವಚಿತ್ರ ರಚನೆಯಾಗಿರುತ್ತವೆ.


ಛಾಯಾಚಿತ್ರ (ಫೋಟೋಗ್ರಾಫ್) ಆಧರಿಸಿ ಭಾವಚಿತ್ರಗಳು

ಛಾಯಾಗ್ರಹಣದ ಮೊದಲ ದಿನಗಳಲ್ಲಿ ಇನ್ನೂ ಬಣ್ಣದ ಛಾಯಾಚಿತ್ರಗಳು ಬಂದಿಲ್ಲದ್ದಾಗ ಕಲಾವಿದ ಕಪ್ಪು ಬಿಳುಪು ಛಾಯಾಚಿತ್ರಗಳಿಗೆ ಬಣ್ಣ ತುಂಬುವ ಕಾರ್ಯ ಮಾಡಿದ್ದಾನೆ. ಪ್ರಸಿದ್ಧ ಸಮಕಾಲೀನ ಛಾಯಾಗ್ರಾಹಕರು ತೆಗೆದ ಕೆಲವು ಉತ್ತಮ ಭಾವಚಿತ್ರಗಳನು ನೋಡಿದಾಗ ಅನೇಕ ಬಾರಿ ಒಳ್ಳೆಯ ಚಿತ್ರಿತ ಭಾವಚಿತ್ರವೊಂದನ್ನು ನೋಡಿದಷ್ಟೇ ಅಥವಾ ಕೆಲವೊಮ್ಮೆ ಅದನ್ನು ಮೀರಿ ನಿಲ್ಲುವಂತಹ ಮುದವಾಗುತ್ತದೆ.[೫]

ಹೀಗೆ ಭಾವಚಿತ್ರ ರಚನಾ ವಿಧಾನದಲ್ಲಿ ರೂಪದರ್ಶಿಯ ಅಳತೆ, ಪ್ರಮಾಣ, ಭಂಗಿ, ವರ್ಣಗಳ ಗ್ರಹಿಕೆ, ಗಾಂಭೀರತೆ, ವ್ಯಕ್ತಿಯ ನೈಜ ಸ್ವರೂಪ, ಕಲಾ ಕೌಶಲ್ಯತೆ ನಿರೂಪಿಸು. ರಚನಾ ತಂತ್ರ, ಶೈಲಿಯನ್ನು ಭಾವಚಿತ್ರಗಳಲ್ಲಿ ನೋಡಬಹುದು.



ಭಾವಚಿತ್ರ ರಚನಾ ವಿವಿಧ ಹಂತಗಳು



ವರ್ಣಗಳು (ಬಣ್ಣ) ಬೆಳೆದು ಬಂದಿರುವ ಮಹತ್ವ

ಪ್ರಕೃತಿಯ ಯಾವುದೇ ಕೃತಿಗಳು ನಮಗೆ ಗೋಚರಿಸಲು ನಿಖರವಾದ ಕಾರಣ ಇಲ್ಲ. ಬಣ್ಣಗಳು ಗೋಚರಿಸಲು ಏನು ಕಾರಣವೆಂಬ ಪ್ರಶ್ನೆಗೆ "ಬೆಳಕು" ಉತ್ತರವಾಯಿತು. ಪ್ರಕೃತಿ ಮತ್ತು ಮಾನವನ ನಿರ್ಮಿತ ಸಂಸಾರದಲ್ಲಿ ನಮಗೆ ಬಣ್ಣಗಳು ಕಾಣಲು ಬೆಳಕು ಮುಖ್ಯ ಕಾರಣ. ಯಾವುದೇ ವಸ್ತುಗಳ ಮೇಲೆ ಬೆಳಕು ಬಿದ್ದಾಗ ಮಾತ್ರ ಆ ವಸ್ತು ನಮಗೆ ಒಂದು ಬಣ್ಣ ಆಕಾರದ ಮೂಲಕ ಗೋಚರಿಸುತ್ತದೆ. ವೈಜ್ಞಾನಿಕವಾಗಿ ಹೇಳುವುದಾದರೆ ವಸ್ತುಗಳ ಮೇಲೆ ಬಿದ್ದ ಬೆಳಕು ಪ್ರತಿಫಲಿಸಿ ಕಣ್ಣಿಗೆ ತಲುಪಿ ನಮ್ಮ ದೃಷ್ಟಿಗೆ ಕಾಣುವಂತೆ ಮೂಡುತ್ತದೆ. ಹೀಗೆ ಪ್ರತಿಫಲಿಸುವಾಗ ಬೆಳಕು ನಿರ್ದಿಷ್ಟವಾದ "ಬಣ್ಣವು ನಮಗೆ ಕಾಣುವಂತೆ ಮೂಡುವುದು. ೧೭ನೇ ಶತಮಾನದಲ್ಲಿ ಪ್ರಖ್ಯಾತ ವಿಜ್ಞಾನಿ ಸರ್ ಐಸಾಕ್ ನ್ಯೂಟನ್ ಬೆಳಕಿನ ಏಳು ಬಣ್ಣಗಳ ಕಲ್ಪನೆ ಮೂಡಿಸಿದ ಬೆಳಕು ಏಳು ಬಣ್ಣಗಳ ಮಿಶ್ರಣ ಎಂದು ಆತ ಹೇಳಿದಾಗಿನಿಂದ ಬಣ್ಣಗಳ ಬಗೆಗೆ ಹೊಸ ಹೊಸ ಆವಿಷ್ಕಾರ, ಆಲೋಚನೆಗಳು ಹೊರಬರತೊಡಗಿದವು.

ಮುಂದೆ ೧೯ನೇ ಶತಮಾನದಲ್ಲಿ ಪ್ರಸಿದ್ಧ ವಿಜ್ಞಾನಿ ಥಾಮಸ್ ಯಂಗ್ ಒಂದು ವಸ್ತು ಏಕೆ ಮತ್ತು ಹೇಗೆ ಬಣ್ಣ ಹೀರಿಕೊಳ್ಳುತ್ತದೆ. ಮತ್ತು ಒಂದು ನಿರ್ದಿಷ್ಟ ಬಣ್ಣ ಪ್ರತಿಫಲಿಸುತ್ತದೆ. ಎಂಬುದಕ್ಕೆ ತನ್ನದೇ ಆದ ವಿವರವನ್ನು ನೀಡಿದನು. ಬೆಳಕು ವಸ್ತುವಿನ ಮೇಲೆ ಬಿದ್ದಾಗ ಬೆಳಕಿನಲ್ಲಿಯ ಬಣ್ಣಗಳ ಕಿರಣಗಳನ್ನು ಆ ವಸ್ತು ಹೀರಿಕೊಳ್ಳುತ್ತದೆ. ಈ ಹೀರಿಕೆ ವಸ್ತುವಿನ ರಾಸಾಯನಿಕ ಸಂರಚನೆಗೆ (ಅಣು-ಪರಮಾಣುಗಳ ರಚನೆ) ಅನುಗುಣವಾಗಿರುತ್ತದೆ. ಹೀರಿಕೊಳ್ಳದೇ ಉಳಿದ ನಿರ್ದಿಷ್ಟ ಅಲೆಯುಗ್ಮದ (ಎಂಬ length) ಬೆಳಕನ್ನು ವಸ್ತು ಪ್ರತಿಫಲಿಸುತ್ತದೆ. ಹೀಗೆ ಪ್ರತಿಫಲಿತ ಬೆಳಕಿನ ಅಲೆಯುದ್ದವೇ ಆ ವಸ್ತುವಿನ ಬಣ್ಣ ನಿರ್ಧರಿಸುತ್ತದೆ. ಈ ಪ್ರಕ್ರಿಯೆ ಪೂರ್ಣ ಪಕ್ವ ಸಂಕುಲದಲ್ಲಿ ಕಾಣಸಿಗುವುದು. ಸಾಮಾನ್ಯವಾಯಿತು.

ಇಲ್ಲಿ ಬೆಳಕೇ ಪ್ರಧಾನವಾದ ಅಂಶ ಹಾಗಾಗಿ ಬೆಳಕಿಲ್ಲದ ಪ್ರಪಂಚ ಕತ್ತಲು ಕಾರ್ಗತ್ತಲು ಅಂದರೆ ಬೆಳಕಿಲ್ಲ ಪ್ರತಿಫಲನವಿಲ್ಲ. ವಸ್ತುಗಳ ಪ್ರತಿಫಲನವಿಲ್ಲದೇ ವಸ್ತು ನಮಗೆ ಕಾಣಿಸಲಾರದು. ಕೆಲವೊಮ್ಮೆ ನಮ್ಮ ದೃಷ್ಟಿದೋಷದ ಮೂಲಕವೂ ನಾವು ಬಣ್ಣಗಳನ್ನು ಅನುಭವಿಸಲಾರೆವು. ಬ್ರಿಟಿಷ್ ವಿಜ್ಞಾನಿ ಥಾಮಸ್ ಯಂಗ್ ಮತ್ತು ಜರ್ಮನ್ ವಿಜ್ಞಾನಿ ಹೆಲ್ಮ್ ಹೋಲ್ಜರ ಅಭಿಪ್ರಾಯದಂತೆ ಕಣ್ಣಿನ ರೆಟಿನಾದಲ್ಲಿ ಕೆಂಪು, ಹಸಿರು. ನೀಲಿ. ನೇರಳೆ ಬಣ್ಣಗಳದ್ದು, ಅತಿಯಾದ ಸಂವೇದನೆ ಹೊಂದಿರುವ ಮೂರು ಸ್ಥಾನಗಳಿವೆ. ಎಲ್ಲ ಪ್ರಾಣಿಗಳಿಗೆ ಮನುಷ್ಯರಂತೆಯೇ ಬಣ್ಣಗಳು ಕಾಣುವುದಿಲ್ಲ. ಅಂಥವರಿಗೆ (ವರ್ಣಾಂಧತೆ) "ಬಣ್ಣ ಗುರುಡು" ಎಂದು ಕರೆಯಲಾಗುವುದು.

ಬಣ್ಣಗಳೊಂದಿಗೆ ಮಾನವನ ನಂಟು ಅಪರಿಮಿತವಾಗಿ ಅನಾದಿ ಕಾಲದಿಂದಲೂ ಸಾಗಿ ಬಂದಿದೆ. ಇಂದು ಸಾವಿರಾರು ಬಗೆಯ ಬಣ್ಣಗಳು. ನಮ್ಮೆದುರಿಗಿವೆ. ಬಣ್ಣಗಳ ತಯಾರಿಕೆ. ಬೆರಕೆ. ಹೊಂದಾಣಿಕೆ. ಬಳಕೆ ಮಾಧ್ಯಮಗಳ ಬಗ್ಗೆ ಪ್ರತ್ಯೇಕ ಶಾಖೆಗಳನ್ನೇ ತೆರೆಯಲಾಗಿದೆ. ಚಿತ್ರಕಲೆಯ ವಿಷಯದಲ್ಲಿ ಬಣ್ಣಗಳಿಗೆ ಅತ್ಯಂತ

ಪ್ರಾಧಾನ್ಯತೆ ಇರುತ್ತದೆ. ರೇಖಾ ಲಾಲಿತ್ಯದೊಂದಿಗೆ ವರ್ಣ ಸಂಯೋಜನೆ ಇದ್ದರೆ ಅದೊಂದು ಪರಿಪೂರ್ಣ ವರ್ಣಚಿತ್ರ ಎಂಬುದು ತಿಳಿದ ವಿಷಯವಾಗಿದೆ. ವರ್ಣರಹಿತ ಚಿತ್ರ ನೋಡುಗರಿಗೆ ಅಷ್ಟೊಂದು ಆಕರ್ಷಿತವಾಗಲಾರದು. ವರ್ಣಮಯ ಕಲಾಕೃತಿ ಮನಸ್ಸಿಗೆ ಆನಂದ, ಉತ್ಸಾಹ, ನೆಮ್ಮದಿ, ಅದಮ್ಯ ಹುರುಪು, ಹುಮ್ಮಸ್ಸು ತಂದುಕೊಡುತ್ತದೆ. ಮನಸ್ಸಿನ ಅಭಿರುಚಿ ಕಲಾವಂತಿಕೆ ಮತ್ತು ಕೌಶಲ್ಯಗಳನ್ನು ಎತ್ತಿ ಹಿಡಿದಿರುವ ಇಂದಿನ ಬಣ್ಣದ ತಂತ್ರಜ್ಞಾನ (Colour Technology) ಬಣ್ಣದ ಬಗೆಗಿನ ನಂಟನ್ನು ಪ್ರತಿನಿಧಿಸುತ್ತದೆ.[೭]

ವರ್ಣಗಳ ಉಗಮ

ಬಣ್ಣಗಳ ಉಗಮಕ್ಕೆ ಪ್ರಕೃತಿಯೇ ಪ್ರೇರಣೆ ಎಂಬುದು ಸತ್ಯಸಂಗತಿಯಾಗಿದೆ. ಪ್ರಾಕೃತಿಕ ಪರಿಸರದಲ್ಲಿ ಬಣ್ಣಗಳನ್ನು ಆಸ್ವಾದಿಸುವ ಮನುಜ ಜೀವನದಲ್ಲಿ ತಾನು ತಯಾರಿಸಿದ ವಸ್ತು ಸಂಗತಿಗಳಿಗೆ ತನಗಿಷ್ಟವಾದ ಮನಸ್ಸಿನ ಹಿತ, ಆನಂದ ನೀಡುವ ಬಣ್ಣಗಳನ್ನು ಕೊಡಲಾರಂಭಿಸಿದನು. ಮೊದಲ ಮೊದಲು ಬಣ್ಣಗಳನ್ನು ನೈಸರ್ಗಿಕ ವಸ್ತುಗಳಾದ ಕೆಮ್ಮಣ್ಣು, ಇದ್ದಿಲು, ಬಳಪದ ಕಲ್ಲು, ಸುಣ್ಣ ಸಸ್ಯ ಗಿಡಮರ, ಹೂವು, ಹಣ್ಣುಕಾಯಿ, ಎಲೆ, ಬೇರು, ತೊಗಟೆ, ಜೇಡಿಮಣ್ಣು ಇತ್ಯಾದಿಗಳಿಂದ ಬಣ್ಣ ತಯಾರಿಸಲು ಪ್ರಯತ್ನಿಸಲಾಗಿದೆ. ಚರಿತ್ರೆಯನ್ನು ಅವಲೋಕಿಸಿದಾಗ ಆದಿ ಮಾನವನು ತಾನು ವಾಸವಾಗಿರುವ ಗುಹೆ ಪೊಟರೆಗಳಲ್ಲಿ ಬರೆದ ವರ್ಣಚಿತ್ರಗಳು ಇಂದು ಸಾಕ್ಷಿಯಾಗಿವೆ. ಪಕ್ಷಿಗಳ ರಕ್ತ ಮಾಂಸಗಳನ್ನು ಬಣ್ಣಗಳಾಗಿ ಬಳಕೆ ಮಾಡಿದ್ದನ್ನು ಕಾಣಬಹುದು.

ಕಾಲಾನುಕ್ರಮದಲ್ಲಿ ಹೆಮ್ಮಟೈಟ್ ಮತ್ತು ಲಿಮೋನೈಟ್ ದಂತಹ ಖನಿಜ ಪದಾರ್ಥಗಳಿಂದಲೂ ಇತ್ತೀಚಿನ ದಿನಗಳಲ್ಲಿ (Plastic Colour Technology) ಕಂಪ್ಯೂಟರ್ ಕ್ರಾಯುಂದ ಡಿಜಿಟಲ್ ತಂತ್ರಜ್ಞಾನದಿಂದ ಮುನ್ನುಗ್ಗುತ್ತಿದ್ದು, ಹಳೆ ಸಾಂಪ್ರದಾಯಕ ವರ್ಣ ಸಂಯೋಜನೆ, ವರ್ಣ ತಯಾರಿಕೆಗಿಂತ ಮುಂದುವರೆದಿದ್ದು, ೬೦೦ ಕ್ಕೂ ಹೆಚ್ಚು ನಿರ್ದಿಷ್ಟ ಬಣ್ಣಗಳನ್ನು ಗುರುತಿಸಿದ್ದಾನೆ. ಇವುಗಳ ಸಂಯೋಜನೆ ಮೂಲಕ ೩೦,೦೦೦,೦೦೦ (ಮೂರು ಕೋಟಿ) ಯಷ್ಟು ವಿಭಿನ್ನ ಬಣ್ಣಗಳ ಶೇಡ್‌ಗಳನ್ನು[೮] ಇಂದು ಗುರುತಿಸಬಹುದು.

ಒಂದು ಕಲಾಕೃತಿ ವಿವಿಧ ಬಣ್ಣಗಳ ದ್ರವ್ಯಗಳನ್ನು ತನ್ನ ಅವಕಾಶ (ಕ್ಯಾನ್‌ವಾಸ್, ಪ್ಯಾನಲ್, ಭಿತ್ತಿ, ಕಾಗದ ಇತ್ಯಾದಿ)ದಲ್ಲಿ ಹರಡಿಕೊಂಡು ಕಲಾಸೃಷ್ಟಿಯ ಮೂಲ ಅಂಶಗಳಾದ ಅವಕಾಶ ಚಲನೆ, ಮೈವಳಿಕೆ ಮತ್ತು ಆಕಾರ ಹಾಗೂ ಕಲಾವಿದನ ತೀವ್ರ ತುಡಿತಗಳ ಸಂಯೋಗದಿಂದ ಉಂಟಾಗುವ ರಸೋದ್ರೇಕಿತ ಅಥವಾ ಭಾವಾತ್ಮಕ ಕಲ್ಪನೆ ಎಷ್ಟೋ ಸಲ ವರ್ಣಚಿತ್ರ ಮತ್ತು ರೇಖಾಚಿತ್ರಗಳು ಬೇರೆ ಬೇರೆ ಎನ್ನಿಸುವುದೇ ಇಲ್ಲ. ವರ್ಣಚಿತ್ರ ಬಣ್ಣ ಮತ್ತು ಕುಂಚಗಳ ಬೀಸುಗಳಿಂದಾದರೂ, ರೇಖಾಚಿತ್ರವೂ ಬಣ್ಣಗಳಿಂದ ರೇಖಿಸಲ್ಪಟ್ಟದ್ದೇ ಆಗಿರುತ್ತದೆ. ಆದರೂ ಬಣ್ಣ, ಆಕಾರ ಸೃಷ್ಟಿಯ ಅತ್ಯುತ್ಕೃಷ್ಟವಾದ ಅಂಶ. ಬಣ್ಣಗಳ ವಿವಿಧ ಛಾಯಾ ಮಾಟ ಕಲಾವಿದನ ವಿವಿಧ ಭಾವೋದ್ವೇಗಗಳೊಂದಿಗೆ ಹೊಂದಿಕೊಳ್ಳಬಲ್ಲವು. ಕೆಂಪು ಆಕ್ರೋಶಕ್ಕೆ

ಹಳದಿ ಸಂತೋಷಕ್ಕೆ ನೀಲಿ ಹಾತೊರೆಯುವಿಕೆಗೆ ಹೀಗೆ ಉದಾಹರಿಸಬಹುದು. ಕಲಾವಿದನೂ ವರ್ಣ ಸಂಯೋಜನೆಯ ಆಳ, ಪ್ರಸಾರತೆ ಹಾಗೂ ನೆರಳು ಬೆಳಕುಗಳ ಆಟಗಳನ್ನು ತನ್ನ ಭಾವನೆಗಳ ಅಭಿವ್ಯಕ್ತಿಗಾಗಿ ದುಡಿಸಿಕೊಳ್ಳುತ್ತಾನೆ.[೯]

ಇತಿಹಾಸ ಪೂರ್ವ ಕಾಲದಲ್ಲಿ ದಿನನಿತ್ಯ ಬಳಸುತ್ತಿದ್ದ ಮಣ್ಣಿನ ಪಾತ್ರೆಗಳು ಅನೇಕ ಜ್ಯಾಮಿತಿಯ ಆಕಾರಗಳ ಚಿತ್ರಗಳನ್ನು ಹೊಂದಿದೆ. ಕಡುಕೆಂಪು ಬಣ್ಣದ ಹಿನ್ನಲೆಯ ಮೇಲೆ ಕಪ್ಪು ಬಣ್ಣದಲ್ಲಿ ವಿನ್ಯಾಸಗಳನ್ನು ರಚಿಸುವುದನ್ನು ಕಾಣಬಹುದು. ಬಹುತೇಕ ವರ್ಣಗಳು ಕಪ್ಪು ಬಣ್ಣವನ್ನು ಹೆಚ್ಚಾಗಿ ನೆಚ್ಚಿಕೊಂಡಿವೆ. ಒಂದೇ ಬಣ್ಣದ ಚಿತ್ರಗಳಿವು. ಕಾಲಾನಂತರ ಹಲವು ಬಣ್ಣಗಳು ಬಳಕೆಗೆ ಬಂದವು.[೧೦]

ಪ್ರಾಚೀನ ಗ್ರಂಥಗಳಲ್ಲಿ ವರ್ಣಗಳ ಬಳಕೆಯ ಉಲ್ಲೇಖವಿಲ್ಲದಿದ್ದರೂ ಯಜ್ಞಮಂಟಪ ಚಿತ್ರಕಲೆಯ ಬಗ್ಗೆ ವೇದಗಳಲ್ಲಿ ಸ್ಪಷ್ಟವಾದ ಪ್ರಸ್ತಾಪ ರಚನೆ, ಅಲಂಕಾರಗಳಲ್ಲಿ ಬಣ್ಣಗಳ ಬಳಕೆ ಕಂಡುಬರುತ್ತದೆ. ಹನುಮಂತ ರಾವಣನ ಅರಮನೆಯಲ್ಲಿ ಭಿತ್ತಿಚಿತ್ರಗಳನ್ನು ಕಂಪು ವರ್ಣನೆ ರಾಮಾಯಣದಲ್ಲಿದೆ. ಬೌದ್ಧ, ಜೈನ ಯುಗಗಳ ಕಾಲಕ್ಕೆ ಸೃಷ್ಟಿಗೊಂಡ ಸಂಸ್ಕೃತ ಕಾವ್ಯಗಳಲ್ಲಿಯೇ ಅಲ್ಲದೆ ಕ್ರಿಸ್ತಶಕದ ಪ್ರಾರಂಭದ ಹಂತದ ಗ್ರಂಥ ಬೃಹತ್ ಸಹಿತ, ವಿಷ್ಣು ಧರ್ಮೋತ್ತರ ಪುರಾಣ (ಇದರ ೩ನೇ ವಿಭಾಗ ಚಿತ್ರಸೂತ್ರದಲ್ಲಿ ಬಣ್ಣಗಳ ಪ್ರಸ್ತಾಪವಿದೆ) ನಗ್ನಜಿತನ "ಚಿತ್ರಲಕ್ಷಣ" ಅಭಿಲಕ್ಷಿತಾರ್ಥ ಚಿಂತಾಮಣಿ, ನಾರದಶಿಲ್ಪ, ಶಿಲ್ಪರತ್ನ, ಸಮಾರಾಂಗಣ ಸೂತ್ರಧಾರ, ಶಿವತತ್ವ ರತ್ನಾಕರ, ಪಂಚದಶಿ, ಕಾಮಸೂತ್ರ ಕನ್ನಡದ ಕ್ಲಾಸಿಕ್‌ಗಳಾದ ಆದಿಪುರಾಣ, ವಿಕ್ರಮಾರ್ಜುನ ವಿಜಯ ಹಾಗೂ ಶಾಂತಿಪುರಾಣ, ಗಿರಿಜಾಕಲ್ಯಾಣ ಮಲ್ಲಿನಾಥ ಪುರಾಣ, ಚಂದ್ರಪ್ರಭಾ ಪುರಾಣ, ಶ್ರೀ ತತ್ವನಿಧಿ[11] ಮೊದಲಾದವುಗಳಲ್ಲಿ ಬಣ್ಣಗಳ ಬಗ್ಗೆ ಸಾಕಷ್ಟು ವಿವರಗಳಿವೆ.

ಭಿತ್ತಿಚಿತ್ರಗಳಲ್ಲಿ ವರ್ಣಗಳ ಬಳಕೆ : ಎಲ್ಲೋರದ ಕೈಲಾಸನಾಥ ದೇವಾಲಯದ ಒಳಗಿನ ಮತ್ತು ಹೊರಗಿನ ಭಿತ್ತಿಚಿತ್ರಗಳಲ್ಲಿ ಚೂರುಪಾರು ಬಣ್ಣಗಳ ಸೆಳಕುಗಳು, ರೇಖೆಗಳು ಇನ್ನೂ ಕಾಣುತ್ತವೆ. ಹಲವು ದೇವಾಲಯಗಳ ಸೂರು, ಭಿತ್ತಿಗಳು ಸುಂದರ ಸಂಯೋಜನೆಯ ಚಿತ್ರಗಳಿಂದ ಕೂಡಿರುತ್ತಿದ್ದುವು.

ಗುಹಾಂತರ ದೇವಾಲಯಗಳಿಂದ ಕೂಡಿರುತ್ತಿದ್ದುವು. ಗುಹಾಂತರ ದೇವಾಲಯಗಳಿರುವ ಅಜಂತಾ, ಎಲ್ಲೋರ, ಭಾಗ್, ಸಿತ್ತನವಾಸಲ್, ಬಾದಾಮಿಗಳಲ್ಲದೆ, ದಕ್ಷಿಣ ಭಾರತ ಹಂಪೆ, ಲೇಪಾಕ್ಷಿ, ತಂಜಾವೂರು, ಕಂಚಿ ಆಚರಣೆಗಳಲ್ಲಿ ೨೪ ತೀರ್ಥಂಕರರ ಕಲ್ಪನೆಗಳ ಪ್ರತಿಮೆಗಳನ್ನು ಬಿಳಿ, ಕೆಂಪು, ಹಳದಿ, ಹಸಿರು ಮತ್ತು ನೀಲಿ ಬಣ್ಣಗಳಲ್ಲಿ ರಚಿಸಲಾಗಿದೆ. ಭಿತ್ತಿ ಚಿತ್ರಣೆಗೆ ಆಧಾರವಾದ ತೆಪ್ಪದ ಕಲೆಯಲ್ಲೂ ಬಣ್ಣಗಳನ್ನು ಅತ್ಯುತ್ತಮವಾಗಿ ಬಳಸಲಾಗಿದೆ. ಕಲ್ಹಣದ ರಾಜತರಂಗಿಣಿಯನ್ನು ನೆನಪಿಸುವ ಚಾರ ಪಂಚಾಶಿಕಾ ಎಂ. ಗಿರಿ ವರ್ಣ ಚಿತ್ರಗಳೂ ಈ ದೃಷ್ಟಿಯಿಂದ ಉಲ್ಲೇಖಾರ್ಹ ಸಂಕೇತಗಳ ಬಳಕೆಗೆ ಭಾವನೆಯ ಪವಿತ್ರತೆಗೆ ಈ ಬಣ್ಣಗಳು ಪೂರಕವಾಗಿದೆ. ಒಂದು ಶತಮಾನದ ಹಿಂದಿನ ತುಳುವರ ಭೂತಾರಾಧನೆಯ ಕೃತಿ (the devil worship of the fuelavas 1982 A.C. barnal)ಯೊಂದರಲ್ಲಿ ಚಿತ್ತಾಳಿಯ ಜಗದಿನಲ್ಲಿ

ಬಣ್ಣಗಳಲ್ಲಿ ರಚಿಸಿದ ಭೂತದ ಚಿತ್ರಗಳಿವೆ. ಸ್ಥಳೀಯ ಕಲಾವಿದರೆ ನೈಸರ್ಗಿಕವಾಗಿ ದೊರೆಯುವ ಬಣ್ಣಗಳಿಂದ ಈಚಿತ್ರಗಳನ್ನು ರಚಿಸಿದ್ದಾರೆ.

ಕಲಾ ಇತಿಹಾಸದಲ್ಲಿ ಚಿತ್ರಗಳ ದಾಖಲಾತಿತೊಡಗಿದ ಕಾಲದಿಂದ ಚಿತ್ರಕಲೆ ಧರ್ಮದೊಂದಿಗೆ ತಳಕು ಹಾಕಿಕೊಂಡೇ ಬಂದಿದೆ. ದಕ್ಷಿಣ ಫ್ರಾನ್ಸ್ ಮತ್ತು ಉತ್ತರದ ಸ್ಪೇನ್. ಈಜಿಪ್ಟಿನ ಗೋರಿಗಳು ಅಜಂತಾದ ಭಿತ್ತಿಗಳು ಪಶ್ಚಿಮದ ಇತ್ಯಾದಿಗಳು ಈ ಅಂಶಕ್ಕೆ ಪೂರಕವಾಗಿವೆ. ಗ್ರೀಕ್-ರೋಮನ್ ಕಾಲದಲ್ಲಿ ದಿನನಿತ್ಯದ ಬಳಕೆಯ ವಸ್ತುಗಳನ್ನು ಚಿತ್ರಿಸಲಾರಂಭಿಸಲಾಯಿತು. ಆದರೆ ಪ್ಲಾಸ್ಟಿಕ್ ಕಾಲದ ಅಂತ್ಯದಲ್ಲಿ ಸ್ವಲ್ಪ ಈ ದೃಷ್ಟಿಗೆ ಅವಜ್ಞೆಯಾಯಿತು. ಮಧ್ಯಯುಗದಲ್ಲಿ ಪ್ರಾರ್ಥನಾ ಮಂದಿರಗಳ ಭಿತ್ತಿಗಳ ಹಾಗೂ ಧಾರ್ಮಿಕ ಹಸ್ತಪ್ರತಿ ಗ್ರಂಥಗಳು ಬಣ್ಣಗಳ ನೆರವಿನಿಂದ ಅಲಂಕರಿಸಲ್ಪಟ್ಟವು. ಪುನರುಜ್ಜೀವನದ ಹಾಗೂ ಮಾನವೀಯ ಆಸಕ್ತಿಗಳ ಬೆಳವನ್ನು ಹೆಚ್ಚಿದಂತೆ, ಭಾವಚಿತ್ರಗಳು, ಅಸಂಸ್ಕೃತ ವಸ್ತು ವಿಷಯಗಳು ಮತ್ತು ಐತಿಹಾಸಿಕ ಪರಾಮರ್ಶೆಯ ಚಿತ್ರಣಗಳಲ್ಲಿ ಬಳಕೆಯಾದವು. ಇವೆಲ್ಲಾ ರೇಖಾಕಾರಗಳಿಗೆ ಬಣ್ಣಗಳನ್ನು ಚಪ್ಪಟೆಯಾಗಿ ತುಂಬಲಾಗುತ್ತಿತ್ತು.

ಕ್ರಿಸ್ತಶಕ ಹದಿನೇಳನೆಯ ಶತಮಾನದಲ್ಲಿ ಭೂದೃಶ್ಯ ಕಲೆ ಮರುಹುಟ್ಟು ಪಡೆದಾಗ ದಿನನಿತ್ಯದ ಸಂದರ್ಭಗಳು ಬಣ್ಣಗಳ ವಿರಂಜನೆಯೊಂದಿಗೆ ಆಕರ್ಷಕವಾಗಿ ಚಿತ್ರಿತಗೊಂಡವು. ೧೯ನೇ ಶತಮಾನದಲ್ಲಿ "ಕಲೆಗಾಗಿ ಕಲೆ" ದೃಷ್ಟಿ ಬೆಳೆಯಿತು. Pictorial ಸೃಷ್ಟಿಗಳು ಹೆಚ್ಚಾದವು. ಬಣ್ಣಗಳು ಅಡ್ಡಡ್ಡ. ಉದ್ದುದ್ದ ಕುಂಚದಿಂದ ಬೀಸಲ್ಪಟ್ಟವು.

ಇಂಪ್ರೆಸನಿಸ್ಟರು ಮತ್ತು ಎಕ್ಸ್‌ಪ್ರೆಸನಿಸ್ಟರು ತಮ್ಮ ಅಭಿವ್ಯಕ್ತಿಯ ಉದ್ದೇಶಗಳನ್ನು ಚಿತ್ರವೊಂದಿರ ಪ್ರಮುಖ ಅಂಶವಾದ ಬಣ್ಣಗಳ ನೆರವಿನಿಂದಲೇ ಸಾಧಿಸಿದರು. ಬಣ್ಣ ಹಲವು ಭಾವಗಳನ್ನು ಪ್ರದರ್ಶಿಸಬಲ್ಲರು. ತೀಕ್ಷ್ಣ ಬಣ್ಣಗಳಿಂದ ತಂಪಾದ ಬಣ್ಣಗಳಿಗೆ ಬದಲಾದಾಗ ಅದು ಅಂತಸ್ಥ ಚಲನೆಯನ್ನು ಬಿಂಬಿಸುತ್ತದೆ. ಬಣ್ಣಗಳ ನಿರ್ವಹಣಾ ಬಣ್ಣಗಳ ಭ್ರಮೆ ಮತ್ತು ಕಾಲ್ಪನಿಕ ದೂರಗಳನ್ನು ತಂದುಕೊಳ್ಳುತ್ತದೆ. ಬಣ್ಣಗಳು ಸಾಂಕೇತಿಕ ಆಶಯ ಮತ್ತು ಪ್ರಭಾವಗಳನ್ನು ಹೊಂದಿವೆ. ಕಲಾವಿದನೊಬ್ಬನ ಅಭಿವ್ಯಕ್ತಿಯ ಜೀವಂತಿಕೆಯನ್ನು ಸಂಭ್ರಮಗೊಂಡ ದೃಶ್ಯವೊಂದರ ಸೊಬಗನ್ನು ಸೂಚಿಸಬಲ್ಲವು.

ಕಲಾವಿದರು ಕಾಲಕಾಲಕ್ಕೆ ಹಲವು ರೀತಿಗಳಲ್ಲಿ ಬಣ್ಣಗಳನ್ನು ದುಡಿಸಿಕೊಂಡಿದ್ದಾರೆ. ಅಕಾಡೆಮಿಕ್ ಶೈಲಿಯ ಕಲಾಶಾಲೆಗಳ ಶಿಕ್ಷಣದ ಜೊತೆ ಜೊತೆಗೇ ಈ ಬಣ್ಣಗಳು ಬಳಕೆಗೆ ಬಂದವು. ೧೮ನೇ ಶತಮಾನದ ಅಂತ್ಯದಲ್ಲಿ ಬಹಳಷ್ಟು ಕಲಾವಿದರು ಸಮಕಾಲೀನ ರೀತಿಯ ತೈಲವರ್ಣನ ಬಳಸಿ ಬೆಸತ್ತರು. ಮುಂದೆ ಜಲವರ್ಣ ಮಾಧ್ಯಮದಲ್ಲಿ ಚಿತ್ರಗಳು ಚಿತ್ರಿಸಿದರು. ಮುಂದೆ ಪೇಸ್ಟಲ್. ಮಾಧ್ಯಮ ಹಲವಾರು ಶ್ರೇಷ್ಠ ಕಲಾವಿದರಿಂದಲೂ ಬಣ್ಣಗಳನ್ನು ಬಳಸಿಕೊಂಡರು.

ಇತ್ತೀಚೆಗೆ ಅಕ್ರಾಲಿಕ್ ಬಣ್ಣಗಳು, ಚಾರ್ಕೋಲ್, ಪೆನ್ಸಿಲ್ ಮಿಶ್ರ ಮಾಧ್ಯಮದಲ್ಲಿಯೂ ಎಲ್ಲಾ ವರ್ಣಗಳು ಬಳಕೆಯಾಗುತ್ತದೆ.ರಸಗ್ರಹಣದ ದೃಷ್ಟಿಯಿಂದ ವರ್ಣಗಳು ನಮ್ಮ ಭಾವನೆಗಳನ್ನು ಉತ್ತೇಜಿಸುವ ಕ್ರಿಯೆಗೆ ಪೋಷಕವಾಗುವುದು ಬಂದಾದರೆ, ಬಣ್ಣಗಳ ಆಯ್ಕೆ, ನಿಯಂತ್ರಣ, ಹೆಚ್ಚುವಿಕೆಗಳಲ್ಲಿ ಕಲಾವಿದನಿಗೆ ಇರುವ ಹಿಡಿತ ಹಾಗೂ ನಿರ್ವಹಣಾ ಕೌಶಲ್ಯಗಳು ಇನ್ನೊಂದು ಮುಖ್ಯ ಅಂಶವಾಗುತ್ತದೆ. ತೈಲವರ್ಣಗಳು ಅಪಾರದರ್ಶಕವಾಗಿದ್ದರೆ, ಜಲವರ್ಣ ಪಾರದರ್ಶಕವಾಗಿದ್ದು, ತೀರ ತೆಳುವಾದ ಸೂಕ್ಷ್ಮವಾದ ಕೃತಿಗಳ ರಚನೆಗೆ ಸೂಕ್ತ, ಅದೇ ಅಕ್ರಾಲಿಕ್ ವರ್ಣಗಳು, ಜಲವರ್ಣದ ಅನುಭವವನ್ನು, ತೈಲವರ್ಣದ ಕೆಲವು ಗುಣಗಳನ್ನು ಹೊಂದಿರುವಂತಹದು. ಎಂದರೆ ಕಲಾವಿದ ವರ್ಣ ಮಾಧ್ಯಮವನ್ನು ಬಳಸಿಕೊಂಡಿರುವ ರೀತಿ ಮಾಧ್ಯಮದ ಮೇಲೆ ಆತನಿಗಿರುವ ಹಿಡಿತ, ಯಶಸ್ವಿಯಾಗಿ ದುಡಿಸಿಕೊಂಡಿರುವ ರೀತಿ, ಚಿತ್ರ ಫಲಕದಲ್ಲಿ ಅಕ್ಕಪಕ್ಕಗಳಲ್ಲಿ ಇರುವ ಆಕೃತಿಗಳಿಗೆ ಬಳಸಿರುವ ವರ್ಣ ವೈವಿಧ್ಯತೆ, ನೋಡಲು ಕಣ್ಣುಗಳಿಗೆ ಆಯಾಸವಾಗದಂತೆಹಿತಮಿತವಾಗಿರುವಿಕೆಗಳೆಲ್ಲವೂಆಬಂದುಕೃತಿಯನ್ನುವೀಕ್ಷಿಸಿ ಸೌಂದರ್ಯಾನು ಭವವನ್ನು ಸವಿಯಲು ನೆರವಾಗುವಂತೆ ಮಾಡುತ್ತದೆ.[೧೬]

ಚಿತ್ರಕಲೆಯಲ್ಲಿ ಕಲಾಕೃತಿಗಳನ್ನು ರಚಿಸಲು ಹಿರಿಯ ಕಲಾವಿದರಿಂದ ಹಿಡಿದು ಕಲಾವಿದ್ಯಾರ್ಥಿಗಳವರೆಗೂ ಹಲವಾರು ವರ್ಣಗಳ ಬಳಕೆ ಮಾಡಿ, ಚಿತ್ರಕ್ಕೆ ಒಂದು ರೂಪ ನೀಡಿ ಸೌಂದಯಾವವನು ಸೃಷ್ಟಿ ಮಾಡುತ್ತದೆ. ಪ್ರಾಚೀನ ಕಾಲದಿಂದ ಆಧುನಿಕ ಕಾಲದ ಗಟ್ಟದಲ್ಲಿಯಲ್ಲಿಯೂ ವರ್ಣ ಮಾಧ್ಯಮದಲ್ಲಿಯೇ ನೆರಳು-ಬೆಳಕಿನ, ಹಾವ-ಭಾವಗಳು ಉಬ್ಬು-ತಗ್ಗುಗಳು ನಿಸರ್ಗ ಭೂ ದೃಶ್ಯ, ಪ್ರಾಣಿ, ಪಕ್ಷಿಗಳು ಮನುಷ್ಯನ ಭಾವಗಳಿಗೆ ಬೇರೆ ತುಂಬಿದ ಭಾವನಾತ್ಮಕವಾಗಿ ಸಂಬಂಧಕ್ಕೆ ಸ್ಫೂರ್ತಿ ನೀಡುವಲ್ಲಿ ವರ್ಣಗಳ ಮಹತ್ವ ತಿಳಿಸುತ್ತದೆ.

ಹೀಗೆ ಭಾರತದಲ್ಲಿ ಹೆಚ್ಚು ತೈಲವರ್ಣ, ಜಲವರ್ಣದಲ್ಲಿ ಹಾಗೆ ಕರ್ನಾಟಕದ ಬಹುತೇಕ ಕಲಾವಿದರು, ತೈಲವರ್ಣ, ಜಲವರ್ಣ, ಅಕ್ರಾಲಿಕ್, ಪೆನ್ಸಿಲ್, ಚಾರ್ಕೋಲ್, ಮಿಶ್ರಮಾಧ್ಯಮ, ಇಂಕು ಹೀಗೆ ಇತ್ಯಾದಿ ಬಣ್ಣಗಳಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಕರ್ನಾಟಕದ ಪ್ರಮುಖ ಭಾವಚಿತ್ರ ಕಲಾವಿದರು, ಭಾವಚಿತ್ರಗಳ ರಚನೆಗೆ, ತೈಲವರ್ಣ, ಜಲವರ್ಣ, ಪೋಸ್ಟರ್ ವರ್ಣ ಅಕ್ರಾಲಿಕ್ ಪೆನ್ಸಿಲ್, ಚಾರ್ಕೋಲ್ ಹಾಗೂ ಮಿಶ್ರಮಾಧ್ಯಗಳಲ್ಲಿಯೂ ಕೂಡಾ ರಚಿಸಿದ್ದಾರೆ.

ವಿಜಯ ಸಿಂಧೂರ ಅವರ ಭಾವಚಿತ್ರ, ವ್ಯಕ್ತಿ ಚಿತ್ರಗಳಲ್ಲಿ ತೈಲವರ್ಣದಲ್ಲಿ ಕಲಾಕೃತಿಗಳನ್ನು ಚಿತ್ರಿಸಿ, ಕಲಾ ಶಾಲೆಯ ಪ್ರಭಾವ. ವರ್ಣಗಳ ಬಳಕೆಯಲ್ಲಿ ಆ ಸೂಕ್ಷ್ಮತೆ ಕಾಣಬಹುದು. **ಜೆ.ಎಸ್.ಖಂಡೇರಾವ್** ಅವರು ತೈಲವರ್ಣದಲ್ಲಿಯೇ ಸಾವಿರಾರು ವರ್ಣಗಳ ಮಿಶ್ರಣ ಭಾವಚಿತ್ರದಲ್ಲಿ ನಿರೂಪಿಸಿದ್ದಾರೆ. **ಕೆ.ಬಿ.ಕುಲಕರ್ಣಿ** ಅವರು ತೈಲವರ್ಣ ಜಲವರ್ಣ, ಪೆಸ್ಟಲ್ ಹಾಗೂ ಪೆನ್ಸಿಲ್‌ಗಳಲಿ ಭಾವಚಿತ್ರಗಳು ಚಿತ್ರಿಸಿದ್ದಾರೆ. **ಎಸ್.ಎಂ.ಪಂಡಿತರು**, ಅವರ ಬಹುತೇಕ ಕಲಾಕೃತಿಗಳಲ್ಲಿ ತೈಲವರ್ಣ, ಜಲವರ್ಣ, ಪೋಸ್ಟರ್, ವರ್ಣಗಳು ಅವರೆ ಭಾವಚಿತ್ರಗಳಲ್ಲಿ ತೈಲವರ್ಣ ಬಳಸಿಕೊಂಡು ಪಾಶ್ಚಾತ್ಯ ಶೈಲಿಯಲ್ಲಿ ವರ್ಣವನ್ನು ಲೇಪಿಸಿದ್ದಾರೆ.

ಎಂ.ಬಿ.ಪಾಟೀಲರು ಜಲವರ್ಣ, ಚಾರ್ಕೋಲ್, ಇಂಕು, ತೈಲವರ್ಣ ಈ ಎಲ್ಲಾ ಮಾಧ್ಯಮದಲ್ಲಿ ವರ್ಣಗಳ ಲೇಪಿಸುತ್ತ ಪ್ರಯೋಗ ಮಾಡಿ ಭಾವಚಿತ್ರಗಳಲ್ಲಿ ತಮ್ಮ ತೀವ್ರ ತುಡಿತಗಳು ಕಲಾಕೃತಿಗಳಲ್ಲಿ ಅಭಿವ್ಯಕ್ತಿ ಮಾಡಿದ್ದಾರೆ.

ಎಂ.ಎ.ಚೆಟ್ಟಿ ಅವರು ಹೆಚ್ಚು ಜಲವರ್ಣ, ತೈಲವರ್ಣ ಹಾಗೂ ಪೆನ್ಸಿಲ್‌ನಲ್ಲಿ ಭಾವಚಿತ್ರಗಳು, ರಚಿಸಿದ್ದಾರೆ. **ಆರ್.ಎಂ.ಹಡಪದ** ಅವರು ಎಲ್ಲಾ ಮಾಧ್ಯಮಗಳಲ್ಲಿ ಭಾವಚಿತ್ರಗಳ ಪ್ರಯೋಗ ಮಾಡಿದ್ದಾರೆ. **ಶಂಕರಗೌಡ ಬೆಟ್ಟದೂರ,** ತೈಲವರ್ಣ, ಹಾಗೂ ಜಲವರ್ಣ ಮತ್ತು ಪೆಸ್ಟಲ್, ಪೆನ್ಸಿಲ್, ಇಂಕ್‌ಗಳಲ್ಲಿ ಕಲಾಕೃತಿಗಳು, ರಚಿಸಿದ್ದಾರೆ. **ಡಿ.ವಿ.ಹಾಲಭಾವಿ** ಅವರು ತೈಲವರ್ಣ, ಜಲವರ್ಣದ ಕಲಾಕೃತಿಗಳಲ್ಲಿ ನೋಡಬಹುದು. **ಎಂ.ಆರ್.ಬಾಳೆಕಾಯಿ** ಅವರು ಜಲವರ್ಣ ಹಾಗೂ ಮಿಶ್ರಮಾಧ್ಯಮದಲ್ಲಿ ಭಾವಚಿತ್ರಗಳು ರಚಿಸಿ ಪ್ರಯೋಗ ಮಾಡಿದ್ದಾರೆ ಹಾಗೂ ರಂಗೋಲಿ ಕೋಲಾಜನಲ್ಲಿಯೂ ಭಾವಚಿತ್ರಗಳು ರಚಿಸಿದ್ದಾರೆ. ವಿ.ಟಿ.ಕಾಳೆ ಅವರು ಜಲವರ್ಣ, ತೈಲವರ್ಣಗಳಲ್ಲಿ ಪ್ರಯೋಗ ಮಾಡಿದ್ದಾರೆ.

ಜೆ.ಜೆ.ಕಲಾಶಾಲೆಯಲ್ಲಿ ಅಧ್ಯಯನ ಮಾಡಿ ಬಂದ ಈ ಕಲಾವಿದರಿಗೆ ಕಲಾಶಾಲೆಯ ಪ್ರಭಾವ ಭಾವಚಿತ್ರ ರಚನೆಯಲ್ಲಿ ಹಾಗೂ ವರ್ಣಗಳ ಬಳಕೆಯಲ್ಲಿಯೂ ಕಾಣುತ್ತೇವೆ. ತೈಲವರ್ಣದ ಬಣ್ಣಗಳನ್ನು ಆಕರ್ಷಕವಾಗಿ ಬಳಸಿ ಭಾವಚಿತ್ರಗಳಲ್ಲಿ ಜೀವಂತಿಕೆಯನ್ನು ಸೂಕ್ಷ್ಮರೀತಿಯಲ್ಲಿ ಅಭಿವ್ಯಕ್ತ ಪಡಿಸಿದ್ದಾರೆ.

ಜಲವರ್ಣ ಲೇಪಿಸುವಾಗ ರೂಪದರ್ಶಿಯ ಬಾಹ್ಯನೋಟವನ್ನು ಬೆಳಕಿನಿಂದ ನೆರಳಿನ ಭಾಗವನ್ನು ವರ್ಣಗಳನ್ನು ಹಾಕುತ್ತಾ ಪೂರ್ಣಗೊಳಿಸಿದರೆ, ತೈಲವರ್ಣದಲ್ಲಿ ರೂಪದರ್ಶಿಯ ನೆರಳಿನ ಭಾಗದಿಂದ ಬೆಳಕಿನ ಭಾಗವನ್ನು ಚಿತ್ರಿಸುತ್ತಾರೆ. ಇಲ್ಲಿ ಗಾಢವಾದ ವರ್ಣವನ್ನು ಪ್ರಾರಂಭದಲ್ಲಿ ಲೇಪಿಸಿ, ಲೈಟ್ಸ್ ಕಲರ್ಸ್‌ಗಳ ಮೂಲಕ ನೆರಳು–ಬೆಳಕಿನ ಉಬ್ಬು–ತಗ್ಗುಗಳ ಅರಿತ ಭಾಗಗಳ ವರ್ಣಗಳನ್ನು ಲೇಪಿಸಿ ರೂಪದರ್ಶಿಯ ಸೃಜಿತ ಭಾವಚಿತ್ರಗಳಲ್ಲಿ ಪ್ರಮುಖ ಅಂಶಗಳ ಸಂಗತಿಯಾಗಿದೆ. ಈ ಎಲ್ಲಾ ಕಲಾವಿದರು ವಿವಿಧ ವರ್ಣ ಮಾಧ್ಯಮಗಳಲ್ಲಿ ಕಲಾಕೃತಿಗಳಲ್ಲಿ ರಚಿಸಿ ಯಶಸ್ವಿಯಾಗಿದ್ದಾರೆ.

ಅಡಿ ಟಿಪ್ಪಣಿ :

೧) ಕಣ್ಕಲೆ. ರವಿಕುಮಾರ ಕಾಶಿ–ಪುಟ ೯೮
೨) ಕಣ್ಕಲೆ. ರವಿಕುಮಾರ ಕಾಶಿ–ಪುಟ ೯೭
೩) ಕಣ್ಕಲೆ. ರವಿಕುಮಾರ ಕಾಶಿ–ಪುಟ ೧೦೦
೪) ಕಣ್ಕಲೆ. ರವಿಕುಮಾರ ಕಾಶಿ–ಪುಟ ೧೦೧
೫) ಕಣ್ಕಲೆ. ರವಿಕುಮಾರ ಕಾಶಿ–ಪುಟ ೧೦೨
೬) [illegible]
೭) [illegible]
೮) [illegible] ಕೆ.ಪಾಟೀಲ–ಪುಟ [illegible]
೯) ಚಿತ್ರಕಲಾ ಪ್ರಪಂಚ ಸಂ.ಪಿ.ಆರ್.ತಿಪ್ಪೇಸ್ವಾಮಿ –ಪುಟ ೪೬೯
೧೦) ಚಿತ್ರಕಲಾ ಪ್ರಪಂಚ ಸಂ.ಪಿ.ಆರ್.ತಿಪ್ಪೇಸ್ವಾಮಿ –ಪುಟ ೪೭೦
೧೧) ಅದೇ ಪುಟ ೪೭೦
೧೨) ಚಿತ್ರಕಲಾ ಪ್ರಪಂಚ ಸಂ.ಪಿ.ಆರ್.ತಿಪ್ಪೇಸ್ವಾಮಿ – ಪುಟ ೪೭೧
೧೩) ಚಿತ್ರಕಲಾ ಪ್ರಪಂಚ ಸಂ.ಪಿ.ಆರ್.ತಿಪ್ಪೇಸ್ವಾಮಿ –ಪುಟ ೪೭೨

೧೪) ಚಿತ್ರಕಲಾ ಪ್ರಪಂಚ ಸಂ.ಪಿ.ಆರ್.ತಿಪ್ಪೇಸ್ವಾಮಿ - ಪುಟ ೪೭೩
೧೫) ಚಿತ್ರಕಲಾ ಪ್ರಪಂಚ ಸಂ.ಪಿ.ಆರ್.ತಿಪ್ಪೇಸ್ವಾಮಿ - ಪುಟ ೪೭೫
೧೬) ದೃಶ್ಯಕಲೆಗಳ ಗುಣಗ್ರಹಣ.ಡಾ.ಅ.ಲ.ನರಸಿಂಹ -ಪುಟ-೮

ಅಧ್ಯಾಯ- ನಾಲ್ಕು

ಉತ್ತರ ಕರ್ನಾಟಕ ಪ್ರಮುಖ ಭಾವಚಿತ್ರ ಕಲಾವಿದರು

ಅಧ್ಯಾಯ- ನಾಲ್ಕು

ಉತ್ತರ ಕರ್ನಾಟಕ ಪ್ರಮುಖ ಭಾವಚಿತ್ರ ಕಲಾವಿದರು

ಉತ್ತರ ಕರ್ನಾಟಕವು ಕಲಾ ಕ್ಷೇತ್ರಕ್ಕೆ ತನ್ನದೇ ಆದ ವೈಶಿಷ್ಟ್ಯ ಪೂರ್ಣವಾದ ಅನನ್ಯತೆಗಳನ್ನು ಹೊಂದಿದ ಕಲಾವಿದರನ್ನು ದೇಶಕ್ಕೆ ನೀಡಿದೆ. ನೃತ್ಯ, ನಾಟಕ, ಸಾಹಿತ್ಯ, ಚಿತ್ರ, ಶಿಲ್ಪ ಮೊದಲಾದವುಗಳಿಗೆ ಕಣಜದಂತಿರುವ ಈ ಪ್ರದೇಶವು ಸಾಂಸ್ಕೃತಿಕ ಸಿರಿಮೆಗಳಿಂದ ಶ್ರೀಮಂತವಾಗಿದೆ. ಯಾವುದೇ ಒಂದು ನಾಡಿನ ಸಾಹಿತ್ಯ, ಕಲೆ ತತ್ವಜ್ಞಾನ ಮೊದಲಾದವು ಆ ದೇಶದ ಸಂಸ್ಕೃತಿಯ ತಿರುಳೆಂದು ಜಗತ್ತಿಗೆ ಸಾರುವ ಕೃತಿಗಳಾಗಿವೆ.[1]

ಕಲಾವಿದ ಎಲ್ಲಿಯೋ ಹುಟ್ಟಿರಬಹುದು,ಹುಟ್ಟುತ್ತಾನೆ. ಇದು ಜೀವನ ಗತಿ ಧರ್ಮ, ಅವನು ಹುಟ್ಟಿದ ಕಾಲ ಸ್ಥಳ, ಮನೆತನ, ದೈವಿಕತೆ ಆರ್ಥಿಕ ಸ್ಥಿತಿಗಳು ಕಲಾವಿದನನ್ನಾಗಿ ಮಾಡಲಾರವು. ಆದರೆ ಅವುಗಳ ಪ್ರಭಾವ ಪರಿಣಾಮ ಮಾತ್ರ ಕಲಾವಿದನ ಮನಸ್ಸಿನ ಮೇಲೆ ಕೆಲಮಟ್ಟಿಗೆ ಉಂಟಾಗುತ್ತದೆ. ಸುತ್ತಲಿನ ವಾತಾವರಣ ಪ್ರೇರಕವಾಗಿದ್ದರೆ ಕಲಾವಿದ ಇನ್ನೂ ಹುರುಪುಗೊಳ್ಳುತ್ತಾನೆ. ಇಲ್ಲದಿದ್ದರೆ ಅದನ್ನು ಪ್ರೇರಿಸಿಕೊಂಡು ತಲೆ ಎತ್ತಿ ನಿಲ್ಲಬೇಕಾಗುತ್ತದೆ. ಇದು ಕೆಲವರಿಗೆ ಮಾತ್ರ ಸಾಧ್ಯ. ಓದುಬರಹಗಳಿರದಿದ್ದರೆ ಒಂದೊಂದೆ ಜನಾಂಗದ ಗುಪ್ತದನವು ಆದರೆ ಯಾವತ್ತು ಮಾನವನ ವರ್ಗಕ್ಕೆ ಮಾತಿನಿಂದ ತಿಳಿಸಲಾಗದ ಸರಿ ಸಂದೇಶವನ್ನು ಚಿತ್ರಗಳಿಂದ ತಿಳಿಸುವುದು. ಇದಕ್ಕೆ ನಾಡು-ನುಡಿ ಬಂಧನವಿಲ್ಲ[2] ಅಂತಹ ಚಿತ್ರಕಲಾ ಪ್ರಯೋಗದಲ್ಲಿ ಭಾವಚಿತ್ರಗಳನ್ನು ರಚನೆ ಮಾಡಿ ತಮ್ಮನ್ನು ತಾವು ಗುರುತಿಸಿಕೊಂಡಿರುವ[3] ಉತ್ತರ ಕರ್ನಾಟಕದ ಭಾವಚಿತ್ರ ಕಲಾವಿದರಾದ ವಿಜಯ ಸಿಂಧೂರ, ವಿ.ಟಿ. ಕಾಳೆ, ಜೆ.ಎಸ್. ಖಂಡೇರಾವ್, ಕೆ.ಬಿ.ಕುಲಕರ್ಣಿ, ಎಂ.ಬಿ. ಪಾಟೀಲ, ಎಂ.ಎ. ಚೆಟ್ಟಿ, ಆರ್. ಎಂ. ಹಡಪದ, ಎಸ್. ಎಂ.ಪಂಡಿತ, ಶಂಕರಗೌಡ ಬೆಟ್ಟದೂರ, ಡಿ.ವಿ. ಹಾಲಭಾವಿ, ಎಂ. ಆರ್. ಬಾಳಿಕಾಯಿಇವರ ಭಾವಚಿತ್ರಗಳನ್ನು ಸಂಕ್ಷಿಪ್ತವಾಗಿ ಅಧ್ಯಯನ ಮಾಡಲಾಗುವುದು.



ವಿಜಯ ಸಿಂಧೂರ



ವಿಜಯ ಸಿಂಧೂರ:

ಬದುಕನ್ನು ಪ್ರೀತಿಸುವ ವಿಜಯ ಸಿಂಧೂರ ಅವರು ಪ್ರಕೃತಿಯನ್ನು ತಮ್ಮ ಅಭಿವ್ಯಕ್ತಿಯ ಮೂಲ ಆಶಯವನ್ನಾಗಿಟ್ಟುಕೊಂಡಿರುವ ತಾವು ಹುಟ್ಟಿದ ಮಣ್ಣು, ಮುಗಿಲು, ಆಕಾಶ. ಸುತ್ತಲಿನ ಮರಗಿಡ ಪ್ರಾಣಿಪಕ್ಷಿ ಜನರನ್ನು ಪ್ರೀತಿಸುವ ತಮ್ಮ ಕಲಾಕೃತಿಗಳಲ್ಲಿ ಇವೆಲ್ಲವನ್ನೂ ಬದುಕಿನ ಎಲ್ಲಾ ಭಾವನೆಗಳನ್ನು ಬಣ್ಣಗಳಲ್ಲಿ ಹರಿಸಿ ಕಲೆಯನ್ನು ತನ್ನ ಉಸಿರಾಗಿಸಿಕೊಂಡು ಶ್ರೇಷ್ಠ ಕಲಾವಿದರಾಗಿ ಹೊರಹೊಮ್ಮಿ ನವ್ಯ ಕಲಾವಿದರ ದಿವ್ಯ ಚೇತನ ಹಾಗೂ ಸ್ಫೂರ್ತಿದಾಯಕರಾದ ಶ್ರೀಯುತ ವಿಜಯ ಗಂಗಪ್ಪ ಸಿಂದೂರರವರು ೭ ಜೂನ್ ೧೯೪೦ ರಲ್ಲಿ ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಶ್ರೀಮಂತ ಕುಟುಂಬ ಒಂದರಲ್ಲಿ ಜನಿಸಿರುತ್ತಾರೆ. ಸಿಂಧೂರರು ಅತ್ಯಂತ ಪ್ರೀತಿಯ ನಡುವೆ ಬಾಲ್ಯವನ್ನು ಕಂಡರೂ ೧೦ ನೇ ವರ್ಷದ ಕುತುಹಲದ ಕಣ್ಣು ಮನೆಯಲ್ಲಿದ್ದ ರವಿವರ್ಮನ ಚಿತ್ರಗಳಲ್ಲಿನ ಪುರಾಣ ಪುರುಷರ ರೂಪಗಳನ್ನು ಚೆನ್ನಾಗಿಯೇ ಗ್ರಹಿಸಿತು. ಪ್ರಾಥಮಿಕ ಪಾಠ ಶಾಲೆಯ ಅಕ್ಷರ, ಅಂಕಿ, ಸಂಖ್ಯೆಗಳೊಂದಿಗಿನ ಆಟದ ಜೊತೆ ಜೊತೆಗೆ ರಾಷ್ಟ್ರ ಧ್ವಜದ ಬಣ್ಣ ಹಾಗೂ ಸುತ್ತಲಿನ ಇನ್ನಿತರ ವಸ್ತುಗಳ ರೂಪದೊಂದಿಗೆ ಆಟವಾಡತೊಡಗಿದರು. ಜಲವರ್ಣಗಳಲ್ಲಿ ದತ್ತಾತ್ರೆಯ, ಶಿವಪಾರ್ವತಿ, ಗಣಪತಿ, ನಂದಿ, ಇತ್ಯಾದಿ ರೂಪಗಳನ್ನು ರೇಖಿಸಿ ಬಣ್ಣ ತುಂಬಿದರು.

ಸಿಂಧೂರ ಅವರು ಜಮಖಂಡಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ ಪ್ರತಿಷ್ಠಿತ ಪಿ.ಬಿ. ಪ್ರೌಢಶಾಲೆಯಲ್ಲಿ ೮ ವರ್ಗಕ್ಕೆ ಪ್ರವೇಶವನ್ನು ಪಡೆದರು. ಅಲ್ಲಿ ಒಬ್ಬ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿ ಎಸ್.ಎಸ್.ಎಲ್.ಸಿ ಯವರೆಗೂ ಪೂರ್ಣಗೊಳಿಸಿದರು. ಒಳ್ಳೆಯ ಸಂಗತಿಯೆಂದರೆ ಅಲ್ಲಿ ಇವರಿಗೆ ಶ್ರೀಯುತ ಅಗ್ನಿಹೋತ್ರಿ ಎಂಬ ಕಲಾಶಿಕ್ಷಕರ ಪರಿಪೂರ್ಣವಾದ ಕಲಾ ಮಾರ್ಗದರ್ಶನ ದೊರಕಿತು. ಅವರ ಸಹಾಯಕ ಹಾಗೂ ಸ್ಫೂರ್ತಿಯಿಂದ ಶ್ರೀಯುತ ವಿಜಯ ಸಿಂಧೂರ ಅವರು ಮಹಾರಾಷ್ಟ್ರ ಪರೀಕ್ಷೆಯಲ್ಲಿ ಮಾನ್ಯತೆಯನ್ನು ಹೊಂದಿದ ಎಲಿಮೆಂಟ್ರಿ ಹಾಗೂ ಇಂಟರ್‌ಮೆಡಿಯೇಟ್ ಪರೀಕ್ಷೆಯನ್ನು ಮುಗಿಸಿದರು. ಹೀಗೆ ತಮ್ಮ ಚಿತ್ರಕಲೆಯ ಸಂಭಂಧ ಬೆಳೆಸಿಕೊಂಡು ಸಿಂಧೂರರು ಅತ್ಯುನ್ನತ ಶಿಕ್ಷಣವನ್ನು ಪಡೆದು. ಇಂಜಿನಿಯರ್ ಅಥವಾ ಡಾಕ್ಟರ್ ಆಗಬೇಕೆಂಬ ಬಯಕೆ ಮನೆಯವರದು. ೧೯೫೦ ರಲ್ಲಿ ಪ್ರಿ ಯೂನಿವರ್ಸಿಟಿಯ ತರಗತಿಯಲ್ಲಿ ವಿಜ್ಞಾನವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳುವಂತೆ ಮಾಡಿದ್ದೂ ಈ ಉದ್ದೇಶ ಸಾಧಿಸಲೆಂದು. ಆದರೆ ಕಾಲೇಜಿನ ತರಗತಿಗಳ ನಡುವೆ ರೇಖಿಸುತ್ತ ಚಿತ್ರಿಸುತ್ತ ಕಾಲ ಕಳೆದ ಇವರೂ ಎರಡನೇಯ ವರ್ಷದ ಪಿ.ಯು.ಸಿ. ಯಲ್ಲಿ ಗಣಿತ ಕೈಕೊಟ್ಟಿತು. ತಮ್ಮ ಆಸಕ್ತಿ ಇಲ್ಲದ ಅಧ್ಯಯನವನ್ನು ತ್ಯಜಿಸಿ ೧೯೬೧ರಲ್ಲಿ ಪುಣೆಯ ಅಭಿನವ ಕಲಾವಿದ್ಯಾಲಯದ ಶಿರಸಿಯ ಎಸ್.ಎಸ್. ಕಾಮತ್ ರವರಲ್ಲಿ ಚಿತ್ರಕಲೆಯ ಅಭ್ಯಾಸ ಭಾವಚಿತ್ರಣಕ್ಕೆ ಹೆಚ್ಚಿನ ಗಮನ. ನಂತರ ಮುಂಬೈಯಲ್ಲಿ ಸರ್.ಜೆ.ಜೆ. ಕಲಾಶಾಲೆಯಲ್ಲಿ ಚಿತ್ರವನ್ನು ಕಲಿಯಲಾರಂಭಿಸಿದರು. ಸಿಂಧೂರರು ಗುರು ಶಂಕರರಾವ್ ಪಳಕರರ ಮಾರ್ಗದರ್ಶನದಲ್ಲಿ ಅತ್ಯಂತ ಆಸಕ್ತಿಯಿಂದ ಕಲಿತರು. ರಂಗಭೂಮಿ ಮತ್ತು ಚಲನಚಿತ್ರ ನಟಅಮೋಲ್

ಪಾಲೇಕರ್ ಸಿಂಧೂರರ ಸಹಪಾಠಿಗಳಲ್ಲೊಬ್ಬರು. ೧೯೬೫ರಲ್ಲಿ ಚಿತ್ರಕಲೆಯಲ್ಲಿ ಡಿಪ್ಲೋಮಾ ಪಡೆದ ನಂತರ ೧೯೬೬ರಲ್ಲಿ ಅಲ್ಲಿಯೇ ಶಿಷ್ಯವೇತನದ ನೆರವಿನಿಂದ ಭಿತ್ತಿಚಿತ್ರಕಲೆಯನ್ನು ಅಭ್ಯಾಸ ಮಾಡಿದರು.[೩]

೧೯೭೩ರ ನಂತರ ಸಾರ್ವಜನಿಕವಾಗಿ ಹಲವು ಪ್ರಮುಖ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸುತ್ತ ಬಂದಿರುವ ಸಿಂಧೂರರು ೧೯೯೭–೯೮ ರಲ್ಲಿ ಸಾಕಷ್ಟು ಪ್ರಕೃತಿಯ ವರ್ಣಛಾಯೆ ರೂಪಗಳನ್ನು ಅನ್ವೇಷಿಸುತ್ತ ಕೆಲವೊಮ್ಮೆ ಅಮೂರ್ತವಾಗಿಯು ಅಭಿವ್ಯಕ್ತಿಸುತ್ತ ನಡೆದಿದ್ದರು. ಪ್ರಕೃತಿ ಕಲಾವಿದರ ಮೊದಲ ಸ್ಫೂರ್ತಿ ಅದನ್ನು ನಕಲು ಮಾಡುತ್ತ ಅನುಸರಿಸುತ್ತ ಇಡುವ ಹೆಜ್ಜೆಗಳಲ್ಲಿ ಅಂತಿಮವಾಗಿ ತನ್ನನ್ನು ಕಂಡುಕೊಳ್ಳುವ ಕಲಾವಿದ ಇನ್ನೂ ಮುಂದೆ ಹೋಗಿ ಪ್ರಕೃತಿಯನ್ನು ಪ್ರಶ್ನಿಸುವ ಅದನ್ನು ತನ್ನ ಗ್ರಹಿಕೆ ಅನುಭವಗಳ ಸೆಳಕುಗಳ ಲೇಪನದಿಂದ ವಿಭಿನ್ನವಾಗಿ ಕಾಣುವ ಕೆಲವೊಮ್ಮೆ ತನ್ನದೇ ರೀತಿಯಲ್ಲಿ ಅಭಿವ್ಯಕ್ತಿಸಿ ಹೊಸ ರೂಪವನ್ನು ಸೃಷ್ಟಿಸುವ ದೃಷ್ಟಿ ಹೊಂದಿರುತ್ತಾನೆ. ವಿ.ಜಿ. ಸಿಂಧೂರರು ಪ್ರಕೃತಿಯನ್ನು ಹಲವು ರೀತಿಗಳಲ್ಲಿ ನೋಡಿ ಅನುಭವಿಸಿ ಅಭಿವ್ಯಕ್ತಿಸಿರುವವರು. ಪ್ರಕೃತಿ ಅವರಿಗೆ ಸ್ಟಿಲ್ ಲೈಫ್ (ಸ್ಥಿತ ಜೀವ) ಇದ್ದಂತೆ.[೪] !

ಭಾವಚಿತ್ರಣದಲ್ಲಿ ಅಸಾಧಾರಣ ಸಾಧ್ಯತೆಗಳನ್ನು ಕಂಡುಕೊಂಡು ಸಿಂಧೂರ ತಮ್ಮ ನಡುವೆ ಖ್ಯಾತರೆನಿಸಿದ ಹಲವು ವ್ಯಕ್ತಿಗಳನ್ನು ಕ್ಯಾನವ್ಯಾಸಿನ ಅವಕಾಶಕ್ಕೆ ಸಮರ್ಥಕವಾಗಿ ತಂದುಕೊಂಡಿದ್ದಾರೆ. ಗುರು ಪರಿಕರರಂತೆ ಮಾಡಿ ಕಲೆಯ ವ್ಯಕ್ತಿಯನ್ನು ಆಶ್ರಯಿಸದೆ ಊರಿಗೆ ಹಿಂತಿರುಗಿ ಚಿತ್ರಿಸಲಾರಂಬಿಸಿದರು. ಗಡಿಬಿಡಿಯ ಮುಂಬಯಿಯ ಪೀಕ್ಷಿಪ್ತತೆಯಿಂದ ಶಾಂತ ಸರಳ ಸೌಂದರ್ಯದ ಬಿಸಿ ಉಸಿರಾಡುವ ವಾತಾವರಣದ ನಡುವೆಯೂ ಗ್ರಾಮ್ಯ ಮುಗ್ಧತೆಯನ್ನು ಅಪ್ಪಿಕೊಂಡ ಜಮಖಂಡಿಗೆ ಹಿಂತಿರುಗಿದಾಗ ಮರಳಿ ಮಣ್ಣಿಗೆ ಬಂದಂತೆ ಅನುಭವ ಆರ್ಥಿಕವಾಗಿ ಸಾಮಾಜಿಕವಾಗಿ ಅತ್ಯುನ್ನತ ಮಟ್ಟದ ಕುಟುಂಬದ ಸಿಂಧೂರ ದತ್ತಕ ತಂದ ಶ್ರೀ ಗಂಗಪ್ಪನವರು ಪ್ರೀತಿಯ ಶಾಂತ ಪರಿಸರದಲ್ಲಿ ಬೆಳೆದರು.[೮]

ಸಿಂಧೂರರ ಪ್ರಾರಂಭದ ಭಾವಚಿತ್ರ ಸ್ಥಿತಿಜೀವ (ಸ್ಟಿಲ್ ಲೈಫ್) ನೆರಳು ಬೆಳಕಿನ ಆಟದ ನಡುವೆ ಪ್ರಮಾಣ ಬದ್ಧತೆಯ ರೂಪಗಳನ್ನು, ರೂಪದರ್ಶಿಗಳನ್ನು, ಪಶ್ಚಿಮದ ಕಲಾವಿದರ ಕಲಾಕೃತಿಗಳಲ್ಲಿನ ರೂಪದರ್ಶಿಗಳನ್ನು ಹೋಲುವವರನ್ನು ಹುಡುಕಿ ವಿಭಿನ್ನ ಕೋನಗಳಲ್ಲಿ ಕುರಿಸಿ ಚಿತ್ರಿಸುವ ಅವಕಾಶದಲ್ಲಿ ಹೊಂದಿಸುವ ಬಣ್ಣಗಳನ್ನು ಸಂಯೋಜಿಸುವ ರೀತಿಯಲ್ಲಿ ಜೆ.ಜೆ. ಕಲಾಶಾಲೆಯ ಕಲಿಕೆ ಅತ್ಯಂತ ಶಕ್ತಿಯುತವಾಗಿಕಾಣಿಸಿಕೊಂಡಿತು. ಭಾವಚಿತ್ರ ಕಾರರಲ್ಲಿ ಒಬ್ಬರಾದ ಸಿಂಧೂರ ನೈಜಕತೆಯನ್ನು ಅನುಸರಿಸಿಯೂ ಚಿತ್ರಿತ ವ್ಯಕ್ತಿಗಳ ವಿಶಿಷ್ಟ ಹೊಸರೂಪ ವ್ಯಕ್ತಿತ್ವಗಳ ಜೊತೆಗೆ ಆ ವ್ಯಕ್ತಿಗಳ ಒಳನೋಟಗಳನ್ನು ಗ್ರಹಿಸಿ ನಮ್ಮ ಅನುಭವಕ್ಕೆ ದಕ್ಕುವಂತೆ ಚಿತ್ರಿಸುತ್ತಾರೆ. ಯಾವುದೇ ವ್ಯಕ್ತಿಯನ್ನು ಚಿತ್ರಿಸಿದರು ಆ ವ್ಯಕ್ತಿತ್ವದ ಗಾಂಭೀರ್ಯದ ಸೊಬಗನ್ನು ಪೀಕ್ಷಕರಿಗೂ ಉಣಬಡಿಸುತ್ತಾರೆ.[೯] ಛಲ ಬಿಡದ ತ್ರಿವಿಕ್ರಮನಂತೆ ಸಾಧಿಸಿದಂತವರ ಪ್ರಯತ್ನ ಇಂದು ಸಿಂಧೂರ ಅವರು ಪ್ರತಿಭೆಯಲ್ಲಿ ನಾಡಿನ ಪ್ರತಿಭಾವಂತ ಕಲಾವಿದರ ಸಾಲಿನಲ್ಲಿ ಇವರ ಹೆಸರು ಶಾಶ್ವತವಾಗಿ ಉಳಿಸಿ ತಂದಿದೆ.

ಮುಂಬೈಯಿ, ಕಲ್ಕತ್ತಾ, ಬೆಂಗಳೂರು, ಮದ್ರಾಸ್, ಹೈದರಾಬಾದ್ ಹಾಗೂ ದೆಹಲಿಯಲ್ಲಿ ನಡೆದ ಅಖಿಲ ಭಾರತ ಕಲಾ ಪ್ರದರ್ಶನಗಳಲ್ಲಿ ಇವರ ಕೃತಿಗಳು ಪ್ರದರ್ಶನ ಕಂಡಿವೆಯಲ್ಲದೆ ಏಕ ವ್ಯಕ್ತಿ ಪ್ರದರ್ಶನಗಳೂ ನಡೆದಿವೆ.

ರಾಜಕೀಯ ಬರಗಾಲ ಪೀಡಿತ ಜಮಖಂಡಿಯಲ್ಲಿ ಸಿಂಧೂರರು ಮನಸ್ಸಿಗೆ ಉಲ್ಲಾಸ ತರುವ ಕಲೆಯ ಅಭಿರುಚಿಯನ್ನು ಬೆಳೆಸಲು ಹಲವು ಹತ್ತು ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಂಡು ಕೆಲಸ ಮಾಡುತ್ತಿದ್ದಾರೆ. ಇವರ ಚಿತ್ರಶಾಲೆ ಸಾಹಿತಿಗಳು, ಸಂಗೀತಗಾರರು, ಕಲಾವಿದರ, ಕಲಾಭಿಮಾನಿಗಳ, ರಸಿಕರೆಲ್ಲರ ಸ್ಫೂರ್ತಿಯತಾಣ.[೧೦]

ಹೀಗೆ ಹಲವಾರು ಕಲಾ ಪ್ರಯೋಗಗಳ ಮೂಲಕ ವಿಜಯ ಸಿಂಧೂರರು ಸೃಜನಶೀಲತೆ ಅವ್ಯಾಹತವಾಗಿ ಬೆಳೆದು ಅಪೂರ್ವವನ್ನು ಸಾಧಿಸಿ ತಮ್ಮ ಪ್ರತಿಭೆಯನ್ನು ಗುರುತಿಸಿಕೊಂಡು ನಾಡಿನ ಹಲವಾರು ಪ್ರಶಸ್ತಿ ಗೌರವಗಳನ್ನು ಇವರಿಗೆ ಬಂದಿವೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ವೆಂಕಟಪ್ಪ ಪ್ರಶಸ್ತಿ, ಭಾರತ ಕಲಾಸಂಸ್ಥೆಯ ಪಟೇಲ್ ಟ್ರೋಫಿ, ಮೈಸೂರು ದಸರಾ ಕಲಾ ಪ್ರಶಸ್ತಿಗಳು ಹೀಗೆ ಹಲವಾರು ಪ್ರಶಸ್ತಿಗಳನ್ನು ಕೊಟ್ಟು ಗೌರವಿಸಿದೆ. ಹಾಗೂ ಲಲಿತಕಲಾ ಅಕಾಡೆಮಿ, ಮದ್ರಾಸ್ ರಿಜಿನಲ್ ಕೇಂದ್ರ ಸದಸ್ಯರಾಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆಯೂ ಇವರದು, ಈಗ ಪ್ರಸ್ತುತ ಇಳಿ ವಯಸ್ಸಿನಲ್ಲಿಯೂ ಪ್ರತಿದಿನ ಕಲಾಕೃತಿ ರಚನೆಯಲ್ಲಿ ಹಾಗೂ ಕಲಾನುಭವಗಳನ್ನು ಹಂಚಿಕೊಳ್ಳುವ ಒಬ್ಬ ಪ್ರಯೋಗ ನಿರತ ಕಲಾವಿದರಾಗಿ ನಮ್ಮ ಮಧ್ಯೆ ಬದುಕಿದ್ದಾರೆ.

ಭಾವಚಿತ್ರಗಳು:-

೧. ವಿಜಯ ಸಿಂಧೂರರ ಧರ್ಮಪತ್ನಿಯ ಭಾವಚಿತ್ರ

ವಿಜಯ ಸಿಂಧೂರರು ತಮ್ಮ ಧರ್ಮಪತ್ನಿಯನ್ನು ಬೇರೆ ಬೇರೆ ಆಯಾಮಗಳಲ್ಲಿ ಕುರಿಸಿ ಹೆಚ್ಚು ಭಾವಚಿತ್ರಗಳನ್ನು ರಚನೆ ಮಾಡಿದ್ದಾರೆ. ಈ ತೈಲಚಿತ್ರವು ೧೯೬೮ ರಲ್ಲಿ ೨೫"/೩೦" ಅಳತೆಯಲ್ಲಿ ಚಿತ್ರವು ಕಲಾವಿದರ ಕಲಾಪ್ರೀತಿಗೆ ಕಲಾ ಅಧ್ಯಾಯನಕ್ಕೆ ಸ್ಫೂರ್ತಿ ಚಿಲುಮೆಯಾಗಿ ಹೊರಹೊಮ್ಮಿದ ಅವರ ಪತ್ನಿಯ ಭಾವಚಿತ್ರವು ಜಮಖಂಡಿಯ ಸಂಸ್ಕೃತಿಯ ಸೊಬಗಿನ ಸರಳ ಸದ್ವಿಚಾರ ಮುಗ್ಧತೆಯ ಸ್ತ್ರೀಯ ಪ್ರತೀಕವಾಗಿ ಈ ಭಾವಚಿತ್ರವು ಗುಣಗಳನ್ನು ಹೇಳುತ್ತದೆ. ಸುಸಂಸ್ಕೃತ ಮನೆತನದ ಹೆಣ್ಣುಮಗಳ ಅಭಿವ್ಯಕ್ತಿಯು ಕಂಡುಬರುತ್ತದೆ. ಕಲಾವಿದರು ಬಳಸಿರುವ ಬಣ್ಣಗಳನ್ನು ನೋಡಿದಾಗ ಹಳದಿ ಬಣ್ಣದಲ್ಲಿ ಹಸಿರು ಬಣ್ಣ ಮತ್ತು ಬಿಳಿ ಬಣ್ಣಗಳಲ್ಲಿ ವ್ಯಕ್ತಿಯ ನೆರಳು ಬೆಳಕನ್ನು ನೈಜಕತೆಯಲ್ಲಿ ಸರಳತೆಯನ್ನು ಸೀಮಿತವಾಗಿ ಬಣ್ಣಗಳು ಉಪಯೋಗಿಸಿ ಅರ್ಥಪೂರ್ಣವಾಗಿ ವ್ಯಕ್ತಿಯ ಪ್ರಸನ್ನತೆಯನ್ನು ಸೌಜನ್ಯತೆಯನ್ನು ರೂಪಿಸುವಲ್ಲಿ ಸಿಂಧೂರರ ಸಂಯೋಜನಾ ಬದ್ಧತೆ ಹಾಗೂ ವರ್ಣಬಳಕೆಯ ಕುಶಲತೆಯನ್ನು ಈ ಭಾವಚಿತ್ರದಲ್ಲಿ ರಚಿಸಿದ್ದಾರೆ.

೨. ಶ್ರೀಮತಿ ಗಂಗೂಬಾಯಿ ಹಾನಗಲ್ಲರವರ ಭಾವಚಿತ್ರ

೧೯೮೭ರಲ್ಲಿ ಶ್ರೀಮತಿ ಗಂಗೂಬಾಯಿ ಹಾನಗಲ್ಲರ ಗಂಭೀರ ಮುಖಭಾವದ ಭಾವಚಿತ್ರವು ಸಿಂಧೂರರವರು ಕುಂಚದ ಕುಶಲತೆಯು ಮನಸ್ಸಿನ ಪಕ್ವತೆಗೆ ಇದೊಂದು ಉದಾಹರಣೆಯಾಗಿರುತ್ತದೆ. ವ್ಯಕ್ತಿಯ ನೈಜದೃಷ್ಟಿಯು ಈ ಭಾವಚಿತ್ರವನ್ನು ನೋಡಿದಾಗ ನಿಜ ವ್ಯಕ್ತಿಯ ನೆನಪುಗೊಳಿಸುವಂತೆ ಬಣ್ಣಗಳ ಸೌಂದರ್ಯವು ಆಕರ್ಷಕವಾಗಿ ಕಲಾಭಿಮಾನಿಗಳಿಗೆ ಕಣ್ಣುಗಳನ್ನು ಸೆಳೆಯುವಹಾಗೆ ಜೀವತುಂಬಿದ್ದಾರೆ. ಸಿಂಧೂರರವರು ಕೆಂಪು, ಹಳದಿ, ಬಿಳಿ, ವರ್ಣಗಳ ಮಿಶ್ರಣದೊಂದಿಗೆ ತಮ್ಮ ಕುಂಚಗಳ ತಂತ್ರಗಾರಿಕೆ ಸೆಳೆತಗಳು ಎಷ್ಟು ಬೇಕು ಅಷ್ಟು ಬೆಳಕಿನ ಪ್ರಮಾಣದ ಬದ್ಧತೆಯ ವ್ಯಕ್ತಿಯನ್ನು ಚಿತ್ರಿಸುವ ಅವರು ರಿಯಲಿಸಂನ್ನು ವ್ಯಕ್ತದಂತೆ ಕಾಣುತ್ತಾರೆ. ಮನಸ್ಸಿನ ಪಕ್ವತೆ ಭಾವಚಿತ್ರಣದಲ್ಲಿ ಸೂಕ್ಷ್ಮವಾಗಿ ನಿರೂಪಿಸಿದ್ದಾರೆ.

೩. ಹೆಣ್ಣು ಮಗುವಿನ ಭಾವಚಿತ್ರ

ತೈಲವರ್ಣದಲ್ಲಿ೧೨"/೧೬" ಅಳತೆಯ ಕ್ಯಾನವಾಸ್‌ನಲ್ಲಿ ಹೆಣ್ಣು ಮಗುವಿನ ಭಾವಚಿತ್ರ ರಚನೆಯಲ್ಲಿ ಮಗುವಿನ ಬಾಲ್ಯಾವಸ್ಥೆಯನ್ನು ಆ ಮುಗ್ಧ ಭಾವದ ನೈಜತೆಯ ರೂಪ ಸೌಂದರ್ಯ ಬಣ್ಣಗಳ ಮಿಶ್ರಣದಲ್ಲಿ ಚಿತ್ರಿಸಿದ್ದಾರೆ. ಮಗುವಿನ ಮುಖದಲ್ಲಿ ನೆರಳು ಬೆಳಕನ್ನು ಸೂಕ್ಷ್ಮವಾಗಿ ಮಿಶ್ರಣಮಾಡಿದ್ದರೆ. ಮಗುವಿನ ಬಟ್ಟೆಯನ್ನು ದಪ್ಪಾಗಿ ನೀಲಿ ಮತ್ತು ಕಪ್ಪು ವರ್ಣಗಳನ್ನು ಗಾಢವಾಗಿ ಬಳಸಿ ಬಿಳಿ ಹಾಗೂ ಕೆಂಪು ವರ್ಣದಲ್ಲಿ ಅಲ್ಲಲ್ಲಿ ಚಿತ್ತಾರ ಚುಕ್ಕೆಗಳು ವರ್ಣ ಸಂಯೋಜನೆಯ ಪ್ರಯೋಗವು ಈ ಭಾವಚಿತ್ರದಲ್ಲಿ ಮುಖ್ಯವಾಗಿದೆ. ಮಗುವಿನ ಹಿಂದುಗಡೆ ಕೆಂಪು ವರ್ಣದ ಬಿಳಿ ವರ್ಣದ ಮಿಶ್ರಣ ಮುಖದಲ್ಲಿ ಹಳದಿ ಹೀಗೆ ವಿಜಯ ಸಿಂಧೂರರ ಭಾವಚಿತ್ರಗಳಲ್ಲಿ ಕೆಂಪು ವರ್ಣದ ವೈಭವೀಕರಣವು ಅಲ್ಲಲ್ಲಿ ಕುಂಚವನ್ನು ಆಡಿಸಿ ರೇಖೆಗಳ ಜೊತೆ ತಮ್ಮನ್ನು ತಾವು ಕಂಡುಕೊಳ್ಳಲು ಭಾವಚಿತ್ರದಲ್ಲಿ ಜೀವ ತುಂಬಿದ್ದಾರೆ.

೪. ಭಾವಚಿತ್ರ

ವಿಜಯ ಸಿಂಧೂರ ಅವರು ರಚಿಸಿದ ಮಹಿಳಾ ಭಾವಚಿತ್ರವು ಭಾವಪೂರ್ಣವಾಗಿ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ತುಸು ನಗೆಯ ಮುಖವನ್ನು ತೋರುತ್ತಾ ಕುಳಿತ ರೂಪದರ್ಶಿಯ ಚಿತ್ರದಲ್ಲಿ ವಿಶೇಷವಾದ ನೆರಳು ಬೆಳಕಿನ ಛಾಯೆ ಮೂಡಿಬಂದಿರುವುದು ಅದ್ಭುತವಾಗಿದೆ. ಈ ಮಹಿಳೆಯ ವಯಸ್ಸು ಸುಮಾರು ೪೦ ರಿಂದ ೫೦ ರವರೆಗೆ ಇದ್ದಿರಬಹುದು ರೂಪದರ್ಶಿಯ ಮುಖವರ್ಣವು ನೈಜತೆಯಯಿಂದ ಕೂಡಿದ್ದು, ತೈಲವರ್ಣದಿಂದ ಪೂರ್ಣಗೊಳಿಸಲಾಗಿದೆ. ವಸ್ತುಗಳಲ್ಲಿ ಹಳದಿ, ಬಿಳಿ ವರ್ಣದಿಂದ ಕೂಡಿದ ಈ ಭಾವಚಿತ್ರವು ಕುರ್ಚಿಯ ಮೇಲೆ ಹೊರಾಂಗಣದಲ್ಲಿ ಕುಳ್ಳಿರಿಸಿದ ಹೀಗೆ ಹಸಿರು ವರ್ಣದ ಹಿನ್ನೆಲೆಯನ್ನು ಕಾಣುತ್ತೇವೆ. ತಲೆಯ ಕೂದಲ್ಲಿನ ಬಿಳಿಯ ವರ್ಣ ಕಂಡುಬಂದಿದ್ದು ತಲೆಯ ಕೂದಲುಗಳು ಬೆಳ್ಳಗಾಗಿರಬಹುದೆಂದು ತಿಳಿದು ಬರುತ್ತದೆ. ಕಿವಿ ಮತ್ತು ಕೊರಳಲ್ಲಿ ಒಡವೆಗಳ ಅಲಂಕಾರ ಸಾಮಾನ್ಯವಾಗಿ ರಚಿಸಿದ್ದು ಮಹಿಳೆಗೆ ಅಲಂಕಾರದಿಂದ ತುಂಬಿದ ಹಾಗೆ ಕಾಣುತ್ತದೆ.

ಈ ರೂಪದರ್ಶಿಯ ಚಿತ್ರವು ೩೦ ಇಂಚು ಅಗಲ ೩೬ ಇಂಚು ಉದ್ದವಿರುವ ಕ್ಯಾನವಾಸನಲ್ಲಿ ರಚಿಸಿದ್ದು ಭಾವ ಪೂರ್ಣವಾಗಿದೆ. ಈ ಮಹಿಳೆಯು ಎರಡು ಕೋಗಳನ್ನು ಒಂದರ ಮೇಲೊಂದು ಇಟ್ಟಂತೆ ಮತ್ತು ಪೆನ ಮತ್ತು ಗಡಿಯಾರವನ್ನು ಕೈಯಲ್ಲಿ ಇರುವಂತೆ ಚಿತ್ರಿಸಿದ್ದಾರೆ. ನಿಜವಾಗಿಯೂ ಈ ಕಲಾಕೃತಿಯು ನೋಡಲು ಸೊಬಗಿನಿಂದ ಕೂಡಿದೆ.

ಅಡಿ ಟಿಪ್ಪಣಿ

೧. ವಿಜಾಪುರ ಜಿಲ್ಲೆಯ ಅಜ್ಞಾತ ಚಿತ್ರಕಲಾವಿದ: ಬಿ.ಆರ್. ಕೊಟ್ಟೂರ್ಕರ್-ಜಿ.ಎಸ್. ಯಾಸಗೊಂಡ ಪುಟ-೧

೨. ಡಾ. ಶಿವರುದ್ರಸ್ವಾಮಿ: ಸಾಂಸ್ಕೃತಿಕ ಸಮೀಕ್ಷೆ. ಪುಟ-೨೮

೩. ಭಾರತೀಯ ಚಿತ್ರಕಲೆ: ಡಾ. ಶಿವರಾಮ ಕಾರಂತ. ಪುಟ-೨೧

೪. ವಿಜಯ ಸಿಂಧೂರ ಸಂದರ್ಶನ–ವಿರೇಶ ರುದ್ರಸ್ವಾಮಿ೧೫–೫–೨೦೧೬

೫. ವಿಜಯ ಸಿಂಧೂರ: ಕೆ.ವಿ.ಸುಬ್ರಹ್ಮಣ್ಯಂ. ಪುಟ-೨

೬. ಅದೇ ಪುಟ

೭. ವಿಜಯ ಸಿಂಧೂರ: ಕೆ.ವಿ.ಸುಬ್ರಹ್ಮಣ್ಯಂ. ಪುಟ-೫

೮. ವಿಜಯ ಸಿಂಧೂರ: ಕೆ.ವಿ.ಸುಬ್ರಹ್ಮಣ್ಯಂ. ಪುಟ-೬

೯. ವಿಜಯ ಸಿಂಧೂರ: ಕೆ.ವಿ.ಸುಬ್ರಹ್ಮಣ್ಯಂ. ಪುಟ-೮

೧೦. ಪ್ರಶಸ್ತಿ ಪಡೆದ ಕಲಾವಿದರು: ಪ್ರ.ಸಂ. ಬಿ.ಆರ್. ಶಿವಸ್ವಾಮಿ. ಪುಟ-೧೪೦

ವಿಜಯ ಸಿಂಧೂರ ಅವರ ಭಾವಚಿತ್ರಗಳು



ವಿಜಯ ಸಿಂಧೂರ ಪತ್ನಿಯ ಭಾವಚಿತ್ರ ೧

ಮಗುವಿನ ಭಾವಚಿತ್ರ




ವಿಜಯ ಸಿಂಧೂರ ಅವರ ಭಾವಚಿತ್ರಗಳು



ಗಂಗೂಬಾಯಿ ಹಾನಗಲ್ಲ
ಅವರ ಭಾವಚಿತ್ರ ೩

ಭಾವಚಿತ್ರ ೪





ಡಿ.ವಿ.ಹಾಲಭಾವಿ



ಡಿ.ವಿ. ಹಾಲಭಾವಿ

ಧಾರವಾಡವು ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಹೇಳುವ ಒಂದು ಮಾತು ಪ್ರಚಲಿತವಾಗಿದೆ. ಸಂಸ್ಕೃತಿ ಎನ್ನುವುದು ಅನೇಕ ಗುಣ ವಿಶೇಷಗಳ ಸುಂದರ ಸಮುಚ್ಚಯ ಕಲೆಯನ್ನು ಮೆಚ್ಚಿಕೊಳ್ಳುವ ದೃಷ್ಟಿಯನ್ನು ಪಡೆದವನೆನ್ನುವ ಕಾರಣದಿಂದ ಮನುಷ್ಯನು ಸುಸಂಸ್ಕೃತ ಅಭಿರುಚಿ ಉಳ್ಳವನೆನಿಸುತ್ತಾನೆ.ಧಾರವಾಡದ ಕಲಾ ಪರಿಸರಕ್ಕೆ ಹಾಲಭಾವಿಯವರು ತಮ್ಮ ಅನುಪಮ ಕಾಣಿಕೆಯನ್ನು ಸಲ್ಲಿಸಿದ್ದಾರೆ. ೬೦ ವರ್ಷಗಳಿಂದಲೂ ಧಾರವಾಡದಲ್ಲಿ ತಮ್ಮ ಕಲಾಶಾಲೆಯನ್ನು ಉಳಿಸಿಕೊಂಡು ಬಂದಿರುವ ಹಾಲಭಾವಿಯವರನ್ನು ಕಲಾಭಾವಿಯವರೆಂದು ಕರೆದರೇನು ಹೆಚ್ಚು ಅನ್ವರ್ಥಕವೆನಿಸಿತು.[1] ಎಂದು ಡಾ. ಪಾಟೀಲ ಪುಟ್ಟಪ್ಪನವರು ಹೇಳಿದ್ದಾರೆ.

ಚಿತ್ರಕಲಾ ಕ್ಷೇತ್ರಕ್ಕೆ ಅನುಪಮ ಸೇವೆ ಸಲ್ಲಿಸಿದ ಶ್ರೀ ಡಿ.ವಿ.ಹಾಲಭಾವಿ ಅವರು ಪೂರ್ವಜರು ವಿಜಯಪುರ (ವಿಜಾಪೂರ) ಜಿಲ್ಲೆಯ ಗೋಠೆ ಗ್ರಾಮದಲ್ಲಿ ಹೇರಲಗಿ ಮನೆತನದವರಾಗಿದ್ದರು. ಅವರು ಶ್ರೇಷ್ಠ ಬಣ್ಣಗಾರರು, ಕಲಾವಿದರು, ವಿದ್ವಾಂಸರು, ಸಾಹಿತ್ಯ ಧರ್ಮ ಸಂಸ್ಕೃತಿಗಳಲ್ಲಿ ವಿಶೇಷ ಆಸಕ್ತಿ ಅಭಿಮಾನ ಉಳ್ಳವರಾಗಿದ್ದರು. ಬಾದಾಮಿಯ ಕಲ್ಮನೆಗಳಲ್ಲಿಯೂ ಚಿತ್ರಕ್ಕೆ ಬಣ್ಣಕೊಡವದರಲ್ಲಿಯೂ ವಿಜಯಪುರ, ಕಮತಗಿ, ನಿಪ್ಪಾಣಿ, ಗೊಂಬಿಗುಡ್ಡ, ತಿಕೋಟ ಮೊದಲಾದ ಸ್ಥಳಗಲ್ಲಿಯ ಚಿತ್ರಗಳನ್ನು ರಚಿಸುವ ಕಾರ್ಯದಲ್ಲಿ ನೆರವಾಗಿದ್ದಾರೆಂದು ಅವರು ಪೂರ್ವಜರಿಂದ ತಿಳಿದುಬರುತ್ತದೆ.

ಹಾಲಭಾವಿ ಅವರ ತಂದೆ ವೀರಭದ್ರಪ್ಪನವರು ಗೋಠೆ ಗ್ರಾಮದಿಂದ (ಬೆಳಗಾವಿ) ಗೋಕಾಕ ನಗರಕ್ಕೆ ಚಿಕ್ಕವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು ತಾಯಿಯ ಜೊತೆ ಬಂದರು. ತಾಯಿಯ ಅಕ್ಕನ ಪತಿ ದಿ. ಬಸಪ್ಪ ಹಾಲಭಾವಿ ಅವರ ಮನೆಯಲ್ಲಿ ಬೆಳೆದರು. ಅಲ್ಲಿಂದ ಅವರ ಮನೆತನದ ಹೆಸರು ಹೇರಲಗಿ ಹೋಗಿ ಹಾಲಭಾವಿ ಎಂದು ಆಯಿತು. ವೀರಭದ್ರಪ್ಪ ಹಾಲಭಾವಿ ಅವರ ಒಂದನೇ ವರ್ಷದ ನ್ಯಾಯಧೀಶರಾಗಿ ಕನ್ನಡನಾಡು, ನುಡಿ, ಇತಿಹಾಸ, ಧರ್ಮ, ಸಂಸ್ಕೃತಿಗಳನ್ನು ನ್ಯಾಯಸಮ್ಮತವಾಗಿ ಉಳಿಸಲು ಮತ್ತು ಬೆಳೆಸಲು ಅವಿರತ ಶ್ರಮಿಸಿ ಅಚ್ಚಳಿಯದೆ ಕೀರ್ತಿಯನ್ನು ಗಳಿಸಿಕೊಂಡರು. ಅವರಿಗೆ ಮೊದಲ ಮಗು ಸಿದ್ಧಪ್ಪ ನಂತರ ಮೂರು ಗಂಡು ಮಕ್ಕಳಾಗಿ ಹುಟ್ಟಿದ ದಿನವೇ ತೀರಿಕೊಂಡವು ಆದ್ದರಿಂದ ನೊಂದ ತಮ್ಮ ಮನೆದೇವತೆ ಗುಡ್ಡಾಪುರದ ಶ್ರೀ ದಾನಮ್ಮದೇವತೆಗೆ ಪೂಜೆ ಸಲ್ಲಿಸಿ ಒಂದು ವರ್ಷದಲ್ಲಿಯೇ ಅಂದರೆ ೧೯೦೨ ನವಂಬರ್ ೨೮ ರಂದು ಧಾರವಾಡದಲ್ಲಿ ಜನಿಸಿದ ಗಂಡು ಮಗುವಿಗೆ ಆ ದೇವತೆಯ ಹೆಸರಿಟ್ಟು ತಮ್ಮ ಹರಕೆಯ ತೀರಿಸಿದರು. ಆ ಮಗುವೆ "ದಾನಪ್ಪ ಹಾಲಭಾವಿ" ದಾನಪ್ಪನವರು ಬಾಲ್ಯದಲ್ಲಿ ದಾನಮ್ಮಳ ಕಾಟವೆಂದು ತಿಳಿದು ಪೂಜೆ ಸಲ್ಲಿಸಿ ಬಂದ ಮೇಲೆ ಇವರ ಆರೋಗ್ಯ ಸುಧಾರಿಸಿತು. ಎಂದು ಹೇಳುತ್ತಾರೆ.[2]

ಹಾಲಭಾವಿಯವರ ಬಾಲ್ಯ:-

ತಾಯಿ ಚನ್ನಬಸಮ್ಮ ಧಾರ್ಮಿಕ ಮನೋವೃತ್ತಿಯವರು ಸಹಜವಾಗಿಯೇ ಮಗು ದಾನಪ್ಪನವರು ಧಾರ್ಮಿಕದತ್ತ ಒಲವು ಧಾರ್ಮಿಕ ಸನ್ನಿವೇಶಗಳನ್ನು ಕುರಿತು ರಚಿಸುತ್ತಿದ್ದರು. ಇವರ ತಂದೆಯವರ ಹವ್ಯಾಸ ಪ್ರವಾಸ ಅವರೊಂದಿಗೆ ಎಳೆಯ ದಾನಪ್ಪನವರು ಹೋಗುತ್ತಿದ್ದರು. ನಿಸರ್ಗದ ಸೌಂದರ್ಯವನ್ನು ವೀಕ್ಷಿಸಿ ಚಿತ್ರಿಸುವದು ಅವರ ಬಾಲ್ಯದ ಬಯಕೆಯಾಗಿತ್ತು. ನ್ಯಾಯಧೀಶ ಹಾಲಭಾವಿಯವರಿಗೆ ೧೯೨೦ ರಲ್ಲಿ ಹೊನ್ನಾವರಕ್ಕೆ ವರ್ಗವಾಯಿತು ಆಗ ಬಾಲಕ ದಾನಪ್ಪನಿಗೆ ಋಷಿಯೋ ಋಷಿಯೋ! ಜುಳು ಜುಳು ನಿನಾದದೊಂದಿಗೆ ಹರಿಯುವ ತೊರೆ, ನದಿಗಳು ಗಗನಚುಂಬಿ ವೃಕ್ಷಗಳು, ಹಗಲು ರಾತ್ರಿಯೆನ್ನದೆ ಕಾಡುಮೇಡು, ಅಲೆಯಲಾರಂಭಿಸಿದರು. ಬಾಲಕ ದಾನಪ್ಪ ನಿಸರ್ಗದೊಂದಿಗೆ ನಲಿಯುವ ಸಂತಸ ನಾಲ್ಕು ಗೋಡೆಯ ನಡುವಿರುವ ಶಾಲೆಯಲ್ಲಿ ಸಿಕ್ಕಿತು.ಅದುವರೆಗೆ ಬರಿ ಚಟವಾಗಿದ್ದ ನಿಸರ್ಗದ ರಸಸ್ವಾಧನೆಯನ್ನು ಕುಂಚ ಹಿಡಿದು ನೂರಾರು ಕನಸು ರೂಪಿಸುವ ಹೊಸರ್ಥ ಹುಡುಕುವ ಛಲದಿಂದ ಚಿತ್ರಕಲೆಯನ್ನೆ ಜೀವನದ ಗುರಿಯನ್ನಾಗಿಸಿಕೊಂಡ ಬಾಲಕ ದಾನಪ್ಪ.

ತಮ್ಮಿಚ್ಚೆಗೆ ಮಣಿಯದ ಮಗನನ್ನು ಅವನ ದಾರಿಯಲ್ಲಿ ಹೋಗಲು ಉದಾರ ಮನಸ್ಸಿನ ತಂದೆ ಎಲ್ಲಾ ಅನುಕೂಲ ಮಾಡಿಕೊಟ್ಟರು. ಹೊನ್ನಾವರದಲ್ಲಿದ್ದಾಗ ದಾನಪ್ಪನವರಿಗೆ ಪ್ರಥಮವಾಗಿ ಚಿತ್ರಲೆಯ ಗೀಳು ಹಚ್ಚಿದವರು ಡ್ರಾಯಿಂಗ್ ಮಸ್ತಾರ ದಾನಪ್ಪ, ಇವರ ದಾನಪ್ಪನಲ್ಲಿದ್ದ ಪ್ರತಿಭೆ ಗುರುತಿಸಿ ಪ್ರೋತ್ಸಾಹ ನೀಡಿದರು.[2] ತಿಳಿ ಪಡಿಸಿದವರು ಕಲಾಶಿಕ್ಷಕ ವೃತ್ತಿ ಇಲ್ಲಿಂದಲೇ ಆರಂಭವಾಯಿತು.

೧೯೨೮ರಲ್ಲಿ ಹಾಲಭಾವಿಯವರ ತಾಯಿ ವಿಜಯಪುರದಲ್ಲಿ ನಿಧನವಾಗುತ್ತಾರೆ. ಇದೆ ಸಂದರ್ಭದಲ್ಲಿ ಅವರ ಪತ್ನಿ ಕೂಡಾ ಆಕಸ್ಮಿಕವಾಗಿ ಮರಣವನ್ನೊಪ್ಪುತ್ತಾಳೆ. ಒಂದೇ ವರ್ಷದಲ್ಲಿ ತಾಯಿ ಮತ್ತು ಹೆಂಡತಿಯನ್ನು ಕಳೆದುಕೊಂಡು ಅವರ ಮನಸ್ಸಿಗೆ ದೊಡ್ಡ ಆಘಾತವಾಯಿತು. ಸಂಗಾತಿ ಸತಿ ಇಲ್ಲದ ಸಂಸಾರ ಮತಿಹೀನವಾಗಿ ಮಾಡಿ ಸರಿಯಾದ ಮಾರ್ಗದಲ್ಲಿ ಕ್ರಮಿಸಲು ಬಿಡುವುದಿಲ್ಲ ಅದಕ್ಕೆ ದಾನಪ್ಪನವರು ಎರಡನೇಯ ಮದುವೆ ಮಾಡಿಕೊಳ್ಳಲು ಸಿದ್ದರಾದರು. ವಿಚಾರಶೀಲ ತಂದೆ ವೀರಭದ್ರಪ್ಪನವರು ಇನ್ನೂ ೨೫ ವರ್ಷ ವಯಸ್ಸಿನಲ್ಲಿರುವ ವಾತ್ಸಲ್ಯದ ಪುತ್ರ. ದಾನಪ್ಪನವರಿಗೆ ಬೈಲಹೊಂಗಲದ ಜವಳಿಯವರ ಸಿದ್ರಾಮಪ್ಪ - ಪಾರ್ವತೆವ್ವ ದಂಪತಿಗಳ ಪುತ್ರಿ ಸರ್ವಮಂಗಳಾ ದೇವಿಯನ್ನು ನಿಚ್ಚಯಿಸಿ ೨೪-೦೨-೧೯೩೨ರಂದು ಮದುವೆಯಾದರು ಸರ್ವಮಂಗಳಾದೇವಿ ಪತಿಗೆ ತಕ್ಕ ಸತಿಯಾಗಿ ಅವರ ಕೆಲಸ ಕಾರ್ಯಗಳಲ್ಲಿ ನೆರಳಿನಂತೆ ನೆರವಾಗುತ್ತ ಬಂದಳು. ಒಬ್ಬರ ಮನಸ್ಸನ್ನು ಒಬ್ಬರು ಅರಿತು ಬೆರೆತು ಅನ್ಯೋನ್ಯವಾಗಿ ಸಾಗಿದ ಸಂತೃಪ್ತ ಜೀವನ ಅವರದಾಗಿತ್ತು. ಎರಡನೇ ಮದುವೆಯಾದ ನಂತರವು ಮತ್ತೆ ಉನ್ನತ ವ್ಯಾಸಂಗಕ್ಕಾಗಿ ಮುಂಬೈ ಜೆ.ಜೆ.ಸ್ಕೂಲ್ ಆಫ್ ಫೈನ್ ಆರ್ಟ್‌ಗೆ ಸೇರಿದರು. ಹಾಲಭಾವಿಯವರಲ್ಲಿ ಕಲೆಗೆ ಇರುವ ಉತ್ಕಟ ಇಚ್ಛೆಯನ್ನು ಇಲ್ಲಿ ಗುರುತಿಸಬಹುದಾಗಿದೆ.[3]

೧೯೩೮ರಲ್ಲಿ ಮುಂಬೈನ ಜೆ.ಜೆ. ಸ್ಕೂಲ್ ಆಫ್ ಫೈನ್ ಆರ್ಟ್‌ನಿಂದ ಡ್ರಾಯಿಂಗ್ ಮತ್ತು ಪೇಂಟಿಂಗ ಡಿಪ್ಲೋಮಾ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಪಾಸಾದರು. ೧೯೩೯ರಲ್ಲಿ ಕಲಾಶಿಕ್ಷಣದ ಆರ್ಟ್ ಮಾಸ್ಟರ್ (ಎ.ಎಂ.) ಪದವಿ ಪರೀಕ್ಷೆಯನ್ನೂ ಮುಂಬೈ ಪ್ರಾಂತ್ಯದಲ್ಲಿಯೇ ಪ್ರಥಮ ಶ್ರೇಣಿಯಲ್ಲಿ ಪಾಸಾದರು.

ಕ್ಯಾಪ್ಟನ್ ಗ್ಲಾಡಸ್ಟನ್ ಸಾಲೊಮನ್ ಅವರು ವಿಶಾಲವಾದ ಸಾಂಸ್ಕೃತಿಕ ದೃಷ್ಟಿಯುಳ್ಳ ಪ್ರತಿಭಾವಂತ ಕಲಾವಿದರ ಕಲೆಯ ಬೀಡಾದ ಕರ್ನಾಟಕದ ಕಲಾವಿದರೇ ಶ್ರೇಷ್ಠ ಕಲಾ ಪರಿಣಿತರು ಎನ್ನುತ್ತಿದ್ದರು. ಅಷ್ಟೆ ಅಲ್ಲದೇ ದಿಲ್ಲಿಯ ರಾಷ್ಟ್ರಪತಿ ಭವನಗಳ ಗುಮ್ಮಟಗಳ ಮೇಲೆ ಚಿತ್ರಗಳನ್ನು ರಚಿಸಲು ಕನ್ನಡ ಕಲಾವಿದರ "ಸಪ್ತರಂಗದ ಗುಂಪಾದ" ಎಂ.ವ್ಹಿ. ಮಿಣಜಿಗಿ, ಡಿ.ಜಿ.ಬಡಿಗೇರ, ಎಂ.ಎ. ಚಟ್ಟಿ, ಅಮೀರ ಸಾಹೇಬ, ಕಮುಡೊಳ್ಳಿ, ಸಿ.ವಿ. ಕಾರಡಗಿ, ಶ್ರೀಶೈಲ ಮತ್ತು ಡಿ.ವಿ.ಹಾಲಭಾವಿ ಅವರನ್ನೆಲ್ಲಾ ಕರೆದೊಯ್ದರು.

ಕರ್ನಾಟಕದಲ್ಲಿ ಕಲಾ ಶಾಲೆ ಇಲ್ಲದನ್ನು ಕಂಡು ಕನ್ನಡದ ಹೆಮ್ಮೆಯ ಸಾಂಸ್ಕೃತಿಕ ಕೇಂದ್ರ ಸೌಂದರ್ಯದ ಸಂಪತ್ತು ಭರಿತ ನಾಡಾದ "ಧಾರವಾಡ" ಯೋಗ್ಯವೆಂದು ತಿಳಿದು ಮಾದರಿಯ ಕಲಾಶಾಲೆಯೊಂದನ್ನು ತಮ್ಮ ೨೮ನೇ ವಯಸ್ಸಿನಲ್ಲಿ ಆರ್.ಎಲ್.ಎಸ್. ಹೈಸ್ಕೂಲ್ ಡ್ರಾಯಿಂಗ್ ಹಾಲಿನಲ್ಲಿ ೧೯೩೫ ಜೂನ್ ೧೦ ರಂದು ಸ್ಥಾಪನೆ ಮಾಡಿದರು. ನಂತರ ೧೯೩೬ ಅಕ್ಟೋಬರ್‌ನಿಂದ ೧೯೩೯ ಜೂನ್ ವರೆಗೆ ವಿದ್ಯಾವರ್ಧಕ ಸಂಸ್ಥೆಯಲ್ಲಿ ನಡೆಸಿದರು. ನಂತರ ಸ್ವತಃ ಕಲಾ ಮಂದಿರ ಕಟ್ಟಡದ ರೂಪರೇಷಗಳನ್ನು ರಚಿಸಿ ಸ್ವಪ್ರಯತ್ನದಿಂದ ನಿಂತು ಕಟ್ಟಿಸಿದ ಕಟ್ಟಡದಲ್ಲಿ ೧೯೪೦ರಲ್ಲಿ ಆಗಿನ ಧಾರವಾಡ ಜಿಲ್ಲೆಯ ಕಲೆಕ್ಟರಾದ ಎ.ಎಂ. ಡಾಯಿಸ್ ಅವರ ಅಮೃತ ಹಸ್ತದಿಂದ ಉದ್ಘಾಟಿಸಲ್ಪಟ್ಟಿತು. ಕಲಾಶಾಲೆಯ ಆರಂಭದಲ್ಲಿಯೇ೧೦-೧೫ ವಿದ್ಯಾರ್ಥಿಗಳನ್ನು ಒಳಗೊಂಡಿತ್ತು. ಮುಂದೆ ಈ ಶಾಲೆಯು ದಿನದಿನಕ್ಕೆ ವಿಶಾಲವ್ಯಕ್ತವಾಗಿ ಬೆಳೆಯಿತು. ೧೯೬೦ರಲ್ಲಿ ಈ ಕಲಾಶಾಲೆಯು ಬೆಳ್ಳಿ ಹಬ್ಬವನ್ನು ವಿಜೃಂಜನೆಯಿಂದ ಆಚರಿಸಲಾಯಿತು. ಪದ್ಮಶ್ರೀ ಕೆ.ಕೆ.ಹೆಬ್ಬಾರ ಅವರು ಉತ್ಸವದ ಉದ್ಘಾಟನೆ ಮಾಡಿದರು. ಕೆ.ಯು.ಡಿ.ಯ. ಉಪಕುಲಪತಿಗಳಾದ ಶ್ರೀ ಡಾ. ಡಿ.ಸಿ.ಪಾವಟೆ ಅವರು ಅಧ್ಯಕ್ಷರಾಗಿದ್ದರು.[5]೧೯೫೨ರಲ್ಲಿ ಕರ್ನಾಟಕದಲ್ಲಿಯೇ ಪ್ರಥಮ ಬಾರಿಗೆ ಒಂದೇ ಒಂದು ಡ್ರಾಯಿಂಗ್ ಟೀಚರ್ಸ್ ತರಬೇತಿ ಕ್ಲಾಸ್‌ನ್ನು ಹಾಲಭಾವಿಯವರು ಪ್ರಾರಂಭಿಸಿದರು. ರಾಜ್ಯದಲ್ಲಿ ಕಲಾದೇಗುಲದ ಆಧಾರ ಸ್ತಂಭವಾಗಿ ಪ್ರಾಚಾರ್ಯರಾಗಿ ಕಲಾಯೋಗಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಬುದ್ದಿಜೀವಿಯ ತಂದೆಯ ಮಗನಾದ ದಾನಪ್ಪ ಭಾವಜೀವಿಗಳಾಗಿ ಬೆಳೆದರು.

ಹಾಲಭಾವಿಯವರ ಕಲಾಕೃತಿ ರಚನೆ

ಹಾಲಭಾವಿ ದಾನಪ್ಪನವರ ಚಿತ್ರಗಳು ತೈಲವರ್ಣ ಜಲವರ್ಣ ಅಲ್ಲದೇ ಪೆನ್ಸಿಲ್‌ನ ರೇಖಾಚಿತ್ರಗಳು ಚಾರ್‌ಕೋಲ್ ನಿಂದ ಮಾಡಿದ ಕಪ್ಪು ಬಿಳುಪು ಚಿತ್ರಗಳು ಹೀಗೆ ವಿವಿಧ ಮಾಧ್ಯಮಗಳಲ್ಲಿ ಚಿತ್ರಗಳು ಆಕಾರ ಪಡೆದಿವೆ. ಈ ಕಲಾಕೃತಿಗಳಲ್ಲಿ ಭಾವನೆಗಳ ಸಂಯಮವನ್ನು ತಮ್ಮ ರೇಖೆಗಳ ಬಲೆಯಲ್ಲಿ ಬಂದಿಸಿ ಜಗ್ಗಿದ ಚಿತ್ಕಾರ ಮಾಡಿದ್ದಾರೆ. ದಾನಪ್ಪನವರು ವಸ್ತು ನಿಷ್ಠ ಚಿತ್ರಗಳೇ ಇವರ ಕಲಾಕೃತಿಗಳ ಯಶಸ್ಸಿನ ಗುಟ್ಟು ರಮ್ಯತೆಯಲ್ಲಿಯೂ ನಿಗೂಢತೆಯನ್ನು ಮೈಗೂಡಿಸಿಕೊಂಡು ಪ್ರಕೃತಿಯ ಒಳಹೊರಗನ್ನು ಅರಿಯುವ

ಕುತೂಹಲ ಪ್ರಿಯ ಕಲಾವಿದ ಹಾಲಭಾವಿ ಇವರಿಗೆ ವ್ಯಕ್ತಿಚಿತ್ರಗಳನ್ನು ತೆಗೆಯುವುದೆಂದರೆ ತುಂಬಾ ಆಸಕ್ತಿ ಇವರ ದ್ವಿತೀಯ ಪ್ರಾಶಸ್ತ್ಯ ನಿಸರ್ಗದ ರಮಣೀಯ ದೃಶ್ಯಗಳನ್ನು ಕುಂಚದಲ್ಲಿ ಸೆರೆಹಿಡಿಯುವುದು.[೮]

ಇವರು ಹಲವಾರು ಚಿತ್ರಗಳನ್ನು ವ್ಯಕ್ತಿಗತವಾಗಿ ಗ್ರಂಥಗಳಾಗಿ, ಸಮಾಜಿಕ, ಮಠ, ಮಂದಿರ, ಮಸೀದಿ ಮುಂತಾದ ದೇವಮಂದಿರಗಳಿಗಾಗಿ ವಾಣಿಜ್ಯ ವೃತ್ತಿಗಳಾಗಿ, ಐತಿಹಾಸಿಕ, ಧಾರ್ಮಿಕ, ಕಾರ್ಯಗಳಿಂದಾಗಿ, ಜನಪದ ವಿಷಯಗಳಿಗಾಗಿ ಚಿತ್ರಿಸಿಕೊಟ್ಟಿದ್ದಾರೆ. ಇವರು ಚಿತ್ರಿಸಿದ ಕಲಾಕೃತಿಗಳು ಸುಮಾರು ೬೦೦೦ದಷ್ಟು ಎಂದು ಅಂದಾಜಿಸಲಾಗಿದೆ.[೯]

ಧಾರ್ಮಿಕ ಶರಣರ ಚಿತ್ರಗಳಾದ ಪ್ರಭುಲಿಂಗ ಲೀಲೆ, ಶಂಕರದಾಸಿಮಯ್ಯ, ಗೋರಕನಾಥ, ಬಸವೇಶ್ವರರು, ವಾಕ್‌ಯುದ್ಧ, ಭಕ್ತರು, ಶರಣ ಸಿದ್ದರು, ದೇವತೆಗಳು, ಶಿವಪಾರ್ವತಿಯರು, ರಾಜ ಲಖಮಣಗೌಡರು, ಮಹಾತ್ಮ ಗಾಂಧೀಜಿ, ಉಪ ರಾಷ್ಟ್ರಪತಿ ಬಿ.ಡಿ.ಜತ್ತಿ, ಡೆಪ್ಯೂಟಿ ಚನ್ನಬಸಪ್ಪ, ಶ್ರೀನಿವಾಸ ರೊದ್ದಿ, ಧಾರವಾಡದ ಉಪ ಕುಲಪತಿ ಹಾಗೂ ಪಂಜಾಬ್ ಗೌರ್ವನರ್ ಡಾ. ಡಿ.ಸಿ.ಪಾವಟೆ, ಬಸವರಾಜ ರಾಜಗುರು, ಡಾ. ಭೀಮಸೇನ ಜೋಶಿ, ಡಾ. ಗಂಗೂಬಾಯಿ ಹಾನಗಲ್ ಹೀಗೆ ಅನೇಕ ಮಹಾನ್ ವ್ಯಕ್ತಿಗಳ ಭಾವಚಿತ್ರಗಳು ವ್ಯಕ್ತಿ ಚಿತ್ರಣ ಮಾಡುವಲ್ಲಿ ಪ್ರತಿಯೊಂದು ಸ್ವಂತಿಕೆ ಸೆಳಕು ತೋರಿಸದೇ ಬಿಟ್ಟವರಲ್ಲ ಹಾಲಭಾವಿಯವರು ಜೀವಂತ ಮಾದರಿಗಳನ್ನು ಎದುರಿಗೆ ಇರಿಸಿಕೊಂಡೆ ವ್ಯಕ್ತಿಚಿತ್ರಣ ಕಲಾಕೃತಿಗಳಿಗೆ ಜೀವ ತುಂಬಿದ್ದಾರೆ. ಇವರ ಭಾವಚಿತ್ರ ಪೂರ್ಣ ಭಾವಚಿತ್ರಗಳು ಮುಂತಾದ ಕಲಾಕೃತಿಗಳಲ್ಲಿ ಭಾವನೆಗಳ ಸಂಯಮವನ್ನೂ ತಮ್ಮ ರೇಖೆಗಳ ಬಲೆಯಲ್ಲಿ ಬಂಧಿಸಿ ಬಣ್ಣದ ಬಿರುಸನ್ನು ಮೂಡಿಸಿದ್ದಾರೆ. ಯಥವತ್ತಾದ ವಸ್ತುನಿಷ್ಟ ಚಿತ್ರಣವೇ ಇವರ ಕಲಾಕೃತಿಗಳ ಯಶಸ್ಸಿನ ಗುಟ್ಟು.[೧೦]

ಚಿತ್ರಕಲಾ ಶಿಕ್ಷಕರಾಗಿ ಡಿ.ವಿ.ಹಾಲಾಭಾವಿಯವರು

ಕಲೆ ಬರಿಯ ಅಲಂಕರಣ ಸಾಮಾಗ್ರಿಯಲ್ಲಾ ಗೋಡೆಯ ಚಂದಕ್ಕೆ ತೂಗಿಸುವ ಚಿತ್ರಪಟವಲ್ಲ, ರಮಣೀಯ ಕಥನಕವು ಅಲ್ಲ ಮನೋಹರ ದೃಶ್ಯಾವಳಿಯು ಅಲ್ಲ ಅದು ನಮ್ಮ ಭಾವನೆಗಳನ್ನು ಎಚ್ಚರಿಸಬೇಕು, ಕೆರಳಿಸಬೇಕು, ವ್ಯಕ್ತಿತ್ವವನ್ನು ಎತ್ತರಿಸಬೇಕು ಅರಳಿಸಬೇಕು. ಈ ವಾಕ್ಯದ ಅರ್ಥವನ್ನು ಅಕ್ಷರಶಃ ದಾನಪ್ಪ ಹಾಲಭಾವಿಯವರು ಪಾಲಿಸಿದ್ದಾರೆ.

೧೯೧೭ರಲ್ಲಿ ಎಲಿಮೆಂಟರಿ ಡ್ರಾಯಿಂಗ್ ಗ್ರೇಡ್ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಇಂಟರ್‌ಮಿಡಿಯೆಟ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆ ಬೆಳಗಾವಿಯಿಂದ ಉಚ್ಚಶ್ರೇಣಿಯಲ್ಲಿ ಪಾಸಾದರು. ಇವರಿಗೆ ಚಿತ್ರಕಲೆಯಲ್ಲಿ ಇದ್ದಅಪಾರ ಆಸಕ್ತಿ ಮತ್ತು ಅಗಾಧವಾದ ಕಲಾಪ್ರತಿಭೆಯನ್ನು ಕಂಡು ಚಿಕ್ಕೋಡಿಯ ಜಿ.ಡಿ.ಎ.ಪಿ. ಸಂಸ್ಥೆಯವರು ತಮ್ಮ ಸ್ಕೂಲಿನಲ್ಲಿ ಇವರನ್ನು ಚಿತ್ರಕಲಾಶಿಕ್ಷಕರನ್ನಾಗಿ ನೇಮಿಸಿಕೊಂಡರು. ಇದೇ ವೇಳೆಯಲ್ಲಿ ಅವರ ಕುಟುಂಬ ವರ್ಗದವರು ಮಗನಿಗೆ ನೋಕರಿಸಿಕ್ಕ ಸಂತೋಷದ ಸಂದರ್ಭದಲ್ಲಿ ಮದುವೆ ಮಾಡಲು ನಿಶ್ಚಯಿಸಿದರು. ಆಗಿನ್ನು ದಾನಪ್ಪ ಹಾಲಭಾವಿ ಯವರಿಗೆ ೧೭ನೇ ವಯಸು ಕುಟುಂಬದ

ನಿರ್ಣಂವಕ್ಕೆ ತಲೆಬಾಗಿ ಅಕ್ಕೊಳದ ನೆಲಗೆ ಮನೆತನದ ನರ್ಮದಳೊಡನೆ ೧೯೨೪ರಲ್ಲಿ ಇವರ ವಿವಾಹವಾಯಿತು.[೮]

ಹಾಲಭಾವಿಯವರು ಚಿಕ್ಕೋಡಿಯಲ್ಲಿ ೨ವರ್ಷ ಚಿತ್ರಕಲಾ ಶಿಕ್ಷಕರಾಗಿ ಸೇವೆಮಾಡಿ ಅನೇಕ ವಿದ್ಯಾರ್ಥಿಗಳಿಗೆ ಚಿತ್ರಕಲಾ ಮಾರ್ಗದರ್ಶನ ಮಾಡಿದರು. ತದನಂತರ ಇನ್ನು ಮುಂದೆ ಚಿತ್ರಕಲೆಯಲ್ಲಿ ಹೆಚ್ಚಿನ ವ್ಯಾಸಂಗ ಮಾಡಬೇಕು ಎನ್ನುವ ಹಂಬಲದಿಂದ ಉನ್ನತ ಕಲಾಶಿಕ್ಷಣ ಪಡೆಯಲು ಮುಂಬೈಗೆ ತೆರಳಿದರು. ಅಲ್ಲಿ ಪ್ರತಿಷ್ಠಿತ ಚಿತ್ರಕಲಾ ಶಾಲೆಯಾದ ಜೆ.ಜೆ.ಸ್ಕೂಲ್ ಆಫ್ ಆರ್ಟಗೆ ಸೇರಿದರು. ಅಲ್ಲಿ ೧೯೨೭ – ೨೮ ರಲ್ಲಿ ಚಿತ್ರಕಲಾ ಶಿಕ್ಷಕರ ತರಬೇತಿ (ಡಿ.ಟಿ.ಸಿ) ಪಡೆದು ಸ್ವಕ್ಷೇತ್ರಕ್ಕೆ ಮರಳಿದರು. ೧೯೨೮ರಲ್ಲಿ ಮತ್ತೆ ನಿಪ್ಪಾಣಿ ಮುನಿಸಿಪಲ್ ಹೈಸ್ಕೂಲನಲ್ಲಿ ೬ ತಿಂಗಳು ಕಾಲ ಚಿತ್ರಕಲಾ ಶಿಕ್ಷಕರಾಗಿ ಸೇವೆ ಮಾಡಿದರು. ಅನೇಕ ವಿದ್ಯಾರ್ಥಿಗಳಿಗೆ ಕಲೆಯ ಮಾರ್ಗವನ್ನು ಹಾಗೂ ಧಾರ್ಮಿಕ ಸನ್ನಿವೇಶಗಳ ಚಿತ್ರಗಳನ್ನು ರಚಿಸಿದ್ದಾರೆ.[೯]

ಭಾವಚಿತ್ರ–೧

ಡಿ.ವಿ. ಹಾಲಭಾವಿಯವರ ಹಲವಾರು ವ್ಯಕ್ತಿಗಳ ಭಾವನೆಗಳಲ್ಲಿ ತಮ್ಮ ನೈಜಕತೆಯನ್ನು ವ್ಯಕ್ತಿ ಚಿತ್ರದಲ್ಲಿ ಹತ್ತಿರ ಹೋಗಿ ಆಕಾರ, ಆಳತೆ, ಪ್ರಮಾಣ ಬಣ್ಣಗಳ ಸಾಂದ್ರತೆಯನ್ನು ವಿಭಿನ್ನವಾಗಿ ವೀಕ್ಷೀಸಿ ಚಿತ್ರ ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಭಾವಚಿತ್ರದಲ್ಲಿ ಗೋಧಿ ಬಣ್ಣದ ವ್ಯಕ್ತಿ ಮತ್ತು ನೀಲಿ ವರ್ಣದ ಕೋಟ ಹಾಗೂ ಟಾಯ್ ಬಿಳಿ ವರ್ಣದ ಶರ್ಟ್ ಇಡಿ ಕಲಾಕೃತಿಯ ಸಂಯೋಜನೆಯಾಗಿ ಕಂಡರೆ ವರ್ಣಗಳಲ್ಲಿಯೇ ನೆರಳು ಬೆಳಕನ್ನು ತೋರಿಸಿ ರೂಪದರ್ಶಿಯ ನೈಜತೆ ಎದ್ದು ಕಾಣುತ್ತದೆ.

ಭಾವಚಿತ್ರ–೨

ಇದೊಂದು ಮಹಿಳೆಯ ಭಾವಚಿತ್ರ ಇಲ್ಲಿ ವರ್ಣಗಳ ಲೇಪನ ಅತ್ಯಂತ ಸೌಂದರ್ಯಾತ್ಮಕವಾಗಿ ಸೂಕ್ಷ್ಮತೆಯ ವರ್ಣಗಳನ್ನು ಮುಖದ ಮೇಲೆ ಕುಂಚದ ಮೂಲಕ ಲೇಪಿಸಿದ್ದಾರೆ. ಈ ಯುವತಿ ಅತ್ಯಂತ ಆಲೋಚನದಲ್ಲಿ ಮಗ್ನಳಾಗಿ ಜೀವನದಲ್ಲಿ ನೊಂದಿರುವ ಭಾವನೆ ವ್ಯಕ್ತವಾಗಿ ಆಧುನಿಕ ಸ್ತ್ರೀಯತೆ ತಲೆ ಕೇಶರಾಶಿಗಳಿದ್ದರು ನೊಂದ ಮನಸ್ಸಿನ ಭಾವನೆ ಮುಖದಲ್ಲಿ ಎದ್ದುಕಾಣುತ್ತಿತ್ತು. ರೂಪದರ್ಶಿಯ ನೆರಳು–ಬೆಳಕಿನ ಛಾಯೆಯನ್ನು ಬಣ್ಣಗಳ ಮೂಲಕ ಚೈತನ್ಯ ತುಂಬಿ ಸುಂದರಗೊಳಿಸಿದೆ.

ಭಾವಚಿತ್ರ–೩.

೧೯೩೭ರಲ್ಲಿ ತೈಲವರ್ಣದ ಭಾವಚಿತ್ರ ನೋಡಿದರೆ ಉತ್ತರ ಕರ್ನಾಟಕದ ಮಹಿಳೆ ಎಂಬುದು ಸ್ಪಷ್ಟತೆ ಇದೊಂದು ಫೋಟೋದ ಛಾಯಚಿತ್ರದ ಪ್ರತಿಯನ್ನು ನೋಡಿ ಭಾವಚಿತ್ರ ಅನಿಸಿದರೂ ಕೂಡಾ ಮಹಿಳೆಯ ಮುಖದ ಮುಗ್ಧತೆ, ಕಣ್ಣುಗಳಲ್ಲಿ ಕಾಣುವ ಸೂಕ್ಷ್ಮತೆ ಕುಂಚದ ಎಳೆತದ ಸೆಳೆತಗಳೂ ಆಭರಣಗಳ ನೈಜತೆ ಹತ್ತಿರ ಹೋಗಿ ರೂಪದರ್ಶಿಯ ಭಾವ ಲಕ್ಷಣಗಳನ್ನು ಚಿತ್ರದಲ್ಲಿ ನಿರೂಪಿಸಿದ್ದಾರೆ. ವರ್ಣಚಿತ್ರಗಳ ಕಲಾ

ನೈಸರ್ಗಿಕತೆಯನ್ನು ಹಾಗೂ ಉತ್ತರ ಕರ್ನಾಟಕದ ಮಹಿಳೆ ಎಂಬ ಸ್ಪಷ್ಟವಾಗಿ ಗುರುತಿಸುವ ಸೃಜತೆ ಈ ತೈಲವರ್ಣವಲ್ಲಿ ಕಾಣಬಹುದು.

ಭಾವಚಿತ್ರ-೪

೧೯೫೭ರಲ್ಲಿ ತೈಲವರ್ಣದ ಭಾವಚಿತ್ರ ಒಂದು ವಿಭಿನ್ನ ಪ್ರಯೋಗದ ಭಾವಚಿತ್ರ ಲಕ್ಷಣಗಳು ಕಾಣುತ್ತವೆ. ರೂಪದರ್ಶಿಯ ವಯಸ್ಸಿನ ಮಿತಿ ಗುರುತಿಸಬಹುದು. ಭಾವಚಿತ್ರದ ಭಾವ ಬಂಗಿ ಮತ್ತು ವರ್ಣಗಳ ಮಿಶ್ರಿತ ಹಾಗೂ ಲೇಪಿಸಿದ ಸರಿ ಅವರ ಶೈಲಿ ತಂತ್ರದ ಹೊಸತನದು ಕಲಾಕೃತಿಯಲ್ಲಿ ಮಹತ್ವ ಹೆಚ್ಚಾಗುತ್ತದೆ. ಅದು ಹೆಚ್ಚು ಸೌಂದರ್ಯಗತವಾಗಿ ಮೂಡಿಬಂದಿದೆ.

ಈ ಭಾವಚಿತ್ರದಲ್ಲಿ ಡಿ.ವಿ. ಹಾಲಭಾವಿಯವರು ಕುಂಚಗಳನ್ನು ಬಳಸುವ ತಂತ್ರ ರೂಪದರ್ಶಿಯ ಉಬ್ಬು ತಗ್ಗುನಲ್ಲಿ ನೆರಳು ಬೆಳಕು, ಪ್ರಮಾಣ ಬದ್ಧತೆಯಲ್ಲಿ ಚಿತ್ರಿಸಿದ್ದಾರೆ. ಮನೆಯ ಯಜಮಾನನು ರೇಷ್ಮೆ ಪಟಗಾ ಸುತ್ತಿಕೊಂಡು ಕೋಟು ಧರಿಸಿದ ಸಂಪ್ರದಾಯ ಉಡುಪನ್ನು ಹಾಲಭಾವಿಯವರು ಸೃಜತೆ ರೂಪಿಸಿದ್ದಾರೆ. ರೂಪದರ್ಶಿಯ ಹಿಂದುಗಡೆ ನೀಲಿ ಹಳದಿ ಮಿಶ್ರಣ ಭಾವಚಿತ್ರಕ್ಕೆ ಹೆಚ್ಚು ಪೂರಕವಾಗಿ ನೋಡುಗರಿಗೆ ಸೌಂದರ್ಯದ ರಸಾನುಭವ ನೀಡುವಲ್ಲಿ ಯಶಸ್ವಿಯಾಗಿದೆ
ನಿರಂತರವಾಗಿ 4ದಶಕದ ಸೇವೆ ಸಲ್ಲಿಸಿದ ಪರಂಪರೆಯನ್ನೆ ಸೃಷ್ಟಿಸಿದ ದಾನಪ್ಪ ಹಾಲಭಾವಿಯವರಿಗೆ ಸರಕಾರದ ಹಲವು ಪ್ರತಿಷ್ಟ ಗೌರವ ಪ್ರಶಸ್ತಿಗಳನ್ನು ಲಭಿಸಿ ಸನ್ಮಾನ ಸ್ವೀಕಾರ ಕೀರ್ತಿಗೆ ಪಾತ್ರರಾಗಿದ್ದಾರೆ.

ಅಡಿ ಟಿಪ್ಪಣಿ

ಚಿತ್ರಾಕ್ಷಿ: ಸಂ.ಸೆ. ಡಾ. ಎಸ್.ಸಿ. ಪಾಟೀಲ. ಪುಟ-೩

೧. ಚಿತ್ರಾಕ್ಷಿ: ಸಂ.ಸೆ. ಡಾ. ಎಸ್.ಸಿ. ಪಾಟೀಲ. ಪುಟ-೨೮

೨. ಚಿತ್ರಾಕ್ಷಿ: ಸಂ.ಸೆ. ಡಾ. ಎಸ್.ಸಿ. ಪಾಟೀಲ. ಪುಟ-೨೦

೩. ಚಿತ್ರಕಲಾವಿದ ಡಿ.ವಿ.ಹಾಲಭಾವಿ ಜೀವನ ಮತ್ತು ಕಲಾಬದುಕು:
ಶಂಕರ ಕುಂದಗೋಳ.ಪುಟ-೧೬-೧೭

೪. ಚಿತ್ರಾಕ್ಷಿ: ಸಂ.ಸೆ. ಡಾ. ಎಸ್.ಸಿ. ಪಾಟೀಲ. ಪುಟ-೨೯

೫. ಚಿತ್ರಕಲಾವಿದ ಡಿ.ವಿ.ಹಾಲಭಾವಿ ಜೀವನ ಮತ್ತು ಕಲಾಬದುಕು:
ಶಂಕರ ಕುಂದಗೋಳ. ಪುಟ-೫೧

೬. ಚಿತ್ರಕಲಾವಿದ ಡಿ.ವಿ.ಹಾಲಭಾವಿ ಜೀವನ ಮತ್ತು ಕಲಾಬದುಕು:
ಶಂಕರ ಕುಂದಗೋಳ.ಪುಟ-೫೨

೭. ಚಿತ್ರಕಲಾವಿದ ಡಿ.ವಿ.ಹಾಲಭಾವಿ ಜೀವನ ಮತ್ತು ಕಲಾಬದುಕು:
ಶಂಕರ ಕುಂದಗೋಳ.ಪುಟ-೧೭

೮. ಚಿತಕಲಾವಿದ ಡಿ.ವಿ.ಹಾಲಭಾವಿ ಜೀವನ ಮತ್ತು ಕಲಾಬದುಕು:
ಶಂಕರ ಕುಂದಗೋಳ:ಪುಟ-೫೨
[illegible] ಅಂತರ್ಜಾಲ



ಭಾವಚಿತ್ರ ೧

ಭಾವಚಿತ್ರ ೨



ಡಿ.ವಿ.ಹಾಲಭಾವಿ, ಅವರ ಭಾವಚಿತ್ರಗಳು



ಭಾವಚಿತ್ರ ೩

ಭಾವಚಿತ್ರ ೪





ಶಂಕರ್‌ಗೌಡ ಬೆಟ್ಟದೂರ್



ಪಾಶ್ಚಾತ್ಯ ಕಲೆಯ ಅಬ್ಬರದ ಪ್ರಚಾರ ಪ್ರಭಾವ ಮತ್ತು ಕಲಾಶಿಕ್ಷಣದಿಂದಾಗಿ ಭಾರತೀಯ ಕಲೆಯು ಅವನತಿಯತ್ತ ಹೋಗುವ ಸಂದರ್ಭದಲ್ಲಿ ಭಾರತೀಯತೆಯನ್ನು ಉಳಿಸಿಕೊಳ್ಳುವ ದೆಸೆಯಲ್ಲಿ ಭಾರತದಲ್ಲಿ ನಡೆದ ದೊಡ್ಡ ಕಲಾಚಳುವಳಿಯೆಂದರೆ "ಬಂಗಾಲದ ಪುನರುಜ್ಜೀವನ ಕಲಾಪಂಥ" ಠಾಗೂರರ ಮನೆಯಲ್ಲಿ ಹುಟ್ಟಿದ ಈ ಬಂಗಾಲಿ ಕಲಾಶೈಲಿ ನಮ್ಮ ದೇಶದ ಸಂಸ್ಕೃತಿ ಪರಂಪರೆಯನ್ನು ಉಳಿಸಿಕೊಳ್ಳುವ ಮತ್ತು ಅದನ್ನು ವಿಶ್ವದ ಜನತೆಗೆ ಪರಿಚಯಿಸುವ ಮಹಾನ್ ಉದ್ದೇಶ ಹೊಂದಿತ್ತು. ಕಲಾಚಳುವಳಿಯಲ್ಲಿ ಅನೇಕ ಜನ ಬಂಗಾಲಿ ಕಲಾವಿದರೊಂದಿಗೆ ಕರ್ನಾಟಕದ ಇಬ್ಬರೂ ಶ್ರೇಷ್ಠ ಕಲಾವಿದರು ತಮ್ಮದೇ ಆದ ಕೊಡುಗೆಯನ್ನು ಈ ಸ್ವದೇಶಿ ಕಲಾಚಳುವಳಿಗೆಗೆ ನೀಡಿದ್ದಾರೆ. ಎಂಬುದು ಬಹಳಷ್ಟು ಜನರಿಗೆ ಗೊತ್ತಿಲ್ಲ. ಅವರಲ್ಲಿ ಕಲಾವಿದ ಕೆ.ವೆಂಕಟಪ್ಪ ಇನ್ನೊಬ್ಬರು ರಾಯಚೂರ ಜಿಲ್ಲೆಯ ಮಾನ್ವಿ ತಾಲೂಕಿನ ಬೆಟ್ಟದೂರು ಗ್ರಾಮದ ಹಿರಿಯ ಕಲಾವಿದ ಶಂಕರಗೌಡ ಬೆಟ್ಟದೂರ.[1]

ರಾಯಚೂರ ಜಿಲ್ಲೆಯಿಂದ ಸುಮಾರು ೩೫ ಕಿ.ಮಿ. ದೂರದಲ್ಲಿರುವ ಬೆಟ್ಟದೂರು ಎಂಬ ಗ್ರಾಮದ ಬಸವಣ್ಣಗೌಡ ಪಾಟೀಲ ಮತ್ತು ನೀಲಮ್ಮ ದಂಪತಿಗಳಿಗೆ ಇಬ್ಬರು ಮಕ್ಕಳು. ಅದರಲ್ಲಿ ೧೪ನೇ ಏಪ್ರೀಲ್ ೧೯೩೮ರಂದು ೨ನೇ ಮಗನಾಗಿ ಜನಿಸಿದರು. ೧೯೪೦ರಲ್ಲಿ ಪ್ರಾಥಮಿಕ ಶಿಕ್ಷಣ ಪಕ್ಕದ ಊರಾದ ನೀರಮಾನ್ವಿಯಲ್ಲಿ ಪ್ರಾರಂಭಗೊಂಡಿತು. ಈ ಪ್ರದೇಶವೆ ಬೆಟ್ಟದೂರ ಅವರಲ್ಲಿ ಕಲಾಪ್ರೇರಣೆಯನ್ನು ಹುಟ್ಟಿಸಿತು ಎನ್ನಬಹುದು. ಇಲ್ಲಿ ಕಲ್ಲು ಬಂಡೆಗಳು ಜೀವಂತ ಪ್ರಾಣಿಗಳು ಹಾಗೂ ಪ್ರಕೃತಿಯ ಸೊಬಗು ಅವರಲ್ಲಿ ಅಪಾರವಾದ ಪರಿಣಾಮವನ್ನು ಬೀರಿತು. ಬೆಟ್ಟದೂರರು ಮೂರನೇಯ ತರಗತಿಯವರೆಗೆ ಓದಿದ ನಂತರ ಒಂದು ವರ್ಷದ ವಿರಾಮ ತೆಗೆದುಕೊಂಡರು. ನಂತರ ೧೯೪೩ರಲ್ಲಿ ತಾವೇ ಖುದ್ದಾಗಿ ಮಾನ್ವಿಯ ಸರಕಾರಿ ಶಾಲೆಯೊಂದರಲ್ಲಿ ಪ್ರವೇಶ ಪಡೆದು ವಿದ್ಯಾಭ್ಯಾಸ ಮಾಡಲು ಆಸಕ್ತಿಯನ್ನು ತೋರಿದಸಿದರು.[2]

ಕಲಾ ಶಿಕ್ಷಣ

ಬೆಟ್ಟದೂರರಿಗೆ ೧೪ವರ್ಷ ತುಂಬಿದ ನಂತರ ಚಿತ್ರಕಲೆಯಲ್ಲಿ ಮತ್ತಷ್ಟು ಆಸಕ್ತಿ ಹಾಗೂ ಒಲವುಗಳು ಅಧಿಕವಾಗಿತು. ಕಲೆಯಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲು ಅಂದಿನ ದಿನದಲ್ಲಿ ಹೈದ್ರಾಬಾದನಲ್ಲಿ ಕಲಾಶಿಕ್ಷಣದ ಇಂಟರ್‌ಮಿಡಿಯೇಟ್ ಡ್ರಾಯಿಂಗ್ ಪರೀಕ್ಷೆಗಳು ನಡೆಯುತ್ತಿದ್ದವು ಅಲ್ಲಿ ಅವರು ಹಿರಿಯ ಸಹೋದರರು ಸಹ ಚಿತ್ರಕಲೆಯನ್ನೆ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಅವರ ಸಹಾಯ ಮತ್ತು ಸಹಕಾರದಿಂದ ಬೆಟ್ಟದೂರರು ಅವರು ಹೈದ್ರಾಬಾದನಲ್ಲಿ ಆ ಪರೀಕ್ಷೆಯನ್ನು ಬರೆದರು. ಅಣ್ಣನ ಕಲಾಕೃತಿಗಳು ಅವರಿಗೆ ಮತ್ತಷ್ಟು ಪ್ರೇರಣೆಯನ್ನು ನೀಡಿದವು. ದಿನಪತ್ರಿಕೆ ವಾರಪತ್ರಿಕೆಗಳಲ್ಲಿ ಬರುವ ಚಿತ್ರಗಳನ್ನು ನಕಲು ಮಾಡಲು ಪ್ರಾರಂಭಿಸಿದರು. ಈ ಆಸಕ್ತಿಗಳೇ ಮುಂದೆ ಬೆಟ್ಟದೂರರನ್ನು ದೊಡ್ಡ ಕಲಾವಿದರನ್ನಾಗಿಸಿದವು.

ಚಿತ್ರಕಲೆಯಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಲು ಮುಂಬೈನ ಎಲಿಮೆಂಟರ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಯನ್ನು ತೆಗೆದುಕೊಂಡರು. ಇಲ್ಲಿ ಬಸವರಾಜ ಹರವಲಿ ಮಾರ್ಗದರ್ಶಕರಾಗಿದ್ದರು. ಪರೀಕ್ಷೆಯಲ್ಲಿ ಚಿತ್ರಕಲೆಯ ವಿಷಯ ತಿಳಿಸಿ ಚಿತ್ರಬರೆಸುತ್ತಾರೆ. ಈ ಕಲಾಗುರುಗಳ ಸಹಾಯದಿಂದಾಗಿ ಮದ್ರಾಸಿನ ಕಲಾಶಾಲೆಯ ಪರೀಕ್ಷೆಗೆ ೧೯೪೪-೧೯೪೫ರಲ್ಲಿ ಕುಳಿತುಕೊಳ್ಳುವ ಅವಕಾಶ ಸಿಕ್ಕಿತು. ಈ ಪರೀಕ್ಷೆಯಲ್ಲಿ ವಿಷಯಗಳಾಗಿ ಭೂದೃಶ್ಯ, ಪೇಂಟಿಂಗ್, ಡಿಸೈನ್, ವಸ್ತುಚಿತ್ರಣ, ಸ್ಮರಣ ಚಿತ್ರಣ ಹೀಗೆ ಹಲವಾರು ವಿಷಯಗಳಿದ್ದವು. ಈ ಪರೀಕ್ಷೆಯ ಕೇಂದ್ರ ಬಳ್ಳಾರಿಯಾಗಿತ್ತು. ಇಂತಹ ಸಂದರ್ಭಗಳಲ್ಲಿ ಇವರಿಗೆ ರವೀಂದ್ರನಾಥ ಠ್ಯಾಗೂರರ ಬಗ್ಗೆ ಹಾಗೂ ಅವರು ಸ್ಥಾಪಿಸಿದ ಶಾಂತಿನಿಕೇತನ ಸಂಸ್ಥೆಯ ವಿಚಾರಗಳು ಇವರಿಗೆ ತಿಳಿಯಿತು ೮ನೇ ತರಗತಿಯಲ್ಲಿ ಅನುತ್ತೀರ್ಣರಾಗುತ್ತಾರೆ.ನಂತರ ಪೂರ್ಣವಾಗಿ ಇವರು ಚಿತ್ರಕಲೆಯನ್ನೆ ಅಭ್ಯಾಸ ಮಾಡಲು ಪ್ರಾರಂಭಿಸುತ್ತಾರೆ.[೨]

ರಾಯಚೂರಿನ ಸರಕಾರಿ ಶಾಲೆಯ ಡ್ರಾಯಿಂಗ್ ಶಿಕ್ಷಕರು ಗೌಡರನ್ನು ಕರೆದುಕೊಂಡು ನನ್ನು ಡ್ರಾಯಿಂಗ್ ಕ್ಲಾಸಿಗೆ ಬಾ ಎಂದು ಕೇಳಿಕೊಂಡರು. ಅದರಂತೆ ಕಲಾ ಅಭ್ಯಾಸವನ್ನು ಮಾಡಿದರು. ನಂತರ ಈ ಕಲಾ ಶಾಲೆಗೆ ಒಂದು ಕಾರ್ಯಕ್ರಮಕ್ಕಾಗಿ ಸರ್. ಮಿರ್ಜಿ. ಇಸ್ಮಾಯಿಲ್ ಅವರು ಬಂದಿದ್ದರು. ಇವರ ಭಾವಚಿತ್ರವನ್ನು ಗೌಡರು ರಚಿಸಿದರು. "ಈ ಭಾವಚಿತ್ರಕ್ಕೆ ಡ್ರಾಯಿಂಗ್ ಶಿಕ್ಷಕರು ತಮ್ಮ ಹೆಸರು ಹಾಕಿ ತಾವೇ ರಚಿಸಿದ್ದೇನೆ ಎಂದು ಹೆಸರು ಗಳಿಸಲು ಮಂತ್ರಿಯವರಿಗೆ ಕಾಣಿಕೆ ನೀಡಲು ಮುಂದಾದರು ಕೊನೆಗೆ ಸಮಾರಂಭದಲ್ಲಿ ಎಲ್ಲಾ ಕಾರ್ಯಕ್ರಮವನ್ನು ಒದಗಿಸಿ ಚಿತ್ರಬಿಡುಸುವುದನ್ನು ಮಾತ್ರ ರದ್ದುಪಡಿಸಲಾಯಿತು. ೧೦ನೇ ತರಗತಿಗೆ ಗುಲಬರ್ಗಾ ಸರಕಾರಿ ಮಲ್ಟಿಪರ್ಪಸ ಹೈಸ್ಕೂಲಿನಲ್ಲಿ ಪ್ರವೇಶಪಡೆದರು. ಅಲ್ಲಿಯೂ ಸಹ ನಂದಲಾಲ್ ಬೋಸ್ ರವರ ಚಿತ್ರಗಳು ಈಸ್ಯಾನ್ಯ ಪತ್ರಿಕೆಗಳಲ್ಲಿ ಪ್ರಟವಾಗುತ್ತಿದ್ದವು. ಅವುಗಳನ್ನು ನೋಡಿ ಗೌಡರ ಗೆಳೆಯರಾದ ಶ್ರೀ ದೇವೆಂದ್ರ ಕುಮಾರ ಹಕಾರಿ ಮತ್ತು ಹೆಸರಾಂತ ಸಾಹಿತಿಯಾದ ಮುಖ್ಯ ಗುರುಗಳಾದ ವಿರೇಶ ಇವರೆಲ್ಲರೂ ಕಲಾಶಿಕ್ಷಣವನ್ನೂ ಮುಂದುವರೆಸೆಂದು ಹೇಳಿದರು. ಮನೆಯಲ್ಲಿ ಬಂಗಾಳಕ್ಕೆ ಹೋಗಲು ಕೇಳಿಕೊಂಡನು ಆದರೆ ತಂದೆಯವರು ಮದುವೆಗೆ ಒಪ್ಪಿಕೊಂಡರೆ ಮಾತ್ರ ಬಂಗಾಳಕ್ಕೆ ಕಳಿಸುತ್ತೇನೆ ಎಂದರು. ಈ ಮಾತಿಗೆ ಒಪ್ಪಿದ ಶಂಕರಲಿಂಗ ಗೌಡರು ಪಾರ್ವತಿ ಎಂಬುವವರೊಂದಿಗೆ ೧೯೫೦ರಲ್ಲಿ ತಮ್ಮ ಬಾಳ ಸಂಗಾತಿಯನ್ನಾಗಿ ಮಾಡಿಕೊಳ್ಳುತ್ತಾರೆ. ನಂತರ ಕಲಾಶಿಕ್ಷಣವನ್ನು ಪಡೆಯ ಅರ್ಜಿ ಹಾಕುತ್ತಾರೆ.

೧೯೫೧ರಲ್ಲಿ ಹಳೆಯ ವಿದ್ಯಾರ್ಥಿಗಳು ಶಿಫಾರಸು ಮಾಡಿದರೆ ಮಾತ್ರ ಪ್ರವೇಶ ನೀಡುತ್ತಿದ್ದರಿಂದ ಜಿಬ್ಬದೂರರಿಗೆ ಹೈದ್ರಾಬಾದ್ ಕಲಾಶಾಲೆಯ ಪ್ರಾಂಶುಪಾಲರಾದ ಮುಖರ್ಜಿಯವರು ಶಿಫಾರಸು ಮಾಡಿದರು. ಈ ರೀತಿಯಾಗಿ ಕಲಾಶಾಲೆಯಲ್ಲಿ ಪ್ರವೇಶ ಪಡೆದ ಇವರು ತರಗತಿಯಲ್ಲಿ ಕ್ರಾಫ್ಟ್ ವರ್ಕ್. ಕೈಬೀತಿಯ ಕಲಾಕೃತಿಗಳು, ಸ್ಟಿಲ್ ಲೈಫ್, ಭಾವಚಿತ್ರಗಳು. ಲೆದರ್ ವರ್ಕ್. ಗ್ರಾಫಿಕ್ಸ್, ಮಾಡಲಿಂಗ್. ಜಪಾನೀಸ್ ಪೇಂಟಿಂಗ್ಸ್ ಇತ್ಯಾದಿ ಕಲಾಕೃತಿಗಳ ಕುರಿತು ಹೇಳಿಕೊಡುತ್ತಿದ್ದರು. ಶಾಂತಿನಿಕೇತನ ದಲ್ಲಿ ಇವರಿಗೆ

ಗುರುಗಳಾಗಿ ನಂದಲಾಲ್ ಬೋಸ್, ರಾಮಕಿಂಕರ್ ಬೈಜ್, ಹಾಗೂ ಕಲಾವಿದರು ಇವರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಬೆಟ್ಟದೂರರಿಗೆ ಸರಿಸುಮಾರು ೩೦ಜನ ಸಹಪಾಠಿಗಳಿದ್ದರು ಅವರಲ್ಲಿ ಗುಜರಾತಿನ್ ರಮೇಶ ಪಾಲೆಕ್, ಓರಿಸ್ಸಾ ವಿನೋದ ರಾವುತರಾಯ್ ಮುಂತಾದ ಕಲಾವಿದರು ಅವರಿಗೆ ಆತ್ಮೀಯರಾಗಿದ್ದರು. ಕಲಿಕಾ ಅವಧಿಯಲ್ಲಿ ಇವರು ನಾಲ್ಕು ವರ್ಷದಲ್ಲಿ ೪೦೦ಕ್ಕೂ ಹೆಚ್ಚು ಕಲಾಕೃತಿಗಳನ್ನು ರಚಿಸಿದರು. ಆದರೆ ಅವುಗಳು ಕಳುವಾದವು. ಭಾರತೀಯ ಜೀವನ ಶೈಲಿಯ ಜೊತೆಗೆ ಹಲವಾರು ಕಲಾಪ್ರಯೋಗ ಭಿತ್ತಿಚಿತ್ರ ರಚಿಸುವ ಫ್ರೆಸ್ಕೊ ವಿಧಾನ ಹಾಗೂ ಬಣ್ಣ ತಯಾರಿಕೆಯ ವಿಧಾನವನ್ನು ತಿಳಿದುಕೊಂಡು ಕಲಾಕೃತಿಗಳನ್ನು ರಚಿಸಿದರು. ಬೆಟ್ಟದೂರರಿಗೆ ಹೊಲದಲ್ಲಿ ತಮ್ಮ ನಿರ್ದಿಷ್ಟ ಚಿತ್ರದ ನಿರ್ದಿಷ್ಟ ಭಾಗಗಳನ್ನು ಅಲ್ಲಿನ ವಾಸ್ತವ ಪ್ರಪಂಚದಲ್ಲಿ ಗುರ್ತುಮಾಡಿ ತೋರಬಲ್ಲ ಜಾತಿ ಈ ಕಲಾವಿದರದ್ದು ಇಂತಹ ಭಾವವು ಇವರ ಕಲಾಕೃತಿಗಳಲ್ಲಿದೆ. ಅದು ನಿಸರ್ಗವಲ್ಲದ ವಸ್ತುಗಳನ್ನು ಚಿತ್ರಿಸಲಾದ ದೃಶ್ಯಗಳು ಇರಬಹುದು.

ನಿಸರ್ಗ ಚಿತ್ರಗಳನ್ನು ಬಿಟ್ಟರೆ ಅವರು ಹೆಚ್ಚಿಗೆ ರಚಿಸಿರುವುದು ವ್ಯಕ್ತಿ ಭಾವಚಿತ್ರಗಳನ್ನು ಸಹಪಾಠಿಗಳು, ಚಿಕ್ಕಮ್ಮ, ಅಣ್ಣ, ಮಾದರ ಚೆನ್ನಯ್ಯ, ಬಸವಣ್ಣ, ನೂಲಿಯ ಚಂದಯ್ಯ, ಗುಡುದೂರ ದೊಡ್ಡ ಬಸವಣ್ಣ, ತೈಲವರ್ಣ ಮಾಧ್ಯಮದಲ್ಲಿ ರಚಿತವಾಗಿರುವ ವೆಸ್ಟರ್ನ ರಿಯಾಲಿಸ್ಟಿಕ್ ಶೈಲಿಯ ನೆಹರು ಮತ್ತು ರಾಧಾಕೃಷ್ಣನ್ನರ ಚಿತ್ರಗಳು ಮುಂತಾದವುಗಳಲ್ಲಿ ಎದ್ದು ಕಾಣುತ್ತಿದ್ದವು. ಗುಣ ವಿಶೇಷವೆಂದರೆ ಜೀವಂತಿಕೆ ಮತ್ತು ತದ್ರೂಪತೆಗಳು, ಸಜೀವ ಮಾದರಿ ರೂಪದರ್ಶಿ ಬಳಸಿ ರಚಿಸಿರುವ ವ್ಯಕ್ತಿಭಾವ ಚಿತ್ರಗಳಲ್ಲಿ ಸಹಜ ಬಣ್ಣಗಳ ಜೊತೆಗೆ ಕೆಲವಡೆ ಕಲಾತ್ಮಕವಾದ ವಿವಿಧ ವರ್ಣ ಛಾಯೆಯನ್ನು ಬಳಸಿ ತ್ವಚೆ ಮತ್ತು ತಲೆಗೂದಲುಗಳನ್ನು ನಿರ್ವಹಿಸಿರುವುದು ಅವರ ಸೃಜನಶೀಲ ಮನಸ್ಸಿಗೆ ಕನ್ನಡಿ ಹಿಡಿದಿದೆ. ನೆಹರು, ರಾಧಾಕೃಷ್ಣರ ಭಾವಚಿತ್ರಗಳು ಪಾಶ್ಚಾತ್ಯ ರಿಯಾಲಿಸ್ಟಿಕ್ ಶೈಲಿಯ ತೈಲವರ್ಣ ಮಾಧ್ಯಮದ ಕೃತಿಗಳಲ್ಲಿ ಪ್ರಕಾರ ಮತ್ತು ಮೃದುವರ್ಣಗಳ ಮೇಳದಿಂದ ಸೌಮ್ಯ ವಾತಾವರಣದ ಪರಿಣಾಮ ನೀಡುವ ಕಲೆಗಾರಿಕೆಯನ್ನು ಪ್ರದರ್ಶಿಸಿದ್ದಾರೆ.

ಶಂಕರಗೌಡರ ಭಾವಚಿತ್ರಗಳು

ಯಾವ ಹೊಲದಲ್ಲಿ ಯಾವ ಕೈಗಳಿಂದ ವ್ಯವಸಾಯ ಮಾಡಿದರೊ ಅದೇ ಸ್ಥಳದಿಂದ ಅದೇ ಕೈಗಳಿಂದ ಅವರು ದೃಶ್ಯಕಲೆಯ ವಾಸ್ತವ ವಸ್ತುಗಳನ್ನು ತಮ್ಮ ಚಿತ್ರಗಳ ಮೂಲಕ ಮೂಡಿಸಿದ್ದಾರೆ. ಸಾಹಿತಿಗಳು " ಮಣ್ಣಿನ ವಾಸನೆ" ಎಂದೆನ್ನುವುದು ಇದೇನೇ ಇರಬಹುದು.

ಸ್ವಯಂ ಭಾವಚಿತ್ರ

೧೯೯೩ರಲ್ಲಿ ಪೆನ್ಸಿಲ್ ಹದಿಹರೆಯದಲ್ಲಿದ್ದಾಗ ಕನ್ನಡಿಯಲ್ಲಿನ ತಮ್ಮ ಪ್ರತಿಬಿಂಬ ನೋಡಿಕೊಳ್ಳುತ್ತ ತಮ್ಮನ್ನು ತಾವೇ ಚಿತ್ರಿಸಿಕೊಂಡಿರುವ ಪರಿ ಇದು. ಮುದ್ದು ಮನಸ್ಸಿನ ತಮ್ಮ ಭಾವನೆಗಳನ್ನೆ ತಮ್ಮ ಭಾವಚಿತ್ರದ ಮೂಲಕ ಬಂದು ಕಲಾಕೃತಿಯಾಗಿ ಕಂಡುಕೊಂಡು ರಚಿಸಿದ್ದಾರೆ. ಮುಖ್ಯ ಅಳತೆಯ ನೆರಳು

ಬೆಳಕಿನ ಸೂಕ್ಷ್ಮತೆಯನ್ನು ತಾವು ಬಳಸುವ ಸೆಲ್ಫಿಯ ಮೇಲಿನ ಭಾವ ಸಂಬಂಧದ ರೇಖೆಗಳನ್ನು ಸೌಂದರ್ಯಾತ್ಮಕವಾಗಿ ಚಿತ್ರಿಸಿದ್ದಾರೆ.

ಡಾ. ರಾಧಾಕೃಷ್ಣನವರ ಭಾವಚಿತ್ರ

೧೯೬೪ರಲ್ಲಿ ತೈಲವರ್ಣ ರಚಿಸಿದ ಡಾ. ಸರ್ವಪಲ್ಲಿ ರಾಧಾಕೃಷ್ಣನರ ವ್ಯಕ್ತಿಚಿತ್ರವಿದ್ದು ಈ ಕೃತಿಯಲ್ಲಿ ರಾಧಾಕೃಷ್ಣನ ಸೌಮ್ಯ ಸ್ವಭಾವವು ತದ್ರೂಪ ಮೂಡಿ ಬಂದಿದೆ. ಹಿನ್ನಲೆಯಲ್ಲಿರುವ ಚಾಕೋಲೇಟ್ ಬಣ್ಣದ ಕೋಟ್ ಮತ್ತು ಅಚ್ಚು ಬಿಳಿ ಪೇಟೆಗಳಿಗೆ ಮೆರುಗು ನೀಡಿದೆ.

ಈ ಕೃತಿಯ ರಚಿತವಾಗಿರುವ ಪಾಶ್ಚಾತ್ಯ ಪದ್ಧತಿ ತಂತ್ರದಲ್ಲಿ ಕಲಾವಿದರ ಕಲ್ಪನೆಗೆ ಅವಕಾಶವೆ ಇರುವುದಿಲ್ಲ. ಅಲ್ಲಿ ರೂಪದರ್ಶಿಯ ಅಥವಾ ಮಾದರಿಯ ವಸ್ತುವಿನ ಹೂಬೆ ಹೂಬು ಚಿತ್ರಣವೇ ಮುಖ್ಯವಾಗಿದ್ದು ಕೃತಿಯ ಸಾಫಲ್ಯದ ಮಾನದಂಡವು ಅದೇ ಆಗಿರುತ್ತದೆ. ಸದ್ಯ ಈ ಕೃತಿಯ ರಾಯಚೂರಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಂಗ್ರಹದಲ್ಲಿದೆ.[೫]

ಜವಹರಲಾಲ್ ನೆಹರೂ ಅವರ ಭಾವಚಿತ್ರ

೧೯೬೪ರಲ್ಲಿ ತೈಲವರ್ಣದಲ್ಲಿ ಚಿತ್ರಿಸಿದ ಭಾವಚಿತ್ರ ಇದು. ನೆಹರೂ ಅವರ ಮುಖದ ಭಾವವು ನೋಡಿದರೆ ಯಾವುದೇ ಗಾಢವಾದ ಸಮಸ್ಯೆಯನ್ನು ಯೋಚಿಸುವಂತೆ ತೋರುತ್ತದೆ. ನೆಹರೂ ಅವರ ಮೈಬಣ್ಣ ಹಳದಿ ಮಿಶ್ರಣದಿಂದ ನೆರಳು-ಬೆಳಕನ್ನು ತೋರಿಸಿದರೆ ನೆಹರೂ ಟೋಪಿಗೆಯನ್ನು ಬಿಳಿ ಬಣ್ಣದಿಂದ ಚಿತ್ರಿಸಿದ್ದಾರೆ. ನೆಹರೂ ಅವರು ಧರಿಸಿದ ಬಟ್ಟೆಯನ್ನು ಗಾಢವಾದ ವರ್ಣದಲ್ಲಿಯೆ ಬಟ್ಟೆಯ ನೀರೆಗಳ ಮಧ್ಯೆ ಗುಲಾಬಿ ಹೂ ಕಲಾಕೃತಿಯ ಮುಖ್ಯ ಸಂಯೋಜನೆಯಾಗಿ, ಬೆಟ್ಟದೂರರು ತೈಲವರ್ಣ ಮಾಧ್ಯಮದಲ್ಲಿ ಸಮಾನ ಪ್ರತಿಭೆ ಇಲ್ಲಿ ಗುರುತಿಸಿದ್ದಾರೆ.

ಭಾವಚಿತ್ರ-೪

೧೯೫೪ರಲ್ಲಿ ಡ್ರೈಪೇಸ್ಟಲ್ ವರ್ಣಗಳಲ್ಲಿ ರಚಿತವಾದ ಶಂಕರಗೌಡ ಬೆಟ್ಟದೂರ ಅವರ ಸಹಪಾಠಿಯಾದ ಮಿತ್ರರೊಬ್ಬರ ಭಾವಚಿತ್ರಣ ಇಲ್ಲಿ ರೂಪದರ್ಶಿಯ ಮುಖಭಾವ ಯಥಾವತ್ತಾಗಿ ತೀಕ್ಷ್ಣತೆಯಲ್ಲಿ ಹಲವಾರು ಯೋಚನೆಗಳಿಗೆ ಅರ್ಥಪೂರ್ಣವಾಗಿ ಆಲೋಚನೆಯಲ್ಲಿ ಮುಳುಗಿದಂತೆ ಭಾವನೆ ಸೂಚಿಸುತ್ತದೆ. ಇಡೀ ಚಿತ್ರಣ ಪೇಸ್ಟಲ್ ಮಾಧ್ಯಮದಲ್ಲಿ ನೆರಳು ಬೆಳಕಿನ ಭಿನ್ನವಾಗಿ ತೋರಿಸುವಲ್ಲಿ ಕಲಾವಿದನ ತಂತ್ರ ಮತ್ತು ಶೈಲಿಯನ್ನು ಬಳಸಿಕೊಂಡಿರುವುದು ವಿಶೇಷವೆನಿಸುತ್ತದೆ.ರೂಪದರ್ಶಿ ಒಂದು ಮುಖದ ಆಯಾಮವಾಗಿ ಬಳಸಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಕಲಾಕೃತಿಯಲ್ಲಿ ಹಲವಾರು ಭಾವನೆಗಳಿಗೆ ದೀಪಕ ನೀಡುವಲ್ಲಿ ಯಶಸ್ವಿಯಾಗಿದೆ.

ಹೀಗೆ ಶಂಕರಗೌಡ ಬೆಟ್ಟದೂರರವರು ಅನೇಕ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ತಮ್ಮ ವಿಶಿಷ್ಟ ಶೈಲಿಯ ವಿಶಿಷ್ಟ ತಂತ್ರಗಾರಿಕೆಯಲ್ಲಿ ಚಿತ್ರಿಸಿ ಅನೇಕ ಸಂಘ ಸಂಸ್ಥೆಗಳು ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಪಡೆದು ಕಲಾತ್ಮಕ ಕೃತಿಗಳನ್ನು ಬಿಟ್ಟು ದೂರವಾಗಿದ್ದಾರೆ

ಅಡಿ ಟಿಪ್ಪಣಿ

೧. ಹೈದ್ರಾಬಾದ ಕರ್ನಾಟಕದ ಭಾವಚಿತ್ರ ಕಲಾವಿದರ ಒಂದು ಅಧ್ಯಯನ: ಅಶೋಕ ಸಿ. ನಡುವಿನಮನಿ. ಪುಟ–೩೫

೨. ಹೈದ್ರಾಬಾದ ಕರ್ನಾಟಕದ ಭಾವಚಿತ್ರ ಕಲಾವಿದರ ಒಂದು ಅಧ್ಯಯನ: ಅಶೋಕ ಸಿ. ನಡುವಿನಮನಿ. ಪುಟ–೩೬

೩. ಅದೇ ಪುಟ–೩೬

೪. ಚೌಕಟ್ಟಿನಾಚೆ: ಚಿದಾನಂದ ಸಾಲಿ. ಪುಟ–೯

೫. ಚೌಕಟ್ಟಿನಾಚೆ: ಚಿದಾನಂದ ಸಾಲಿ. ಪುಟ–೧೯

೬. ಹೈದ್ರಾಬಾದ ಕರ್ನಾಟಕದ ಭಾವಚಿತ್ರ ಕಲಾವಿದರ ಒಂದು ಅಧ್ಯಯನ: ಅಶೋಕ ಸಿ. ನಡುವಿನಮನಿ. ಪುಟ–೩೭

ಶಂಕರ್‌ಗೌಡ ಬೆಟ್ಟದೂರ್ ಅವರ ಭಾವಚಿತ್ರಗಳು



ತಮ್ಮ ಭಾವಚಿತ್ರ

ಡಾ.ರಾಧಾಕೃಷ್ಣನ್ ಭಾವಚಿತ್ರ




ಶಂಕರ್‌ಗೌಡ ಬೆಟ್ಟದೂರ್ ಅವರ ಭಾವಚಿತ್ರಗಳು



ನೆಹರೂ ಭಾವಚಿತ್ರ

ಭಾವಚಿತ್ರ ೪





ಎಂ.ಬಿ.ಪಾಟೀಲ



ಈಗಿನ ವಿಜಯಪುರ ಜಿಲ್ಲೆಯ ತಿಕೋಟಾದಲ್ಲಿ ವಿಜೃಂಭಣೆಯಿಂದ ನಡೆಯುವ ಕಾರುಹುಣ್ಣಿಮೆಯು ಮದುವಣಗಿತ್ತಿ ಎನ್ನುವಂತೆ ಶಿಂಗಾರಗೊಂಡು ಎಲ್ಲಡೆ ಸಂಭ್ರಮ ಉಲ್ಲಾಸಗಳು ನಲೆದಾಡುತ್ತಿದ್ದಾಗ ಪುಟ್ಟ ಬಾಲಕ ಮಲ್ಲಿಕಾರ್ಜುನ ಆ ಸಂದರ್ಭಕ್ಕೆಂದೆ ಅಲ್ಲಿನ ಲಕ್ಷ್ಮಣ ಕುಂಬಾರ ಹಾಗೂ ಆತನ ಮನೆತನದವರು ತಯಾರಿಸುತ್ತಿದ್ದ ಮಣ್ಣಿನ ಎತ್ತುಗಳನ್ನು ಬೆರಗಣ್ಣಿನಿಂದ ದಿಟ್ಟಿಸುತ್ತ ನಿಂತಿರುತ್ತಿದ್ದ ಕಾರು ಹುಣ್ಣಿಮೆ ವಿಜಯಪುರದ ಜನಪರ ಸೊಗಡನ್ನೆಲ್ಲಾ ಮೈಗೂಡಿಸಿಕೊಂಡು ಒಂದು ಉತ್ಸವಮಾತ್ರವಲ್ಲ ಗ್ರಾಮದ ಜನರಿಗೆ ತಮ್ಮ ಕುಂಬಾರಿಕೆ ಕೈಚಳಕವನ್ನು ಅಭಿವ್ಯಕ್ತಿಗೊಳಿಸಲು ಅನುವು ಮಾಡಿಕೊಡುವಂತ ಒಂದು ಸುಂದರ ಸಂದರ್ಭ.[೧]

ಸೊಬಗಿನ ಎತ್ತುಗಳನ್ನು ಮಣ್ಣಿನಿಂದ ಸೃಷ್ಟಿಸುವ ಈ ಕಾಯದ ಹಿಂದೆ ಆರೋಗ್ಯವಾದ ಸ್ಪರ್ಧಾತ್ಮಕ ಮನೋಭಾವ ಮಲ್ಲಿಕಾರ್ಜುನನ ತನ್ನ ಬಾಲ್ಯದಿಂದಲೂ ಕಂಡಿದ್ದ ಈ ವೈಭವ ಅವನ ಕಲಾತ್ಮಕ ಮನಸ್ಸನ್ನು ಆತನಿಗೆ ಅರಿವಿಲ್ಲದಂತೆಯೇ ಮುಟ್ಟುಗೊಳಿಸುವಂತಿತ್ತು. ಗಣೇಶ ಚತುರ್ಥಿಯಿಂದ ಗೆಳೆಯ ತಮ್ಮಣ್ಣನ ತಂದೆ ಎರಿಮಣ್ಣಿನಿಂದ ಗಣಪನನ್ನು ತಯಾರಿಸಿದ ಕಲ್ಲಿನ ಮೇಲೆ ತಿಕ್ಕಿದ ಬಳಪದ ಕುಡಿಕೆಗೆ ಬಣ್ಣವನ್ನು ಬೆರಿಸಿ ಮೂರ್ತಿಯನ್ನು ಥಳಥಳಗೊಳಿಸಿದಾಗ ಅದನ್ನು ಕಾಣಲೆಂದೆ, ಆಗಮಿಸುತ್ತಿದ್ದ ಊರಿನ ಹಿರಿಯ ಶಿವಪ್ಪಗೌಡರು ಕಟ್ಟೆಯ ಮೇಲೆ ಕುಂತಾಗ ಮಲ್ಲಿಕಾರ್ಜುನನ್ನು ಕಟ್ಟೆಯ ತುದಿಯಲ್ಲಿ ಕಲಾವಿದರಿಗೆ ದೊರೆತ ಮೆಚ್ಚುಗೆಯನ್ನು ಕಂಡು ತಾನು ಹಿರಿಹಿರಿ ಹಿಗ್ಗುತ್ತಿದ್ದ ಕಾರಹುಣ್ಣಿವೆ. ಗಣೇಶ ಉತ್ಸವಗಳಂದು ಮೂರ್ತಿಯನ್ನು ಪೂಜಿಸುತ್ತಿದ್ದವರ ಮನೆಗಳಿಗೆಲ್ಲಾ ಮಲ್ಲಿಕಾರ್ಜುನನ ಕಲೆಯನ್ನು ಮೆಚ್ಚಿ ಅವುಗಳ ವಿನ್ಯಾಸಗಳನ್ನು ಅರ್ಥಮಾಡಿಕೊಳ್ಳುವ ಅವಣಿಕೆ.ಮಣ್ಣಿನ ಎತ್ತುಗಳನ್ನೆ ಆಟಿಕೆಗಳಾಗಿ ಬಳಸುತ್ತಿದ್ದರು. ಮಲ್ಲಿಕಾರ್ಜುನನ ಹಾಗೂ ಆತನ ಗೆಳೆಯರು ಅವಕ್ಕೆ ದಾರಕಟ್ಟಿ ರಸ್ತೆಗಳೆಲ್ಲೆಲ್ಲಿ ಅವುಗಳ ಮೆರವಣಿಗೆಯನ್ನು ಕೊಂಡೊಯ್ಯುತ್ತಿದ್ದರು. ಗೆಳೆಯರ ಗುಂಪು ಚದುರಿದ ನಂತರ ತಾನೊಬ್ಬನೆ ತೋಟಕ್ಕೆ ಹೊರಟ ಮಲ್ಲಿಕಾರ್ಜುನನ ಗಿಡದ ಬುಡದಲ್ಲಿ ಜೇಡಿ ಮಣ್ಣನ್ನು ಸುರಿವಿಕೊಂಡು ಹಳ್ಳದಲ್ಲಿ ಹರಿಯುತ್ತಿದ್ದ ನೀರನ್ನು ಆ ಜೇಡಿ ಮಣ್ಣಿಗೆ ಬೆರಿಸಿ ಏಕಾಂತದಲ್ಲಿ ಕೂತು ತಾನೇ ಮೂರ್ತಿಗಳನ್ನು ತಯಾರಿಸುವ ಪ್ರಯತ್ನದಲ್ಲಿ ಮುಳುಗುತ್ತಿದ್ದ.ಕರ್ನಾಟಕದ ಚಿತ್ರಕಲೆ ವಲಯದಲ್ಲಿ ಚಿತ್ರಕಲಾ ರಸಿಕರ ಬಳಗದಲ್ಲಿ ಎಂ.ಬಿ. ಪಾಟೀಲ ಎಂದೇ ಜನಪ್ರೀಯವಾಗಿರುವ ಮಲ್ಲಿಕಾರ್ಜುನ ಭೀಮನಗೌಡ ಪಾಟೀಲ ಎಳೆತನದಲ್ಲಿ ತಮ್ಮ ಪರಿಸರದಲ್ಲಿ ಕಂಡಿದ್ದು ಇಂತಹ ಸೃಜನಾತ್ಮಕ ವಾತಾವರಣವು ಕರ್ನಾಟಕದ ಶ್ರೇಷ್ಠ ಕಲಾವಿದರ ಸಾಲಿನಲ್ಲಿ ನಿಲ್ಲುವಂತ ಒಬ್ಬ ಚಿತ್ರಕಲಾವಿದ ಎಂ.ಬಿ.ಪಾಟೀಲ[೨]

ಎಂ.ಬಿ. ಪಾಟೀಲ ಅವರ ಬಾಲ್ಯ ಮತ್ತು ಶಿಕ್ಷಣ

ವಿಜಯಪುರ ಜಿಲ್ಲೆಯ ತಿಕೋಟಾದ ಭೀಮನಗೌಡ ಪಾಟೀಲ ಭಾಗೀರಥಿ ಪಾಟೀಲ ದಂಪತಿಗಳ ಆರನೇ ಮಗನಾಗಿ ೧೦-೧೨-೧೯೩೯ ರಂದು ಎಂ. ಬಿ. ಪಾಟೀಲ ಜನಿಸುತ್ತಾರೆ. ಪಾಟೀಲರು

ಹುಟ್ಟುವುದಕ್ಕೆ ಮುಂಚೆಯೇ ಮೂವರು ಅಕ್ಕಂದಿರು ತೀರಿಕೊಂಡರು ಇವರು ಜನನದ ನಂತರ ಹುಟ್ಟಿದ ಒಬ್ಬ ತಮ್ಮನೂ ಸ್ವಲ್ಪ ವರ್ಷಗಳಲ್ಲಿಯೇ ಕಣ್ಮರೆಯಾದ. ಉಳಿದವರೆಂದರೆ ಪಾಟೀಲರು ಒಬ್ಬರು ಹಿರಿಯ ಅಣ್ಣಂದಿರು ಇವರು ಹಾಗೂ ಒಬ್ಬಳು ತಂಗಿ ಮತ್ತೊಬ್ಬ ತಮ್ಮ ದೊಡ್ಡ ಸಂಸಾರದ ಹೊರೆಹೊತ್ತು ಅಪ್ಪ ಭೀಮನಗೌಡರು ಬಟ್ಟೆ ಅಂಗಡಿಯೊಂದರಲ್ಲಿ ಲೆಕ್ಕಪತ್ರ ಬರೆಯುವ ಉದ್ಯೋಗದಲ್ಲಿದ್ದರು. ಯಾವುದು ಕಾರಣಕ್ಕಾಗಿ ಆ ಅಂಗಡಿಯ ಮಾಲಿಕರಾಗಿದ್ದ ಇಬ್ಬರು ಸಹೋದರರು ವ್ಯಾಪಾರದ ವಹಿವಾಟುಗಳನ್ನು ಬಿಟ್ಟುಕೊಟ್ಟು ಅಂಗಡಿಯನ್ನು ಪಾಲು ಮಾಡಿಕೊಳ್ಳಬೇಕಾದಾಗ ದಕ್ಷತೆಯಿಂದ ಪ್ರಾಮಾಣಿಕವಾಗಿ ತಮಗಾಗಿ ದುಡಿದಿದ್ದ ಭೀಮನಗೌಡರನ್ನು ಬಿಟ್ಟುಕೊಡುವುದು ಹೇಗೆಂಬುವುದು ಚಿಂತೆ ಅವರಿಗೆ ಸುರುವಾಯಿತು. ಆ ಸಹೋದರರು ತಮ್ಮ ಅಂಗಡಿಯನ್ನೇ ಭೀಮನಗೌಡರಿಗೆ ಬಿಟ್ಟುಕೊಟ್ಟು ತಾವೇ ದೂರು ಸರಿದಿದ್ದರು. ಎಂ.ಬಿ. ಪಾಟೀಲರ ಜನನಕ್ಕೆ ಮುಂಚೆಯೇ ಸಂಭವಿಸಿದ ಈ ಘಟನೆಯನ್ನು ಮನೆಯಲ್ಲಿ ಪ್ರಸ್ತಾಪಿಸುತ್ತಿದ್ದುಂಟು. ಪಾಟೀಲರಿಗೆ ತಂದೆಯೊಂದಿಗೆ ಅಷ್ಟೇನೋ ಸಲಿಗೆಯಿರದಿದ್ದರೂ ತಾಯಿಯ ಬಳಿ ಮುದ್ದುಗರೆಯುವ ಅವಕಾಶವಿತ್ತು. ಹಿರಿಯ ಅಣ್ಣನೊಂದಿಗೆ ತನ್ನಲ್ಲಿ ಆಸೆಗಳನ್ನು ಹೇಳಿಕೊಳ್ಳುವ ಹಂಬಲವಿತ್ತು.[೭] ಪಾಟೀಲರಿಗೆ ಬುದ್ಧಿ ತಿಳಿಯುತ್ತಿದ್ದಂತೆ ಅವರಲ್ಲಿ ಆಸಕ್ತಿ ತಾವು ತನ್ನ ಅಣ್ಣಂದಿರಂತೆ ಶಾಲೆಗೆ ಹೋಗಬೇಕು ಎನ್ನುವುದು ಇವರ ನೆಪ ಮಾತ್ರಕ್ಕೆ ಶಾಲೆಗೆ ಸೇರಿದರು. ಇವರ ತಂದೆಗೆ ಇವರನ್ನು ಓದಿಸುವ ಮನಸ್ಸಿರಲಿಲ್ಲ ಹಿರಿ ಮಕ್ಕಳು ವಿದ್ಯೆ ಕಲಿತರೆ ಸಾಕು ಈ ಸಣ್ಣವನನ್ನು ತಮ್ಮ ಮನೆ ಕೆಲಸದಲ್ಲಿ ನೆರವಾಗಿ ಎಮ್ಮೆಗಳನ್ನು ಮೇಸಿಕೊಂಡು ಕೊಟ್ಟಿಗೆಯ ಕೆಲಸದಲ್ಲಿ ಕಾಲ ಹಾಕಿದರೆ ಸಾಕು ಎಂಬ ದೊರಣೆ. ಪುಟ್ಟ ಪಾಟೀಲರಿಗೆ ತಂದೆಯ ಎದುರು ನಿಂತು ವಾದಿಸುವಷ್ಟು ಧೈರ್ಯವಿರದಿದ್ದರೂ ಶಾಲೆಗೆ ಹೋಗಬೇಕಾಗಿದ್ದ ತಾನು ಎಮ್ಮೆ ಮೇಸುತ್ತ ಅವರ ಮನಸ್ಸು ನೋವಿನಿಂದ ನಲಗುತಿತ್ತು ಮನೆಯಿಂದ ಬುತ್ತಿಕಟ್ಟಿಕೊಂಡು ಒಂದು ಮರಗಿಡಗಳ ಮಧ್ಯೆ ಕೂತುಕೊಂಡು ಎಮ್ಮೆಗಳ ಮೇಲೆ ನಿಗಾ ಇಡುತ್ತಲೇ ಪಾಟೀಲರು ಸುತ್ತಲಿನ ಆಕಾಶ ಬೆಟ್ಟಗುಡ್ಡಗಳನ್ನು ಕಣ್ಣಲ್ಲಿ ತುಂಬಿಕೊಳ್ಳುತ್ತ ಪ್ರಕೃತಿಯ ರಮ್ಯತೆಯನ್ನು ಸೃಷ್ಟಿಯ ಸೋಜಿಗವನ್ನು ಕಂಡು ದಂಗಾಗುತ್ತಿದ್ದರು. ಪಾಟೀಲರ ಬಾಲ್ಯದ ಕೆಲವು ವರ್ಷಗಳು ಹಿಗೆ ಎಮ್ಮ ಕಾಯುವಲ್ಲೆ ಸವೆದು ಹೋದರು.[೮]

ಹಬ್ಬ ಹರಿದಿನಗಳಲ್ಲಿ ಜಾತ್ರೆ ಉತ್ಸವಗಳಲ್ಲಿ ಮದುವೆ ಮುಂಜಿಯಂತಹ ಶುಭ ಸಮಾರಂಭಗಳಲ್ಲಿ ಊರಿನಲ್ಲಿ ರಚಿಸಲಾಗಿದ್ದ ಜನಪದ ಚಿತ್ರಕಲಾ ಪ್ರಕಾರಗಳು ಅವರ ಬಾಲ್ಯದ ಬದುಕಿನಲ್ಲಿ ಅಚ್ಚಳಿಯದ ಪ್ರಭಾವ ಬೀರುವ ಮೂಲಕ ಮುಂದೆ ಇವರು ಒಬ್ಬ ಶ್ರೇಷ್ಠ ಕಲಾವಿದರಾಗಿ ರೂಪುಗೊಳ್ಳಲು ಅಡಿಪಾಯ ಹಾಕಿಕೊಟ್ಟವೆ. ಸ್ಥಳೀಯವಾಗಿರುವ ಈ ಜನಪದ ಕಲಾ ಪ್ರಕಾರಗಳು ಯಾವ ರೀತಿಯ ಪ್ರಭಾವವನ್ನು ಇವರ ಮೇಲೆ ಉಂಟುಮಾಡಿ ಬಾಲ್ಯದಿಂದಲೇ ಕಲಾವಿದನಾಗಿ ಎಂ.ಬಿ.ಪಾಟೀಲರನ್ನು ರೂಪಿಸಿದೆ.[೯]ಪಾಟೀಲರು ಪ್ರಾಥಮಿಕ ಶಾಲಾ ದಿನಗಳನ್ನು ತಮ್ಮ ಸ್ನೇಹಿತರಿಗಿಂತ ಎರಡು–ಮೂರು ವರ್ಷಗಳಿಗಿಂತ ಐದನೇ ಇರುತ್ತಿದ್ದರು. ಇದು ಅವರಿಗೆ ಮಾನಸಿಕ ಹಿಂಸೆ ಕಳವಳ ಇವರ ಮಧ್ಯೆ ಅಕ್ಷರ ಅಭ್ಯಾಸ ಪ್ರಾರಂಭಿಸಿದ ನಾಲ್ಕನೇ ಕ್ಲಾಸಿನಲ್ಲಿ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಮೊದಲ ಸ್ಥಾನ ಪಡೆದರು. ಸುತ್ತಲಿನವರೂ ಪ್ರಶಂಸೆಯಗೆ ಪಾತ್ರರಾಗಿ ೩೬ ರೂಪಾಯಿ ವ್ಯಾಸಂಗ ವೇತನ ಪಡೆದರು.ಚಿಕ್ಕ ವಯಸ್ಸಿನಿಂದಲೂ

ಅಗಾಧವಾದ ಸ್ಮರಣಶಕ್ತಿ – ಬುದ್ಧಿವಂತನಾಗಿದ್ದ. ಏಳನೇಯ ತರಗತಿಯವರೆಗೆ ತಿಕೋಟಾದಲ್ಲಿ ಶಿಕ್ಷಣವನ್ನು ಪಡೆದುಕೊಂಡ ಪಾಟೀಲರು ಆನಂತರ ಅಲ್ಲಿಂದ ೧೩ ಮೈಲಿಗಳಷ್ಟು ದೂರವಿದ್ದ ವಿಜಯಪುರದ ಶ್ರೀ ಸಿದ್ಧೇಶ್ವರ ಹೈಸ್ಕೂಲನ್ನು (ಎಸ್.ಎಸ್. ಹೈಸ್ಕೂಲ್) ಸೇರಿದರು.[೬]

ಚಿತ್ರಕಲೆಯ ಸ್ಫೂರ್ತಿ

ಎಂ.ಜಿ. ಪಾಟೀಲರು ಶಾಲಾ ದಿನಗಳಲ್ಲಿ ದಿನಾಲೂ ಚಿತ್ರಗಳನ್ನು ಗೀಚುತ್ತಿದ್ದರು. ಅಂತ ಚಿತ್ರಕಲಾ ಪ್ರತಿಭೆಯನ್ನು ಬೆಳಕಿಗೆ ತರಲು ನೆರವಾದ ಪ್ರಸಂಗವೆಂದರೆ ಅವರ ಹಿರಿಯಣ್ಣ "ಶಿವನಗೌಡ ಪಾಟೀಲ" ಮತ್ತು "ಗೆಳೆಯರ ಬಳಗ" ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ್ದು ಹಾಗೂ "ವಸಂತ ಎಂಬ ಕೈಬರಹದ ಮಾಸ ಪತ್ರಿಕೆಯನ್ನು ಆರಂಭಿಸಿದರು. ಆ ಪತ್ರಿಕೆಯ ಮುಖಪುಟಕ್ಕೆ ಎಂ.ಜಿ.ಪಾಟೀಲರ ಚಿತ್ರಗಳನ್ನೆ ಬಳಸಿಕೊಂಡರು. ಇಡಿ ವರ್ಷ ಪಾಟೀಲರ ರಚಿತವಾದ ವರ್ಣಚಿತ್ರಗಳೇ ಬಳಸಿಕೊಂಡರು ಹೀಗೆ ಪಾಟೀಲರ ಕಲಾಭಿರುಚಿಗೆ ಪ್ರೌಢಶಾಲೆಯ ದಿನಗಳಿಂದಲೇ ಬೆಳ್ಳಿ ಪದಕ ಹಾಗೂ ಪ್ರಶಸ್ತಿ ಪತ್ರ ನೀಡಿ ಪ್ರೋತ್ಸಾಹಿಸಿದರು. ಅದು ಅವರ ಮೊದಲ ಮೆಟ್ಟಿಲುಗಳಾಗಿ ರೂಪುಗೊಂಡಿತು.

ಪಾಟೀಲರು ೧೪-೧೫ ವರ್ಷವಿದ್ದಾಗ ವಿಜಾಪುರದಲ್ಲಿ ಸುಬ್ಬಯ್ಯ ನಾಯ್ಡು ಅವರ ನಾಟಕ ಕಂಪನಿ ಮುಕ್ಕಾಂ ಮಾಡಿ "ಕುರುಕ್ಷೇತ್ರ, ಭಾನಸಿಗ ಭೀಮ, ಭಕ್ತ ಅಮರೇಶ" ನಾಟಕಗಳನ್ನು ಪ್ರದರ್ಶಿದಾಗ ನಾಟಕಗಳಿಗೆ ಅಗತ್ಯವಾದ ದೃಶ್ಯಗಳನ್ನು (ಸೀನರಿಗಳನ್ನು) ಕೆಂಧೂಳೆ, ಧೋತ್ರೆ ಇವರುಗಳು ನಿರ್ವಹಿಸುತ್ತಿದ್ದರು.[೭] ಇಂತಹ ದೃಶ್ಯಗಳನ್ನು ನೋಡಿದಾಗ ಪಾಟೀಲರು ದುರ್ಯೋಧನ, ಭೀಮ, ಹಾಗೂ ನಾಟಕದ ದೃಶ್ಯಗಳನ್ನು ಪರಿಣಾಮ ಬೀರಿ ಗೋಡೆಗಳ ಮೇಲೆ ಇದ್ದಲಿನಿಂದ ಚಿತ್ರಗಳನ್ನು ಬಿಡುಸುತ್ತಿದ್ದರು. ಕ್ರಮೇಣ ಚಿತ್ರ ರೂಪಕಗಳು ಪಾಟೀಲರ ಮನಸ್ಸಿನಲ್ಲಿ ಗಾಢವಾದ ಪರಿಣಾಮ ಬೀರಿದವು.

೧೯೬೦ರಲ್ಲಿ ಪಾಟೀಲರು ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು ಇವರ ಸಂಪೂರ್ಣ ಗಮನವೆಲ್ಲಾ ಚಿತ್ರಕಲೆ ಮೇಲಿತ್ತು.[೮] ಚಿತ್ರಕಲೆಯಲ್ಲಿ ಆಸಕ್ತಿಯುಳ್ಳವರು ಕಲಿಯಬೇಕಾದರೆ ಆ ದಿನಗಳಲ್ಲಿ ಮುಂಬೈನ ಕಲಾಕೇಂದ್ರಗಳಲ್ಲಿ ತೆಗೆದುಕೊಳ್ಳಬೇಕಿತ್ತು. ಆದರೆ ಪಾಟೀಲರ ಮನೆಯಲ್ಲಿ ಅವರ ಅಣ್ಣ ಶಿವನಗೌಡರಿಗೆ ಬಿಟ್ಟರೆ ಯಾರಿಗೂ ಆಸಕ್ತಿ ಇರಲಿಲ್ಲ ಅಣ್ಣನ ಸಹಕಾರದಿಂದ ಹಾಗೂ ಡ್ರಾಯಿಂಗ್ ಮಾಸ್ಟರ್ ವಿ.ಕೆ. ಪಾಟೀಲರ ಸಲಹೆಯದ ಮೇರೆಗೆ ಮುಂಬೈನ ಜೆ.ಜೆ. ಸ್ಕೂಲ್ ಆರ್ಟ್‌ಗೆ ಹೋಗುಹೊತ್ತಿಗೆ ಪ್ರವೇಶದ ಅವಧಿ ಮುಗಿದಿತ್ತು. ಚಿತ್ರಕಲೆಯನ್ನು ಕಲೆಯಲೆಂದೆ ಮುಂಬೈಗೆ ಧಾವಿಸಿದ್ದ ಪಾಟಿಲರನ್ನು ವಾಪಾಸ್ ಊರಿಗೆ ಕರೆತಂದು ನಿರಾಸೆಗೊಳಿಸುವಂತಿರಲಿಲ್ಲ. ಪಾಟೀಲರ ಅಣ್ಣ ಇವರನ್ನು ನೂತನ ಕಲಾಮಂದಿರವನ್ನು ನಡೆಸುತ್ತಿದ್ದ ದಂಡಾವತಿಮಠ ಅವರ ಬಳಿಗೆ ಕರೆದೊಯ್ದರು.[೯]

ನೂತನ ಕಲಾಮಂದಿರದ ಪ್ರಾಂಶುಪಾಲರಾಗಿ ದಂಡಾವತಿಮಠರವರನ್ನು ನೇಮಿಸಿರುವಾಗ ಎಂ.ಜಿ.ಪಾಟೀಲರು ಚಿತ್ರಕಲಾ ಅಧ್ಯಯನ ಪ್ರಾರಂಭಿಸಸಿದರು.ಅಧ್ಯಯನ ಮಾಡುವ ಸಂದರ್ಭದಲ್ಲಿ

ಹಣಕಾಸಿನ ತೊಂದರೆಗಳು ಸಾಕಷ್ಟು ಅನುಭವಿಸಿದ ದಿನಗಳು ಆಗ ಪಾಟೀಲರ ಸುತ್ತಮುತ್ತ ಗೆಳೆಯರು ಮಧು, ಮಹೇಶ, ತ್ರಿಪಾಠಿ, ಪಾಟೀಲ ಇವರ ಗುಂಪೆಂದರೆ ಗೆಳೆತನಕ್ಕೊಂದು ಉದಾಹರಣೆ ವಸತಿ ನೀಡಿದ್ದ ಮಾಲೀಕನಿಗೆ ಮಕ್ಕಳಿರಲಿಲ್ಲ ಪಾಟೀಲರ ಗುಂಪಿಗೂ ಸದಾಕಾಲವೂ ಅತ್ಯಂತ ಹಣಕಾಸಿನ ಪರಿಸ್ಥಿತಿ ಈ ಹಲವಾರು ತಾಪತ್ರಿಗಳು ಇವರೆಲ್ಲರ ಪೈಕಿ ತ್ರಿಪಾಠಿಗೆ ಮಾತ್ರ ಬಾಡಿಗೆ ಕೊಡುವ ತಾಕತ್ತಿತ್ತು. ಮಿಕ್ಕಿದವರೆಲ್ಲರೂ ಕೈ ಸಾಮಾನ್ಯವಾಗಿ ಬರಿದೇ ಅನೇಕ ದಿನಗಳು ನೀರನ್ನು ಕುಡಿದು ದಿನಗಳನ್ನು ಕಳೆಯುತ್ತಿದ್ದೆವು. ಕೈಯಲ್ಲಿ ದುಡ್ಡಿದ್ದಾಗ ನಾಲ್ವರು ಸ್ನೇಹಿತರು ಒಂದು ಬನ್ನನ್ನು ಹಂಚಿಕೊಂಡು ತಿನ್ನುತ್ತಿದ್ದರು. ಯಾರಿಗೆ ಮನಿ ಆರ್ಡರ್ ಬರಲೀ ಅದನ್ನು ಬಚ್ಚಿಡದೇ ಬಂದ ಹಣವನ್ನೂ ಸಾಮೂಹಿಕವಾಗಿ ವಿನಿಮಯವಾಗುತ್ತಿತ್ತು. ಇದರ ಮಧ್ಯೆ ಎಂದು ಬೇಧಭಾವ ಸುಳಿಯಲೇ ಇಲ್ಲ. ಆಗ ನಾಲ್ಕಾಣೆಗೆ ಒಂದು ಬನ್ನು ಬಟಾಣಿ ಉಸಳಿ ಬರುತ್ತಿತ್ತು ಪಾವ ಬಜಿ ಸಿಗುತ್ತಿತ್ತು.[೧೦] ಹೀಗೆ ವಿದ್ಯಾರ್ಥಿ ಜೀವನದಲ್ಲಿ ಹಲವಾರು ಬದುಕಿನ ಅನುಭವ ಒಬ್ಬ ಕಲಾವಿದನ್ನಾಗಿ ರೂಪಿಸಿದೆ.

ಮುಂಬೈಯಲ್ಲಿದ್ದಾಗ ಪಾಟೀಲರು ಬದುಕಿನ ಪಾಠವನ್ನು ಕಲಿಯುವುದರ ಜೊತೆಗೆ ಕೈಗೊಳ್ಳುತ್ತಿದ್ದ ಚಟುವಟಿಕೆಗಳೆಲ್ಲವೂ ಚಿತ್ರಕಲೆಗೆ ಅಥವಾ ಇನ್ನಾವುದು ಸೃಜನಶೀಲತೆಗೆ ಸಂಬಂಧಿಸಿದೆ. ಬಿಡುವಿನ ವೇಳೇಯಲ್ಲಿ ಇವರಿಗೆ ಮುಖ್ಯ ಆಕರ್ಷಣೆಯ ಸ್ಥಳವೆಂದರೆ ಫೋಟೋ ಸ್ಟೂಡಿಯೋ ಪಾಟೀಲರು ತಾವು ಸುತ್ತಮುತ್ತಲಿನಲ್ಲಿ ಗ್ರಹಿಸಿದ ವಿದ್ಯೆಯನ್ನು ಕಾರ್ಯರೂಪಕ್ಕೆ ಇಳಿಸಲು ಅವರಿಗೆ ಹಣಕಾಸಿನ ಕೊರತೆ ಎದ್ದು ಕಾಣುತ್ತಿತ್ತು. ಪಾಟೀಲರು ಕಲಾಭ್ಯಾಸಂಗದಲ್ಲಿ ಆಸಕ್ತಿ, ಶ್ರದ್ಧೆ ಭಕ್ತಿಯಿಂದ ಪರೀಕ್ಷೆಯಲ್ಲೆ ಪಾಸಾಗಿ ಆತ್ಮವಿಶ್ವಾಸವನ್ನು ಗಟ್ಟಿಗೊಳಿಸುತ್ತ ವ್ಯಕ್ತಿತ್ವವನ್ನು ಕಾಯ್ದುಕೊಳ್ಳಬೇಕಾದ ಅನೇಕ ಸೂಕ್ಷ್ಮತೆಗಳು ಪಾಟೀಲರ ಮನಸ್ಸಿನಲ್ಲಿ ಬೆಳೆದಿದ್ದವು. ಇದರ ಮನಸ್ಥೈರ್ಯವನ್ನು ಪರೀಕ್ಷಿಸುವಂತ ಅನೇಕ ಸಂದರ್ಭಗಳಿದ್ದವು.[೧೧]

ಎಂ.ಜಿ.ಪಾಟೀಲರು ಏನೇ ಕಲಾ ಸಾಮರ್ಥ್ಯವನ್ನು ತೋರಿದ್ದರು ಅವರ ತಂದೆಗೆ ಮಾತ್ರ ಮಗ ಆಯ್ದುಕೊಂಡ ಹಾದಿಯ ಬಗ್ಗೆ ಅಸಮಾಧಾನ ಕಾಡುತ್ತಲೇ ಇತ್ತು. ತಂದೆ ಮಗನ ಮಧ್ಯೆ ಜಗಳ ಮತ್ತೆ ಮತ್ತೆ ನಡಿತಾನೇಇತ್ತು ಪಾಟೀಲರು ಕಲೆಯ ಆತ್ಮವಿಶ್ವಾಸದ ಸ್ವಾಭಿಮಾನಕ್ಕೆ ಎಂದು ಸೋಲಲಿಲ್ಲ. ಪಾಟೀಲರು ಮುಂದೆ ವಿದ್ಯಾರ್ಥಿಯಾಗಿ ಅದೆಷ್ಟೋ ವರ್ಷಗಳಲ್ಲಿ ಬ್ರೇಕ್‌ಗಳು ಇದ್ದರು ಅವರು ಶಾಲೆಯಲ್ಲಿ ಬಹಳ ಗಮನವಿಟ್ಟು ಕಲಿಯುತ್ತಿದ್ದರು. ಸಮಯವನ್ನು ವಿನಾಕಾರಣ ಕಳೆಯುತ್ತಿರಲಿಲ್ಲ. ಬಿಡುವಿನ ವೇಳೆ ಅವರ ತರಗತಿಯಲ್ಲಿ ಬಿಡುವಿನ ವೇಳೆ ಇದ್ದರೂ ಅವರು ತರಗತಿಯಲ್ಲಿ ಮೈಮರೆತು ಅಭ್ಯಾಸ ಮಾಡುತ್ತಿದ್ದರು. ನೂತನ ಕಲಾಮಂದಿರದ ಪ್ರತಿಯೊಬ್ಬ ವಿದ್ಯಾರ್ಥಿಗೂ ೫೦-ರಿಂದ ೧೦೦ ಪೆನ್ಸಿಲ್ ಹಾಗೂ ಪೆನ್ನುಗಳ ಸ್ಕೆಚ್ಚುಗಳನ್ನು ರಚಿಸಬೇಕಾಗಿತ್ತು. ಸ್ಕೆಚ್ ಬುಕ್ ಅಂತು ಕಡ್ಡಾಯವಾಗಿತ್ತು. ಪಾಟೀಲರಿಗೆ ಬೇರೆ ಬೇರೆ ಬಣ್ಣಗಳ ಮಾಧ್ಯಮಗಳಲಿ ಕಲಾಕೃತಿ ರಚಿಸಲು ಮನಸ್ಸು ಹಾತೊರೆಯುತ್ತಿದ್ದರು ಹಣದ ಅಭಾವ ಕಾಡುತ್ತಿತ್ತು. ಹಾಗಾಗಿ ಚಾರ್ಕೋಲ್, ಪೆನ್ಸಿಲ್‌ಗಳಿಂದ ರೇಖಾಚಿತ್ರಗಳನ್ನು ಮತ್ತು ಭಾವಚಿತ್ರಗಳನ್ನು ಹೆಚ್ಚಾಗಿ ರಚಿಸುತ್ತಿದ್ದರು.೧೯೬೭ರಲ್ಲಿ ಲೀಗರ್ ವಿಶ್ವವಿದ್ಯಾಲಯದ ಆರ್ಟ್ ಹಿಸ್ಟರಿ ಉಪನ್ಯಾಸಕರಾಗಿದ್ದ ಶ್ರೀ ಶರ್ಮಾ ಅವರು ಪಾಟೀಲರ

ಒಂದು ನೂರು ಭಾವಚಿತ್ರಗಳನ್ನು ನಾಲ್ಕು ನೂರು ರೂಪಾಯಿಗೆ ಖರೀದಿಸಿದರು. ಆಗ ಪಾಟೀಲರಿಗೆ ಆರ್ಥಿಕ ಪರಿಸ್ಥಿತಿ ತುಂಬಾ ಬಿಕ್ಕಟ್ಟಿನಲ್ಲಿತ್ತು. ಮುಂದೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಪಾಟೀಲರು ಶ್ರೀ ಶರ್ಮಾಜಿಯವರಿಗೆ ತಮ್ಮ ಭಾವಚಿತ್ರ ಕಲಾಕೃತಿಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿದರು.[೨೨]

ವಿದ್ಯಾರ್ಥಿದೆಸೆಯಲ್ಲಿ ಪ್ರತಿದಿನ ಮೂರನಾಲ್ಕು ಭಾವಚಿತ್ರಗಳನ್ನು ರಚಿಸುತ್ತಿದ್ದರು. ವಾರ್ಷಿಕದ ಕೊನೆಯಲ್ಲಿ ಕೇವಲ ಭಾವಚಿತ್ರಗಳೇ ೨೫೦ ಸಂಖ್ಯೆಯಲ್ಲಿ ಇರುತ್ತಿದ್ದವು. ಇಂದಿಗೂ ಅವರ ಕರ್ನಾಟಕದಲ್ಲಿ ಭಾವಚಿತ್ರ ರಚಿಸುವ ಕೆಲವೇ ಕಲಾವಿದರಲ್ಲಿ ಒಬ್ಬರಾಗಿದ್ದಾರೆ. ವಿದ್ಯಾರ್ಥಿಯೊಬ್ಬ ತನ್ನ ಅಧ್ಯಯನ ಅವಧಿಯಲ್ಲಿ ವ್ಯಕ್ತಿ ಚಿತ್ರ ರಚನೆ ಸಂಯೋಜನೆ ಹಾಗೂ ಸ್ಥಿತಿ ಲೈಫ್ ಚಿತ್ರಣ ಕಲೆಯ ಬೇಕಾಗಿತ್ತು. ನಾಲ್ಕನೇ ವರ್ಷದಲ್ಲಿ ನ್ಯೂಡ್ ಅಭ್ಯಾಸ ಕಡ್ಡಾಯವಾಗಿತ್ತು. ಇದಕ್ಕೆಲ್ಲ ಚಾರಕೋಲ್ ಹಾಗೂ ಕ್ರೇಯಾನ್ಸ್‌ಗಳನ್ನು ಪ್ರಾರಂಭಿಕ ಹಂತದಲ್ಲಿ ಬಳಸಬೇಕಾಗಿತ್ತು. ರೂಪದರ್ಶಿಗಳಲ್ಲಿ ಕೆಲವರಿಗೆ ಮೂವತ್ತು ವರುಷದ ಅನುಭವವಿತ್ತು. ಅಲ್ಲಲ್ಲಿ ರೂಪದರ್ಶಿಗಳಾಗಿಯೇ ಅವರು ತಮ್ಮ ಜೀವನ ನಿರ್ವಹಿಸುತ್ತಿದ್ದರು. ಜೆ.ಜೆ.ಕಲಾಶಾಲೆ ಮತ್ತು ನೂತನ ಕಲಾಮಂದಿರಗಳಲ್ಲಿ ಹೆಚ್ಚಾಗಿ ಸರದಿಯ ಮೇಲೆ ರೂಪದರ್ಶಿಯಾಗಿ ಕುಳಿತುಕೊಳ್ಳುತ್ತಿದ್ದರು.

ಅವರನ್ನು ಜನರು ರೂಪದರ್ಶಿಗಳೆಂದೇ ಗುರುತಿಸುತ್ತಿದ್ದರು. ಪಾಟೀಲರು ಮಹಿಳೆಯರು ಅನಾಟಾಮಿಯಲ್ಲಿ ಫಿಗರೇಟಿವ್ ಡ್ರಾಯಿಂಗ್‌ಗಳಲ್ಲಿ ಅತೀವ ಆಸಕ್ತಿಯಿಂದ ಚಿತ್ರರಚಿಸುತ್ತಿದ್ದರು. ಹಾಗಾಗಿ ಯಾವುದೇ ಕಲಾಕೃತಿ ಇರಲಿ ಅಲ್ಲಿರುವ ರೇಖೆಗಳ ಮೇಲೆ ಪ್ರಭುತ್ವವನ್ನು ಸಾಧಿಸುತ್ತಿದ್ದರು. ವ್ಯಕ್ತಿಯನ್ನು ಕಂಡ ಕೆಲವೇ ನಿಮಿಷಗಳಲ್ಲಿ ಅವರ ಚಿತ್ರವನ್ನು ಯಥಾವತ್ತಾಗಿ ಪಾಟೀಲರು ಬರೆಯಬಲ್ಲವರಾಗಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ[೨೩] ಹೆಚ್ಚು ಕಲಾ ಆಸಕ್ತಿ ಸೃಜನಶೀಲತೆಯಿಂದ ಕಲಾಕೃತಿಗಳನ್ನು ರಚನೆ ಮಾಡಿದರು.

ನೈಜ ಚಿತ್ರರಚನೆ ಸಾಂದರ್ಭಿಕ ಚಿತ್ರರಚನೆ ಇವೆಲ್ಲಕ್ಕೂ ರೇಖಾಚಿತ್ರಣವೇ ಮೂಲ ಎಂದು ಅದರ ಮಹತ್ವ ಬಿಂಬಿಸುತ್ತಿದ್ದರು. ಹಾಗಾಗಿ ಪಾಟೀಲರು ಅದನ್ನು ಆಳವಾಗಿ ಅಧ್ಯಯನ ಮಾಡಿ ಬೇರೆ ಬೇರೆ ಮಾಧ್ಯಮಗಳಿಗೆ ಅದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲುವುದನ್ನು ಸಾಧ್ಯವಾಗಿಸಿಕೊಂಡರು. ಪಾಟೀಲರು ಮುಂಬೈಯಲ್ಲಿ ಕಲಿಯುವಾಗ ಕರ್ನಾಟಕದ ಕೆಲವು ಕಲಾವಿದರಾದ ಬಿಂಡೇರಾವ್, ಶೆಣೈ ಪುಣಿಂಚಿತ್ತಾಯ, ಎ.ಎಸ್. ಪಾಟೀಲ ಇವರೆಲ್ಲ ಸಹಪಾಠಿಗಳು ಹಾಗೂ ಸ್ನೇಹಿತರಾಗಿ ಜೆ.ಎಸ್. ಬಿಂಡೇರಾವ್, ಶೆಣೈ, ಪುಣಿಂಚಿತ್ತಾಯ ಎ.ಎಸ್. ಪಾಟೀಲ ಮುಖ್ಯರಾಗಿದ್ದರು. ಇವರಲ್ಲಿ ಕೆಲವರು ಪಾಟೀಲರಿಗಿಂತ ಹಿರಿಯರು ಮತ್ತೆ ಕೆಲವರು ಕಿರಿಯರು ಇದ್ದರು. ಇವರೆಲ್ಲ ಸಲಹೆ ಸೂಚನೆ ಮಾರ್ಗದರ್ಶನ ಆತ್ಮೀಯತೆ, ಪ್ರೀತಿ, ವಾತ್ಸಲ್ಯ, ಮತ್ಸರ ಇವೆಲ್ಲವುಗಳನ್ನು ಪಡೆದುಕೊಳ್ಳುತ್ತ ತಮ್ಮ ಕಲಾಶಿಕ್ಷಣವನ್ನು ಪೂರೈಸಿದರು. ಬಾಲ್ಯದಲ್ಲಿ ಚಿಗುರೊಡೆದು ಕಲಾವೃಕ್ಷ ಮುಂಬೈನಲ್ಲಿಯ ಸಮೃದ್ಧ ಪಸರಿಸುವ ಗಾಳಿ, ಬೆಳಕು ಮತ್ತು ನೀರನ್ನುಂಡು ವಿಶಾಲವಾಗಿ ಬೆಳೆದು ಎಲ್ಲ ಬಗೆಯ ಸಂಕಟಗಳನ್ನು

ಸಾಧ್ಯವಾಗಿ ಭಾವಿಸಿ ಚಿತ್ರರಚನೆಯಲ್ಲಿಯೇ ತಮ್ಮ ಮನಸ್ಸನ್ನು ಕೇಂದ್ರೀಕರಿಸಿದ ಎಂ.ಬಿ.ಪಾಟೀಲರು ಯಶಸ್ವಿಯಾಗಿ ಕಲಾಶಿಕ್ಷಣ ಪಡೆದುಕೊಂಡು ಮುಂಬೈಯನಿಂದ ಹಿಂದುರಿಗಿದರು.[೧೫]

ವೃತ್ತಿ ಬದುಕು:

ಎಂ.ಬಿ.ಪಾಟೀಲರು ೧೯೬೪ರಲ್ಲಿ ಮುಂಬೈನ ನೂತನ ಕಲಾ ಮಂದಿರದಲ್ಲಿ ಡಿಪ್ಲೋಮಾ ಮುಗಿಸಿಕೊಂಡು ತಿಕೋಟಾಕ್ಕೆ ಮರಳಿದರು. ಇಲ್ಲಿಗೆ ಬಂದ ಮೇಲೆ ಅವರಿಗೆ ಎದುರಾದ ಮೊದಲ ಸಮಸ್ಯೆಯೆಂದರೆ ತಾವು ಕಲಿತ ವಿದ್ಯೆಯಿಂದ ತಿಕೋಟಾದ ಹಳ್ಳಿಯಲ್ಲಿ ಹೇಗೆ ಜೀವನ ಮಾಡಬೇಕೆಂಬುದಾಗಿತ್ತು. ಮುಂಬೈನಿಂದ ವಿದ್ಯಾರ್ಥಿ ಜೀವನವನ್ನು ಮುಗಿಸಿ ಬಂದ ಇವರಿಂದ ಮನೆಯವರಿಗಿದ್ದ ನಿರೀಕ್ಷೆಯೇ ಬೇರೆಯಾಗಿತ್ತು ಪಾಟೀಲರು ಸಂಪಾದನೆಯ ಮಾರ್ಗವನ್ನು ಹಿಡಿದು ಸಂಸಾರಕ್ಕೆ ಆರ್ಥಿಕವಾಗಿ ನೆರವಾಗಬೇಕೆನ್ನುವ ಬಯಕೆ ಎಲ್ಲರದಾಗಿತ್ತು.[೧೬]

ಸಂಪಾದನೆಯ ಮಾರ್ಗವನ್ನು ಕಂಡುಕೊಳ್ಳಲೇಬೇಕಾದ ಅನಿವಾರ್ಯ ಪರಿಸ್ಥಿತಿಗೆ ಸಿಕ್ಕ ಪಾಟೀಲರು ತಿಕೋಟಾದಲ್ಲಿನ ಪಂಚಾಯತಿಯ ಆವರಣದಲ್ಲಿ ತೂಗು ಹಾಕುವ ಸಲುವಾಗ ಮುಂಬೈನಿಂದ ತಂದಿದ್ದ ವರ್ಣ ಸಾಮಾಗ್ರಿಗಳ ನೆರವಿನಿಂದ ಮಹಾತ್ಮ ಗಾಂಧಿ, ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಜವಹರಲಾಲ್ ನೆಹರೂ ಅವರ ಭಾವಚಿತ್ರಗಳನ್ನು ತಯಾರಿಸಿದಾಗ ಊರಿನ ಜನರೆಲ್ಲ ಅದನ್ನು ಕೊಂಡಾಡಿದರೂ ಪಂಚಾಯತಿಯ ಮಾತ್ರ ಹಣ ನೀಡಬೇಕೆಂದು ವಿಷಯದಲ್ಲಿ ಭಾರೀ ತಕರಾರು ಮಾಡಿದರು. ನಿಮ್ಮಪ್ಪ ಅದಕ್ಕೆಂದು ಮಾಡಿಸು ನಿಂಗೆ ಅವುಗಳ ಬೆಲೆ ಗೊತ್ತಾಗದೆ ಎಂದು ಪಂಚಾಯತಿಯ ಮುಖ್ಯಸ್ಥರ ಮುಂದೆ ಕೂಗಾಡಿದವರೇ, ಅವರತ್ತ ಹಣ ತೆಗೆದುಕೊಳ್ಳದೆಯೇ ಹೊರಬಂದು ತಾರುಣ ತುಂಬಿದ್ದ ಪಾಟೀಲ ಸಹಜವಾಗಿಯೇ ಯೌವನ್ನದಲ್ಲಿ ಇರುವ ರೋಷ ಇವರಲ್ಲಿ ಮನೆ ಮಾಡಿತ್ತು.[೧೭]

ಎಂ.ಬಿ. ಪಾಟೀಲರ ಭಾವಚಿತ್ರಗಳು

೧. ಜೆ.ಎಮ್.ಎಸ್. ಮಣಿ ಭಾವಚಿತ್ರ

ಪಾಟೀಲರು ವಿವಿಧ ಭಾವ ಭಂಗಿಯಲ್ಲಿ ಜನರ ಭಾವಚಿತ್ರಗಳನ್ನು ರಚಿಸಿ ಸಿದ್ಧಹಸ್ತರಾಗಿದ್ದಾರೆ. ಪಾಶ್ಚಿಮಾತ್ಯ ಶೈಲಿಯ ರಚನಾತಂತ್ರವನ್ನು ನೆನಪಿಸುವ ಭಾವಚಿತ್ರವು ಕರ್ನಾಟಕದ ಹಿರಿಯ ಕಲಾವಿದರೊಬ್ಬರ ಜೆ.ಎಮ್.ಎಸ್.ಮಣಿಯವರದಾಗಿದೆ. ಈ ಕಲಾಕೃತಿ ಹಳದಿ, ಕೆಂಪು, ಹಸಿರು, ವರ್ಣಗಳು ಮಿಶ್ರಣಗೊಂಡು ಆಕೃತಿಗೆ ಮೆರಗನ್ನು ತಂದಿದೆ.

ತೈಲವರ್ಣದ ಬಣ್ಣದಲ್ಲಿ ೧೮/೨೪ ಕ್ಯಾನವಾಸ್‌ದ ಅಳತೆಯಲ್ಲಿ ಸಂಯೋಜನೆಗೊಂಡ ಭಾವಚಿತ್ರ ನೆರಳು ಬೆಳಕಿನ ಪ್ರಯೋಗವನ್ನು ಸೂಕ್ಷ್ಮವಾಗಿ ಕಂಡುಕೊಂಡು ಉಳಿದ ಭಾಗವನ್ನು ಗಾಢವಾದ ಬಣ್ಣವನ್ನು ಕುಂಚದಿಂದ ಲೇಪಿಸಿದ ಪರಿಣತವು ಸ್ಪಷ್ಟವಾಗಿ ಗೋಚರಿಸುತ್ತದೆ. ಜೆ.ಎಮ್.ಎಸ್. ಮಣಿ ಅವರು ಹಾಕುವ ಕನ್ನಡಕ ಹಾಗೂ ಟೊಪ್ಪಿಗೆಯುಳ್ಳ ವ್ಯಕ್ತಿಯ ಜೊತೆಗಿನ ಭಾವನಾತ್ಮಕ ಸಂಬಂಧವನ್ನು ಗೋಚರಿಸುತ್ತದೆ

ರೂಪದರ್ಶಿಯ ಮುಖವರ್ಣದ ನಿರ್ವಹಣೆಯಲ್ಲಿ ಸುಂದರವಾಗಿ ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂ.ಜಿ.ಪಾಟೀಲರು.

೨. ಆರ್.ಎಮ್. ಹಡಪದ ಅವರ ಭಾವಚಿತ್ರ

೧೯೮೫ರಲ್ಲಿ ತೈಲವರ್ಣದಿಂದ ರಚಿತಗೊಂಡಂತ ಈ ಕೃತಿ ಒಮ್ಮೆ ಕೆನ್ ಕಲಾಶಾಲೆಗೆ ಪಾಟೀಲರು ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ನೀಡಲು ಹೋಗಿದ್ದ ಸಂದರ್ಭದಲ್ಲಿ ಒಂದು ವಿಶೇಷ ಕಾದಿತ್ತು. ಇಬ್ಬರು ಪ್ರಸಿದ್ಧ ಕಲಾವಿದರು ಎದುರು ಬದುರು ಕುಳಿತುಕೊಂಡು ಭಾವಚಿತ್ರ ರಚಿಸಬೇಕಾಗಿತ್ತು. ಆಗ ಪಾಟೀಲರ ಭಾವಚಿತ್ರ ಹಡಪದವರು ರಚಿಸಿದರೆ ಹಡಪದ ಅವರ ಭಾವಚಿತ್ರವನ್ನು ಪಾಟೀಲರು ರಚಿಸಿದರು. ಹೀಗೆ ಒಂದೇ ಸಂದರ್ಭದಲ್ಲಿ ಇಬ್ಬರು ಪ್ರಸಿದ್ಧ ಕಲಾವಿದರ ಭಾವಚಿತ್ರಗಳ ಪ್ರಾತ್ಯಕ್ಷಿಕೆಯನ್ನು ನೋಡುವ ಭಾಗ್ಯ ಅಲ್ಲಿನ ವಿದ್ಯಾರ್ಥಿಗಳಿಗೆ ದೊರೆಯಿತು. ಈ ಸಂದರ್ಭದಲ್ಲಿ ರಚಿತಗೊಂಡಂತಹ ಕೃತಿ ಇದಾಗಿದೆ. ಇಲ್ಲಿ ಎದುರು ಬದುರು ಕುಳಿತು ಚಿತ್ರಿಸುವಾಗ ಸ್ಥಿರವಾಗಿ ಕೂಡಲು ಸಾಧ್ಯವಿಲ್ಲ ಆಗ ಕಲಾವಿದ ಹೆಚ್ಚು ವೇಗವಾಗಿ ಚಿತ್ರಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ವ್ಯಕ್ತಿಯು ವ್ಯಕ್ತಿಯ ಮುಖಕ್ಕಷ್ಟೆ ಮಹತ್ವ ಕೊಡದೇ ಭಾವನೆಗೂ ಮಹತ್ವಕೊಟ್ಟಿರುವುದನ್ನು ನಾವು ಗಮನಿಸಬಹುದು. ಮುಖದ ಭಾವ ಕೆಂಪುವರ್ಣದಲ್ಲಿ ಮಿಶ್ರಣದಲ್ಲಿದಲ್ಲಿದೆ. ಸೂಕ್ಷ್ಮ ಪ್ರಮಾಣದಲ್ಲಿ ಪೂರ್ಣಗೊಳಿಸಿದರೆ ವ್ಯಕ್ತಿಯ ಅಂಗಿಯ(ಶರ್ಟ್) ಹಾಗೂ ವ್ಯಕ್ತಿಯ ಹಿಂದುಗಡೆ ನೀಲಿ ಮತ್ತು ಬಿಳಿ ವರ್ಣಗಳ ಮಿಶ್ರಣದಲ್ಲಿ ಕಲಾತ್ಮಕವಾಗಿ ಅತಿ ವೇಗದಲ್ಲಿ ಚಿತ್ರಿಸಿದ್ದನ್ನು ಕಾಣಬಹುದು. ವ್ಯಕ್ತಿಯ ತಲೆಗೂದಲಿಗೆ ಕಂದುಕಪ್ಪು ಮತ್ತು ನೀಲಿ ಬಣ್ಣಗಳಲ್ಲಿ ಕೂದಲು ನಿಜದ ವ್ಯಕ್ತಿಯ ಸ್ಪಷ್ಟತೆ ನೋಡಬಹುದು.

೩. ಮಹಿಳೆಯ ಭಾವಚಿತ್ರ

೧೯೮೫ರಲ್ಲಿ ಜಲವರ್ಣದ ಮಾಧ್ಯಮದಲ್ಲಿ ರಚನೆಗೊಂಡ ಈ ಭಾವಚಿತ್ರವು ಒಂದು ಪ್ರಯೋಗದ ಕಲಾಕೃತಿಯಾಗಿದೆ. ಅತ್ಯಂತ ಕ್ಷಿಪ್ರಗತಿಯಲ್ಲಿ ರಚಿಸಿದ ಅಕಾಡೆಮಿಕ್ ಸತ್ವವುಳ್ಳ ಭಾವಚಿತ್ರವೆಂದು ತಿಳುವಾದ ವರ್ಣದ ಬೀಸುಗಳು ಮುಖದ ವಿವರವನ್ನು ಸೂಚಿಸುತ್ತದೆ. ರೂಪದರ್ಶಿಯ ಮೈಬಣ್ಣಕ್ಕೆ ಅನುಗುಣವಾಗಿ ಹಿನ್ನೆಲೆಯ ವರ್ಣಗಳನ್ನು ವೈವಿಧ್ಯ ರೀತಿಯಲ್ಲಿ ದುಡಿಸಿಕೊಂಡಿದ್ದಾರೆ. ರೂಪದರ್ಶಿಯ ದೇಹ ರಚನೆ ಹಾಗೂ ಉಡುಪಿನಲ್ಲೂ ಅದೇ ವೇಗದ ಬೀಸುಗಳಿವೆ. ಭಾವಚಿತ್ರದ ದುಂಡುತನವನ್ನು ಸ್ಪಷ್ಟವಾಗಿ ತೋರಿಸುವುದು ನೀಲಿ ಮತ್ತು ಕಂದುಕೆಂಪು ವರ್ಣಗಳನ್ನು ಹಂತ ಹಂತವಾಗಿ ಲೇಪನಮಾಡಿ ನೆರಳು ಬೆಳಕಿನ ವೈವಿಧ್ಯತೆಯ ಗಾಂಭೀರ್ಯತೆಯನ್ನು ಚಿತ್ರಿಸಿದ್ದಾರೆ.

೪. ಮಹಿಳೆಯ ಭಾವಚಿತ್ರ

ಪಾಟೀಲರು ಅನೇಕ ಭಾವಚಿತ್ರಗಳನ್ನು ತಮ್ಮ ಕಲ್ಪನೆಯ ಹಿನ್ನಲೆಯಲ್ಲಿ ಪ್ರಯೋಗಾತ್ಮ ಚಿತ್ರಗಳನ್ನು ರಚಿಸಿದ್ದಾರೆ. ಅವರಲ್ಲಿ ಮಹಿಳೆಯರು, ಪುರುಷರು, ಮಕ್ಕಳು ಹೀಗೆ ಆಧುನಿಕತೆಗೆ ಹತ್ತಿರವಾಗುವಂತೆ

ಕಲಾಕೃತಿಗಳನ್ನು ರಚಿಸಿದ್ದಾರೆ. ಅಂತಹ ಭಾವಚಿತ್ರವನ್ನು ೧೯೮೫ರಲ್ಲಿ ಜಲವರ್ಣ ಮಾಧ್ಯಮದಲ್ಲಿ ಒಂದೆ ಬಣ್ಣದಲ್ಲಿ ಹಂತ ಹಂತವಾಗಿ ಕುಂಚದಿಂದ ಲೇಪಿಸುತ್ತ ಹೋಗಿದ್ದಾರೆ. ಈ ಭಾವಚಿತ್ರದ ಆಕರ್ಷಣೆಯು ಕೇಂದ್ರಬಿಂದುವಾಗಿ ಕೆಂಪು ವರ್ಣದ ಕುಂಕುಮ ಮತ್ತು ಮುಗ್ಧತೆ ಒಂದುಕಡೆಯಾದರೆ ಗ್ರಾಮೀಣ ಮಹಿಳೆಯಂತೆ ಕಂಡರೂ ಕೂಡಾ ಆಧುನಿಕವಾದ ಹೇರ್ ಕಟ್ ಕೂದಲುಗಳು ಈ ಕಲಾಕೃತಿಯ ವಿಶೇಷವಾಗಿ ಕಾಣುವಂತಹದ್ದು.


ಹೀಗೆ ಪಾಟೀಲರು ವರ್ಣ ಸಂಯೋಜನೆಯಲ್ಲಿ ಪಾರದರ್ಶಕ ಅಪಾರದರ್ಶಕ ಎರಡೂ ವಿಧಾನಗಳನ್ನು ಇವರು ಕರಗತಮಾಡಿಕೊಂಡು ಪ್ರಾರಂಭಿಕ ಹಂತದಲ್ಲಿ ಅಕಾಡೆಮಿಕ್ ಶೈಲಿಯಿಂದ ಪ್ರಭಾವಿತಗೊಂಡು, ಆಧುನಿಕ ಅಮೂರ್ತ ಶೈಲಿಯಲ್ಲಿ ತಮ್ಮದೇ ಆದ ತುಡಿತ ಮಿಡಿತಗಳನ್ನು ಕಲಾಕೃತಿಗಳನ್ನು ರಚನೆ ಮಾಡುವ ಮೂಲಕ ಪ್ರಯೋಗಗಳನ್ನು ಮಾಡಿ ತಮ್ಮದೇ ಆದ ಶೈಲಿ ತಂತ್ರವನ್ನು ಹುಟ್ಟುಹಾಕಿ ಸೃಜನಾತ್ಮಕವಾಗಿ ನೈಜ ಆಕಾರವನ್ನು ನಿರೂಪಿಸಿದ್ದಾರೆ ಎಂ.ಬಿ. ಪಾಟೀಲರು.

ಅಡಿ ಟಿಪ್ಪಣಿ

೧. ಎಂ.ಬಿ. ಪಾಟೀಲ. ಬಿ.ಎಸ್. ವೆಂಕಟಾಲಕ್ಷ್ಮೀ. ಪುಟ-೧
೨. ಎಂ.ಬಿ. ಪಾಟೀಲ. ಬಿ.ಎಸ್. ವೆಂಕಟಾಲಕ್ಷ್ಮೀ. ಪುಟ-೨
೩. ಎಂ.ಬಿ. ಪಾಟೀಲ. ಬಿ.ಎಸ್. ವೆಂಕಟಾಲಕ್ಷ್ಮೀ. ಪುಟ-೩
೪. ಚಿತ್ರಕಲಾವಿದ ಎಂ.ಬಿ.ಪಾಟೀಲಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ-ಎಸ್.ಎಸ್.ಗಡ್ಡಿ. ಪುಟ-೨
೫. ಚಿತ್ರಕಲಾವಿದ ಎಂ.ಬಿ.ಪಾಟೀಲಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ-ಎಸ್.ಎಸ್.ಗಡ್ಡಿ. ಪುಟ-೩
೬. ಚಿತ್ರಕಲಾವಿದ ಎಂ.ಬಿ.ಪಾಟೀಲಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ-ಎಸ್.ಎಸ್.ಗಡ್ಡಿ. ಪುಟ-೬
೭. ಅದೇ ಪುಟ
೮. ಚಿತ್ರಕಲಾವಿದ ಎಂ.ಬಿ.ಪಾಟೀಲಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ-ಎಸ್.ಎಸ್.ಗಡ್ಡಿ. ಪುಟ-೭
೯. ಅದೇ ಪುಟ
೧೦. ಚಿತ್ರಕಲಾವಿದ ಎಂ.ಬಿ.ಪಾಟೀಲಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ-ಎಸ್.ಎಸ್.ಗಡ್ಡಿ. ಪುಟ-೮
೧೧. ಎಂ.ಬಿ. ಪಾಟೀಲ. ಬಿ.ಎಸ್. ವೆಂಕಟಾಲಕ್ಷ್ಮೀ. ಪುಟ-೧೦
೧೨. ಚಿತ್ರಕಲಾವಿದ ಎಂ.ಬಿ.ಪಾಟೀಲಬದುಕು ಮತ್ತು ಕಲಾಕೃತಿಗಳುಒಂದು ಅಧ್ಯಯನ-ಎಸ್.ಎಸ್.ಗಡ್ಡಿ. ಪುಟ-೪೩
೧೩. ಅದೇ ಪುಟ
೧೪. ಅದೇ ಪುಟ
೧೫. ಚಿತ್ರಕಲಾವಿದ ಎಂ.ಬಿ.ಪಾಟೀಲಬದುಕು ಮತ್ತು ಕಲಾಕೃತಿಗಳುಒಂದು ಅಧ್ಯಯನ-ಎಸ್.ಎಸ್.ಗಡ್ಡಿ. ಪುಟ-೪೪
೧೬. ಚಿತ್ರಕಲಾವಿದ ಎಂ.ಬಿ.ಪಾಟೀಲಬದುಕು ಮತ್ತು ಕಲಾಕೃತಿಗಳುಒಂದು ಅಧ್ಯಯನ-ಎಸ್.ಎಸ್.ಗಡ್ಡಿ. ಪುಟ-೪೬
೧೭. ಎಂ.ಬಿ. ಪಾಟೀಲ. ಬಿ.ಎಸ್. ವೆಂಕಟಾಲಕ್ಷ್ಮೀ. ಪುಟ-೧೩

ಚಿತ್ರ ಕೃಪೆ- ಚಿತ್ರಕಲಾವಿದ ಎಂ.ಬಿ.ಪಾಟೀಲಬದುಕು ಮತ್ತು ಕಲಾಕೃತಿಗಳುಒಂದು ಅಧ್ಯಯನ-ಎಸ್.ಎಸ್.ಗಡ್ಡಿ.

ಎಂ.ಬಿ.ಪಾಟೀಲ ಅವರ ಭಾವಚಿತ್ರಗಳು



ಜೆ.ಎಂ.ಮಣಿ ಅವರ
ಭಾವಚಿತ್ರ ೧

ಆರ್.ಎಂ.ಹಡಪದ ಅವರ
ಭಾವಚಿತ್ರ ೨



ಎಂ.ಬಿ.ಪಾಟೀಲ ಅವರ ಭಾವಚಿತ್ರಗಳು



ಮಹಿಳೆ ಭಾವಚಿತ್ರ ೩

ಮಹಿಳೆ ಭಾವಚಿತ್ರ ೪





ಆರ್.ಎಂ.ಹಡಪದ



ವ್ಯಕ್ತಿಗಳು ಹುಟ್ಟುತ್ತಾರೆ ಬೆಳೆಯುತ್ತಾರೆ ಗತಕಾಲ ಭೌತಿಕವಾಗಿ ಸಾಂಸ್ಕೃತಿಕವಾಗಿ ನಿರ್ಧರಿಸುವ ಪರಿಸರದಲ್ಲಿ ಬದುಕುತ್ತಾರೆ. ಅದರಲ್ಲಿ ಭಾಗಿಯಾಗುತ್ತಾರೆ. ಒಡನಾಡುತ್ತಾರೆ. ಆದರೆ ಎಲ್ಲೋ ಕೆಲವರಿಂದ ಮಾತ್ರ ಆ ಪರಿಸರದಲ್ಲಿ ಪರಿಣಾಮಕಾರಿ ಬದಲಾವಣೆ ತರಲು ಸಾಧ್ಯವಾಗುತ್ತದೆ.[1] ಯಾವುದೇ ಸಾಧಕನಿಂದ ಅವನು ಜನಿಸಿದ ಊರಿನ ಪರಿಸರ ಬಹುಮುಖ್ಯ ಪಾತ್ರವಹಿಸುತ್ತದೆ. ಬಾಲ್ಯದಲ್ಲಿ ಅನುಭವಿಸಿದ ಗ್ರಾಮ ಸಂಸ್ಕೃತಿಯ ಪರಿಸರವೇ ಅವನ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ರೂಪಿಸುತ್ತದೆ. ಬಹುತೇಕ ಅತ್ಯುನ್ನತ ಸಾಧಕರು ಹುಟ್ಟಿದ್ದು ಗ್ರಾಮ ಪರಿಸರದಲ್ಲಿ ಮತ್ತು ಬೆಳೆದಿದ್ದು ನಗರ ಪರಿಸರದಲ್ಲಿ ಎಂಬುದಕ್ಕೆ ಅನೇಕ ವ್ಯಕ್ತಿಗಳು ನಿದರ್ಶನವಾಗುತ್ತಾರೆ. ಹಳ್ಳಿ ಬದುಕಿನಲ್ಲಿ ಕಂಡು ಬರುವ ಸೃಜನಾತ್ಮಕ ಕ್ರಿಯೆಗಳು ನಗರ ಪರಿಸರದಲ್ಲಿ ಅಪರೂಪ ಗ್ರಾಮೀಣರೆಂದರೆ ಜನಪದರು ತಮ್ಮ ಸೃಜನಶೀಲತೆಯನ್ನು ಮೌಖಿಕ ಪರಂಪರೆಯಲ್ಲಿ ಹಾಗೆಯೇ ದೃಶ್ಯಾತ್ಮಕವಾಗಿ ಲೋಕಾರ್ಪಣೆಗೊಳಿಸಿದರು. ದೃಶ್ಯ ಪರಂಪರೆಯಲ್ಲಿ ರಂಗೋಲಿ, ಹಚ್ಚೆ, ಹಸೆಚಿತ್ರ ಮುಂತಾದ ಕಲೆಗಳು ಗ್ರಾಮೀಣ ಬದುಕಿನ ಜೀವನಾಡಿಗಳಾಗಿವೆ. ಇಂತಹ ಪರಂಪರೆಯಲ್ಲಿ ಹುಟ್ಟಿಬೆಳೆದ ಅನೇಕರು ಹೆಸರಾಂತ ಸಂಶೋಧಕರಾಗಿ ಕಲಾವಿದರಾಗಿ ಸಾಹಿತಿಗಳಾಗಿ ಸಂಗೀತಗಾರರಾಗಿ ಹೆಸರಾಗಿದ್ದಾರೆ. ನಾಡೋಜ ಆರ್.ಎಂ. ಹಡಪದ ಅಂತವರಲ್ಲಿ ಒಬ್ಬರೂ.[2]

ಹಡಪದ ಅವರ ಬಾಲ್ಯ ಮತ್ತು ಶಿಕ್ಷಣ

ಹಡಪದ ಅವರು ಇಂದಿನ ಬಾಗಲಕೋಟ ಜಿಲ್ಲೆಯ ಬಾದಾಮಿಯಲ್ಲಿ ೧೯೩೦ರಲ್ಲಿ ಜನಿಸಿದರು. ಬಾಲ್ಯವನ್ನು ಕಳೆದಿದ್ದು ಅಲ್ಲಿ ಮೊದಲು ಶಾಲೆ ಕಲತದ್ದು ಬಾದಾಮಿಯಲ್ಲಿ ಮುಲ್ಕಿ ಪರೀಕ್ಷೆವರೆಗೆ ಆ ನಂತರ ಗುಳೇದಗುಡ್ಡದ ಮತ್ತೆ ಬಾಗಲಕೋಟ ಬಸವೇಶ್ವರ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಎಸ್.ಎಸ್.ಸಿ ಗೆ ಒಂದು ಐಚ್ಛಿಕ ವಿಷಯವಾಗಿ ಚಿತ್ರಕಲೆ ತೆಗೆದುಕೊಂಡಿದ್ದರು. ಎಸ್.ಎಸ್.ಇ ಯಲ್ಲಿ ಉತ್ತೀರ್ಣರಾಗುವ ಮೊದಲೇ ಖಾಸಗಿಯಾಗಿ ಟಿ.ಪಿ.ಅಕ್ಕಿಯವರ ಗದಗದ ವಿಜಯ ಕಲಾ ಮಂದಿರದಿಂದ ಮುಂಬೈಯ ಜೆ.ಜೆ. ಕಲಾಶಾಲೆಯ ಒಂದು ಪರೀಕ್ಷೆಗೆ ಕಟ್ಟಿ ಉತ್ತೀರ್ಣರಾಗಿದ್ದರು. ಎಸ್.ಎಸ್.ಸಿ ನಂತರ ಮಿಣಜಿಗಿ ಅವರ ಹುಬ್ಬಳ್ಳಿ ಕಲಾ ಮಂದಿರದಿಂದ ಇಂಟರ್‌ಮಿಡಿಯೇಟ್ ಮತ್ತು ಅಡ್ವಾನ್ಸ್ ಪೇಟಿಂಗ್ ಮಾಡಿ ಜೆ. ಜೆ. ಕಲಾಶಾಲೆಯಲ್ಲಿ ಡಿಪ್ಲೋಮಾ ಮುಗಿಸಿದರು. ಅಲ್ಲಿಂದಲೇ ಡಿ.ಡಿ.ಸಿ. ಎ.ಎಂ. ಮಾಡಿದರು. ಇದು ಔಪಚಾರಿಕ ಶಿಕ್ಷಣದ ಚೌಕಟ್ಟು ಮಾತ್ರ ಅವರು ಶಾಲೆಯಲ್ಲಿ ಕಲಿತಿದ್ದು ಅಲ್ಲಅದು ಅಕಾಡೆಮಿಕ್ ವಾತಾವರಣದ್ದು ಅವರ ಕಲಾಭ್ಯಾಸದ ಜೀವಂತ ಶಾಲೆ ಬಾದಾಮಿ[3] ಬಾಲ್ಯದ ದಿನಗಳು ಅಲ್ಲಿನ ಆಟನೋಟ ಉತ್ಸಾಹದ ಸಾಹಸಗಳು ಪಡೆದ ಅನುಭವಗಳು ಕಲಾವಿದ ಹಡಪದ ಅವರನ್ನು ರೂಪಿಸಿದವು. ಒಳ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿದವು ಅಂದಿನಿಂದ ಇಂದಿನವರೆಗೂ ಪ್ರಭಾವ ಬೀರುತ್ತಲೆ ಬಂದಿವೆ. ಪ್ರಪಂಚದ ಬಹುತೇಕ ಕಲಾವಿದರ ಮೇಲಾದ ಬಾಲ್ಯದ ದಿನಗಳ ಪ್ರಭಾವವನ್ನು ಒಂದಲ್ಲ ಒಂದು ಬಗೆಯಲ್ಲಿ ಕಾಣಬಹುದು ಅವರ ಕಲಾ ರಚನೆಗಳ ವಿಶ್ಲೇಷನೆಗೆ ಈ ಮೂಲ ಸೆಲೆಯ ಅರಿವು ನೆರವಾಗುತ್ತದೆ. ಮಕ್ಕಳ ಮನಸ್ಸಿಗೆ ಅನುಭವಗಳೆಲ್ಲ ಜೀವಂತ ಜಡಜೀವ ಎಂಬ ಬೇಧ ಇರುವುದಿಲ್ಲ ಮರ, ಗಿಡ ಬಂಡೆ, ಕಲ್ಲು ಎಲ್ಲ

ಚೈತನ್ಯಶೀಲ ಎಳೆಯ ಮನಸ್ಸಿಗೆ ಜ್ಞಾನೇಂದ್ರಿಯಗಳು ಬೇಧವಿಲ್ಲ ಒಡಿಯಾಗಿ ಅನುಭವಿಸುವ ಶಕ್ತಿ ಇರುತ್ತದೆ. ನೋಡಿದನ್ನು ಅನುಭವಿಸಿದ್ದನ್ನು ಇಡಿಯಾಗಿ ಅವರ ಸತ್ವವನ್ನು ಹೀರಿ ಸೂಕ್ತ ಪ್ರಜ್ಞೆಯಲ್ಲಿ ಒಡಿದಿಡುತ್ತದೆ. ಅವರಲ್ಲೂ ದೃಶ್ಯಾನುಭವಗಳು ದೊಡ್ಡವರಲ್ಲಿ ಕಲಾವಿದರಲ್ಲಿ ಮಾತ್ರ ಇಂತಹ ಗುಣ ಕಾಣಬಹುದು. ಮಕ್ಕಳ ಮನಸ್ಸು ಆ ಬಗೆಯದು ಅವರಲ್ಲಿ ಯಾರಲ್ಲಿ ದೃಶ್ಯಶಕ್ತಿ ಪ್ರಬಲ್ಯವಾಗಿದೆಯೋ ಅವರು ಮುಂದೆ ಕಲಾರಚನೆಗಳಲ್ಲಿ ಬಾಳಬಹುದು. ಅದು ಪ್ರಜ್ಞಾಪೂರಕವಾಗಿಯೂ ಪ್ರಭಾವ ಬೀರಬಹುದು. ಹಡಪದ ಅವರ ಮೇಲೆ ಬಾದಾಮಿಯ ಬಾಲ್ಯ ದಿನಗಳ ಪ್ರಭಾವ ಅಂತಹದು.

ಬಾಲ್ಯದಿಂದಲೂ ಹಡಪದ ಅವರು ದೃಕ್ ಗ್ರಹಣ ಶಕ್ತಿ ಪ್ರಬಲವಾದದ್ದು. ಸಣ್ಣ ಬಾಲಕ ಅಕ್ಷರ ಕಲಿಸಲು ತಂದೆ ಬಾಳಚಾರ್ ಮಾಸ್ತರ ಬಳಿ ಕರೆದೊಯ್ದುದರು. ಕಲಿಕೆಯ ಪ್ರಾರಂಭ ಸಾಂಪ್ರದಾಯಿಕವಾಗಿ ಆಗಬೇಕೆಂಬುವುದು ತಂದೆಯ ಬಯಕೆ. ಮಾಸ್ತರರು ಶಿಷ್ಯನನ್ನು ಎದುರಿಗೆ ಕೂರಿಸಿ ವಿಧಿವತ್ತಾಗಿ ಅಭ್ಯಾಸಕ್ಕೆ ನಾಂದಿಹಾಕಿದರು. ಸೆಗಣಿ ಸಾರಿಸಿದ ಹಸಿರು ನೆಲದ ಮೇಲೆ ಕೆಂಪು ಸುಣ್ಣದಿಂದ ಒಂದು ವೃತ್ತ ಬರೆದರು. ನಡುವೆ ಅಬರೆದ ಬಾಲಕನಿಗೆ ಕಂಡಿದ್ದು ಅಕ್ಷರವಲ್ಲ ಹಸಿರು ಬಣ್ಣಕೆಂಪು ವೃತ್ತಅಕ್ಷರದ ಆಕಾರಗಳು ಆ ವಯಸ್ಸಿಗೆ ಆ ಬಾಲಕನಿಗೂ ಬಣ್ಣ ಆಕಾರಗಳು ಸೂಕ್ಷ್ಮ ಸಂವೇಧನೆ ಅದು ಸಹಜವಾಗಿ ಬಂದಿತ್ತು. ವಂಶದಿಂದ ಬಂದಿದೆ. ಎಂದರೆ ಮನೆಯಲ್ಲಿ ಸಂಗೀತದ ಎಲ್ಲಾ ಆಸಕ್ತರು ಕಲೆಯ ಸಂಸ್ಕಾರಕ್ಕೆ ಅಲ್ಲಿನ ಸಾಂಸ್ಕೃತಿಕ ಪರಿಸರ ಕಾರಣ ಎನಿಸುತ್ತದೆ.

ಹಡಪದ ಅವರು ರಚಿಸಿರುವ ನಿಸರ್ಗ ದೃಶ್ಯಗಳಲ್ಲಿ ಬಾಲ್ಯದ ಅನುಭವಗಳ ಪ್ರಭಾವ ಬಗೆ ಬಗೆಯಾಗಿ ಸೇರಿ ಮೂಡಿಬಂದಿದೆ. ಬಂಡೆಗಳ ಗಾತ್ರದ ದೃಢತೆ ಘನತೆ salidity ಹಿಂದೆ ವಿವರಿಸಿದಂತಹ ಬದಲಾಗುವ ನಮ್ಮ ಗುಣ plasticiy ಬಣ್ಣದ ತುಣುಕು ತಾಣಗಳು palhes ಆಕಾರಗಳ ರೇಖಾತ್ಮಕ ಒಂದಕ್ಕೊಂದು ಒತ್ತಿ ನಿಲ್ಲುವ ಬಗೆಗಳು ಇವೆಲ್ಲ ನಿಸರ್ಗ ದೃಶ್ಯಗಳು ಅಲ್ಲದೇ ಅವರ ಅಮೂರ್ತ ಚಿತ್ರಗಳಲ್ಲೂ ಕಾಣಿಸುತ್ತದೆ.

ಹಡಪದ ಅವರ ಕಲೆಯ ಎಲ್ಲಾ ಬಗೆಯ ಮಾಧ್ಯಮಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಅವರ ಭಾವಚಿತ್ರಗಳು ಅವರದೇ ಆದ ಶೈಲಿಯಿಂದ ವಿಶೇಷತೆ ಪಡೆಯುತ್ತವೆ. ಅಲ್ಲದೇ ಅವರ ಸೃಜನಾತ್ಮಕ ಸಂಯೋಜನಾ ಚಿತ್ರಗಳು ಆಲೋಚನೆ ಗಂಭೀರತೆಯನ್ನು ವ್ಯಕ್ತಪಡಿಸಿತ್ತದೆ. ಒಂದು ಸಂಸ್ಕೃತಿಯ ಜೊತೆಗೆ ಅವರ ಮೌಲ್ಯಗಳನ್ನು ಶೋಧಿಸಲು ಹೊರಟಿರುವ ಅವರ ಬದುಕು ಅರ್ಥಪೂರ್ಣ ಹಾಗೂ ಅನುಪಮವಾದದ್ದು.

೧೯೬೦ ದಶಕದಲ್ಲಿ ನಾಲ್ವರು ಸ್ನೇಹಿತರು ಒಂದುಗೂಡಿ ಕಟ್ಟಿದ ನಾವು ನಾಲ್ವರು ಎಂಬ ಕಲಾವಿದರ ಗುಂಪು ಕಲಾಕ್ಷೇತ್ರದಲ್ಲಿ ಒಂದು ಹೊಸ ಕ್ಷಿತಿಜ ಮೂಡಿಸಿತು. ಆಧುನಿಕ ಕಲೆಯ ಪ್ರವೇಶ ಸಂದರ್ಭದ ಸಂದಿಗ್ಧ ಸ್ಥಿತಿಯಲ್ಲಿ ಈ ಕಲಾವಿದರ ಗುಂಪು ಹೊಸ ಅಲೆಗಳನ್ನೆ ಎಬ್ಬಿಸದಲ್ಲದೇ ಕಲಾವಿದರ

ರೂಪರೇಶಗಳನ್ನು ಪರಿವರ್ತಿಸುವುದರಲ್ಲಿ ಅರಿಸಿಕೊಂಡ ಹಡಪದ ಅವರನ್ನು, ಬೆಂಗಳೂರಿನ ಕೆನ್ ಕಲಾ ಶಾಲೆಯನ್ನು ಆರಂಭಿಸುವುದರೊಂದಿಗೆ ಏಕೈಕ್‌ಶಕ್ತಿಯಾಗಿ ಹೋರಾಡುತ್ತ ಆ ಕಲಾಶಾಲೆಯ ಬೆಳವಣಿಗೆಯ ಜೊತೆಗೆ ಅನೇಕ ವಿದ್ಯಾರ್ಥಿಗಳನ್ನು ಬೆಳೆಸಿದರು. ಕಲೆಗಾಗಿ ಈ ನಾಡಿಗಾಗಿ ಅವರು ಸಲ್ಲಿಸಿದ ಸೇವೆ ಪ್ರಶಂಸನೀಯವಾದದ್ದು. ಹಡಪದ ಅವರ ಕೈಯಲ್ಲಿ ಪಳಗಿದ ವಿದ್ಯಾರ್ಥಿಗಳು ಇಂದು ದೇಶ ವಿದೇಶಗಳಲ್ಲಿ ಹೆಸರು ಮಾಡಿದ್ದಾರೆ. ಇವರೆಲ್ಲ ಹಡಪದ ಅವರ ಅಧ್ಯಾಪಕ ಬದುಕಿಗೆ ಘನತೆ ಗೌರವ ತಂದುಕೊಟ್ಟಿದ್ದಾರೆ.[೭]

ಹಡಪದ ಅವರು ಕಲಿಕೆ ಮತ್ತು ಗ್ರಹಿಕೆಗಳೆರಡರಲ್ಲೂ ಕಲಾತ್ಮಕ ಕೌಶಲ್ಯತೆ ವಿಶೇಷ ಕಾಣಲಿದೆ. ಇದು ಸಹಜವಾಗಿ ಅವರ ಶಿಕ್ಷಣ ಕ್ರಮದಕೇಂದ್ರವು ಆಗಿದೆ. ಈ ಕ್ರಮದಲ್ಲಿ ಬೌದ್ಧಿಕ ಸಾತ್ವಿಕ ಪ್ರಶ್ನೆಗಳಿಗಿಂತ ರೂಪನಿಷ್ಠೆ ಅತ್ಯಂತ ಮುಖ್ಯ ಹಾಗೆಂದು ವಿನ್ಯಾಸ ತತ್ವಗಳ ಬೋಧನೆಯಲ್ಲಿ ವೈಚಾರಿಕತೆಗೆ ಅವಕಾಶ ಇಲ್ಲವೆಂದು ಅವರ ಅರ್ಥವಲ್ಲ. ಈ ರೀತಿಯ ವಿಚಾರ ವಾಗ್ವಾದಗಳಿದ್ದರೂ ಅವು ಆಯಾ ಸಂಯೋಜನೆಗೆ ಬಂಧ ರೂಪಗಳ ಗುಣ ಮತ್ತು ಲಕ್ಷಣಗಳಿಂದ ಪ್ರತ್ಯೇಕವಾಗಿ ದೃಶ್ಯೇತರ ನೆಲೆಯಲ್ಲಿ ಮಾತ್ರ ಅವು ಆಯಾ ಕೃತಿಯ ವಿಷಯ ಮತ್ತು ರೂಪಗಳ ಸಂಬಂಧವು. ಇಲ್ಲಿ ಅಗತ್ಯವಾದಷ್ಟು ಚರ್ಚೆಗೆ ಒಳಗಾಗಿಲ್ಲ ಈ ಶಿಕ್ಷಣ ಕ್ರಮದಿಂದ ನೇರವಾಗಿ ಪ್ರಭಾವಿತರಾಗುವ ಹಡಪದ ಅವರ ಹಲವು ಪ್ರತಿಭಾವಂತ ವಿದ್ಯಾರ್ಥಿಗಳ ಕೃತಿಗಳು ಈ ಅಂಶವನ್ನು ನೇರವಾಗಿ ಸ್ಪಷ್ಟಪಡಿಸಿ ರೂಪವೈವಿಧ್ಯ ಮತ್ತು ನಯವಿನಯತೆಗಾಗಿ ಪ್ರಯೋಗ ಶೀಲತೆಯನ್ನೆ ಗೀಳಾಗಿಸಿಕೊಂಡಿರುವ ಹಲವಾರು ಕೃತಿಗಳಲ್ಲಿ ನೋಡಬಹುದಾಗಿದೆ.[೮]

ಹಡಪದ ಅವರು ಹಲವಾರು ಪ್ರಕಾರದ ಕಲಾಕೃತಿಗಳನ್ನು ರಚನೆ ಮಾಡಿ ನಾಡಿನಾದ್ಯಂತ ಸಂಚರಿಸಿ ಕಲಾಸಂಸ್ಕೃತಿಯನ್ನು ಐದು ದಶಕಗಳ ಕಾಲ ಕಲಾಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆಗೈದವರು.ಹಡಪದ ಅವರು ಕಲಾಶಿಕ್ಷಕರಾಗಿ ಪ್ರಾಚಾರ್ಯರಾಗಿ ಆದರ್ಶಕಲಾವಿದರಾಗಿ ಈ ಕಲಾಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.ರಾಜ್ಯ ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಚಿತ್ರಕಲೆಯಲ್ಲಿ ವಿಶಿಷ್ಟ ಸಾಧನೆಗೈದ ಕಲಾವಿದರಿಗೆ ನೀಡುವ ಪ್ರತಿಷ್ಠಿತ ಪ್ರಶಸ್ತಿ ಗೌರವಗಳು ಹಡಪದ ಅವರನ್ನು ಅರಿಸಿ ಬಂದಿವೆ. ಇಂತ ಕ್ರಿಯಾಶೀಲ ವ್ಯಕ್ತಿತ್ವದ ಮಹಾನ ಚೇತನ ೨೦೧೩ ಡಿಸೆಂಬರ್ ೨೩ ರಂದು ಕಲಾಲೋಕದಿಂದ ಕಣ್ಮರೆಯಾದರು ಇಂದು ಅವರ ನೆನಪು ಮತ್ತು ಕಲಾಕೃತಿಗಳು ಮಾತ್ರ ಉಳಿದಿವೆ.

ಭಾವಚಿತ್ರಗಳು

ಸ್ವಾತಂತ್ರ್ಯೋತ್ತರದ ಆದಿಯ ಒಂದೆರಡು ದಶಕಗಳ ಅವಧಿಯಲ್ಲಿ ಭಾವಚಿತ್ರವನ್ನು ಗಂಭೀರ ಪ್ರಕಾರ ಎಂದು ಗುರುತಿಸಲಾಗಿತ್ತು. ಅಷ್ಟೇ ಅಲ್ಲದೇ ಮೈಸೂರಿನ ದಸರ ಕಲಾ ಪ್ರದರ್ಶನ ಅಕಾಡೆಮಿಗಳ ಕಲಾಪ್ರದರ್ಶನಗಳಲ್ಲಿಯೂ ಭಾವಚಿತ್ರಕ್ಕೆ ಹೆಚ್ಚಿನ ಪ್ರಾಧ್ಯಾನ್ಯತೆಯನ್ನು ನೀಡಲಾಗಿತ್ತು. ಆದರೆ ಇಂದಿನ ಸಮಕಾಲೀನ ಸಂದರ್ಭದಲ್ಲಿ ಭಾವಚಿತ್ರವನ್ನು ಜೊತೆಗೆ ಪ್ರಕೃತಿ ಚಿತ್ರ ಸ್ಥಿರ ಚಿತ್ರಗಳನ್ನು ಗಂಭೀರ ಪ್ರಕಾರವೆಂದು ಗುರುತಿಸುತ್ತಿಲ್ಲ. ಇದಕ್ಕೆ ಕಾರಣಗಳು ಇಲ್ಲವೆಂದಲ್ಲ ಮೇಲಿನ ಮೂರು ಪ್ರಕಾರಗಳು ಪ್ರಕೃತಿಯನ್ನು ಮತ್ತು ವಸ್ತುವೊಂದನ್ನು ನೇರವಾಗಿ ಅನುಕರಿಸುವುದರಿಂದ ಸೃಜನಶೀಲತೆ ಬಾಗದ

ಕಾರಣವಾಗುತ್ತವೆ. ಆದ್ದರಿಂದ ಸೃಜನಶೀಲತೆಯೆ ಪ್ರಧಾನವಾಗಿರುವ ಸಂಯೋಜನ ಕಲಾಕೃತಿಗಳನ್ನು ಮಾತ್ರ ಗಂಭೀರ ಕಲಾಪ್ರಕಾರ ವೆಂದೆ ಗುರುತಿಸಲಾಗುತ್ತದೆ.

ಹಡಪದ ಅವರಿಗೆ ಭಾವಚಿತ್ರಣವೂ ಹಲವು ತಂತ್ರಗಳನ್ನು ಆಯಾಮಗಳನ್ನು ಶೈಲಿಗಳನ್ನು ಇವಕ್ಕಿಂತಲೂ ತಮ್ಮ ಬದುಕಿನ ಉದ್ದಕ್ಕೂ ಬಹು ಸಂಖ್ಯೆಯಲ್ಲಿ ಭಾವಚಿತ್ರಗಳನ್ನು ಅನೇಕ ಸಂದರ್ಭಗಳಲ್ಲಿ ರಚಿಸುವ ಅವಕಾಶವನ್ನು ಹಡಪದ ಅವರು ಪಡೆದಿದ್ದಾರೆ. ಅವುಗಳಲ್ಲಿ ಬೇರೆ ಬೇರೆ ಕಲಾಶಾಲೆಗಳಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಾತ್ಯಕ್ಷಿಕೆ ನೀಡಿದ ಭಾವಚಿತ್ರಗಳೇ ಇವರಿಗೆ ಭಾವಚಿತ್ರದ ರಚನೆಯಲ್ಲಿ ವೈವಿಧ್ಯಮಯವಾದ ಅನುಭವ ಹಾಗೂ ಪಕ್ವತೆಯನ್ನೂ ನೀಡಿದೆ. ಹಡಪದ ಅವರಿಂದ ಮೂಡಿರುವ ಬಹು ಸಂಖ್ಯೆಯ ಭಾವಚಿತ್ರಗಳು ತೈಲವರ್ಣದವು.[೯] ಹಡಪದ ಅವರು ತೈಲವರ್ಣದಲ್ಲಿ ಭಾವಚಿತ್ರಗಳ ಪ್ರಯೋಗಗಳ ಪ್ರಮುಖ ವೈವಿಧ್ಯತೆ ಹಾಗೂ ಇಷ್ಟವಾದ ಮಾಧ್ಯಮಕ್ಕೆ ತಮ್ಮನ್ನು ತಾವು ಮರೆತು ಕೃತಿಗಳನ್ನು ರಚಿಸಿದ್ದಾರೆ.

ಭಾವಚಿತ್ರ-೧೯೭೨

ಹಡಪದ ಅವರು ಪ್ರಾರಂಭದ ಭಾವಚಿತ್ರಗಳಲ್ಲಿ ಬಾಹ್ಯಚಹರೆಗಳಿಗೆ ಹೆಚ್ಚಿನ ಒತ್ತು ನೀಡಿದನ್ನು ಇಲ್ಲಿನ ಕಲಾಕೃತಿಯಲ್ಲಿ ಕಾಣುತ್ತೇವೆ. ಹೆಚ್ಚಿನ ವಿವರಕ್ಕೆ ನಿಲುಕುವ ರೀತಿಯಲ್ಲಿ ರಚಿಸಲಾದ ಈ ಚಿತ್ರದಲ್ಲಿ ಕುಂಚದ ಬೀಸುಗಳು ನಿಯಮಿತವಾಗಿ ಓಡಾಡಿವೆ. ಚಿತ್ರದ ವರ್ಣಗಳು ರೂಪದರ್ಶಿ ವರ್ಣಗಳಿಗೆ ಹತ್ತಿರವಾಗಿಸುವ ಆಶಯ ಇಲ್ಲಿದೆ ಹಿನ್ನೆಲೆಯ ದಟ್ಟ ವರ್ಣ ಪಶ್ಚಿಮ ದೇಶದ ಭಾವಚಿತ್ರಗಳ ಹಿನ್ನೆಯನ್ನು ನೆನಪಿಸುತ್ತದೆ. ಭಾವಚಿತ್ರವು ಸಹಿತ ಪಶ್ಚಿಮ ಶೈಲಿಯನ್ನು ಅನುಸರಿಸಿದರು ಅಲ್ಲಿನ ರಮಣೀಯ ಸೆಳಕುಗಳು ಅಲ್ಲಲ್ಲಿ ಇಲ್ಲಿನ ಕುಂಚದ ಬೀಸುಗಳು ಮುಖದ ಉಬ್ಬು ತಗ್ಗುಗಳನ್ನು ಅಕಾಡಿಮಿಕ್ ಶೈಲಿಯನ್ನು ಹೊಂದಿರುವ ಬಗೆಯಲ್ಲಿ ರೂಪದರ್ಶಿಯ ಉಡುಪುಗಳಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿದ ಹಡಪದ ಅವರು ಮಸುಕಾದ ಬಗೆಯಲ್ಲಿ ಬೆಳಕಿನ ಛಾಯೆಯನ್ನು ಅವುಗಳಲ್ಲಿ ಸೃಷ್ಟಿಸುವುದಕ್ಕೆ ಕಾರಣಗಳಾಗಿವೆ.[೧೦] ನೀಲಿವರ್ಣದಲ್ಲಿ ಉಡುಪಿನ ಬೆಳಕಿನ ಸಾಂಧ್ರತೆ ನೀರಿಗೆಗಳನ್ನು ದಟ್ಟವರ್ಣಗಳನ್ನು ಲೇಪನ ಮಾಡಿದರೆ ಟೊಪ್ಪಿಗೆಗೆ ಪೂರಕವಾದ ಬಣ್ಣವಲ್ಲಿ ಉಣ್ಣೆಯ ನೈಜತೆಯನ್ನು ಹಡಪದ ಅವರು ತಂತ್ರಗಾರಿಕೆ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಭಾವಚಿತ್ರ-೧೯೭೮

ಹಡಪದ ಅವರ ಭಾವಚಿತ್ರಗಳಲ್ಲಿ ಸ್ತ್ರೀರೂಪ ದರ್ಶಗಳಲ್ಲಿ ಹೆಚ್ಚಿನ ಪ್ರಶಾಸ್ತ್ಯವನ್ನು ಪಡೆದಿರುವುದಕ್ಕೆ ಅಲ್ಲಿನ ಕ್ರಿಸ್ತ ಸನ್ಯಾಸಿಯ ಭಾವಚಿತ್ರದಂತಹ ಅನೇಕ ಭಾವಚಿತ್ರಗಳು ನಿದರ್ಶನವಾಗಿರುತ್ತವೆ. ವಿವರಕ್ಕೆ ನಿಲುಕುವ ಬಾವಚಿತ್ರರಲ್ಲಿ ರಮಣೀಯ ಸೆಳಕುಗಳಿಗೆ ಭಾವದಲ್ಲಿ ಮಿಂಚಿನಂತಹ ಸೆಳಕು ಸ್ಪಷ್ಟತೆ ಇದೆ. ಭಾವ ಚಹರೆಗೆ ಹೆಚ್ಚು ಒತ್ತು ಕೊಟ್ಟಿರುವುದರಿಂದ ಕುಂಚದ ಬೀಸುಗಳಿಗೆ ಸೌಮ್ಯವಾಗಿ ಕೋಲಾಜಿನ ರಚನಾತಂತ್ರವನ್ನು ನೆನಪಿಸುತ್ತದೆ. ಉಡುಪು ರಚನೆಗೆ ವಿವರವಾದ ಆಧ್ಯತೆಯ ಒಲವನ್ನು ಪ್ರಕಟಿಸಿನ

ಹಡಪದ ಅವರು ಹಿನ್ನೆಲೆಯ ಚರ್ಮದ ಛಾಯೆಗಳ (ಸ್ಕಿನ್ ಟೋನ್) ವರ್ಣಗಳನ್ನು ಬಳಸಿಕೊಳ್ಳುವುದರ ಮೂಲಕ ಅಕಾಡೆಮಿಕ್ ಸಂಪ್ರದಾಯವನ್ನು ಮುರಿದಿದ್ದಾರೆ. ಅಕಾಡೆಮಿಕ್ ಸಂದರ್ಭದಲ್ಲಿ ಶಿಕ್ಷಕರು ಸಾಮಾನ್ಯವಾಗಿ ಹಸಿರು ಛಾಯೆಗಳಲ್ಲಿ ಹಿನ್ನೆಲೆಯಲ್ಲಿ ಸೃಷ್ಟಿಸಲು ವಿದ್ಯಾರ್ಥಿಗಳಿಗೆ ಸೂಚಿಸುತ್ತಾರೆ. ಆದರೆ ಹಡಪದ ಅವರು ಇಂತಹ ಹಲವು ಭಾವಚಿತ್ರಗಳ ಪ್ರಾತ್ಯಕ್ಷತೆಗಳಲ್ಲಿ ಎಂದಿನ ಸಂಪ್ರದಾಯವನ್ನು ಬದಿಗೆ ಸರಿಸಿ ನವೀನ ಪ್ರಯೋಗಗಳ ಮೂಲಕ ವಿದ್ಯಾರ್ಥಿಗಳಿಗೆ ಹೊಸ ಸಂಪ್ರದಾಯಗಳ ಜಾಡಿನಲ್ಲಿ ಕರೆದುಕೊಂಡು ಹೋಗುವ ಪ್ರಯತ್ನವನ್ನು ಇಲ್ಲಿ ಕಾಣಬಹುದು.[೧೧]

ಭಾವಚಿತ್ರ-೧೯೭೦

ನಾಲ್ಕಾರು ಅಂತ ಪ್ರಮಾಣದ ಮಾನವನ ದೇಹದ ಭಾಗವುಳ್ಳ ಇಲ್ಲಿನ ಚಿತ್ರಗಳು ಹಡಪದ ಅವರ ವಿವಿಧ ಕಾಲಘಟ್ಟಗಳಲ್ಲಿ ರಚಿಸುವುದು ಮಕ್ಕಳ ಭಾವಚಿತ್ರಗಳನ್ನು ರಚಿಸವುದು ತುಂಬಾ ಕಷ್ಟಕರ ಎಂಬ ಭಾವನೆ ಈ ಕ್ಷೇತ್ರದಲ್ಲಿದೆ ಏಕೆಂದರೆ ಮಕ್ಕಳಲ್ಲಿ ಮೈಮಾಟವು ದುಂಡುತನವನ್ನು ಹೊಂದಿರುತ್ತದೆ. ಈ ದುಂಡತನವನ್ನು ಚಿತ್ರರೂಪದಲ್ಲಿ ವ್ಯಕ್ತಪಡಿಸಬೇಕಾದರೆ ಮಾನವನ ಅಂಗರಚನಾ ಶಾಸ್ತ್ರದಲ್ಲಿ ಪರಿಪಕ್ವತೆ ಪಡೆದರೆ ಮಾತ್ರ ಭಾವಚಿತ್ರಗಳನ್ನು ರಚಿಸುವ ದಿಟ್ಟತನ ಬರುತ್ತದೆ. ಹಡಪದ ಅವರು ಎಂಟು ಹತ್ತು ವರ್ಷದ ಬಾಲೆಯೊಬ್ಬಳನ್ನು ಇಲ್ಲಿ ಚಿತ್ರಿಸಿದ್ದಾರೆ. ಗೋಧಿ ಕೆಂಪು ವರ್ಣದ ಬಾಹ್ಯ ಚಹರೆಗಳು ಹೆಚ್ಚಿನ ಒತ್ತು ನೀಡಲಾಗಿದೆ. ಈ ಭಾವಚಿತ್ರದಲ್ಲಿ ದೇಹದ ರಚನೆಯಲ್ಲಿ ಕುಂಚದ ದಟ್ಟ ಬೀಸುಗಳ ಮೇಲೆ ಚಿಕ್ಕ ಬೀಸುಗಳನ್ನು ಪಾಯಿಂಟಸ್ಟು ತಂತ್ರದಂತೆ ದೃಢಿಸಿಕೊಳ್ಳಲಾಗಿದೆ. ಬಾಲೆಯ ಮುಗ್ಧತೆಯನ್ನು ಮಿತವಾದ ವರ್ಣಗಳ ಪ್ಯಾಚಸ್‌ಗಳನ್ನು ಏಕರೀತಿಯ ದೃಢಿಸಿಕೊಳ್ಳಲಾಗಿರುವುದರಿಂದ ಬಾಲ್ಯದ ಎಳೆಯ ಭಾವಗಳು ಇಲ್ಲಿ ಮೃದುವಾಗಿ ಮೂಡಿವೆ. ಅಂಗಾಂಗಳ ದುಡಿದುತನವನ್ನು ನೆರಳು ಬೆಳಕಿನ ಮೂಲಕ ಸ್ಪಷ್ಟಪಡಿಸಲಾಗಿದೆ. ರೂಪದರ್ಶಿಯ ವರ್ಣಮೇಳಕ್ಕೆ ಹೊಂದುವಂತೆ ಹಿನ್ನಲೆಯನ್ನು ಅಸ್ಪಷ್ಟ. ಬೀಸುಗಳ ಮುಖಾಂತರ ಪಾರದರ್ಶಕವಾಗಿ ರಚಿಸಿದ ಕ್ರಮ ಇಲ್ಲಿದೆ. ಸಂಕ್ಷಿಪ್ತ ಕುಂಚದ ಸ್ಪರ್ಶಗಳ ಮುಖಾಂತರ ಕಣ್ಣಿನ ಕಾಂತಿ ಪ್ರಕಾಶನ ಚಿತ್ರಕ್ಕೆ ಚೈತನ್ಯ ತುಂಬಿದೆ. ಮುಖದ ನೆರಳಿನಲ್ಲಿ ಉಡುಪು ಮತ್ತು ಹಿನ್ನಲೆಯ ಪ್ರತಿಫಲನಗಳು ಸೂಕ್ಷ್ಮವಾಗಿ ಮೂಡಿರುವುದು ಈ ಭಾವಚಿತ್ರದ ಉತ್ತಮ ಗುಣ ವಿಶೇಷಗಳಲ್ಲಿ ಒಂದು.[೧೨]

ಭಾವಚಿತ್ರ-೧೯೮೯

ಈ ಭಾವಚಿತ್ರ ರಚನಾ ತಂತ್ರವು ಅಪ್ಪಟ ಅಕಾಡೆಮಿಕ್ ನೆಲೆಯಲ್ಲಿದೆ. ಮುಖದ ದುಂಡುತನಕ್ಕೆ ತಕ್ಕಂತೆ ಕುಂಚದ ಬೀಸುಗಳು ಅದೇ ದಿಕ್ಕಿನಲ್ಲಿ ಸಾಗಿರುವುದು ರೂಪದರ್ಶಿಯ ಕೆಂಪು ವರ್ಣದ ಚರ್ಮದ ಹೊಳಪು ಇಲ್ಲಿನ ಚಿತ್ರದ ಭಾವಕ್ಕೆ ಹಸನ್ಮುಖತೆಯನ್ನು ತಂದುಕೊಟ್ಟಿದೆ. ಕೆಂಪು ಮಿಶ್ರಿತ ಹಳದಿ ವರ್ಣ ಛಾಯೆಗಳ ತರತಮದ ನೆಲೆಯಲ್ಲಿ ನಿರ್ವಹಿಸಲ್ಪಟ್ಟ ಈ ಭಾವಚಿತ್ರದಲ್ಲಿ ವ್ಯಕ್ತಿಯ ವ್ಯಕ್ತಿತ್ವಕ್ಕೆ ಪೂರಕವಾದ ಭಾವಸ್ಫುರಣ ಪ್ರಕಟಗೊಂಡಿದೆ. ರೂಪದರ್ಶಿಯ ಮುಖದಲ್ಲಿ ಕಂಡುಬರುವ ದುಂಡು ಆಕೃತಿ ಸೃಷ್ಟಿಗೆ ಪೂರಕವಾದ ತಾಜಾತನದಿಂದ ಕೂಡಿದ ಪ್ರಖರ ವರ್ಣ ಸ್ಪರ್ಶ ಭಾವಚಿತ್ರವನ್ನು ಆಪ್ಯಾಯಮಾನಗೊಳಿಸಿದೆ

ಮುಖದಲ್ಲಿ ಮೂಡಿರುವ ಕುಂಚದ ಬೀಸುಗಳು ರೂಪದರ್ಶಿಯ ಟೊಪ್ಪಿಗೆ ಹಾಗೂ ಉಡುಪುಗಳಲ್ಲಿ ಗೌಣವಾಗಿದೆ ಇಲ್ಲಿ ಸುಲಭವಾದ ರಚನೆಗೆ ಹೆಚ್ಚು ಒಲವು ತೋರುವ ಹಡಪದರು ರೂಪದರ್ಶಿಯ ಮಾಟಕ್ಕೆ ತಕ್ಕಂತೆಯ ತೆಳುವಾದ ವರ್ಣ ಹಿನ್ನಲೆಯಲ್ಲಿ ಬಹು ವರ್ಣಗಳ ಸೌಂಗತ್ಯದಿಂದ ಮುಡಿಸಿಕೊಂಡಿದ್ದಾರೆ.[೧೩]

ಕುವೆಂಪು ಭಾವಚಿತ್ರ

೧೯೬೫ ರಲ್ಲಿ ರಚಿಸಿದ ಈ ಭಾವಚಿತ್ರವು ೩-೪ ಫೀಟ್ ಅಳತೆಯಲ್ಲಿ ತೈಲವರ್ಣದಲ್ಲಿ ಚಿತ್ರಿಸಲಾಗಿದೆ ಕುವೆಂಪು ಅವರ ಸೃಜಸ್ಥಿತಿ ಹಾಗೂ ಅವರು ಆಕಾಶದ ಕಡೆ ಮುಖ ಮಾಡಿ ಯಾವುದೊ ಯೋಚನಾ ಲಹರಿಯಲ್ಲಿ ನೋಡುವಾಗ ಚಿತ್ರಿಸಿದ್ದಾರೆ.ಕುವೆಂಪು ಅವರ ಬಿಳಿ ವರ್ಣದ ಕೂದಲುಗಳು ಮುಖದಲ್ಲಿಯ ಹಾವಭಾವದ ಸೂಕ್ಷ್ಮತೆಯ ವರ್ಣ ಬಳಕೆಯಲ್ಲಿ ಸೌಂದರ್ಯಪ್ರಜ್ಞೆ ನೆರಳು ಬೆಳಕಿನ ಸೃಜ ಸ್ಪಷ್ಟತೆ ಕಲಾಕೃತಿಗೆ ಮೆರಗು ತಂದಿದೆ.

ಕುವೆಂಪು ಹಾಕಿರುವ ಪೈಜಾಮಿಗೆ ಹಡಪದವರು ತಮ್ಮ ತಂತ್ರ ಹಾಗೂ ಶೈಲಿ ಬಳಸಿಕೊಂಡು. ಕುಂಚದ ಮೂಲಕ ರೇಖೆಗಳನ್ನು ಹಾಕಿ ದಾರದ ಎಳೆಗಳನ್ನು ತೋರಿಸಲು ಪ್ರಯಂತಿಸಿದ್ದಾರೆ. ಹಾಗೂ ರೂಪದರ್ಶಿಯ ಹಿಂದಗಡೆ ಆಕಾಶದ ದೃಶ್ಯ ಚಿತ್ರಿಸಿ ಸಂಯೋಜನೆ ಮಾಡಿದ್ದರೆ. ಕುವೆಂಪು ಅವರು ಒಬ್ಬ ಕವಿಯಾಗಿ ಗುರುತಿಸುವಿಕೆಯಾಗಿ ಅವರ ಜೇಬಿನಲ್ಲಿ ಕೆಂಪು ವರ್ಣದ ಪೆನ್ನು,ಕೈಯಲ್ಲಿ ಪುಸ್ತಕ ಹಿಡಿದು ನಿಂತ್ತಿರುವದು ಕಲಾಕೃತಿಗೆ ಹೆಚ್ಚು ಮೆರಗು ಬಂದಿದೆ. ಈ ಕಲಾಕೃತಿಯು ಕನ್ನಡ ವಿಶ್ವವಿದ್ಯಾಲಯ ಹಂಪಿಯ ಸಿರಿಗನ್ನಡ ಗ್ರಂಥಾಲಯದಲ್ಲಿ ಸಂಗ್ರಹದಲ್ಲಿದೆ.

ಹಡಪದರ ವಿವಿಧ ಕಾಲ ಘಟ್ಟಗಳಲ್ಲಿ ರಚಿಸಿದ ಭಾವಚಿತ್ರಗಳನ್ನು ಕುರಿತು ಚಿ.ಸು.ಕೃಷ್ಣಶೆಟ್ಟಿಯ ಹೀಗೆ ಅಭಿಪ್ರಾಯ ಪಡುತ್ತಾರೆ. ಹಡಪದರ ಆರಂಭದ ಭಾವಚಿತ್ರಗಳಲ್ಲಿದ್ದ ಉಜ್ವಲ ವರ್ಣಗಳ ಬಳಕೆ ಹಾಗೂ ನಿರ್ವಹಣೆಯಲ್ಲಿದ್ದ ಚೈತನ್ಯ ತಾಜಾತನಗಳು ಕ್ರಮೇಣ ಮುಸುಕಾಗುತ್ತ ಸಾಗಿದೆಯೇಂದೆ ನನ್ನ ಭಾವನೆ. ಈಚೀನ ವರ್ಷಗಳಲ್ಲಿ ಆ ರೊಮ್ಯಾಂಟಿಕ್ ಸೆಳಕುಗಳಿಗೆ ಆಧ್ಯತೆಯಿಲ್ಲದಿರುವುದೂ ಇದಕ್ಕೆ ಕಾರಣವಾಗಿರಬಹುದು. ಅಂತೆಯೇ ಈಗಿನ ಕೃತಿಗಳಲ್ಲಿ ಬಣ್ಣಗಳ ಬಳಕೆಯೂ ಸೀಮಿತವಾಗಿದ್ದೆ ಹಿಂದಿನ ಭಾವಚಿತ್ರಗಳಲ್ಲಿ ಚರ್ಮದ ಒಳ ಪದರನ್ನು ಹೊರ ತೆಗೆಯುವತ್ತಿದ್ದಾರೋ ಎನ್ನುವಂತೆ.ಅತಿಶಯಿಸಿದ ವರ್ಣಗಳಿದ್ದರೆ ಈಗಿನ ಕೃತಿಗಳು ಸರಳತೆಯ ಹಾದಿ ಹಿಡಿದಿವೆ ಹಿಂದಿನ ಕೃತಿಗಳಲ್ಲಿ ಮುಖದ ಘನತ್ವವನ್ನು ಕಡುವಾದ ನೆರಳು ಬೆಳಕಿನ ಸಂಯೋಜನೆಯನ್ನು ರೂಪಿಸುವ ಒತ್ತಾಯವಿದ್ದರೆ ಇತ್ತೀಚಿನ ಕೃತಿಗಳಲ್ಲಿ ಅದು ಮೃದುತ್ವದ ಕಡೆಗೆ ಸಾಗಿದೆ. ಇವುಗಳಲ್ಲಿ ನಿರುದ್ವಗ್ನತೆಯಿದೆ ಇದರ ಈಚಿನ ಕೆಲವು ಭಾವಚಿತ್ರಗಳಲ್ಲಿನ ಮೈವಳಿಕೆ ಹೆಬ್ಬಾರರ ಕೃತಿಗಳಲ್ಲಿನ ಮೈವಳಿಕೆಯನ್ನು ನೆನಪಿಸುತ್ತದೆ.[೧೪]

ಈ ಹಿನ್ನಲೆಯಲ್ಲಿ ಕರ್ನಾಟಕದ ಕಂಡ ಒಬ್ಬ ಉತ್ತಮ ಭಾವಚಿತ್ರ ಕಲಾವಿದ ಹಡಪದ ತಮ್ಮ ಪ್ರಯೋಗಶೀಲತೆಯನ್ನು ಭಾವಚಿತ್ರದಂತಹ ಅಕಾಡೆಮಿಕ್ ಪ್ರಕಾರಕ್ಕು ವಿಸ್ತರಿಸಿಕೊಂಡಿರುವ ಸಾಧ್ಯತೆಗಳು ನಮ್ಮ ಮುಂದಿನ ಪೀಳಿಗೆಗ ಮಾದರಿಯಾಗಬಲ್ಲವು.

ಅಡಿ ಟಿಪ್ಪಣಿ

1. ಎಂ ಎಚ್ ಕೃಷ್ಣಯ: ಆರ್ ಎಂ ಹಡಪದ. ಪುಟ–೧
2. ಕಲಾನ್ವೇಷಕ ಆರ್. ಎಂ. ಹಡಪದ: ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ.ಪುಟ–೧೨
3. ಎಂ ಎಚ್ ಕೃಷ್ಣಯ: ಆರ್ ಎಂ ಹಡಪದ. ಪುಟ–೨
4. ಎಂ ಎಚ್ ಕೃಷ್ಣಯ: ಆರ್ ಎಂ ಹಡಪದ. ಪುಟ–೩
5. ಎಂ ಎಚ್ ಕೃಷ್ಣಯ: ಆರ್ ಎಂ ಹಡಪದ. ಪುಟ–೫
6. ಚಿತ್ರಲೇಖ: ಡಾ. ಮಲ್ಲಿಕಾರ್ಜುನ ಸಿ . ಬಾಗೋಡಿ. ಪುಟ–೭೪
7. ಚಿತ್ರಲೇಖ: ಡಾ. ಮಲ್ಲಿಕಾರ್ಜುನ ಸಿ . ಬಾಗೋಡಿ. ಪುಟ–೭೫
8. ಕಲಾನ್ವೇಷಕ ಆರ್. ಎಂ. ಹಡಪದ: ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ.ಪುಟ–೭೧
9. ಕಲಾನ್ವೇಷಕ ಆರ್. ಎಂ. ಹಡಪದ: ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ.ಪುಟ–೧೨೪
10. ಕಲಾನ್ವೇಷಕ ಆರ್. ಎಂ. ಹಡಪದ: ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ.ಪುಟ–೧೨೫
11. ಕಲಾನ್ವೇಷಕ ಆರ್. ಎಂ. ಹಡಪದ: ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ.ಪುಟ–೧೨೬
12. ಕಲಾನ್ವೇಷಕ ಆರ್. ಎಂ. ಹಡಪದ: ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ.ಪುಟ–೧೩೧
13. ಕಲಾನ್ವೇಷಕ ಆರ್. ಎಂ. ಹಡಪದ: ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ.ಪುಟ–೧೨೮
14. ಕಲಾನ್ವೇಷಕ ಆರ್. ಎಂ. ಹಡಪದ: ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ.ಪುಟ–೧೩೪

ಆರ್.ಎಂ.ಹಡಪದ ಅವರ ಭಾವಚಿತ್ರಗಳು



ಭಾವಚಿತ್ರ ೧

ಭಾವಚಿತ್ರ ೨



ಆರ್.ಎಂ.ಹಡಪದ ಅವರ ಭಾವಚಿತ್ರಗಳು



ಭಾವಚಿತ್ರ ೩

ಭಾವಚಿತ್ರ ೪



ಭಾವಚಿತ್ರ ೫





ಎಂ.ಎ.ಚೆಟ್ಟಿ



"ಭಾರತೀಯ ನಿಸರ್ಗದ ನಿಗೂಢತೆಯಲ್ಲೂ ಅದರ ಅದ್ಭುತ ಸೌಂದರ್ಯದಲ್ಲೂ ಬದುಕಿನ ಗಾಢತೆಯನ್ನು ಹಾಗೂ ಶಿವಚೈತನ್ಯವನ್ನು ಕಂಡವರು. ಆ ಶಕ್ತಿಯನ್ನೇ ಕುರಿತು ಚಿಂತಿಸಿ ಪ್ರೀತಿಸಿದರು. ಆರಾಧಿಸಿದರು. ಅದರಲ್ಲೇ ಪರಮಶಾಂತಿಯನ್ನು ಕಂಡುಕೊಂಡರು. ಕೊನೆಗೆ ಅದನ್ನೇ ಜೀವನ ಮುಕ್ತಿಯ ಸಾಧನವನ್ನಾಗಿಸಿಕೊಂಡರು. ಈ ಹಿನ್ನೆಲೆಯಲ್ಲಿ ಮೈತಾಳಿದ ಕಲಾಪ್ರಕಾರಗಳೇ ವ್ಯಕ್ತಿ ಮತ್ತು ಸಮಷ್ಟಿಹಿತಕ್ಕೆ ಆನಂದವನ್ನು ನೀಡುವಂತಹವುಗಳಾಗಿವೆ. ಲಲಿತ ಕಲೆಗಳಲ್ಲಿ ಒಂದಾದ ಚಿತ್ರಕಲೆ ಗಮನಾರ್ಹವಾದ ಕಲೆಯಾಗಿದ್ದು, ಈ ಕ್ಷೇತ್ರಕ್ಕಾಗಿ ಅರ್ಪಿಸಿಕೊಂಡ ಚಿತ್ರಕಾರ[೧] ಎಂ.ಎ.ಚೆಟ್ಟಿ ಅವರು ಪ್ರಾಚೀನ ಪುಣ್ಯ ಪುರುಷರ ಹಾಗೂ ಐತಿಹಾಸಿಕ ವ್ಯಕ್ತಿಗಳ ಚಿತ್ರ ನಿರ್ಮಾಣದಲ್ಲಿ ನಿಷ್ಣಾತರಾಗಿ ಕಲಾಜೀವನದಲ್ಲಿ ಅದ್ಭುತ ಸಾಧನೆಯನ್ನು ಸಾಧಿಸಿದ್ದಾರೆ.[೨]

ಕರ್ನಾಟಕ ಬೆಳಗಾಂವಿ ಜಿಲ್ಲೆಯ ಅಥಣಿ ಎಂಬಲ್ಲಿ ಮಾರ್ಚ್೭. ೧೯೦೫ ರಂದು ಜನಿಸಿದರು. ೧೯ನೆಯ ಶತಮಾನದ ಅಥಣಿ ಶಿವಯೋಗಿಗಳ ಕಾಯಕ ಕ್ಷೇತ್ರ ಅಥಣಿ. ಇಲ್ಲಿಯ ಗಚ್ಚಿನಮಠದಲ್ಲಿ ತಮ್ಮ ಭಕ್ತಿ ಜ್ಞಾನ ವೈರಾಗ್ಯಗಳಿಂದ ಲೋಕದ ಗೌರವಕ್ಕೆ ಪಾತ್ರರಾದರು. ಇಂತಹ ಶರಣ ಸಂಸ್ಕೃತಿಯ ಮಠಕ್ಕೆ ಭಕ್ತರಾಗಿ ನಿಷ್ಠೆಯಿಂದ ಬದುಕಿದ ಮನೆತನ ಚೆಟ್ಟಿಯವರು. ಇಂತಹ ಪರಿಸರದಲ್ಲಿ ಹುಟ್ಟಿ ಬೆಳೆದವರು ಎಂ.ಎ.ಚೆಟ್ಟಿಯವರು.

ಎಂ.ಎ.ಚೆಟ್ಟಿ ಅವರ ಬಾಲ್ಯ ಮತ್ತು ಶಿಕ್ಷಣ

ಶರಣ ಸಂಸ್ಕೃತಿಯ ಮನೆತನ, ಗುರು, ಲಿಂಗ ಜಂಗಮದಲ್ಲಿ ಅತ್ಯಂತ ಭಕ್ತಿ, ಶ್ರದ್ಧೆ, ಗೌರವವುಳ್ಳವರಾಗಿ ಲಿಂಗ ಪೂಜೆಯೇ ಅವರ ಬದುಕಿನ ಅಂಗವಾಗಿತ್ತು. ಅಂಥ ಧಾರ್ಮಿಕ ಮನೋಭಾವವುಳ್ಳವರಾಗಿ ಚೆಟ್ಟಿಯವರ ಮನೆತನದ ಸಂಸ್ಕೃತಿಯ ಬೆಳೆದು ಬಂದಿತ್ತು.

ಚೆಟ್ಟಿಯವರ ಜನ್ಮ ವೃತ್ತಾಂತದ ಈ ಹಿನ್ನೆಲೆಯೂ ಸಹಿತ ಒಂದು ಮಹತ್ವದ ಘಟನೆಯಾಗಿದೆ. ಶಿವಗಂಗಮ್ಮನವರಿಗೆ ಒಂದರ ಮೇಲೊಂದರಂತೆ ಮೂವರು ಹೆಣ್ಣು ಮಕ್ಕಳು ಜನಿಸಿದರು. ಶಿವನವ್ವ ಈರವ್ವ ಮತ್ತು ನೀಲವ್ವ ಹೀಗೆ ಮೂವರು ಹೆಣ್ಣು ಮಕ್ಕಳಾದರೂ ಗಂಡು ಮಗುವೊಂದು ಜನಿಸಲಿಲ್ಲವೆಂಬ ಅಸಮಾಧಾನ ಮನೆಯವರನ್ನು ಕಾಡುತ್ತಿತ್ತು. ಹಿಂದಿನ ಕಾಲದಲ್ಲಿ ಗಂಡು ಮಗುವಿನ ಬಗ್ಗೆ ಇರುವ ವಿಚಾರ, ಭಾವನೆಗಳು ಬೇರೆಯೇ ಆಗಿದ್ದವು. ಗಂಡು ಮಗುವಿಲ್ಲದೇ ಮೋಕ್ಷ ದೊರಕದು. ಆತನೇ ವಂಶೋದ್ಧಾರಕ. ಶ್ರೇಷ್ಠ ಎಂಬಿತ್ಯಾದಿ ತಿಳುವಳಿಕೆಯನ್ನು ಹೊಂದಿದ್ದ ಕಾಲ. ಮನೆಯಲ್ಲಿ ಅತ್ತೆ–ಮಾವಂದಿರು ನೆರೆಯ ನೆರೆ-ಹೊರೆಯವರು ನನ್ನ ತಾಯಿಗೆ ಏನೇ ಶಿವಗಂಗೂ ಬರೆ ಹೆಣ್ಣಾಗಿ ಹಿಡಿಶಾಪ ಹತ್ತಿದಲ್ಲ ಹಿಂಗಾದರ ಮುಂದ ಹ್ಯಾಂಗವ್ವಾ ಮನಿತಾನ ಬೆಳಸಲಾಕ ಬಂದಿದ್ದಾದರೂ ಗಂಡು ಮಗ ಬೇಕು ಎಂದು ಆಡಿಕೊಳ್ಳುತ್ತಿದ್ದರಂತೆ. ಹೆಣ್ಣಾದರೆ ಕೊಟ್ಟ ಮನೆಗೆ ಹೋಗಿ ಅವರ ವಂಶದ ಉದ್ಧಾರ ಮಾಡುವಂಥವರು ಎನ್ನುವ ಭಾವನೆ

ಅವರಲ್ಲಿ ಇತ್ತು. ಆ ಸಂದರ್ಭದಲ್ಲಿ ಶಿವಗಂಗವ್ವನ ಮನಸ್ಸಿಗೆ ಬಹಳ ನೋವುಂಟಾಗುತ್ತಿತ್ತು. ಆಗ ದೇವರ ಮನೆಯಲ್ಲಿ ಕುಳಿತು ಅತ್ಯ ಸಮಾಧಾನ ಪಟ್ಟುಕೊಳ್ಳುತ್ತಿದ್ದಳು.[೫]

ಶಿವಸಂಗವ್ವ ಪ್ರತಿದಿನ ಸ್ನಾನ ಮುಗಿಸಿದ ಮೇಲೆ ಲಿಂಗಪೂಜೆ ಮಾಡಿಕೊಂಡು ಗಚ್ಚಿನಮಠಕ್ಕೆ ಹೋಗಿ ನಮಸ್ಕರಿಸಿ ಎಡೆಕೊಟ್ಟು ಬರುತ್ತಿದ್ದರು. ಒಂದು ಅಮವಾಸ್ಯೆ ದಿನ ತಾಯಿ ಶಿವಸಂಗವ್ವ "ಶಿವಯೋಗಿಗಳ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, ಗಂಡು ಮಗನ ಭಾಗ್ಯ ಕೇಳಿಕೆಬಿಡಳಂತೆ ಅವಕ್ಕೆ "ಶಿವಯೋಗಿಗಳು ಮುಗಳು ನಗುತ್ತ" ಯಾಕವ್ವಾ ತಂಗಿ ಗಂಡು ಮಗನ ಆಸೆ ಆತೆನವಾ. ಆಗಲಿ ಸಂತೋಷ. ಎಂದು ನುಡಿದು ತಾಯಿಯ ಉಡಿಯಲ್ಲಿ ಎರಡು ಉತ್ತತ್ತಿ ಹಾಕಿ ಆಶೀರ್ವದಿಸಿದಾಗ ಶಿವಸಂಗವ್ವ ಶಿವಯೋಗಿಗಳ ಶ್ರೀಪಾದಕ್ಕೆ ನಮಸ್ಕರಿಸಿ ಗಂಡು ಹುಟ್ಟಿತಾವುದೆಂಬ ಸಂಭ್ರಮದಲ್ಲಿ ಮೇಲೇಳುವಾಗ ಉಡಿಯಲ್ಲಿದ್ದ ಎರಡು ಉತ್ತತ್ತಿಗಳಲ್ಲಿ ಒಂದು ಜಾರಿ ಕೆಳಕ್ಕೆ ಬಿದ್ದಿತು. "ಆಗ ಶಿವಯೋಗಿಗಳು ಆಶೀರ್ವಾದ ಗಟ್ಟಿ ಹಿಡಿಬೇಕಪ್ಪಾ... ಎಂದು ನುಡಿದು ಒಂದು ಕ್ಷಣ ಕಣ್ಮುಚ್ಚಿಕೊಂಡು ಆಯಿತು ಶಿವನಿಚ್ಚೆ" ಎಂದರಂತೆ ತ್ರಿಕಾಲ ಜ್ಞಾನಿಗಳಾದ ಶಿವಯೋಗಿಗಳು ಬಿದ್ದಂತ ಉತ್ತತ್ತಿ ತೆಗೆದುಕೊಂಡು ಶಿವಸಂಗಮ್ಮ ಮನೆಗೆ ಬಂದು ನಡೆದ ಸಂಗತಿಯನ್ನು ತಿಳಿಸಿದಾಗ ಎಲ್ಲರಿಗೂ ಆನಂದ" ಅನಂತರವೇ ಮುರಿಗೆಪ್ಪ ಚೆಟ್ಟಿಯವರು ಜನಿಸಿದರು. ಇದಕ್ಕೆಲ್ಲ ಶಿವಯೋಗಿಗಳ ಕೃಪಾಶೀರ್ವಾದವೇ ಕಾರಣವಾದ್ದರಿಂದ ಶಿವಯೋಗಿಗಳವರ ಹೆಸರನ್ನೇ (ಮುರುಗೇಶ) ಇಟ್ಟರಂತೆ. ಹೀಗೆ ಶಿವಯೋಗಿಗಳ ಕೃಪಾಶೀರ್ವಾದದಿಂದ ಜನಿಸಿದ ಚೆಟ್ಟಿಯವರು ಜೀವನದುದ್ದಕ್ಕೂ ಅಂತಹದೇ ಶರಣ ಮಾರ್ಗದಲ್ಲಿ ನಡೆದು ಬಂದಂದು ಕುತೂಹಲದ ಸಂಗತಿಯೆಂದು ಹೇಳಬಹುದು.[೬]

ದೈವ ಭಕ್ತರಾದ ಅಡಿವೆಪ್ಪನವರು ಚೆಟ್ಟಿ ಅವರಿಗೆ ಪ್ರೀತಿ, ವಾತ್ಸಲ್ಯದ ಮಮತೆಯನ್ನು ನೀಡಿದರು. ಪತಿಯ ಮಾರ್ಗವನ್ನೇ ಅನುಸರಿಸಿದ ಶಿವಗಂಗಮ್ಮನಿಗೆ ಗುರು ಲಿಂಗ ಜಂಗಮರಲ್ಲಿ ಅಪಾರ ಭಕ್ತಿ, ಅವಿಭಕ್ತ ಕುಟುಂಬವಾಗಿದ್ದರೂ ಎಲ್ಲರೊಂದಿಗೂ ಹೊಂದಿಕೊಂಡು ನಗುತ್ತ ಇರುವ ಸ್ವಭಾವ, ಅಲ್ಲದೆ "ಅವಳ ಧ್ವನಿ ಅತ್ಯಂತ ಮಧುರವಾಗಿದ್ದು ಶಿವನಾಮಾವಳಿ ವಚನಗಳು, ಜನಪದ ಹಾಡುಗಳನ್ನು ಹಾಗೂ ದೇವರ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದಳು.[೭] ಇಂತಹ ವಾತಾವರಣದಲ್ಲಿ ಬೆಳೆದ ಚೆಟ್ಟಿಯವರಿಗೆ ಚಿತ್ರಕಲೆ ಅಷ್ಟೇ ಅಲ್ಲ. ಸಂಗೀತದಲ್ಲಿಯೂ ಆಸಕ್ತಿ ಬೆಳೆದದ್ದು ಸಹಜ.[೮] ಅಂಥ ಕುಟುಂಬದಲ್ಲಿ ಬೆಳೆದ ಚೆಟ್ಟಿ ಅವರು ಮನೆಯೇ ಮೊದಲು ಪಾಠ ಶಾಲೆಯಾಗಿ ರೂಪಗೊಂಡಿತ್ತು.

ಚೆಟ್ಟಿಯವರಿಗೆ ಐದು ವರ್ಷ ತುಂಬಿದಾಗ ಅಂದರೆ ೧೯೧೨ರಲ್ಲಿ ಅಥಣಿಯಲ್ಲಿಯೇ ಮನೆಗೆ ಹತ್ತಿರದಲ್ಲಿ ಮರ್ಜಿ ಹೆಸರಿನ ಕನ್ನಡ ಶಾಲೆ ಇದ್ದು ಇದಕ್ಕೆ ಬಾಪಾಸ್ಕರ ವಾಡೆ ಎಂದು ಕರೆಯುವರು. ಮೊದಲು ರಾಜವಾಡೆ ಇದ್ದಿದ್ದು ಅದು ನಶಿಸಿಹೋದದ್ದರಿಂದ ಆ ಸ್ಥಳದಲ್ಲಿ ಈ ಶಾಲೆಯನ್ನು ಪ್ರಾರಂಭಿಸಲಾಯಿತು.[೯] ಅಲ್ಲಿಯೇ ೧೯೧೮ರವರೆಗೂ ಬಾಲ್ಯ ಶಿಕ್ಷಣವನ್ನು ಎಲ್ಲಾ ಮನೆಯ ಅವರ ಪ್ರೀತಿ ವಾತ್ಸಲ್ಯ ಮಧುರ ಅವರ ಮೇಲೆ ಇತ್ತು.

೧೯೧೫ರಲ್ಲಿ ಅಥಣಿ ಊರಲ್ಲಿ ಪ್ಲೇಗ್ ಬೇನೆ ಪ್ರಾರಂಭವಾಯಿತು. ಎಲ್ಲಿ ನೋಡಿದಲ್ಲಿ ಹೆಣಗಳುರುಳತೊಡಗಿದವು. ಊರಿಗೆ ಬಡಿದ ಪ್ಲೇಗು ಚೆಟ್ಟಿಯವರ ಮನೆಗೂ ಬಂದು ಅವರ ತಂದೆಯನ್ನೇ ಬಲಿತೆಗೆದುಕೊಂಡಿತು.[೮] ತಂದೆ ತೀರಿಕೊಂಡ ನಂತರ ಚಿಕ್ಕಪ್ಪನವರಾದ ಬಸೆಟ್ಟೆಪ್ಪನವರ ಆಶ್ರಯದಲ್ಲಿ ಬೆಳೆದರು. ತಂದೆಯ ಪ್ರೀತಿ ವಾತ್ಸಲ್ಯ ಕೊರತೆಯಾಗದಂತೆ ನೋಡಿಕೊಂಡರು.

ಚೆಟ್ಟಿಯವರ ತಂದೆಯವರು ಲಿಂಗೈಕ್ಯರಾದ ಕೆಲವೇ ದಿನಗಳಲ್ಲಿ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಬಸೆಟ್ಟೆಪ್ಪನವರಿಗೆ ಹುಕ್ಕೇರಿಗೆ ಸರ್ಕಲ್ ಇನ್ಸ್‌ಪೆಕ್ಟರ್ ಅಂಥ ವರ್ಗವಾಯಿತು. ಆಗ ನಾಲ್ಕನೆಯ ಇಯತ್ತೆ ಓದುತ್ತಿದ್ದ ಚೆಟ್ಟಿಯವರು ಅಥಣಿಯನ್ನು ಬಿಟ್ಟು ಬಂದು ಹುಕ್ಕೇರಿಯಲ್ಲಿ ೧೯೧೮ರಲ್ಲಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ೫ನೇ ಇಯತ್ತೆಗೆ ಪ್ರವೇಶ ಪಡೆದರು. ಶಿಕ್ಷಕರು ಹಾಗೂ ಗೆಳೆಯರ ಬಗ್ಗೆ ಚೆಟ್ಟಿಯವರು ಈ ರೀತಿ ಹೇಳುತ್ತಾರೆ. “ಆಗ ನಮಗೆ ಬಸವಪ್ರಭು ನಾಯಕ ಎಂಬುವರು ಡ್ರಾಯಿಂಗ್ ಮಾಸ್ತರರಾಗಿದ್ದರು. ಬಳವಂತರಾವ್ ಕುಲಕರ್ಣಿ, ಅರ್ಜುನ ಸವಾಡಕರ ಎನ್ನುವ ಇತರ ಶಿಕ್ಷಕರು ಇದ್ದರು. ಮೊದಲಿಂದಲೂ ರಂಗೋಲಿ ಹಾಕುವುದರಲ್ಲಿ, ಚಿತ್ರ ತೆಗೆಯುವಲ್ಲಿ ಆಸಕ್ತಿಯನ್ನು ಹೊಂದಿದ್ದ ಚೆಟ್ಟಿಯವರು (ಸ್ಲೇಟಿನ) ಪಾಟಿಯ ಮೇಲೆ ಯಾವಾಗಲೂ ಚಿತ್ರ ತೆಗೆಯುತ್ತಿದ್ದರು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಚಿಕ್ಕಂದಿನಲ್ಲೇ ಅವರ ಕಲಾ ವ್ಯಕ್ತಿತ್ವದ ಲಕ್ಷಣಗಳು ಕಂಡುಬಂದವು. ಇದನ್ನು ಗುರುತಿಸಿದ ಕಲಾ ಶಿಕ್ಷಕರಾಗಿದ್ದ ನಾಯಕ ಮಾಸ್ತರರು ಬಿಡುಕೊಟ್ಟು ಕರಿ ಹಲಗೆಯ ಮೇಲೆ ಚಿತ್ರ ತೆಗೆಯಲು ಹಚ್ಚುತ್ತಿದ್ದರು. “ಲೇ ತಮ್ಮಾ, ದಿನಾ ಹಿಂಗ್ಗ, ಚಿತ್ರ ತೆಗೆಯುವ ಸಾಧನಾ ಮಾಡು. ಮುಂದ ಒಂದಿಲ್ಲೊಂದು ದಿನ ದೊಡ್ಡ ಚಿತ್ರಗಾರ ಆಗತಿ” ಎಂದು ಹೃದಯದುಂಬಿ ಹರಸಿದರು. ಅದೇ ಅವರ ಮುನ್ನಡೆಗೆ ಸ್ಫೂರ್ತಿ ಆಯಿತು. ಕಲಾ ಪ್ರಪಂಚದಲ್ಲಿ ಸ್ಥಿರವಾಗಿ ನಿಲ್ಲಲು ಕಾರಣವಾಯಿತು.[೯]

ಚೆಟ್ಟಿ ಅವರು ಶಾಲೆಯಲ್ಲಿ ಸ್ನೇಹಿತರ ಜೊತೆ ಆಟಪಾಟಗಳ ಜೊತೆ ಎಲ್ಲರ ಜೊತೆ ನಯ-ವಿನಯ ಶಿಕ್ಷಕರ ಮಾರ್ಗದರ್ಶನದಲ್ಲಿ ಸಂತೋಷದ ದಿನಗಳನ್ನು ೧೯೨೦ರವರೆಗೆ ಹುಕ್ಕೇರಿಯಲ್ಲಿ ೭ನೇ ತರಗತಿಯವರೆಗೂ ಕಲಿತು ಮುಲ್ಕಿ ಪರೀಕ್ಷೆ ತೇರ್ಗಡೆಯಾದರು. ಅದೇ ವೇಳೆಗೆ ಅವರು ಮತ್ತೆ ಮರಳಿ ಅಥಣಿಗೆ ಬರಬೇಕಾಯಿತು. ಮತ್ತೆ ಹೈಸ್ಕೂಲಿಗೆ ಸೇರ್ಪಡೆ ಆಗಿ, ಇಂಗ್ಲೀಷ್ ನಾಲ್ಕನೆಯತ್ತೆಗೆ ಹೆಸರು ಹಚ್ಚಿದರು.[೧೦] ಬೇರೆ ವಿಷಯದ ಕಡೆ ಹೆಚ್ಚು ಆಸಕ್ತಿ ತೋರದೆ ಚಿತ್ರಕಲೆ ಅವರ ಆಸಕ್ತಿಯ ವಿಷಯವಾಗಿ ಆಗಲೇ ಅವರು ರವಿವರ್ಮನ, ಲಕ್ಷ್ಮಿ, ಸರಸ್ವತಿ, ಗಣಪತಿ ಹೀಗೆ ಬೇರೆ ಬೇರೆ ಚಿತ್ರಗಳು ನಕಲು ಮಾಡಿ ಚಿತ್ರಿಸುತ್ತಿದ್ದರು. ೧೯೨೧ ರಲ್ಲಿ ಡ್ರಾಯಿಂಗ್ ಎಲಿಮೆಂಟ್ರ ಗ್ರೇಡ್ ಪಾಸಾಗಿ ೧೯೨೨ ರಲ್ಲಿ ಇಂಟರ್ ಮಿಡಿಯಟ್ ಗ್ರೇಡ್ ಪರೀಕ್ಷೆಯಲ್ಲಿ ೧ನೇ ನಂಬರ್‌ನಲ್ಲಿ ಪಾಸಾದೆನು ಎಂದು ಹೇಳುವ ಚೆಟ್ಟಿಯವರು ೧೯೨೪ರವರೆಗೆ ಮ್ಯಾಟ್ರಿಕ್ ಕಲಿತು ಉತ್ತೀರ್ಣರಾದರು.[೧೧]

೧೯೨೪ರಲ್ಲಿ ಚೆಟ್ಟಿಯವರು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತಾಗ ಅವರ ಚಿಕ್ಕಪ್ಪನವರಿಗೆ ಶಿರಸ್ತೇದಾರರಾಗಿ ಬಡತಿಹೊಂದಿ ಬೆಳಗಾವಿಗೆ ವರ್ಗವಾಯಿತು. ಚೆಟ್ಟಿಯವರು ಬೆಳಗಾವಿಗೆ ಬಂದರು. ಚಿಕ್ಕಂದಿನಿಂದಲೇ

ಕಲೆಯಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡ ಇವರಿಗೆ ಕಲಾಶಾಲೆ (ಆರ್ಟ್ ಸ್ಕೂಲ)ಗೆ ಸೇರಬೇಕೆಂಬ ತವಕ ಆಗ ಹುಟ್ಟಿಕೊಂಡಿತು. ಆಗ ಅವರ ಮನಸ್ಸಿನಲ್ಲಿ ದ್ವಂದ್ವ ಪ್ರಾರಂಭವಾಯಿತು. "ಒಂದು ಕಡೆ ಕಲೆ ಬೆಳೆಯುತ್ತಿದ್ದರೆ ಇನ್ನೊಂದೆಡೆ ಬಿ.ಎ., ಎಲ್.ಎಲ್.ಬಿ. ಮುಗಿಸಬೇಕು ನಮ್ಮ ಚಿಕ್ಕಪ್ಪನವರಂತೆ ಸರಕಾರಿ ಅಧಿಕಾರಿಯಾಗಬೇಕೆಂಬ ಸೆಳೆತ ಎಳೆತಗಳ ಮಧ್ಯದಲ್ಲಿ. ಹೊಯ್ದಾಡಿ ಒಂದು ನಿರ್ಧಾರಕ್ಕೆ ಬಂದೆ. ಆ ನಿರ್ಧಾರ ಯಾವುದೆಂದರೆ ಕಲೆಯ ಅಭ್ಯಾಸ ಮಾಡುವುದು. ಈ ಕಲಾ ಅಧ್ಯಾಯನಕ್ಕೆ ಮುಂಬಯಿಗೆ ಹೋಗುವ ಸಂಕಲ್ಪವನ್ನು ಆ ಸಂದರ್ಭದಲ್ಲಿ ತೆಗೆದುಕೊಂಡರು.[೧೧]

ಆಗ ಕಲಿಯುವುದಕ್ಕೆ ಶಿರಸಂಗಿ ಲಿಂಗರಾಜ ಟ್ರಸ್ಟ್ ಫಂಡಿನಿಂದ ಸ್ಕಾಲರ್‌ಶಿಪ್ ಹಣವೂ ದೊರೆಯಿತು. ಈ ಎಲ್ಲ ಅನುಕೂಲತೆಗಳಿಂದ ೧೯೨೪ರಲ್ಲಿ ಮುಂಬಯಿಯ ಜೆ.ಜೆ.ಸ್ಕೂಲ ಸೇರಿ ಸಮಗ್ರ ಆರು ವರ್ಷಗಳ ಕಾಲ ಡ್ರಾಯಿಂಗ್ ಹಾಗೂ ಪೇಂಟಿಂಗ್‌ದಲ್ಲಿ ಅಭ್ಯಾಸ ಮಾಡಿ ಡಿಪ್ಲೋಮಾ ಪದವಿ. ಚಿನ್ನ ಹಾಗೂ ಬೆಳ್ಳಿ ಪದಕದೊಂದಿಗೆ ಪಾಸು ಮಾಡಿದರು.[೧೨]

ಜೆ.ಜೆ.ಕಲಾಶಾಲೆಯ ಪ್ರವೇಶ ಪಡೆದು ಒಬ್ಬ ಉತ್ತಮ ಕಲಾವಿದ್ಯಾರ್ಥಿಯಾಗಿ ರೂಪಗೊಳ್ಳುತ್ತಾರೆ. "ಒಬ್ಬ ಕಲಾವಿದ ಗಟ್ಟಿನೆಲೆಯಲ್ಲಿ ವ್ಯವಹರಿಸಬೇಕಾದರೆ ಆತನಿಗೆ ಕಲೆಯ ವ್ಯಾಕರಣ ತಿಳಿದಿರುವುದೊಳ್ಳೆಯದು. ಶಿಕ್ಷಣ ಇರುವುದೊಳ್ಳೆಯದು. ಏಕೆಂದರೆ ಶಿಕ್ಷಣದಿಂದ ಆತ್ಮವಿಶ್ವಾಸ ಚಿಗುರುತ್ತದೆ. ಅಧ್ಯಯನದ ಕಾರಣ ಮನಸ್ಸಿಗೆ ಹೊಸ ಆಯಾಮಗಳು ಹೊಳೆಯಬಹುದು.[೧೩] ಹಾಗೆ ಚೆಟ್ಟಿಯವರು ಕಲಾ ಆಯಾಮಗಳನ್ನು ಹಾಗೂ ಜೆ.ಜೆ.ಕಲಾ ಶಾಲೆಯ ಪಠ್ಯಕ್ರಮದ ಅಧ್ಯಯನ ಅಲ್ಲಿಯ ಪ್ರಭಾವ ಕಟ್ಟುನಿಟ್ಟಾಗಿ ಅಭ್ಯಾಸ ಕ್ರಮವನ್ನು ಚೆನ್ನಾಗಿ ಕರಗತ ಮಾಡಿಕೊಂಡು, ಕಲಾವಿದರಾಗಿ ಗಟ್ಟಿಗೊಂಡರು.

ಚೆಟ್ಟಿ ಅವರ ಭಾವಚಿತ್ರಗಳು

ಚೆಟ್ಟಿಯವರು ಭಾವಚಿತ್ರಗಳನ್ನು ಸಾಕಷ್ಟು ರಚಿಸಿದ್ದಾರೆ. ಕೆಲವು ರೂಪದರ್ಶಿಗಳನ್ನು ತೆಗೆದುಕೊಂಡು ಚಿತ್ರಿಸಿದರೆ ಇನ್ನೂ ಕೆಲವು ಭಾವಚಿತ್ರಗಳನ್ನು ಆ ವ್ಯಕ್ತಿಗಳ ಛಾಯಾಚಿತ್ರವನ್ನು ನೋಡಿ ರಚಿಸಿಕೊಟ್ಟಿರುತ್ತಾರೆ. ಚೆಟ್ಟಿಯವರು ರಚಿಸಿದಂಥ ಭಾವಚಿತ್ರಗಳನ್ನು ಕಂಡು "ಅವರ ರೇಖೆಗಳ ಮೇಲಿನ ಹಿಡಿತವನ್ನು ವರ್ಣಗಳ ಮೇಲೆ ಸಾಧಿಸಿದ್ದು ಪ್ರಭುತ್ವವನ್ನು ಮೆಚ್ಚಿಕೊಂಡಿದ್ದ ಚೂಡೇಕರ ಶಿಕ್ಷಕರು ತಮ್ಮ ವಿದ್ಯಾರ್ಥಿ ತನ್ನ ಕಲಾಭಿವ್ಯಕ್ತಿಗೊಳಿಸುವ ಒಂದು ಮಾಧ್ಯಮವನ್ನು ಆರಿಸಿಕೊಳ್ಳಬೇಕೆಂದು ಭಾವಚಿತ್ರವು ಒಂದು ಪರಿಣಾಮಕಾರಿ. ಕ್ಷೇತ್ರವೆನಿಸಬಹುದೆಂದು ಹೇಳುತ್ತಿದ್ದರು." ಅದರಂತೆ ಚೆಟ್ಟಿಯವರು ಚಿತ್ರಕಲಾಭ್ಯಾಸವನ್ನು ಮುಂದುವರಿಸಿದರು.[೧೪] ಸಾಹಿತಿಯೇ ಆಗಲಿ, ಕಲಾವಿದನೇ ಆಗಲಿ ಹಲವು ಮಾಧ್ಯಮಗಳಲ್ಲಿ ಕೈ ಆಡಿಸಿದರೂ ಅವನ ಪ್ರತಿಭೆ ಒಂದೇ ಕ್ಷೇತ್ರದಲ್ಲಿ ಇನ್ನುಳಿದ ಕ್ಷೇತ್ರಗಳಿಗಿಂತಲೂ ಹೆಚ್ಚು ಚೆನ್ನಾಗಿ ಅರಳಿರುತ್ತದೆ.

ತನ್ನ ಅಭಿವ್ಯಕ್ತಿಯ ಸಹಜ ಮಾಧ್ಯಮವನ್ನು ಹುಡುಕಿಕೊಂಡು ಅದರ ಮೇಲೆಯೇ ತನ್ನ ಗಮನವನ್ನು ಕೇಂದ್ರೀಕರಿಸಿ ಅದರಲ್ಲಿ ತನ್ನ ಕಲಾಸಿದ್ಧಿಯನ್ನು ಕಂಡುಕೊಳ್ಳಬೇಕು. ಚೆಟ್ಟಿಯವರು ಎಲ್ಲ ವಿಧದ

ಚಿತ್ರಗಾರಿಕೆಯಲ್ಲಿ ತಮ್ಮ ಕುಂಚವನ್ನು ಓಡಿಸುತ್ತಿರುವವನಾದರೂ ಅವರ ಭಾವಚಿತ್ರಗಳ ಮೇಲೆಯೇ ತಮ್ಮ ಮಮತೆಯನ್ನು ಹೆಚ್ಚು ಹರಿಸಿದ್ದಾರೆ.

ಚೆಟ್ಟಿಯವರು ಅನೇಕ ಕಡೆ ರೂಪದರ್ಶಿಯನ್ನು ಬಳಸಿಕೊಂಡು ಪ್ರಾತ್ಯಕ್ಷಿಕೆಯನ್ನು ನೀಡಿದ್ದಾರೆ. ಅಲ್ಲಿಯೂ ಹಾಗೆ ಇದ್ದುದರಲ್ಲಿಯೇ ಚಿತ್ರ ಪೂರ್ಣಗೊಳಿಸುವಿಕೆಯ ಜಾಣತನವಿದೆ. ಹಾಗೂ ರೂಪದರ್ಶಿಯ ನೈಜತೆಯ ಹಾವ, ಭಾವವನ್ನು ಚಿತ್ರಿಸುವಲ್ಲಿ ಸಾಕಷ್ಟು ಪರಿಣತಿಯ ಅನುಭವ ಅವರಲ್ಲಿತ್ತು.

ಶಿರಸಂಗಿ ಲಿಂಗರಾಜರ ಭಾವಚಿತ್ರ

ಈ ಭಾವಚಿತ್ರವನ್ನು ಚಿತ್ರಿಸುವುದರ ಹಿಂದೆ ಇರುವ ಘಟನೆಯೂ ಸಹಿತ ಚಿತ್ರದಷ್ಟೇ ಮಹತ್ವವಾಗಿದೆ. ಚೆಟ್ಟಿಯವರೇ ಹೇಳುವಂತೆ, "ನಾನು ಮುಂಬಯಿಯಲ್ಲಿ ಕಲಾ ವಿದ್ಯಾಭ್ಯಾಸವನ್ನು ಮಾಡಲು ಶಿರಸಂಗಿ ಟ್ರಸ್ಟ್ ಫಂಡ್ ಸ್ಕಾಲರ್‌ಶಿಪ್ ನೀಡಿ ಸಹಾಯ ಮಾಡಿತ್ತು. ಅದರಿಂದ ನಾನು ಪಡೆದ ೪೫೦ ರೂಪಾಯಿಗಳನ್ನು ಪಾವತಿ ಮಾಡುವಂತೆ ಪತ್ರ ಬಂದಿತು. ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವಾಗ ಶಿರಸಂಗಿ ಫಂಡಿನ ಹಣ ಹೇಗೆ ತುಂಬಬೇಕು ಎಂಬ ವಿಚಾರದಲ್ಲಿ ಬಿದ್ದಿರುವಾಗ ತಕ್ಷಣ ಯೋಚನೆಯೊಂದು ಹೊಳೆಯಿತು. ಅಲ್ಲಿಯವರೆಗೆ ದಾನವೀರ ಶಿರಸಂಗಿ ಲಿಂಗರಾಜರ ದೊಡ್ಡ ತೈಲ ಚಿತ್ರಗಳಿರಲಿಲ್ಲ. ಯಾರ ಹಣ ನನ್ನ ಈ ಕಲಾಧ್ಯಯನಕ್ಕೆ ಸಹಾಯ ಮಾಡಿತೋ ಅದೇ ಕಲೆಯಿಂದ ಚಿತ್ರ ತೆಗೆಯಲು ನಿರ್ಧರಿಸಿ ೪"/೩" ಅಳತೆಯ ಲಿಂಗರಾಜರ ತೈಲಚಿತ್ರ ತೆಗೆದು ಸುಂದರವಾದ ಕಟ್ಟು ಹಾಕಿಸಿಕೊಟ್ಟೆ. ಅದು ಈಗಲು ಬೆಳಗಾವಿಯ ಲಿಂಗರಾಜರ ಟ್ರಸ್ಟಿನಲ್ಲಿ ಇದೆ ಈ ಚಿತ್ರವನ್ನು ಬಹುಶಃ ೧೯೪೦ ರಲ್ಲಿ ರಚಿಸಿರಬಹುದು.[೧೭]

ಇದೊಂದು ಅತ್ಯುತ್ತಮ ಭಾವಚಿತ್ರವಾಗಿದೆ ಲಿಂಗರಾಜರವರ ಮುಖದಲ್ಲಿ ಮುಖದಲ್ಲಿ ಮೀಸೆ ದಪ್ಪವಾಗಿದ್ದರೂ, ಕಳೆ ಮಾತ್ರ ಶಾಂತವಾಗಿದೆ. ಕಣ್ಣುಗಳು ಜೀವ ತುಂಬಿ ಬಂದಿವೆ. ಕಿವಿಯಲ್ಲಿ ಚುಚ್ಚಿದ ಮುತ್ತಿನೋಲೆ, ತಲೆಯ ಮೇಲೆ ಜರಿಪಟ್ಟಿಯ ರುಮಾಲು, ನೊಸಲಿಗೆ ವಿಭೂತಿ, ಮುಖದಲ್ಲಿ ಹಿತಮಿತವಾದ ನೆರಳು, ಬೆಳಕಿನ ವಿಭಜನೆ ಇದೆ ಇಲ್ಲಿ ಯಾವುದೇ ಕುಂಚಗಳ ನೇರ ಹೊಡೆತಗಳಿಲ್ಲ. ಬಣ್ಣಗಳನ್ನು ಬೆರಸಿ ಮೃದುವಾಗಿ ಲೇಪಿಸಿದ್ದಾರೆ.

ಹಿನ್ನೆಲೆಯಲ್ಲಿಯ ಪರದೆ ನೆರಿಗೆಗಳು ಅವರ ಮೈವಳಿಕೆ ನೈಜವಾಗಿ ಚಿತ್ರಿಸಿದ್ದಾರೆ. ಈ ಚಿತ್ರವನ್ನು ಋಣಮುಕ್ತದ ಭಾವನೆಯಿಂದ ಮಾಡಿದ್ದರಿಂದ ಆ ಕಲಾವಿದನ ತೃಪ್ತಿಯನ್ನು ಈ ಚಿತ್ರದಲ್ಲಿ ಕಾಣಬಹುದು. ಅಂತೆಯೇ ಪಾಶ್ಚಾತ್ಯ ಕಲಾವಿದರಿಗಿಂತಲೂ ಶ್ರೇಷ್ಠ ಮಟ್ಟದಲ್ಲಿ ಈ ಭಾವಚಿತ್ರ ರಚಿಸಿದ್ದಾರೆ. ಛಾಯಾಚಿತ್ರವನ್ನು ನೋಡಿ ತಮ್ಮ ವರ್ಣಗಳ ತಂತ್ರ, ಶೈಲಿಗಳ ಮೂಲಕ ರೂಪದರ್ಶಿಯ ಹತ್ತಿರ ಹೋಗಿ ಚಿತ್ರಿಸಿದಂತೆ ಭಾಸವಾಗುತ್ತದೆ.

ಭಾವಚಿತ್ರ ೨

ಒಂದು ಚಿತ್ರದಲ್ಲಿ ಇರುವ ಭಾವಲಕ್ಷಣಗಳು ಈ ಭಾವಚಿತ್ರದಲ್ಲಿ ನೋಡಬಹುದು. ಪಾರ್ಶ್ವಮುಖವಾಗಿ ರೂಪದರ್ಶಿಯನ್ನು ಬಳಸಿಕೊಂಡು ರಚಿಸಿದ ಈ ಚಿತ್ರವನ್ನು ತೈಲವರ್ಣಗಳನ್ನು ಉತ್ತಮವಾಗಿ ಬಳಸಿಕೊಂಡು ರೂಪದರ್ಶಿಯ ಅಂಗಾಂಗಳನ್ನು ಅತ್ಯಂತ ಸೂಕ್ಷ್ಮವಾಗಿ ನೈಜತೆ ತರುವಲ್ಲಿ ಹಾಗೂ ಉಬ್ಬು ತಗ್ಗುಗಳನ್ನು ವರ್ಣಗಳ ಮಿಶ್ರಣದಲ್ಲಿ ಕುಂಚಗಳ ಸೆಳೆತದ ಮೂಲಕ ಕಣ್ಣಿನಲ್ಲಿ ಜೀವಂತಿಕೆ ತುಂಬಿ. ಭಕ್ತಿ ಪ್ರಧಾನ ವ್ಯಕ್ತಿ ಗುರುತಿಸಲಿಕ್ಕೆ ವಿಭೂತಿ ಹಣೆಯ ಮೇಲೆ ದರಿಸಿದ (ಹಚ್ಚಿದ) ಪರಿ ವ್ಯಕ್ತಿ ವ್ಯಕ್ತಿತ್ವವನ್ನು ಗುರುತಿಸುವಲ್ಲಿ ಈ ಭಾವಚಿತ್ರ ಮಹತ್ವ ಪಡೆಯುತ್ತದೆ. ಎಂ.ವಿ.ಚೆಟ್ಟಿಯವರು ಸಾಮಾಜಿಕ ಮತ್ತು ಧಾರ್ಮಿಕ ವ್ಯಕ್ತಿಗಳನ್ನು ಕಂಡರೆ ಭಯ ಭಕ್ತಿಯಿಂದ ಗೌರವ ನೀಡುತ್ತಿದ್ದರು ಅಂಥ ವ್ಯಕ್ತಿಗಳನ್ನು ರೂಪದರ್ಶಿಯಾಗಿ ಬಳಸಿಕೊಂಡು ಚಿತ್ರ ರಚಿಸಿದ್ದಾರೆ.

ಭಾವಚಿತ್ರ-೩

ವಯಸ್ಸಾದ ಪುರುಷನ ಭಾವಚಿತ್ರ ಈ ಚಿತ್ರದಲ್ಲಿ ಚರ್ಮದ ಮೈವಳಿಕೆ ಅತ್ಯಂತ ನೈಜವಾಗಿ ಚಿತ್ರಿತವಾಗಿದೆ. ಮುಖದಲ್ಲಿ ಜೋತುಬಿದ್ದ ಅಲ್ಲಲ್ಲಿ ನೆರಿಗೆ ಗಟ್ಟಿ ಚರ್ಮದ ಪರಿಣಾಮ ನೈಜವಾಗಿ ಚಿತ್ರಿಸಿದ್ದಾರೆ. ರೂಪದರ್ಶಿಯ ಮೈ ಬಣ್ಣದ ಚರ್ಮದಲ್ಲಿ ವರ್ಣಗಳನ್ನು ನೆರಳ-ಬೆಳಕನ್ನು ಸೂಕ್ಷ್ಮತೆ, ಮುಗ್ಧ, ಮನಸ್ಸು ಉಬ್ಬು-ತಗ್ಗುಗಳಲ್ಲಿ ಕಲಾ ಕೌಶಲ್ಯತೆ ವಿಶೇಷವಾಗಿ ಕಣ್ಣಿನಲ್ಲಿ ಜೀವಂತಿಕೆ ತುಂಬಿ ಪ್ರಮಾಣ ಬದ್ಧವಾಗಿ ರಚಿಸಿದ ಭಾವಚಿತ್ರ

ಭಾವಚಿತ್ರ-೪

ಛಾಯಾಚಿತ್ರ ನೋಡಿ ಚಿತ್ರಿಸಿದ ಈ ಭಾವಚಿತ್ರವು ಮೈಸೂರು ಭಾಗದ ವ್ಯಕ್ತಿ ಇರಬಹುದು. ವ್ಯಕ್ತಿಯ ದರಿಸಿದ ಉಡುಪುಗಳು ಮತ್ತು ಆಭರಣಗಳು. ಇದು ಶ್ರೀಮಂತ ರಾಜಮನೆತನಗಳಲ್ಲಿ ಹಾಕುವ ಉಡುಪುಗಳು. ಎಂದು ಗುರುತಿಸಬಹುದು. ಈ ಕಲಾಕೃತಿಯಲ್ಲಿ ಛಾಯಾಚಿತ್ರವನ್ನು ಮೀರಿಸುವಾಗೆ ಮುಖದ ಗಾಂಭೀರ್ಯತೆ. ವರ್ಣಗಳ ಸೂಕ್ಷ್ಮತೆ, ರೇಷ್ಮೆಯ ಮೈಸೂರ ಪೇಟಾ ಮತ್ತು ಶಲ್ಯ ಹಾಗೂ ಕರಿ ಕೋಟು ವ್ಯಕ್ತಿಗೆ ಸಂಯೋಜನೆಯಾಗಿ ರಾಜ ಕಳೆಯನ್ನು ಕಲಾಕೃತಿಯಲ್ಲಿ ಎಂ.ವಿ.ಚೆಟ್ಟಿಯವರ ಕೌಶಲ್ಯ ಈ ಭಾವಚಿತ್ರದಲ್ಲಿ ಕಾಣಬಹುದು.

ದಿ.ಶ್ರೀಶಾಂತಪ್ಪ ವೀರಪ್ಪ ಕೋಟ್ಟಿ ಭಾವಚಿತ್ರ

ಶ್ರೀ ಶಾಂತಪ್ಪ ವೀರಪ್ಪ ಕೋಟಿಯವರ ಭಾವಚಿತ್ರ ಇದು ಸಹಿತ ಗದುಗಿನ ಕೃತಪುರ ಪ್ರೆಸ್‌ನಲ್ಲಿ ಇದೆ. ಈ ಭಾವಚಿತ್ರದಲ್ಲಿ ಮುಖ್ಯವಾಗಿ ಎದ್ದು ಕಾಣುವದು ಉದ್ದನೆಯ ಮೀಸೆ ಉಡುಪಿನಲ್ಲಿ ಇರುವ ಅಂದ. ಈ ಭಾವಚಿತ್ರದಲ್ಲಿ ಮುಖ್ಯವಾಗಿ ಎದ್ದು ಕಾಣುವದು ಉದ್ದನೆಯ ಮೀಸೆ ಉಡುಪಿನಲ್ಲಿ ಇರುವ ಅ ಂದ. ಗಷ್ಟು ಆಗಿನ ಕಾಲದಲ್ಲಿ ಮನೆಯ ಯಜಮಾನನ ಹಿರಿತನದ ಸ್ವರೂಪತೆಯೂ ಅವರು ಹಾಕುತ್ತಿರು. ಓಲೆ, ಪೇಟಾ ಶಲ್ಯ, ಕೋಟು ವ್ಯಕ್ತಿಯ ಮೌಲ್ಯವು ಸೂಚಿಸುತ್ತಿತ್ತು. ಅಂಥ ಎಲ್ಲಾ ಸೂಚನೆಗಳು ಒಂದು

ಭಾವಚಿತ್ರದಲ್ಲಿ ಎಂ.ಎ.ಚೆಟ್ಟಿಯವರು ವರ್ಣಗಳನ್ನು ಸೂಕ್ಷ್ಮವಾಗಿ ಲೇಪಿಸಿ ಶ್ರೀಕಾಂತಪ್ಪ ಹೀರಪ್ಪನವರ ನೈಜತೆಯನ್ನು ಛಾಯಾ ಚಿತ್ರ ನೋಡಿ ರಚಿಸಿದ್ದಾರೆ.

ವಿ.ಶ್ರೀ ಶಿವಪ್ಪ ದಿವಾನ್ ಬಹಾದ್ದೂರ-ಭಾವಚಿತ್ರ

ಈ ಭಾವಚಿತ್ರವು ಗಮಗಿನ ಕೃತಪುರ ಪ್ರೇಸ್‌ನಲ್ಲಿದೆ ಆಗಿನ ಪೋಷಾಕು ಜರಿ ರುಮಾಲು ತಲೆಯ ಮೇಲಿದ್ದರೆ ಮೈ ಮೇಲೆಲ್ಲ ಬ್ರಟೀಷ ರೀತಿಯ ಪೋಷಾಕು ಮೀಸೆ ವ್ಯಕ್ತಿಯ ದರ್ಪವನ್ನು ಸೂಚಿಸುವ ಮುಖಭಾವದೊಂದಿಗೆ ಮೇಳವಾಗಿದೆ.[೨೦] ಒಂದು ಕಲಾಕೃತಿಗೆ, ನೈಜತೆ, ವರ್ಣಗಳ ಮಿಶ್ರ ಲೇಪನ ಭಾವ ಬಂಗಿ ಸ್ವರೂಪ, ಅನುಭವ ನೀಡುವಷ್ಟು ಅತ್ಯಂತ ಕಲಾ ಕೌಶಲ್ಯದಿಂದ ಸೌಂದರ್ಯಾನುಭವವನ್ನು ಸವಿಯಲು ತೈಲವರ್ಣವನ್ನು ಎಂ.ಎ.ಚೆಟ್ಟಿ ಅವರು ಈ ಭಾವಚಿತ್ರದಲ್ಲಿ ಪ್ರಮುಖ ಅಂಶವಾಗಿದೆ.

ಅಡಿ ಟಿಪ್ಪಣಿ :

೧) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೧೫

೨) ಪ್ರಶಸ್ತಿ ಪಡೆದ ಕಲಾವಿದರು ಸಂ.ಪಿ.ಆರ್.ತಿಪ್ಪೇಸ್ವಾಮಿ ಪುಟ-೧೭

೩) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೧೮

೪ ಅದೆಪುಟ-೧೯

೫) ಅದೆಪುಟ-೧೯

೬) ಅದೆಪುಟ-೧೯

೭) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೨೦

೮) ಅದೆ ಪುಟ-೨೦

೯) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೨೧

೧೦) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೨೨

೧೧) ಅದೆ ಪುಟ-೨೨

೧೨) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೨೩

೧೩) ಅದೆಪುಟ-೨೩

೧೪) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೪೩

೧೫) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೨೬೨

೧೬) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೨೬೩

೧೭) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೨೬೪

೧೮) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೨೬೬

೧೯) ಅದೆಪುಟ-೨೬೬

೨೦) ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಜೀವನ ಕಲಾಕೃತಿಗಳು. ಡಾ.ಲಕ್ಷ್ಮೀದೇವಿ ಗವಾಯಿ ಪುಟ-೨೬೮

ಎಂ.ಎ.ಚೆಟ್ಟಿ ಅವರ ಭಾವಚಿತ್ರಗಳು



ಶಿರಸಂಗಿ ಲಿಂಗರಾಜರ
ಭಾವಚಿತ್ರ ೧

ಭಾವಚಿತ್ರ ೨



ಭಾವಚಿತ್ರ ೩





ಭಾವಚಿತ್ರ ೪

ದಿ.ಶ್ರೀ ಶಾಂತಪ್ಪ ವೀರಪ್ಪ ಕೋಟಿ
ಭಾವಚಿತ್ರ ೫






ದಿ. ಶ್ರೀ ಶಿವಪ್ಪ ದಿವಾನ ಬಹಾದ್ದೂರ
ಭಾವಚಿತ್ರ ೬



ಪಿ.ಟಿ.ಕಾಳೆ



ವಿ.ಟಿ.ಕಾಳೆ

ಸೃಜನಶೀಲ ಮನುಷ್ಯನ ಅಭಿವ್ಯಕ್ತಿಗೆ ಸರಿಯಾದ ಪ್ರೋತ್ಸಾಹ, ಅವಕಾಶಗಳು ಮತ್ತು ಅವನ ನಿರಂತರ ಪರಿಶ್ರಮ, ಪ್ರಯತ್ನಗಳಿದ್ದರೆ ಆ ವ್ಯಕ್ತಿಯ ಪ್ರತಿಭೆ ಬಹುವಿಸ್ತೃತವಾಗಿ ಬೆಳೆದು ದೃಶ್ಯರೂಪದಲ್ಲಿ ಬೆಳಕಿಗೆ ಬರುತ್ತದೆ. ಇಂತಹ ವ್ಯಕ್ತಿಗಳು ನಮಗೆ ಅಪರೂಪವಾಗಿ ಕಾಣಸಿಗುತ್ತಾರೆ. ಸಾಮಾನ್ಯವಾಗಿ ಸಾಧಕರು ತಮ್ಮ ಎಲ್ಲ ಸಾಮರ್ಥ್ಯಗಳು ಒಂದೆಡೆಗೆ ಕೇಂದ್ರೀಕರಿಸಿ ಒಂದೊಂದು ಪಾತ್ರದಲ್ಲಿಯೇ ಯಶಸ್ಸಿಯ ಮೆಟ್ಟಿಲೆರುತ್ತ ಹೊಂದಿದವರಿಗೇನು ಕಡಿಮೆಯಿಲ್ಲ. ಆದರೆ ಹಲವಾರು ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿ ಆಯಾ ಕ್ಷೇತ್ರದ ವಿದ್ವಾಂಸರಲ್ಲಿ ವಿಸ್ತರಿಸುವಲ್ಲಿ ಸಕ್ರಿಯ ಕಾಣಿಕೆ ನೀಡುವ ವ್ಯಕ್ತಿಗಳು ಬೆರಳೆಣಿಕೆಯಷ್ಟು ಇಂತಹ ಅಪರೂಪದ ಬಹುಮುಖಿ ವ್ಯಕ್ತಿತ್ವವನ್ನು ಹೊಂದಿದ ಕರ್ನಾಟಕದ ಹಿರಿಯ ತಲೆಮಾರಿನ ಕಲಾವಿದರಲ್ಲಿ ಎದ್ದು ಕಾಣುವ" ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ನೆಲೆಸಿರುವ ವಿ.ಟಿ.ಕಾಳೆಯವರು ಸಮಕಾಲೀನ ಕಲಾ ಸಂದರ್ಭದಲ್ಲಿ ಚಿತ್ರಕಾರರಾಗಿ, ಕಲಾಶಿಕ್ಷಕರಾಗಿ, ಕಲಾ ಬರಹಗಾರ, ಶಿಲ್ಪಿಕಾರರಾಗಿ, ಸಂಗೀತಗಾರ, ನಾಟಕ ನಿರ್ದೇಶಕರಾಗಿ, ನಟರಾಗಿ, ಪ್ರಸಾದನ ಕಲಾವಿದರಾಗಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಗಮನಾರ್ಹವಾಗಿ ಗುರುತಿಸಿಕೊಂಡಿರುವ" ಕಲಾಕ್ಷೇತ್ರದ ನಾನಾ ವಿಭಾಗಗಳಲ್ಲಿ ಬಹುಮುಖಿ ಸಾಧನೆಯನ್ನು ಸಾಧಿಸಿ "ಏಕಮೇವ ದ್ವಿತೀಯ ಕಲಾವಿಮರ್ಶಕರೆಂದು ಖ್ಯಾತನಾಮರಾಗಿರುವ" ನಾಡೋಜ ವಿ.ಟಿ.ಕಾಳೆಯವರು.

ಕಾಳೆಯವರ ಬಾಲ್ಯ

ಬಾಗಲಕೋಟೆ ಜಿಲ್ಲೆಯ ಹುನಗುಂದ ಬಡ ರೈತ ಕುಟುಂಬದಲ್ಲಿ ತುಳಜಾರಾಮ ಕಾಳೆ ಮತ್ತು ಭರಮವ್ವ ದಂಪತಿಗಳ ಎಂಟನೆಯ ಮಗನಾಗಿ ೧೯೩೯ರಲ್ಲಿ ವೆಂಕಟೇಶ ಕಾಳೆ ಅವರು ಜನಿಸಿದರು. ವೆಂಕಟೇಶ ತುಳಜಾರಾಮ ಕಾಳೆ ಇವರು ಈಗ ವಿ.ಟಿ.ಕಾಳೆ ಎಂದೇ ಪ್ರಸಿದ್ಧರಾಗಿದ್ದಾರೆ. ಹತ್ತು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳನ್ನು ಹೊಂದಿದ್ದ ದೊಡ್ಡ ಸಂಸಾರವನ್ನು ನಿಭಾಯಿಸುವುದು ಇವರ ತಂದೆಯವರಿಗೆ ಕಠಿಣವಾಗಿತ್ತು. ಇಪ್ಪತ್ತೊಂದು ಎಕರೆ ವಾಲಿಕಾರಿಕೆಯ ಒಣ ಬೇಸಾಯದ ಭೂಮಿಯಿಂದ ಬರುವ ಉತ್ಪನ್ನ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಕಾರಣ ಒಣಬೇಸಾಯ ಅನಿಶ್ಚಿತ ಮಳೆಯಿಂದಾಗಿ ಬರಗಾಲ ಮೇಲಿಂದ ಮೇಲೆ ಉಂಟಾಗುತ್ತಿತ್ತು. ಇದೇ ವೇಳೆಯಲ್ಲಿ ಕೌಟುಂಬಿಕ ಹುನಗುಂದವನ್ನು ಬಿಟ್ಟು ಬದುಕಿನ ಆಸರೆಗಾಗಿ ಗದುಗಿಗೆ ಬಂದು ನೆಲೆಸುತ್ತಾರೆ. ಇಲ್ಲಿ ಕಾಳೆಯವರ ಕಲಾಪ್ರಪಂಚ ಚಿಗುರೊಡೆಯಲು ಬಹು ಮುಖ್ಯವಾಗಿ ಕಾರಣವಾಗುತ್ತದೆ.

ಚಿತ್ರಕಲೆಯಲ್ಲಿ ಆಸಕ್ತಿ

ಗದಗಿನಲ್ಲಿ ಇವರು ವಾಸಿಸುತ್ತಿದ್ದ ಪಕ್ಕದ ಮನೆಯಲ್ಲಿಯೇ ಎಮ್.ಸಿ.ಮನವಳ್ಳಿಯವರು ಪೌಡರ್ ಟಿನಿಂಗ್ ಮೂಲಕ ಚಿತ್ರಗಳನ್ನು ರಚಿಸುತ್ತಿದ್ದರು. ಇದನ್ನು ಗಮನಿಸಿದ ಬಾಲಕ ಕಾಳೆಯವರ ಆಸಕ್ತಿ ಮನಸ್ಸು ಚಿತ್ರ ಕಡೆಗೆ ಸರಿಯಿತು. ಪ್ರತಿ ದಿನವೂ ಮನವಳ್ಳಿಯವರು ಚಿತ್ರಿಸುತ್ತಿದ್ದಾಗ ಕಾಳೆಯವರು ಬಂದು ಕುತೂಹಲದಿಂದ ವೀಕ್ಷಿಸುವುದು ಮಾತ್ರವಲ್ಲದೇ ಚಿತ್ರ ಮುಗಿಯುವವರೆಗೆ ನಿಂತು ನೋಡುವುದು.

ಬಿಡಿಸುವಾಗ ಅವರ ಹತ್ತಿರ ಬಂದು ಕುಳಿತುಕೊಳ್ಳುವುದು ಮಾಡುತ್ತಿದ್ದರು. ನಂತರ ತಾವೂ ಮನೆಗೆ ಬಂದು ಹಾಗೆಯೇ ಚಿತ್ರಿಸುವ ಪ್ರಯತ್ನ ಮಾಡುತ್ತಿದ್ದರು. ಹೀಗೆ ಕಾಳೆಯವರಿಗೆ ಅರಿವಿಲ್ಲದಂತೆಯೇ ಅವರ ಸುಪ್ತ ಮನಸ್ಸು ಕಲೆಯೆಡೆಗೆ ಆಕರ್ಷಿತಗೊಂಡಿತ್ತು. ಒಂದು ದಿನ ಮುನವಳ್ಳಿಯವರು ಬಾಲಕ ಕಾಳೆ ಬಿಡಿಸಿದ ಚಿತ್ರಗಳನ್ನು ನೋಡಿ ಆಶ್ಚರ್ಯಗೊಳ್ಳುತ್ತಾರೆ. ಕಲೆಯ ಬಗೆಗೆ ಈ ಬಾಲಕನಿಗಿರುವ ಅದಮ್ಯ ಉತ್ಸಾಹ, ಒಲವನ್ನು ಕಂಡು ಹರ್ಷಚಿತ್ತರಾಗಿ, ಕಲಾಗುರು ಟಿ.ಪಿ.ಅಕ್ಕಿಯವರು ಕಾಳೆಯವರ ಸುಪ್ತ ಕಲಾ ಪ್ರತಿಭೆಯನ್ನು ಗುರುತಿಸುತ್ತಾರೆ. ಅಲ್ಲಿಂದಲೇ ಕಾಳೆಯವರ ಬಣ್ಣದ ಬದುಕಿನ ಕಲಾ ಜೀವನದ ಅಧ್ಯಯನ ಪ್ರಾರಂಭಗೊಂಡಿತೆನ್ನಬಹುದು.

೧೯೪೭ ಆಗಸ್ಟ್ ೧೫ ನಮಗೆ ಸ್ವಾತಂತ್ರ್ಯ ಸಿಕ್ಕ ದಿನ ಆಗಿನ್ನೂ ಬಾಲಕನಾಗಿದ್ದ ಕಾಳೆಯವರು ಅಂದಿನ ದಿನದ ಸಂಭ್ರಮವನ್ನು ನೆನಪಿಸಿಕೊಳ್ಳುತ್ತಾರೆ. ಗದುಗಿನಲ್ಲಿ ಪ್ರಾಥಮಿಕ ಶಾಲೆಯ ಹೆಡ್ ಮಾಸ್ತರ್ ಆಗಿದ್ದ ಸಿದ್ದ ರಾಮಶೆಟ್ಟರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಸ್ವಾತಂತ್ರ್ಯ ದೊರೆತ ಅಂದಿನ ಮಧ್ಯರಾತ್ರಿ ಸಿದ್ಧರಾಮಶೆಟ್ಟರು ಉಲ್ಲಾಸದಿಂದ ಓಡಾಡಿ ಭಾರತದ ರಾಷ್ಟ್ರೀಯ ಧ್ವಜವನ್ನು ಹಾರಿಸಿದ್ದರು. ಈ ರೀತಿಯ ದೇಶಭಕ್ತ ಗುರುವೃಂದವನ್ನು ಹೊಂದಿದ ಕಾಳೆಯವರಲ್ಲಿ ಅವರಂತೆಯೇ ಆದರ್ಶ, ತ್ಯಾಗ, ತಮ್ಮತನದ ರಾಷ್ಟ್ರೀಯ ಭಾವನೆಗಳು ತುಂಬಿಕೊಂಡಿರುವುದು ಮಾತ್ರವಲ್ಲದೇ ಮುಂದೆ ಅವರ ಕಲಾಕೃತಿಗಳಲ್ಲಿಯೂ ಈ ಅಂಶಗಳು ಅಭಿವ್ಯಕ್ತಗೊಳ್ಳುತ್ತ ಹೋಗಿರುವುದನ್ನು ಕಾಣಬಹುದು.[೪]

ಕಲಾ ಶಿಕ್ಷಣ

೧೯೪೮ರಲ್ಲಿ ಮುನ್ಸಿಪಲ್ ಹೈಸ್ಕೂಲ್, ಗದಗ ಇಲ್ಲಿ ಎಂಟನೆಯ ತರಗತಿಗೆ ಪ್ರವೇಶ ಪಡೆದ ಕಾಳೆಯವರಿಗೆ ಟಿ.ಪಿ.ಅಕ್ಕಿಯವರ ಮಾರ್ಗದರ್ಶನ ದೊರಕಿದ್ದು ಅವರ ಜೀವನದ ಮಾರ್ಗವೇ ಬದಲಾಗಿ ಅದುವೇ ಅವರಿಗೆ ದಾರಿ ದೀಪವಾಯಿತೆನ್ನಬಹುದು. ವಿದ್ಯಾರ್ಥಿ ದೆಸೆಯಿಂದ ಹಿಡಿದು ಮುಂದೆ ಅವರ ಬದುಕಿನುದ್ದಕ್ಕೂ ದಿಕ್ಸೂಚಿಯಾಗಿ ಅವರ ಕಷ್ಟ ಸುಖಗಳಿಗೆ, ಬೇಕು ಬೇಡಗಳಿಗೆ, ಸ್ಪಂದಿಸಿ ಅವರೊಬ್ಬ ಬಹುದೊಡ್ಡ ಕಲಾವಿದರಾಗಿ ರೂಪುಗೊಳ್ಳಲು ಟಿ.ಪಿ.ಅಕ್ಕಿಯವರು ನೀಡಿದ ಪ್ರೋತ್ಸಾಹ ಅನನ್ಯವಾದದ್ದು. ಟಿ.ಪಿ.ಅಕ್ಕಿಯವರಿಗೆ ವಿದ್ಯಾರ್ಥಿಗಳೆಂದರೆ ಪಂಚ ಪ್ರಾಣ. ಅದರಲ್ಲೂ ಪ್ರತಿಭಾವಂತ ವಿದ್ಯಾರ್ಥಿಗಳಿದ್ದರೆ ಅವರಿಗೆ ಏನೆಲ್ಲ ಸಹಾಯವನ್ನು ಮಾಡಲೂ ಇವರು ಮುಂದಾಗುತ್ತಿದ್ದರು. ಅವರ ಶಿಷ್ಯರಾಗಿದ್ದುದೇ ಒಲಿದಭಾಗ್ಯ, ಪುಣ್ಯ ವಿಶೇಷವೆಂಬ ಮಾತುಗಳು ಈಗಲೂ ಅವರ ವಿದ್ಯಾರ್ಥಿಗಳಲ್ಲಿ ಕೇಳಿಬರುತ್ತವೆ.

ಟಿ.ಪಿ.ಅಕ್ಕಿಯವರ ಹೆಸರು ಬಂದರೆ ಸಾಕು ವಿ.ಟಿ.ಕಾಳೆಯವರು ಭಾವಪರವಶರಾಗುತ್ತಾರೆ. “ನಾನು ಅಕ್ಕಿ ಗುರುಗಳ ಋಣದಲ್ಲಿ ಬೆಳೆದ ಕೂಸು. ನನಗೆ ಅವರು ಬರೀ ಗುರುಗಳಾಗಿ ಅಷ್ಟೇ ಅಲ್ಲ ನನ್ನ ಭಾಗದ ದೇವರು ಆಗಿದ್ದರು. ತಂದೆ-ತಾಯಿ ಸ್ನೇಹಿತ, ಬಂಧು-ಬಳಗದವರ ಸ್ನೇಹ-ವಿಶ್ವಾಸಕ್ಕಿಂತ ಹೆಚ್ಚಿನ ಪ್ರೀತಿಯನ್ನು ನಾನು ಅವರಿಂದ ಪಡೆದಿದ್ದೇನೆ. ಅಂಥವರು ಸಿಗುವುದು ತುಂಬ ಅಪರೂಪ. ನನ್ನಂತಹ ಅನೇಕ ಅಸಹಾಯಕ ಪ್ರತಿಭೆಗಳನ್ನು ಅವರು ಬೆಳೆಸಿದ ರೀತಿಯೇ ಅದ್ಭುತ. ಅಕ್ಕಿಯವರ ಶಿಷ್ಯನಾಗಿಲ್ಲದೇ

ಅಂತಹವರು. ತಮ್ಮ ಶಿಷ್ಯರ ಶ್ರೇಯೋಭಿವೃದ್ಧಿಗೆ ತಮ್ಮ ಭವಿಷ್ಯನಿಧಿ ಹಣವನ್ನು ಮತ್ತು ಹೆಂಡತಿಯ ಕೊರಳಿನಲ್ಲಿಯ ಕಂಠಹಾರವನ್ನೇ ಅಡವು ಇಟ್ಟು ಮುಂಬೈಯಲ್ಲಿ ಕಲಿಯುವ ನನ್ನಂತಹ ವಿದ್ಯಾರ್ಥಿಗಳಿಗೆ ಹಣದ ಸಹಾಯ ಮಾಡಿದವರು. ತಮ್ಮ ಶಿಷ್ಯರು ಮುಂದೆ ಬರಲೆಂದು ತಮ್ಮ ಜೀವನ ಪರ್ಯಂತ ತ್ಯಾಗಜೀವಿಯಾಗಿ ಬದುಕಿದ ಮಹಾಚೇತನ ಎಂದು ಹೇಳುವ ಕಾಳೆಯವರ ಈ ಮಾತುಗಳಲ್ಲಿ ಅಕ್ಕಿಯವರ ಬಗೆಗಿನ ಅವರ ಗೌರವಾದರ ಎಂತಹದೆಂಬುದನ್ನು ಕಾಣಬಹುದು. ಇಂತಹ ಶ್ರೇಷ್ಠ ಗುರುವಾತ್ಸಲ್ಯದಲ್ಲಿ ಬೆಳೆದ ಕಾಳೆಯವರು ಅವರಂತೆಯೇ ನಡೆ-ನುಡಿಯನ್ನು ಅಳವಡಿಸಿಕೊಂಡು ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ.[೫]

ಕಲೆಯ ಅಭಿರುಚಿಯನ್ನು ಬೆಳೆಯಿಸಿಕೊಂಡಿದ್ದ ಕಾಳೆಯವರು ಕಲಾ ಶಿಕ್ಷಣವನ್ನೇ ಆಯ್ಕೆ ಮಾಡಿಕೊಂಡರು. ಗದುಗಿನ ಮುನಸಿಪಲ್ ಹೈಸ್ಕೂಲಿನಲ್ಲಿ ಎಲಿಮೆಂಟರಿ ಮತ್ತು ಇಂಟರ್‌ಮೀಡಿಯಟ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳನ್ನು ಪಾಸಾದರು. ಆಗಿನ ಮುಂಬಯಿ ಸರಕಾರವು ನಡೆಸುತ್ತಿದ್ದ ಈ ಪರೀಕ್ಷೆಗಳಲ್ಲಿ ರ್‍ಯಾಂಕ್‌ನೊಂದಿಗೆ ಬಹುಮಾನಗಳನ್ನು ಪಡೆದುಕೊಂಡರು. ೧೯೫೨ ರಲ್ಲಿ ಮುಂಬಯಿಯ ಸರ್.ಜೆ.ಜೆ.ಕಲಾ ಶಾಲೆಯಿಂದ ಚಿತ್ರಕಲೆಯ ಗವರ್ನಮೆಂಟ್ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗಿನ ಸಂದರ್ಭದಲ್ಲಿ ಕರ್ನಾಟಕದ ಕಲಾವಿದ್ಯಾರ್ಥಿಗಳು ಮುಂಬಯಿಗೆ ಹೋಗಿ ಪರೀಕ್ಷೆಗಳನ್ನು ಬರೆಯಬೇಕಾಗಿತ್ತು. ಕಾಳೆಯವರು ಮುಂಬಯಿ ಹೋಗುವಾಗಲೂ ಹಣದ ಅಡಚಣೆ ಉಂಟಾಯಿತು. ಒಂದು ಹಂತದಲ್ಲಿ ಕಾಳೆಯವರ ಆಪ್ತ ಗುರುಗಳಾದ ಬಿ.ಎಸ್.ಚವ್ಹಾಣ್, ಡಿ.ಎಫ್.ಪಾಟೀಲ ಮತ್ತು ಕಾಲವಾಡಮಠ ಎಂಬುವರು ಊರಲ್ಲಿ ಅವರಿವರನ್ನು ಬೇಡಿ ಹಣವನ್ನು ಸಂಗ್ರಹಿಸಿಕೊಟ್ಟು ಮುಂಬಯಿಗೆ ಕಳಿಸಿದುದನ್ನು ಕಾಳೆಯವರು ಈಗಲೂ ನೆನಪಿಸುತ್ತಾರೆ. ಗುರುಗಳಾದ ಟಿ.ಪಿ.ಅಕ್ಕಿಯವರೇ ಸ್ವತಃ ಕಾಗದ, ಬಣ್ಣ ಮತ್ತು ಹಣವನ್ನು ಕೊಟ್ಟು ಮುಂಬಯಿಗೆ ಕಳಿಸಿಕೊಟ್ಟರಂತೆ, ಹೀಗೆ ಕಷ್ಟದ ದಿನಗಳಲ್ಲಿ ಇವರ ಕಲಾಶಿಕ್ಷಣ ನಡೆಯಿತು.

ಜೆ.ಜೆ.ಕಲಾ ಶಾಲೆಯ ಪ್ರಭಾವ

ಕಾಳೆಯವರಿಗೆ ಜೆ.ಜೆ.ಕಲಾ ಶಾಲೆಯ ವಾತಾವರಣ ಅಲ್ಲಿಯ ಕಟ್ಟಡ, ಪಠ್ಯಕ್ರಮ ಪ್ರಾಯೋಗಿಕ ನೆಲೆಯಲ್ಲಿ ಕಂಡುಕೊಳ್ಳುವ ಚಿತ್ರಕಲಾ ಪ್ರಯೋಗಗಳು, ಅಲ್ಲಿನ ಶಿಸ್ತು, ಕಲಿಕಾ ಕ್ರಮ ಮುಂತಾದ ಅಂಶಗಳು ಕಾಳೆಯವರ ಮನಸ್ಸಿನಲ್ಲಿ ಹೆಚ್ಚು ಪರಿಣಾಮವನ್ನು ಉಂಟುಮಾಡಿತ್ತು.

ಜೆ.ಜೆ. ಸ್ಕೂಲಿನ ಪಠ್ಯಕ್ರಮದಲ್ಲಿ ಪಾಶ್ಚಾತ್ಯ ಪಠ್ಯಕ್ರಮದ ಪದ್ಧತಿಯನ್ನು ಅಳವಡಿಸಿದ್ದರು. ಭಾರತೀಯ ಶೈಲಿ ಪದ್ಧತಿಗೂ ಅಲ್ಲಿ ಮಹತ್ವವಿತ್ತು. ಭಾವಚಿತ್ರ ಸ್ಟಿಲ್‌ಲೈಫ್, ಭೂದೃಶ್ಯ, ದೈಹಿಕ ಅಂಗರಚನಾ ಇವೆಲ್ಲಾ ಪಾಶ್ಚಾತ್ಯ ಪದ್ಧತಿಯಲ್ಲೇ ಮಾಡಬೇಕಾಗಿತ್ತು. ಲಂಡನ್ ರಾಯಲ್ ಸ್ಕೂಲ್ ಆಫ್ ಆರ್ಟ್‌ನಲ್ಲಿರುವ ಪದ್ಧತಿಯನ್ನೇ ಇಲ್ಲಿ ಅಳವಡಿಸಲಾಗಿತ್ತು. ಆದರೆ ಸಂಯೋಜನೆ ಮಾತ್ರ ಭಾರತೀಯ ಶೈಲಿಯನ್ನೇ ಅಳವಡಿಸಲಾಗಿತ್ತು. ಈ ಶಿಕ್ಷಣ ಪದ್ಧತಿಯು ಹಾಗೂ ಅಧ್ಯಾಪಕರು ಮನಮುಟ್ಟುವಂತೆ ಬೋಧಿಸುವುದು

ಹೆಚ್ಚು ಪರಿಣಾಮಕಾರಿಯಾಗಿ ಕಲಾವಿದ ರೂಪಗೊಳ್ಳಲು. ಜೆ.ಜೆ.ಕಲಾ ಶಾಲೆಯ ಪ್ರಭಾವ ವಿ.ಟಿ.ಕಾಳೆಯವರ ಮೇಲೆ ಬೀರಿತು.

ವೃತ್ತಿ ಜೀವನ

ಕಾಳೆಯವರು ಕಲಾ ಶಿಕ್ಷಣ ಮುಗಿಸಿದ ಮೇಲೆ ತಮ್ಮ ಕಲಾ ಜೀವನವನ್ನು ಕಲಾ ಶಾಲೆಗಳ ಮೂಲಕ ವೃತ್ತಿ ಜೀವನ ಸಾಗಿಸುತ್ತಾರೆ. ಮೊದಲಿಗೆ ತಾವು ಕಲಿತ ಮಾತೃಸಂಸ್ಥೆಯಾದ ಗದಗಿನ ವಿಜಯ ಕಲಾ ಮಂದಿರ, ಆಮೇಲೆ ಸಂಡೂರಿನ ರೆಸಿಡೆನ್ಸಿಯಲ್ ಸ್ಕೂಲ್‌ನಲ್ಲಿ ವೃತ್ತಿ ಜೀವನ ಸಾಗಿಸುತ್ತದೆ.

೧೯೫೨ ರಿಂದ ೧೯೬೪ರವರೆಗೂ ಗದಗದ ವಿಜಯ ಕಲಾಮಂದಿರದಲ್ಲಿ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿದ ವಿ.ಟಿ.ಕಾಳೆಯವರು ವಿದ್ಯಾರ್ಥಿಗಳಿಗೆ ಅಚ್ಚು ಮೆಚ್ಚಿನ ಶಿಕ್ಷಕರಾಗಿದ್ದರು. ವಿದ್ಯಾರ್ಥಿಗಳ ಬಗ್ಗೆ ಪ್ರೀತಿ, ಒಲವು ಅಂತಃಕರಣಗಳನ್ನು ಹೊಂದಿದ ಇವರು ಕಲಿಕೆಯ ವಿಷಯದಲ್ಲಿ ಶಿಸ್ತಿನ ಸಿಪಾಯಿಯಾಗಿದ್ದರು. ತಾವು ಅಧ್ಯಯನ ಮಾಡಿದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ತಾವು ಕಲಾಕೃತಿಗಳನ್ನು ರಚನೆ ಮಾಡುವ ಮೂಲಕ ವಿದ್ಯಾರ್ಥಿಗಳಿಗೂ ಶಿಸ್ತನ್ನು ಹೇಳಿಕೊಡುತ್ತಿದ್ದರು.[1] ನಿಸರ್ಗ ಚಿತ್ರಣ, ವ್ಯಕ್ತಿಚಿತ್ರಣ, ಸಂಯೋಜನಾ ಚಿತ್ರಗಳನ್ನು, ವರ್ಣಗಳ ಮಿಶ್ರಣದ ಕುಂಚಗಳ ಬಳಕೆ ಚಿತ್ರಕಲೆಯ ವಿಧಿ–ವಿಧಾನಗಳು ಹಂತ ಹಂತವಾಗಿ ಪ್ರಾಯೋಗಿಕವಾಗಿ ಕಲಾತಂತ್ರ, ಶೈಲಿಗಳ ವಿಷಯಗಳನ್ನು ಮನಮುಟ್ಟುವಾಗೆ ಮಾರ್ಗದರ್ಶನವನ್ನು ಒಬ್ಬ ಒಳ್ಳೆಯ ಶಿಕ್ಷಕ, ಉತ್ತಮ ಸ್ನೇಹಿತರಂತೆ ವಿದ್ಯಾರ್ಥಿಗಳಿಗೆ ಆತ್ಮ ವಿಶ್ವಾಸ ಮೂಡುವಂತೆ, "ಮುಂದಿನ ಕಲಾತ್ಮಕ ಬದುಕಿನ ಭವ್ಯ ಸಾರಕ್ಕೆ ಅಡಿಪಾಯ ಹಾಕಿಕೊಟ್ಟಿತು.[2]

ಅವರೊಬ್ಬ ಒಳ್ಳೆ ಮಾರ್ಗದರ್ಶಿಯಾಗಿ ಅನುಭವಗಳನ್ನು ಧಾರೆ ಎರೆಯುವಲ್ಲಿ ತತ್ವಜ್ಞಾನಿಯಂತೆ ಇರುವುದನ್ನು ಅವರ ನೂರಾರು ವಿದ್ಯಾರ್ಥಿಗಳೂ ಇಂದಿಗೂ ಸ್ಮರಿಸುತ್ತಾರೆ. ಡಾ.ಜಿ.ಕೆ.ಹಿರೇಮಠ, ಶ್ರೀ ಜಿ.ಜಿ.ವಾರಿ, ಶ್ರೀ ಮಹದೇವ ಕವಿಶೆಟ್ಟಿ, ಶ್ರೀ ಎಂ.ಆರ್.ಬಾಳಿಕಾಯಿ, ವಸಂತ ಅಕ್ಕಿ, ಶ್ರೀ ಎಂ.ಬಿ.ಪಾಟೀಲ ಈ ಪ್ರಸಿದ್ಧ ಕಲಾವಿದರೆಲ್ಲಾ ಕಾಳೆಯವರ ಶಿಷ್ಯಂದಿರು, ಇವರೆಲ್ಲಾ ರಾಜ್ಯ, ರಾಷ್ಟ್ರಮಟ್ಟದ ಕಲಾವಿದರು "ನನ್ನ ಶಿಷ್ಯರೆಂದು ಹೇಳಿಕೊಳ್ಳಲು ನನಗೆ ಅಭಿಮಾನವೆನಿಸುತ್ತದೆ.[3]

ಕಲಾವಿದ ವಸಂತ ಅಕ್ಕಿಯವರು ಟಿ.ಪಿ.ಅಕ್ಕಿಯವರ ಪುತ್ರರು ಮತ್ತು ಕಾಳೆಯವರು ಶಿಷ್ಯರು. ಅವರು ಹೇಳುವಂತೆ ನಾನು ವಿಜಯ ಕಲಾಮಂದಿರದಲ್ಲಿ ಕಾಳೆಯವರ ಕೈಯಲ್ಲಿ ಐದು ವರ್ಷ ಕಲಿತ್ತಿದ್ದೇನೆ. ಅವರು ಕಲಿಸುವ ಪದ್ಧತಿ ಪರಿಣಾಮಕಾರಿಯಾಗಿತ್ತು. ನಮಗೆ ಸಲೀಸಾಗಿ ತಿಳಿಯುವ ಹಾಗೇ ಪ್ರಾತ್ಯಕ್ಷಿಕೆ ಮಾಡಿ ತೋರಿಸುತ್ತಿದ್ದರು. ಅವರು ಭಾವಚಿತ್ರ ರಚಿಸುವ ಕ್ರಮ ಅದ್ಭುತ ಪರಿಣಾಮಕಾರಿಯಾಗಿರುತ್ತಿತ್ತು. ಭಾವಚಿತ್ರ ರಚಿಸಲು ಅವರು ಅತ್ಯಂತ ಕಡಿಮೆ ಸಮಯವನ್ನು ತೆಗೆದುಕೊಳ್ಳುತ್ತಿದ್ದರು.[4]

ಎಂ.ಆರ್.ಬಾಳಿಕಾಯಿಯವರು ಹೇಳುವಂತೆ ವಿಜಯ ಕಲಾ ಮಂದಿರವಲ್ಲಿ ಒಳ್ಳೆಯ ಕಲಾಶಿಕ್ಷಣ ವ್ಯಾಪಿಸಿತ್ತು. ಅವರಲ್ಲಿ ವಿ.ಟಿ.ಕಾಳೆ ಗುರುಗಳು ಒಬ್ಬರು. ಅವರ ಕೃಪೆಯಿಂದಲೇ ನಾನು ಕಲಾವಿದನಾಗಿ ರೂಪುಗೊಳ್ಳಲು ಸಾಧ್ಯವಾಯಿತು. ಗುರುವಿನ ಬಲವೊಂದಿದ್ದರೆ ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ಇದೇ ಸಾಕ್ಷಿ. ಕಾಳೆ ಗುರುಗಳಲ್ಲಿ ಕಲಾಕೃತಿ ರಚಿಸುವಾಗ ಶಿಸ್ತುಬದ್ಧತೆ ಕಂಡುಬರುತ್ತಿತ್ತು. ಭಾವಚಿತ್ರ ತುಂಬಾ ಚೆನ್ನಾಗಿ ಮಾಡುತ್ತಿದ್ದರು. ಫಾರ್ಮ್ ಎಂದರೇನು ? ಕಲರ್ ಅಂದರೆ ಏನು ಎಂದು ತುಂಬಾ ಚೆನ್ನಾಗಿ ಹೇಳಿಕೊಡುತ್ತಿದ್ದರು.[೧೦]

ಸಂಡೂರಿನಲ್ಲಿ ವೃತ್ತಿ ಜೀವನ

೧೯೬೪ರಲ್ಲಿ ವಿಜಯ ಕಲಾ ಮಂದಿರ ಬಿಟ್ಟು ಸಂಡೂರಿಗೆ ಬಂದ ಕಾಳೆಯವರು ಸುಮಾರು ೨೮ ವರ್ಷಗಳ ಕಾಲ ಸುದೀರ್ಘವಾಗಿ ಸಂಡೂರಿನ ರೆಸಿಡೆನ್ಷಿಯಲ್ ಶಾಲೆಯಲ್ಲಿ ಸೇವೆ ಸಲ್ಲಿಸಿ ಅಲ್ಲಿಯೇ ನಿವೃತ್ತಿ ಹೊಂದಿದರು. ೧೯೬೪ರಲ್ಲಿ ಕಾಳೆಯವರು ಸಂಡೂರಿಗೆ ಬಂದಾಗ ಇನ್ನೂ ಮೂವತ್ತು ವರ್ಷದ ತರುಣರಾಗಿದ್ದರು. ಚಿತ್ರಕಲೆಯಲ್ಲಿ ಆಗಲೇ ಸಾಕಷ್ಟು ಪ್ರೌಢರಾಗಿದ್ದರು. ಸ್ವತಃ ಕಲಾವಿದರಾದ ಎಂ.ವೈ.ಘೋರ್ಪಡೆಯವರು ಇವರ ಕಲಾಕೃತಿಗಳನ್ನು ಕಂಡು ಅಚ್ಚರಿಗೊಂಡದಲ್ಲದೆ, ಅವರಲ್ಲಿರುವ ಕಲೆಯ ಸತ್ವ ಅರಿತು ಆ ಕೂಡಲೇ ಕಾಳೆಯವರಿಗೆ ಚಿತ್ರಕಲಾ ಶಿಕ್ಷಕ ಹುದ್ದೆ ನೀಡಿದರು.[೧೧]

ಕಾಳೆಯವರು ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾ ಚಿತ್ರಕಲಾ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ್ದರೂ ಇತರ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಬಾಗಿಯಾಗಿ ಹಲವಾರು ನಾಟಕಗಳಲ್ಲಿ ನಟರಾಗಿ, ನಿರ್ದೇಶಕರಾಗಿ ಉಡುಪು, ವಿನ್ಯಾಸ ಮೇಕಪ್ ಸ್ಟೇಜ್ ಡೆಕೋರೇಶನ್ ಮಾಡುತ್ತಿದ್ದರು. ಸಕ್ರಿಯವಾಗಿ ಭಾಗವಹಿಸಿ ಲಲಿತ ಕಲೆಗಳ ಬಗ್ಗೆ ಗೌರವ ಮತ್ತು ಪ್ರೀತಿ ತೋರುತ್ತಿದ್ದರು.

ಕಾಳೆಯವರು ೧೯೬೦ ರಲ್ಲಿ ದಾಂಪತ್ಯಕ್ಕೆ ಕಾಲಿಟ್ಟು ಒಟ್ಟು ಒಂಬತ್ತು ಮಕ್ಕಳ ಜೊತೆ ಸಂಡೂರಿನಲ್ಲಿ ಸರಳ ಜೀವನ ಶೈಲಿ ಮಕ್ಕಳೆಲ್ಲರ ಜೊತೆ ಕಾಲ ಕಳೆಯುತ್ತಿದ್ದಾರೆ.

ಕಾಳೆಯವರು ೧೯೯೨ರಲ್ಲಿ ತಮ್ಮ ಕಲಾಶಿಕ್ಷಕ ವೃತ್ತಿಯಿಂದ ನಿವೃತ್ತಿ ಹೊಂದಿದರೂ ಮತ್ತೆ ಐದು ವರ್ಷ ಇವರನ್ನು ಘೋರ್ಪಡೆಯವರು ತಮ್ಮ ಸಂಸ್ಥೆಯಲ್ಲಿ ಉಳಿಸಿಕೊಂಡರು. ಒಬ್ಬ ಸೃಜನಶೀಲ ಕಲಾವಿದರಾಗಿ ಅನೇಕ ಸಂಘ-ಸಂಸ್ಥೆಗಳಿಗೆ ಮಠಮಾನ್ಯಗಳಿಗೆ ಅನೇಕ ಕಲಾಕೃತಿಗಳನ್ನು ರಚಿಸಿಕೊಟ್ಟಿರುತ್ತಾರೆ.

ಪ್ರಸ್ತುತ ನಾಡಿನ ಹಿರಿಯ ಕಲಾವಿದರಲ್ಲಿ ಒಬ್ಬರಾದ ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಅನೇಕ ಮಹತ್ವದ ಘಟನೆಗಳನ್ನು ಯಶಸ್ವಿಯಾಗಿ ದಾಟಿ ಶ್ರೇಷ್ಠ ಕಲಾವಿದರಾಗಿ ರೂಪುಗೊಂಡಿದ್ದಾರೆ. ಅವರು ಸಾವಿರಾರು ಕಲಾಕೃತಿಗಳನ್ನು ನಾಡಿನ ಕಲಾಶ್ರೀಮಂತಿಕೆಯನ್ನು ಹೆಚ್ಚಿಸಲು ನೆರವಾಗಿದೆ. ನಾಡಿನ ಅನೇಕ ಸಾಮಾಜಿಕ ಕಲಾಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಬಂದಿರುವ ಕಾಳೆಯವರು ಸಮಾಜದಲ್ಲಿ ತಮ್ಮ

ಅಸ್ತಿತ್ವವನ್ನು ತೋರ್ಪಡಿಸುತ್ತಾ ಬಂದಿದ್ದಾರೆ. ಇಲ್ಲಿಯವರೆಗೂ ಅವರು ರಚಿಸಿರುವ ಕಲಾಕೃತಿಗಳನ್ನು ಅದರ ಮಹತ್ವವನ್ನು ಅರಿತು ರಾಜ್ಯ ಸರಕಾರ, ಸಂಘ ಸಂಸ್ಥೆಗಳು ಅವರನ್ನು ಗೌರವಿಸಿ ಸನ್ಮಾನಿಸಿದೆ. ಅಲ್ಲದೇ ಅನೇಕ ಪ್ರಶಸ್ತಿ ಪುರಸ್ಕಾರಗಳು ಅವರನ್ನು ಅರಸಿ ಬಂದಿವೆ.ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದು ರಾಜ್ಯದಲ್ಲಿ ಕಲಾಜೀವಂತಿಕೆಯನ್ನು, ಹಲವಾರು ಕಾರ್ಯಕ್ರಮಗಳು ರೂಪಗೊಳಿಸಿ, ಯುವ ಕಲಾವಿದರಿಗೆ ಪ್ರೇರಣೆ, ಸ್ಫೂರ್ತಿ ನೀಡಿದ್ದಾರೆ.

ಭಾವಚಿತ್ರಗಳು

ಕಾಳೆಯವರು ತಮ್ಮ ಬದುಕಿನುದ್ದಕ್ಕೂ ಸಾವಿರಾರು ಭಾವಚಿತ್ರಗಳನ್ನು ರಚಿಸಿದ್ದಾರೆ. ಅವು ಹೆಚ್ಚಾಗಿ ಬೇಡಿಕೆಯ ಪೂರೈಕೆಗಾಗಿ, ಬದುಕಿನ ನಿರ್ವಹಣೆಗಾಗಿ ರಚಿಸಿದ ಭಾವಚಿತ್ರಗಳೇ ಆಗಿವೆ. ಆದರೂ ಅವರ ಭಾವಚಿತ್ರಗಳಲ್ಲಿ ಕಲಾತ್ಮಕತೆ, ಸೌಂದರ್ಯಪ್ರಜ್ಞೆ, ಪ್ರಮಾಣ ಬದ್ಧತೆಯನ್ನು ಎಲ್ಲಿಯೂ ಕೈಬಿಟ್ಟಿಲ್ಲ. ಅವರು ಭಾವಚಿತ್ರಗಳು ಹೆಚ್ಚಾಗಿ ಬೇಡಿಕೆಗಾಗಿ ಎಂಬುದು ಅವರ ಪಾಲಿಗೆ ಒಂದು ನೆಪ ಮಾತ್ರ. ಆ ಬೇಡಿಕೆಯನ್ನು ಪೂರೈಸುವಲ್ಲಿ ಭಾವಚಿತ್ರಗಳನ್ನು ರಚಿಸುವಲ್ಲಿ ಅವರು ಆನಂದಪಡುತ್ತಾರೆ. ಅಲ್ಲಿ ತನ್ಮಯತೆಯಿರುತ್ತದೆ. ಶ್ರದ್ಧೆಯಿರುತ್ತದೆ. ಬೇಡಿಕೆ ಸಲ್ಲಿಸಿದವರ ಬಗ್ಗೆ ಪ್ರೀತಿ, ಕಾಳಜಿ, ವಿಶ್ವಾಸವಿರುತ್ತದೆ. ಅವರನ್ನು ತೃಪ್ತಿಪಡಿಸುವ ಜವಾಬ್ದಾರಿಯಿರುತ್ತದೆ. ಬಂದ ಹಣಕ್ಕೆ ನ್ಯಾಯ ಒದಗಿಸಬೇಕು ಎಂಬುದರ ಕುರಿತು ಪ್ರಾಮಾಣಿಕೆಯಿರುತ್ತದೆ. ಈ ಭಾವಚಿತ್ರ ಪೂರ್ಣಗೊಂಡ ನಂತರ ಅದು ಬೇಡಿಕೆದಾರರ ಕೈಗೆ ಒಪ್ಪಿಸುವಾಗ ಒಂದು ತರಹದ ಅವ್ಯಕ್ತ ನೋವು ಇರುತ್ತದೆ. ಬೇಡಿಕೆದಾರರು ಆ ಚಿತ್ರವನ್ನು ನೋಡಿ ಖುಷಿ ಪಟ್ಟಾಗಿ ಮನೋಸಾಧಿಸಿರುವ ನೆಮ್ಮದಿಯನ್ನು ಆ ಒಂದು ಕಲಾಕೃತಿ ಉಂಟು ಮಾಡುತ್ತದೆ. ಹೀಗೆ ಕಾಳೆಯವರಿಗೆ ಬೇಡಿಕೆ ಕಲಾಕೃತಿ ಎಂದಿಗೂ ಬೇಸರ ತರದ ಸಂಗತಿಯಾಗಿದೆ. ಅಲ್ಲದೇ, ಅವರು ಅದರಲ್ಲಿ ಸಂತೋಷ, ತೃಪ್ತಿಯನ್ನು ಕಾಣುತ್ತದೆ.[೧೨]

ಕಾಳೆಯವರು ಛಾಯಾಚಿತ್ರಗಳನ್ನು ಅನುಸರಿಸಿ ಭಾವಚಿತ್ರಗಳನ್ನು ರಚಿಸುವುದು ಒಂದೆಡೆಯಾದರೆ ರೂಪದರ್ಶಿಗಳನ್ನು ಮುಂದೆ ಕೂಡಿಸಿ ಅನೇಕ ಭಾವಚಿತ್ರಗಳನ್ನು ರಚಿಸಿದ್ದಾರೆ. ಪಿ.ಟಿ.ಕಾಳೆಯವರು ರಚಿಸಿದ ಭಾವಚಿತ್ರ ಮತ್ತು ವ್ಯಕ್ತಿಚಿತ್ರಗಳು ಬಣ್ಣ ರೇಖೆಗಳಿಂದಲೇ ರಚನೆಯಾದರೂ ಅವುಗಳಲ್ಲಿ ಮನುಷ್ಯ ಕಾಳಜಿ, ಮಾನವಿಕ ಸಂಬಂಧಗಳು ಆ ಮೂಲಕ ಜೀವನ ಮೌಲ್ಯಗಳು ಮತ್ತು ಪರಂಪರೆಯನ್ನು ಬಿಂಬಿಸುವ ಅಂಶಗಳನ್ನು ಗುರುತಿಸಬಹುದು. ಮಹಾಪುರುಷರು, ಸ್ವಾಮಿಗಳು ಹಿರಿಯರು ಶ್ರೇಷ್ಠ ವ್ಯಕ್ತಿಗಳನ್ನು ಇವರು ರಚನೆ ಮಾಡಿದ್ದಾರೆ ಇದರಲ್ಲಿ ಹಲವು ಚಿತ್ರಗಳನ್ನು ಆಯಾ ವ್ಯಕ್ತಿಗಳನ್ನು ಫೋಟೋಗ್ರಾಫ್ ನೋಡಿ ಅದಕ್ಕೆ ತಮ್ಮ ಅಭಿವ್ಯಕ್ತಿಯ ರೂಪಗಳನ್ನು ಕೊಟ್ಟಿದ್ದಾರೆ. ಮತ್ತೆ ಕೆಲವು ಚಿತ್ರಗಳಾದ ಬುದ್ಧ, ಬಸವಣ್ಣರಂತಹ ವಿಭೂತಿ ಪುರುಷರನ್ನು ಕಲ್ಪನೆಯ ಮೂಸೆಯಿಂದ ಸೃಜನಾತ್ಮಕತೆಯ ಸ್ಪರ್ಶ ಕೊಟ್ಟು ರಚಿಸಿರುವುದು ಗಮನಾರ್ಹವಾದುದಾಗಿದೆ.[೧೩]

ಇವರು ರಚಿಸಿದ ವ್ಯಕ್ತಿಚಿತ್ರಗಳಲ್ಲಿ ಪ್ರಮುಖವಾಗಿ ಬುದ್ಧ, ಬಸವಣ್ಣ, ಅಂಬೇಡ್ಕರ್, ಹುಬ್ಬಳ್ಳಿಯ ಸಿದ್ಧಾರೂಢರು ಹಾಗೂ ಗುರುನಾಥ ರೂಢರು, ಗಂಗಾವತಿಯ ಶ್ರೀ ಚನ್ನಬಸವೇಶ್ವರರು ಹೀಗೆ ಅನೇಕ ಮಹಾಪುರುಷರ ಚಿತ್ರಗಳನ್ನು ಇವರು ಚಿತ್ರಿಸಿದ್ದಾರೆ. ಕಾಳೆಯವರು ನಾಡಿನಾದ್ಯಂತ ಮಹಾಪುರುಷರ ಜೀವನಾಧಾರಿತ ಸಮಾಜ ಸುಧಾರಕ ಭಾವಚಿತ್ರಗಳನ್ನು ರಚಿಸಿಕೊಟ್ಟಿರುತ್ತಾರೆ.

* ಬಸವಣ್ಣನವರ ಭಾವಚಿತ್ರಗಳು
* ಹಾನಗಲ್ ಕುಮಾರಸ್ವಾಮಿ ಜೀವನಾಧಾರಿತ ಕಲಾಕೃತಿಗಳು
* ಚನ್ನಬಸವಣ್ಣ ಭಾವಚಿತ್ರಗಳು
* ಚಿತ್ರಪತಿ ಶಿವಾಜಿಯ ಭಾವಚಿತ್ರಗಳು
* ಸಾಯಿಬಾಬಾಯವರ ಭಾವಚಿತ್ರಗಳು
* ಎಂ.ವೈ.ಘೋರ್ಪಡೆ ಅವರ ಭಾವಚಿತ್ರಗಳು
* ಗಾಂಧೀಜಿಯವರ ಭಾವಚಿತ್ರಗಳು ಮತ್ತು ಕುಟುಂಬದವರ ಹೀಗೆ ಮಹಾಪುರುಷ, ಧಾರ್ಮಿಕ, ಸಾಮಾಜಿಕ ಚಳುವಳಿಕಾರರ ಭಾವಚಿತ್ರಗಳ ಜೊತೆಗೆ ಹಲವು ವ್ಯಕ್ತಿಗಳ ಭಾವಚಿತ್ರ ರಚಿಸಿದರೆ ತಮ್ಮ ಕಲಾತ್ಮಕವಾಗಿ ರೂಪದರ್ಶಿಗಳನ್ನು ಬಳಸಿಕೊಂಡು ಪ್ರಯೋಗಗಳನ್ನು ವರ್ಣಗಳ ಮಿಶ್ರಣ, ಅಳತೆ, ಪ್ರಮಾಣ ವ್ಯಕ್ತಿತ್ವವನ್ನು ನೈಜತೆಯಲ್ಲಿ ಭಾವಬಂಗಿಯನ್ನು ಸೆರೆ ಹಿಡಿದು ಕಲಾವಿದನ ಆಂತರಿಕ ಅನುಭವ ಬಾಹ್ಯವಾಗಿ ಗಟ್ಟಿಗೊಳ್ಳಲು ಹೆಚ್ಚು ಮಹತ್ವ ನೀಡಿದ್ದಾರೆ.

ಹೊಸಪೇಟೆಗೆ ಹತ್ತಿರದಲ್ಲಿರುವ ಜೈನ ಗೋಶಾಲೆಗೆ ಕಾಳೆಯವರು ಸುಮಾರು ಅರವತ್ತು ಭಾವಚಿತ್ರಗಳನ್ನು ರಚಿಸಿದ್ದು ಅವೆಲ್ಲವೂ ಗೋಶಾಲೆಗೆ ದಾನ ಮಾಡಿದ ದಾನಿಗಳ ಭಾವಚಿತ್ರಗಳಾಗಿವೆ. ಈ ಎಲ್ಲ ಭಾವಚಿತ್ರಗಳನ್ನು ಗೋಶಾಲೆಯ ಒಂದು ಕೋಣೆಯಲ್ಲಿ ತೂಗು ಹಾಕಲಾಗಿದೆ.

ಈ ಭಾವಚಿತ್ರಗಳು ೧೯೮೭-೮೯ನೇ ಇಸ್ವಿಯ ಮಧ್ಯದಲ್ಲಿ ರಚಿಸಲಾದ ಚಿತ್ರಗಳಾಗಿದ್ದು ಕ್ಯಾನ್ವಾಸಿನ ಅವಕಾಶದಲ್ಲಿ ರಚಿಸಲಾಗಿದ್ದು, ೧೨/೧೫ ಅಳತೆಯ ಭಾವಚಿತ್ರಗಳಾಗಿವೆ. ಈ ಭಾವಚಿತ್ರಗಳು ಹೆಚ್ಚಾಗಿ ರಾಜಸ್ಥಾನ ರಾಜ್ಯದ ಮಾರವಾಡಿ ಜನಾಂಗದ ಭಾವಚಿತ್ರಗಳ ಅವರು ತೊಟ್ಟಂತಹ ವೇಷಭೂಷಣಗಳಿಂದ ಕಂಡುಕೊಳ್ಳಬಹುದಾಗಿದೆ. ಈ ಎಲ್ಲಾ ಚಿತ್ರಗಳು ತೈಲವರ್ಣದಲ್ಲಿ ಅತ್ಯಂತ ನೈಜವಾಗಿ ಚಿತ್ರಿಸಿರುವುದು ಕಾಳೆಯವರ ಕುಂಚದ ಕುಶಲತೆಯನ್ನು ತೋರಿಸುತ್ತದೆ. ಈ ಭಾವಚಿತ್ರಗಳು ಅತ್ಯಂತ ಶ್ರದ್ಧೆಯಿಂದ, ಆಸಕ್ತಿಯಿಂದ ಶ್ರಮದಿಂದ ರಚಿಸಿದಂತೆ ಕಂಡುಬರುತ್ತದೆ. ನಿಜವಾದ ಛಾಯಾಚಿತ್ರಗಳೇನೋ ಎಂಬ ಭ್ರಮೆಯನ್ನು ಉಂಟು ಮಾಡುವಂತೆ ಈ ಭಾವಚಿತ್ರಗಳು ನೋಡುಗರನ್ನು ಆಶ್ಚರ್ಯ ಚಕಿತಗೊಳಿಸುತ್ತಿವೆ. ಹೀಗೆ ಕಾಳೆಯವರು ಹಲವಾರು ಮಾಧ್ಯಗಳಲ್ಲಿ ಜಲವರ್ಣ, ತೈಲವರ್ಣ, ಪೆನ್ಸಿಲ್, ಇಂಕ್ ಮಾಧ್ಯಗಳಲ್ಲಿ ಸೌಂದರ್ಯಯುತವಾಗಿ ಭಾವಚಿತ್ರಗಳು ರಚಿಸಿದ್ದಾರೆ. ಅವುಗಳಲ್ಲಿ ಪ್ರಮುಖ ಕಲಾಕೃತಿಗಳು ಮಾತ್ರ ಅಧ್ಯಯನಕ್ಕೆ ಸೀಮಿತಗೊಳಿಸಲಾಗಿದೆ.

ಭಾವಚಿತ್ರಗಳು

೧) ರವೀಂದ್ರನಾಥ ಟ್ಯಾಗೋರ್ ಭಾವಚಿತ್ರ

ರವೀಂದ್ರನಾಥ ಟ್ಯಾಗೋರ್ ಅವರ ಭಾವಚಿತ್ರದಲ್ಲಿ ಹಿನ್ನಲೆಯಲ್ಲಿ ಗಾಢವರ್ಣವು ಬಳಸಿಕೊಂಡು ಪ್ರಧಾನ ವ್ಯಕ್ತಿಗೆ ಹೆಚ್ಚು ಮಹತ್ವ ಕೊಟ್ಟು ಮುಖದೊಳಗಿನ ಗಾಂಭೀರ್ಯ ಚಿಂತನೆ, ವಯೋಮಾನವನ್ನು ಗುರುತಿಸುವಾಗ ಬಿಳಿವಸ್ತ್ರ, ಬಿಳಿ ಕೂದಲು, ಗಡ್ಡ, ಮೀಸೆ, ಸ್ಪಷ್ಟವಾಗಿ ಉಬ್ಬು-ತಗ್ಗುಗಳ ಸೂಕ್ಷ್ಮತೆಯನ್ನು ನೆರಳು ಬೆಳಕನ್ನು ಹೆಚ್ಚು ಪರಿಣಾಮಕಾರಿ ತೋರಿಸುವ ಕಾಳೆ ಅವರ ಅತ್ಯುತ್ತಮ ಜಲವರ್ಣದ ಭಾವಚಿತ್ರ ಕಲಾಕೃತಿ.

೨) "ಪಾಲನಾ" ಕುಲಕರ್ಣಿ ಭಾವಚಿತ್ರ

ಈ ಭಾವಚಿತ್ರವು ದೂರದರ್ಶನದವರು ವಿಡಿಯೋ ಮಾಡುವ ಸಂದರ್ಭದಲ್ಲಿ ಕಾಳೆಯವರು ವಿದ್ಯಾರ್ಥಿಯನ್ನು ರೂಪದರ್ಶಿಯನ್ನಾಗಿ ಕೂಡಿಸಿ ಪ್ರಾತ್ಯಕ್ಷಿತೆ ಕೊಡುವ ಸಂದರ್ಭದಲ್ಲಿ ರಚಿಸಿದಂತ ಪೂರ್ಣ ಭಾವಚಿತ್ರವಾಗಿದೆ. ಈ ಪೂರ್ಣ ಭಾವಚಿತ್ರವು ೩೦"/೪೦" ಇಂಚಿನ ಕ್ಯಾನ್ವಸಿನ ಅವಕಾಶದ ಮೇಲೆ ವಾಟರ್ ಮೀಡಿಯಂ ಆಯಿಲ್ ವರ್ಣದಿಂದ ೨೦೦೦ನೇ ವರ್ಷದಲ್ಲಿ ಪೂರ್ಣಗೊಳಿಸಿದ ಕೃತಿಯಾಗಿದೆ. ಹಿನ್ನಲೆಯು ಮುಂದವಾದ ವರ್ಣದ ಲೇಪನದಿಂದ ಮುಂದೆಯಿರುವ ಗಾಢವರ್ಣದ ರೂಪದರ್ಶಿಯನ್ನು ಸ್ಫುಟವಾಗಿ ಎದ್ದು ಕಾಣುವಂತೆ ಚಿತ್ರಿಸಲಾಗಿದೆ. ಇಲ್ಲಿ ಕುಂಚದ ಬೀಸುವಿಕೆ ಅದನ್ನು ಕ್ಯಾನ್ವಾಸಿನ ಮೇಲೆ ಆಡಿಸಿರುವ ಗುರುತುಗಳನ್ನು ಗಮನಿಸಿದರೆ, ಅತ್ಯಂತ ವೇಗದಲ್ಲಿ ಪೂರ್ನಗೊಳಿಸಿ ವಿಶಿಷ್ಟ ಪರಿಣಾಮವನ್ನು ಉಂಟು ಮಾಡಿರುವುದನ್ನು ಕಾಣುತ್ತೇವೆ. ಬಣ್ಣಗಳ ಲೇಪನದಿಂದ ಭಾವಚಿತ್ರಕ್ಕೆ ಜೀವಂತಿಕೆಯನ್ನು ತಂದಿರುವುದನ್ನು ನೋಡಿದರೆ ಕಾಳಯವರು ಅಕಾಡೆಮಿ ಶೈಲಿ ಪದ್ಧತಿಯಿಂದ ಒಂದು ಹೆಜ್ಜೆ ಮುಂದೆ ಬಂದು ಈ ಕಲಾಕೃತಿ ಪೂರ್ಣಗೊಳಿಸಿರುವಂತೆ ಕಂಡುಬರುತ್ತದೆ. ಇಲ್ಲಿ ಅವರ ಕಲಾಪ್ರಜ್ಞೆ ವಿಶಿಷ್ಟವಾಗಿ ಜಾಗೃತಗೊಂಡಂತೆ ಕಾಣಿಸುತ್ತದೆ. ರೂಪದರ್ಶಿಯ ಗಂಭೀರ ಮುಖಭಾವ, ಸಾಮರ್ಥ್ಯ, ಸರಳವಂತಿಕೆ ಸ್ಫುಟವಾಗಿ ಸ್ಪಷ್ಟವಾಗಿ ಕಾಣಿಸಿರುವುದು ರೂಪದರ್ಶಿಯ ಅಂತರಾಳದ ಪ್ರತಿಬಿಂಬವೇ ಈ ಕಲಾಕೃತಿಯಾಗಿದೆ.[೧೬]

ರೂಪದರ್ಶಿಯ ನೆರಳು ಬೆಳಕು, ಮೈಬಣ್ಣ, ಹಾಗೂ ಬಟ್ಟೆಗಳ ನಿರಿಗೆಗಳು, ವರ್ಣಗಳಲ್ಲಿಯೇ ನೆರಳು ಬೆಳಕನ್ನು ಕುಂಚದ ದೊಡ್ಡ ದೊಡ್ಡ ಸೆಳೆತಗಳಿಂದ ಹೆಚ್ಚು ಮಹತ್ವ ಸೂಚಿಸುತ್ತದೆ.

ಎಂ.ವೈ.ಘೋರ್ಪಡೆ ಭಾವಚಿತ್ರ

ಎಂ.ವೈ.ಘೋರ್ಪಡೆ ಅವರಿಗೆ ಕಾಳೆ ಅವರು ಸಾಕಷ್ಟು ಭಾವಚಿತ್ರಗಳನ್ನು ರಚಿಸಿಕೊಟ್ಟಿರುತ್ತಾರೆ. ಅವರ ಕುಟುಂಬಕ್ಕೆ ಅಂಥ ಭಾವಚಿತ್ರವಾದ ಎಂ.ವೈ.ಘೋರ್ಪಡೆಯವರ ಭಾವಚಿತ್ರವು ತೈಲವರ್ಣದಲ್ಲಿ ನೈಜತೆಯನ್ನು ರೂಪಿಸಿ, ತದ್ರೂಪಿಯನ್ನು ಹೊರ ಹಾಕಿದಂತೆ ಭಾಸವಾಗುತ್ತದೆ. ಮಂದಹಾಸದ ನಗುವಿನ ಮುಖಭಾವ, ಕಣ್ಣಿನಲ್ಲಿ ಜೀವಂತಿಕೆ ಚೈತನ್ಯ ತುಂಬಿ, ನೂನುಪಾಗಿ ವರ್ಣವನ್ನು ಲೇಪಿಸಿ, ಬಿಳಿ ವರ್ಣದ

ಶರ್ಟ್. ನೂನುಪಾದ ಮುಖದಲ್ಲಿನ ಉಬ್ಬು-ತಗ್ಗುವಿನ ಸೂಕ್ಷ್ಮತೆಯನ್ನು, ವರ್ಣದ ಲೇಪನದಲ್ಲಿ ಅತ್ಯಂತ ಸೌಂದರ್ಯ ತುಂಬುವಲ್ಲಿ ಕಾಳೆಯವರು ತಮ್ಮ ತಂತ್ರ, ಶೈಲಿ ಹೆಚ್ಚು ಶ್ರಮವಹಿಸಿ ಭಾವಚಿತ್ರಕ್ಕೆ ಮೆರಗು ಕೊಟ್ಟಿದ್ದಾರೆ.

ಭಾವಚಿತ್ರ-೪

ಹೊಸಪೇಟೆಯ ಹತ್ತಿರದಲಿರುವ ಜೈನ ಗೋಶಾಲೆಗೆ ಧಾನ ಮಾಡಿದ ವ್ಯಕ್ತಿಗಳ ಭಾವಚಿತ್ರ ಅನೇಕ ಭಾವಚಿತ್ರಗಳು ತೂಗು ಹಾಕಿದ್ದಾರೆ ಅದರಲ್ಲಿ ಒಂದು ಮಾತ್ರ ವಿವರಿಸಲಾಗುವುದು.

ಛಾಯಾ ಚಿತ್ರ ನೋಡಿ ರಚಿಸಿದ ಈ ಭಾವಚಿತ್ರವು ಫೋಟೋಗ್ರಫಿ ಅಥವಾ ಪ್ರಿಂಟೋ ಎಂಬ ಅನುಮಾನ ಪ್ರಾರಂಭವಾಗುವುದು ಕಾಳೆಯವರಿಗೆ ಯಾವುದೇ ಕಲಾಕೃತಿ ಇರಲಿ ಅದನ್ನು ನೈಜತೆ ಕಾಣುವಂತೆ ಚಿತ್ರಿಸುತ್ತಿದ್ದರು. ಕನ್ನಡಕ, ಗಡ್ಡ, ಮೀಸೆ ಮತ್ತು ಪಟ್ಟಿಗವನ್ನು ಸುತ್ತಿದ್ದ ರಿಂಗಲ್ಸ್‌ನಲ್ಲಿ ಉಬ್ಬು-ತಗ್ಗುಗಳು ಸೂಕ್ಷ್ಮವಾಗಿ ಮೀಸೆ, ಗಡ್ಡವನ್ನು ಕುಂಚದಿಂದ ಅತ್ಯಂತ ಸೂಕ್ಷ್ಮವಾಗಿ ಕುಂಚದ ಮೂಲಕ ಲೇಪಿಸಿದ್ದಾರೆ. ಅಳತೆ ಪ್ರಮಾಣ ಭಾವಚಿತ್ರಕ್ಕೆ ಇರುವ ಎಲ್ಲಾ ಲಕ್ಷಣಗಳು. ವ್ಯಕ್ತಿಗೂ ಅವನ ದರಿಸುವ ವಸ್ತ್ರಗಳ ನೇರ ಸಂಬಂಧವನ್ನು ಹೇಳುವಂತಿದೆ. ಕಾಳೆಯವರ ಭಾವಚಿತ್ರ ಹೀಗೆ ಕಾಳೆಯವರು ಸಾವಿರಾರು ಕಲಾಕೃತಿಗಳು ಜಲವರ್ಣ, ತೈಲವರ್ಣ, ಪೆನ್ಸಿಲ್, ಡ್ರಾಯಿಂಗ್, ಇಂಕ್ ಪೆಸ್ಟಲ್ ಹಲವಾರು ಮಾಧ್ಯಗಳಲ್ಲಿ ಭಾವಚಿತ್ರ ಸಂಯೋಜನೆ ಧಾರ್ಮಿಕ ಆಧಾರಿತ, ಯುಗಪುರುಷರು, ಸಮಾಜ ಸುಧಾರಕರ ಅವರ ಭಾವಚಿತ್ರಗಳಲ್ಲಿ ತಂತ್ರ, ಶೈಲಿ, ಮಾಧ್ಯಮದಲ್ಲಿ ಕಲಾಕೃತಿಗಳು ರಚಿಸಿದ್ದಾರೆ. ಅಕಾಡೆಮಿ, ಜೆ.ಜೆ.ಕಲಾ ಶಾಲೆಯ ಪ್ರಭಾವ, ವರ್ಣಗಳ ಬಳಕೆ ಅವರ ಕಲಾಕೃತಿಗಳಲ್ಲಿ ಗುರುತಿಸಬಹುದು. ವಿಶೇಷವಾಗಿ ರಾಗಮಾಲಾ ಚಿತ್ರಗಳು ನಿಸರ್ಗ ಚಿತ್ರಗಳು, ಭಿತ್ತಿ ಚಿತ್ರಗಳ ನಕಲು ಚಿತ್ರಗಳು, ನವ್ಯಶೈಲಿಯ ಸೃಜನಾತ್ಮಕ ಚಿತ್ರಗಳು ಅವರ ಜೊತೆಗೆ ಶಿಲ್ಪಿ ಕಲಾಕೃತಿಗಳು ರಚಿಸಿದ್ದಾರೆ ಹಾಗೂ ನಾಟಕಗಳಲ್ಲಿ ನಟರಾಗಿ, ನಿರ್ದೇಶಕರಾಗಿ, ಶಿಕ್ಷಕರಾಗಿ, ಒಬ್ಬ ಕಲಾ ಸಾಹಿತ್ಯ ಬರಹಗಾರರಾಗಿ ವಿ.ಟಿ.ಕಾಳೆ ಅವರು ತಮ್ಮ ಬಹುಮುಖದ ವ್ಯಕ್ತಿತ್ವಕ್ಕೆ ತಮ್ಮನ್ನು ತಾವು ಅರ್ಪಣೆ ಮಾಡಿಕೊಂಡು ಈ ನಾಡಿಗೆ ಕಲಾ ಕಾಣಿಕೆ ನೀಡುತ್ತಿದ್ದಾರೆ. ಕಲಾ ಪ್ರದರ್ಶನಗಳು, ಕಲಾ ಶಿಬಿರಗಳು ಕಲಾ ಕಮ್ಮಟಗಳಿಗೆ ರಾಜ್ಯ ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿ, ತಮ್ಮನ್ನು ತಾವು ಗುರುತಿಸಿಕೊಂಡು ಸರಕಾರ, ಸಂಘ ಸಂಸ್ಥೆಗಳಿಂದ ಪ್ರತಿಷ್ಠಿತ ಪ್ರಶಸ್ತಿ ಗೌರವಗಳನ್ನು ಸ್ವೀಕರಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ, ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ, ವೆಂಕಟಪ್ಪ ಪ್ರಶಸ್ತಿ ಹಲವಾರು ಉನ್ನತ ಸ್ಥಾನಮಾನಗಳನ್ನು ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾಗಿಯೂ ಉತ್ತಮ ಕಾರ್ಯ ನಿರ್ವಹಿಸಿದ ಕೀರ್ತಿ, ಬಹುಮುಖಿ ವ್ಯಕ್ತಿತ್ವದ ಮೂಲಕ ಕಲಾ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳು ನೀಡಲಿ ಎಂಬುದು ಬಯಕೆ.

ಅಡಿ ಟಿಪ್ಪಣಿ

೧) ನಾಡೋಜ ಡಾ.ವಿ.ಟಿ.ಕಾಳೆ ಡಾ.ಎಸ್.ಸಿ.ಪಾಟೀಲ- ಪುಟ-೨

೨) ವಿ.ಟಿ.ಕಾಳೆ ಡಾ.ಎಸ್.ಸಿ.ಪಾಟೀಲ ಪುಟ-೧

೩) [illegible] ಕಲಾವಿದರು-[illegible] ಪುಟ-೧[illegible]

೪) ವಿ.ಟಿ.ಕಾಳೆ ಡಾ.ಎಸ್.ಸಿ. ಪಾಟೀಲ-ಪುಟ-೨

೫) ವಿ.ಟಿ.ಕಾಳೆ ಡಾ.ಎಸ್.ಸಿ. ಪಾಟೀಲ-ಪುಟ-೩

೬) ನಾಡೋಜ ಡಾ.ವಿ.ಟಿ.ಕಾಳೆ-ಡಾ.ಎಸ್.ಸಿ.ಪಾಟೀಲ-ಪುಟ-೫

೭) ನಾಡೋಜ ಡಾ.ವಿ.ಟಿ.ಕಾಳೆ-ಡಾ.ಎಸ್.ಸಿ.ಪಾಟೀಲ-ಪುಟ-೬

೮) ಕಲಾವಿದ ವಿ.ಟಿ.ಕಾಳೆ ಬದುಕು ಮತ್ತು ಕಲಾಕೃತಿಗಳು-ಸುಚಿತ್ರ ಜಿ.ಲಿಂಗದಳ್ಳಿ -೪೦

೯) ನಾಡೋಜ ಡಾ.ವಿ.ಟಿ.ಕಾಳೆ-ಡಾ.ಎಸ್.ಸಿ.ಪಾಟೀಲ-೪೦

೧೦) ಆದೇ ಪುಟ-೪೦

೧೧) ಕಲಾವಿದ ವಿ.ಟಿ.ಕಾಳೆ ಬದುಕು ಮತ್ತು ಕಲಾಕೃತಿಗಳು-ಸುಚಿತ್ರ ಜಿ.ಲಿಂಗದಳ್ಳಿ-೫೨

೧೨) ಕಲಾವಿದ ವಿ.ಟಿ.ಕಾಳೆ ಬದುಕು ಮತ್ತು ಕಲಾಕೃತಿಗಳು-ಸುಚಿತ್ರ ಜಿ.ಲಿಂಗದಳ್ಳಿ-೧೫೦

೧೩) ವಿ.ಟಿ.ಕಾಳೆ-ಡಾ.ಎಸ್.ಸಿ.ಪಾಟೀಲ ಪುಟ-೮

೧೪) ಕಲಾವಿದ ವಿ.ಟಿ.ಕಾಳೆ ಬದುಕು ಮತ್ತು ಕಲಾಕೃತಿಗಳು-ಸುಚಿತ್ರ ಜಿ.ಲಿಂಗದಳ್ಳಿ-೧೬೫

೧೫) ಆದೇ ಪುಟ-೧೬೫

೧೬) ಆದೇ ಪುಟ, ಪುಟ-೧೫೭

ಎ.ಟಿ.ಕಾಳೆ ಅವರ ಭಾವಚಿತ್ರಗಳು



ರವೀಂದ್ರನಾಥ ಟ್ಯಾಗೋರ್
ಭಾವಚಿತ್ರ ೧

ಭಾವಚಿತ್ರ ೨




ವಿ.ಟಿ.ಕಾಳೆ ಅವರ ಭಾವಚಿತ್ರಗಳು



ಎಂ ವಾಯ್ ಘೋರ್ಪಡೆಯವರ
ಭಾವಚಿತ್ರ ೩

ಜೈನ ಗೋ ಶಾಲೆಗೆ ಧಾನ ಮಾಡಿದ
ವ್ಯಕ್ತಿಯ ಭಾವಚಿತ್ರ ೪





ಜೆ.ಎಸ್.ಖಂಡೇರಾವ್



ನಾಡೋಜ ಜೆ.ಎಸ್.ಖಂಡೇರಾವ್

ಕರ್ನಾಟಕ ಕಲಬುರ್ಗಿ ವಿಭಾಗ ಸಾಂಸ್ಕೃತಿಕವಾಗಿ ಸಂಪದ್ಭರಿತ ಪ್ರದೇಶ. ಈ ನಾಡಿಗೆ ಭವ್ಯವಾದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆ ಇದೆ. ಪ್ರತಿಭಾವಂತ ಕಲಾವಿದರು ಕವಿಗಳು ಮತ್ತು ಸಾಹಿತಿಗೆ ಜನ್ಮ ನೀಡಿದ ಕೀರ್ತಿ ಈ ಭಾಗದ್ದು. ಆಯಾ ಕಾಲದ ಕಲೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಹಾಗೂ ಬದಲಾವಣೆಗೆ ಇಲ್ಲಿನ ಅನೇಕ ಕಲಾವಿದರು, ಸಾಹಿತಿಗಳು ತಮ್ಮ ಕಾಣಿಕೆ ಸಲ್ಲಿಸುತ್ತಾ ಬಂದಿದ್ದಾರೆ. ಅಗಾಧ ಪ್ರತಿಭೆ ಮತ್ತು ಸಾಧನೆಯಿಂದ ಚಿತ್ರಕಲಾ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಅನೇಕ ಕಲಾವಿದರು ಇಲ್ಲಿ ಆಗಿ ಹೋಗಿದ್ದಾರೆ.[೧] ಅಂಥ ಪ್ರತಿಭೆಯ ಮೂಲಕ ಕೀರ್ತಿ ಗಳಿಸಿರುವ ನಾಡೋಜ ಜೆ.ಎಸ್.ಖಂಡೇರಾವ್ ಅವರು.

ಜೆ.ಎಸ್.ಖಂಡೇರಾವ್ ಕಲಾ ಕ್ಷೇತ್ರದಲ್ಲಿ ಬಹು ಎತ್ತರಕ್ಕೆ ಬೆಳೆದ ಕಲಾವಿದರು. ಜಗದೇವಪ್ಪ ಶಂಕರಪ್ಪ ಖಂಡೇರಾವ್ ಇವರ ಪೂರ್ಣ ಹೆಸರು. ತಮ್ಮ ಪ್ರತಿಭೆ, ಸಾಧನೆಗಳಿಂದಾಗಿ ಕರ್ನಾಟಕ, ಕಲಾ ವಲಯವನ್ನು ಶ್ರೀಮಂತಗೊಳಿಸಿದ್ದಾರೆ. ಮಾತ್ರವಲ್ಲ ಚಿತ್ರಕಲೆಯ ಎಲ್ಲ ವಲಯಗಳಲ್ಲಿ ದುಡಿಸಿಕೊಂಡು ಸೈ ಎನಿಸಿಕೊಂಡಿರುವ ಅಪರೂಪದ ಕಲಾವಿದರು[೨]. ಕಲಾವಿದ ಎನಿಸಿಕೊಳ್ಳುವುದು ಸುಲಭ ಆದರೆ ಕಲಾ ಶಿಕ್ಷಕ ಎನಿಸಿಕೊಳ್ಳುವುದು ಸುಲಭದ ಮಾತಲ್ಲ ಎನ್ನುವುದು. ಖಂಡೇರಾವ್ ಅವರ ವಾದ, ಈ ಮಾತು ಅಕ್ಷರಶಃ ಸತ್ಯ ಕಲಾಶಿಕ್ಷಕನಾದವನಿಗೆ ಚಿತ್ರಕಲೆಯ ಮೂಲಭೂತ ತಿಳುವಳಿಕೆ ಜ್ಞಾನದ ಅಗತ್ಯ. ಖಂಡೇರಾವ್ ಅವರು ಅತ್ಯುತ್ತಮ ಕಲಾಶಿಕ್ಷಕರೂ ಹೌದು. ಕಲಾವಿದರಾಗಿ ಕಲಾಶಿಕ್ಷಕರಾಗಿ, ಕಲಾ ಸಂಸ್ಥೆಯೊಂದರ ನಿರ್ದೇಶಕರಾಗಿ ಇವರು ನೀಡಿರುವ ಕೊಡುಗೆ ಅನನ್ಯವಾದುದು. ಇಂಥ ಒಬ್ಬ ಶ್ರೇಷ್ಠ ಕಲಾವಿದನ ಬದುಕಿನ ಹೆಜ್ಜೆ ಗುರುತುಗಳು ಇಲ್ಲಿವೆ.[೩]

ಬಾಲ್ಯ ಮತ್ತು ಶಿಕ್ಷಣ

೧೯೪೦ ನವೆಂಬರ್ ೧ ರಂದು ಶ್ರೀಮತಿ ಬಸಮ್ಮ ಹಾಗೂ ಶಂಕರಪ್ಪ ದಂಪತಿಗಳ ನಾಲ್ಕನೇ ಮಗನಾಗಿ ಜನಿಸಿದ ಜಗದೇವಪ್ಪನವರು ಹುಟ್ಟಿದ ಮರುದಿನವೇ ತಮ್ಮ ತಾಯಿಯನ್ನು ಕಳೆದುಕೊಂಡು ಅನಾಥರಾದರು. ಒಂದೆರಡು ವರ್ಷಗಳ ಕಾಲ ಗುಲಬರ್ಗಾ ಸಮೀಪದ ಖಾಜಕೋಟ್ನೂರಿನ ತಮ್ಮ ಸೋದರತ್ತೆ (ಶ್ರೀಮತಿ ಕಾಶೀಬಾಯಿ) ಅವರ ಆರೈಕೆಯಲ್ಲಿ ಬೆಳೆಯಬೇಕಾಗಿ ಬಂತು.[೪]
ಶಂಕರಪ್ಪ ಎರಡನೆಯ ಮದುವೆಯಾದರು. ಜಗದೇವಪ್ಪನವರಿಗೆ ತಾಯಿಯ ಕೊರಗನ್ನು ನೀಗಿಸಿ, ಸ್ವಂತ ಮಕ್ಕಳಂತ ಪಾಲನೆ ಮಾಡಿದರು. ಶ್ರೀಮತಿ ಶಿವಮ್ಮನವರು, ಶಂಕರಪ್ಪನವರಿಗೆ ಎರಡನೆಯ ಹೆಂಡತಿಗೆ ಆರು ಜನ ಗಂಡುಮಕ್ಕಳು ಇಬ್ಬರೂ ಹೆಣ್ಣು ಮಕ್ಕಳು. ಮೊದಲ ಹೆಂಡತಿ ಬಸಮ್ಮನವರಿಗೆ ನಾಲ್ಕು ಜನ ಮಕ್ಕಳು. ಒಟ್ಟು ಹನ್ನೆರಡು ಜನ ಮಕ್ಕಳ ಪಾಲನೆ ಪೋಷಣೆ ಮಾಡಿದ ತಾಯಿ ಶ್ರೀಮತಿ ಶಿವಮ್ಮನವರು.

ಕುಟುಂಬದ ಇತರ ಮಕ್ಕಳಿಗೆ ಹೋಲಿಸಿದರೆ, ಬಾಲಕ ಜಗದೇವಪ್ಪನವರ ಆಸಕ್ತಿಗಳೇ ಭಿನ್ನವಾಗಿದ್ದವು. ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಇವರು ಕಲಾಸಕ್ತಿಯನ್ನು ಹೊಂದಿದವರಾಗಿದ್ದರು. ಇವರು ಪ್ರಾಥಮಿಕ ಶಿಕ್ಷಣ ಕಲಬುರ್ಗಿಯ "ಅಸಫ್‌ಗಂಜ್" ಕನ್ನಡ ಪ್ರಾಥಮಿಕ ಶಾಲೆಯಲ್ಲಿ

ಆರಂಭವಾಯಿತು. ಆ ಶಾಲೆಯ ಶಿಕ್ಷಕರಾದ ಶಂಕರರಾವ್‌ರವರು ವಿದ್ಯಾರ್ಥಿ ಜಗದೇವಪ್ಪನವರ ಕಲಾಸಕ್ತಿಯನ್ನು ಗುರುತಿಸಿದ ಪ್ರಥಮ ವ್ಯಕ್ತಿ. ತಮ್ಮ ವಿದ್ಯಾಭ್ಯಾಸದ ಜೊತೆಗೆ ಬಣ್ಣದ ಸಲಕರಣೆಗಳನ್ನು ತಯಾರಿಸುವುದು. ಚಾರ್ಟ್‌ಗಳನ್ನು ತಯಾರು ಮಾಡುವುದು ಇವರ ಹವ್ಯಾಸವಾಗಿತ್ತು.[3] ಜಗದೇವಪ್ಪನವರಿಗೆ ಬೇರೆ ವಿಷಯಗಳ ಕಡೆ ಆಸಕ್ತಿ ತೋರದೇ ನಕ್ಷೆ, ಭೂಪಟ, ನಿಸರ್ಗ, ಪ್ರಾಣಿ, ಪಕ್ಷಿಗಳ ನಿಸರ್ಗದ ಚಿತ್ರಗಳ ಕಡೆ ಹೆಚ್ಚು ಆಸಕ್ತಿ ಹೊಂದಿರುವುದು ಕಲಾವಿದರಾಗುವ ಲಕ್ಷಣಗಳು. ಬಾಲ್ಯ ಅವಸ್ಥೆಯಲ್ಲಿಯೇ ಪೂರ್ವ ಪೀಠಿಕೆಗಳು ಹೊಂದಿದರು.

ಕಲೆಯ ಕಡೆಗೆ ಒಲಿದ ಮನಸ್ಸು

ಹೈಸ್ಕೂಲ್ ಶಿಕ್ಷಣಕ್ಕಾಗಿ ಕಲಬುರ್ಗಿಯ ಎಂ.ಪಿ.ಎಚ್.ಎಸ್. ಶಾಲೆಗೆ ಸೇರಿದರು. ಸೈಯದ್ ಹುಸೇನ್' ಎನ್ನುವವರು ಈ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದವರು. ಸ್ವಭಾವತಃ ಮುಗ್ಧ ಮನಸ್ಸಿನ ಜಗದೇವಪ್ಪನವರು ಸೈಯದ್ ಹುಸೇನ್ ಅವರ ಸಲುಗೆಯನ್ನು ಪ್ರೀತಿಯಿಂದಲೇ ಬೆಳೆಸಿಕೊಂಡರು ಮಾತ್ರವಲ್ಲ ಅವರಿಂದ ಚಿತ್ರಕಲೆಯ ಮೂಲ–ಚೂಲಗಳನ್ನು ತಿಳಿದುಕೊಂಡರು. ಆದಾಗಲೇ ಚಿತ್ರಕಲೆಯ ಪೂರ್ವಭಾವಿ ಸಿದ್ಧತೆಗಳಾದ ಲೋಯರ್, ಹೈಯರ್ ಪರೀಕ್ಷೆಗಳನ್ನು ಪಾಸು ಮಾಡಿದ್ದರು. ಹೈಸ್ಕೂಲ್ ಶಿಕ್ಷಣಾರ್ಥಿಯಾಗಿರುವಾಗಲೇ ಅನೇಕ ಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ, ಬಹುಮಾನಗಳನ್ನೂ ಪಡೆದಿದ್ದರೂ ಅರಣ್ಯ ಇಲಾಖೆಯವರು ಆಯೋಜಿಸಿದ **"Wild Life"** ವಿಷಯಾಧಾರಿತ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ, ಬಹುಮಾನ ಪಡೆಯುವುದರ ಮೂಲಕ ಇವರ ಕಲಾ ಅಭಿಯಾನ ಆರಂಭವಾಯಿತು ಎನ್ನಬಹುದು. ಶ್ರೀ ವೀರಯ್ಯಸ್ವಾಮಿ ಎನ್ನುವವರು ಈ ಹೈಸ್ಕೂಲ್‌ಗೆ ಮುಖ್ಯಗುರುಗಳಾಗಿದ್ದವರು ಇವರೂ ಸಹ ಜಗದೇವಪ್ಪನವರಿಗೆ ಸಂಪೂರ್ಣ ಸಹಕಾರವನ್ನು ನೀಡಿದ್ದರು. ಮಗ ಕಲಾಸಕ್ತಿಯ ಬೆಳವಣಿಗೆ ತಂದೆ ಶಂಕರಪ್ಪನವರಿಗೆ ಚಿಂತೆಗೀಡು ಮಾಡಿತು. ವೈದ್ಯಕೀಯ ಇಲ್ಲವೆ ತಾಂತ್ರಿಕ ಅಧ್ಯಯನ ಕೈಗೊಳ್ಳುವಂತಾಗಬೇಕು ಎಂದು ಶಂಕರಪ್ಪನವರು ಬಯಸಿದವರಾದರೂ, ಜಗದೇವಪ್ಪನವರು ಈ ನೆಲೆಯಲ್ಲಿ ಯಾವತ್ತೂ ಯೋಚನೆ ಮಾಡಿದವರಲ್ಲ. ಬದಲಾಗಿ ಬಣ್ಣ ಕುಂಚಗಳ ಒಳನಾಟವನ್ನು ತೀವ್ರಗೊಳಿಸುತ್ತಲೇ ಬಂದವರು.[1]

ಮುಂದೆ ಎಂಟನೇ ತರಗತಿಯಲ್ಲಿ ಅಭ್ಯಾಸಿಸುತ್ತಿರುವಾಗ ಸೋಲಾಪುರಕ್ಕೆ ಹೋಗಿ ಇಂಟರ್‌ಮೀಡಿಯಟ್ ಗ್ರೇಡ್ ಪರೀಕ್ಷೆಗೆ ಕುಳಿತು ಪಾಸಾದರು. ಇವರ ಪ್ರೌಢಶಿಕ್ಷಣ ಕಲಬುರ್ಗಿಯ ಸರಕಾರಿ ಪ್ರೌಢಶಾಲೆಯಲ್ಲಿ ಮುಂದುವರೆಯಿತು. ಅಲ್ಲಿ ಸೈಯದ್ ಹುಸೇನರೆಂದು ಕಲಾ ಶಿಕ್ಷಕರು ಇವರಿಗೆ ಮಾರ್ಗದರ್ಶಕರಾಗಿ ದೊರೆತರು. ಆಗ ಅವರು ಪ್ರತಿಭಾವಂತ ಡ್ರಾಯಿಂಗ್ ಮಾಸ್ಟರ್‌ರೆಂದು ಪರಿಗಣಿಸಲ್ಪಡುತ್ತಿದ್ದರು. ಜೊತೆಗೆಯೇ ಭಕೊರಕಲ್ ಮಾಸ್ತರರ ಮಾರ್ಗದರ್ಶನದಲ್ಲಿ ಕಲಾಭ್ಯಾಸವನ್ನು ಮುಂದುವರೆಸಿದ್ದರು. ಆಗ ನೂತನ ವಿದ್ಯಾಲಯ ಶಾಲೆಯಲ್ಲಿ ಶ್ರೀ ಎಸ್.ಎಂ.ಪಂಡಿತರ ಮತ್ತು ಇತರ ಸಮಕಾಲೀನ ಖ್ಯಾತ ಕಲಾವಿದರ ಚಿತ್ರಕೃತಿಗಳು ಇವರಿಗೆ ನೋಡಲಿಕ್ಕೆ ಲಭ್ಯವಿದ್ದವು. ಆ ಕಲಾಕೃತಿಗಳ

ಅಧ್ಯಯನವನ್ನು ಮಾಡುತ್ತ ಅವುಗಳಿಂದ ಪ್ರಭಾವಿತರಾದರು. ಒಂಭತ್ತನೆಯ ತರಗತಿಯಲ್ಲಿ ಕಲಿಯುತ್ತಿರುವಾಗ ಕಲಬುರ್ಗಿಯ ಇತರ ಹತ್ತು ಜನ ವಿದ್ಯಾರ್ಥಿಗಳೊಡನೆ ಮುಂಬಯಿಗೆ ಹೋಗಿ ಎಲಿಮೆಂಟರಿ ಪೇಂಟಿಂಗ್ ಡ್ರಾಯಿಂಗ್ ಪರೀಕ್ಷೆ ಕೊಟ್ಟು ಬಂದರು. ಆ ಹನ್ನೊಂದು ವಿದ್ಯಾರ್ಥಿಗಳಲ್ಲಿ ಉತ್ತೀರ್ಣರಾದವರು ಖಂಡೇರಾವ್‌ರವರು ಒಬ್ಬರೇ ಆಗಿದ್ದದ್ದು ಎಲ್ಲರಿಗೂ ಅತಿ ಆಶ್ಚರ್ಯವನ್ನು ಉಂಟುಮಾಡಿತು. ಅಷ್ಟು ಮಾತ್ರವಲ್ಲ ಈ ಘಳಿಗೆ ಮುಂಬೈಯಿನ ಜೆ.ಜೆ.ಕಲಾಶಾಲೆಯಲ್ಲಿ ಕಲಾಧ್ಯಯನ ಕೈಗೊಳ್ಳಬೇಕೆಂಬ ಉಂಟಾದ ಆಸೆಯನ್ನು ಹುಟ್ಟುಹಾಕಿತು. ತಮ್ಮ ಮನೆಯಲ್ಲಿ ಕಲಾಧ್ಯಯನಕ್ಕೆ ವಿರೋಧವಿದ್ದರೂ ಅದನ್ನು ಲೆಕ್ಕಿಸದೇ ಮುಂಬೈಗೆ ತೆರಳೇ ಬಿಟ್ಟರು.

ಕಲಾಶಾಲೆ ಪ್ರವೇಶ

ಮುಂಬೈನ ಜೆ.ಜೆ.ಕಲಾಶಾಲೆಯಲ್ಲಿ ಕಲಾಧ್ಯಯನಕ್ಕೆ ಪ್ರವೇಶ ಪಡೆಯಬೇಕಾದರೆ ಮೊದಲು ಸಾಮಾನ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾಗುತ್ತಿತ್ತು. ಖಂಡೆರವರು ಒಂದು ಅರ್ಜಿಯನ್ನು ಹಾಕುತ್ತಾರೆ. ಕೆಲದಿನಗಳ ನಂತರ ಪ್ರವೇಶ ಪರೀಕ್ಷೆಯ ಪತ್ರ ಬಂದು ತಲುಪುತ್ತದೆ. ಅದರಲ್ಲಿ ಪ್ರವೇಶ ಪರೀಕ್ಷೆಯ ದಿನಾಂಕ ನಿಗಧಿಯನ್ನು ಗೊತ್ತಾಗುತ್ತದೆ. ತಂದೆ ಶಂಕರಪ್ಪನಿಗೆ ಮಗ ಚಿತ್ರಕಲೆ ಅಭ್ಯಾಸ ಮಾಡುವುದು ಇಷ್ಟವಿರಲಿಲ್ಲ. ಆದರೆ ಖಂಡೆರವರಿಗೆ ಚಿತ್ರಕಲೆ ಅಭ್ಯಾಸದಲ್ಲಿ ತುಂಬಾನೆ ಆಸಕ್ತಿ ಹೊಂದಿದ್ದರಿಂದ ತಂದೆಯನ್ನು ಒತ್ತಾಸೆಯಿಸುತ್ತಾರೆ ಮನಸ್ಸಿನಲ್ಲಿದ್ದರೂ ಮುಂಬೈಗೆ ಹೋಗಲು ಒಪ್ಪಿಗೆ ನೀಡುತ್ತದೆ.

ತಂದೆಯ ನಿರ್ಧಾರದಿಂದ ಸಂತುಷ್ಟವಾದ ಜಗದೇವಪ್ಪನವರು ಈ ಹಿಂದೆ ತಾವು ತೇರ್ಗಡೆ ಹೊಂದಿದ್ದ ಮೂಲ ಅಂಕಪಟ್ಟಿ ಪ್ರಮಾಣ ಪತ್ರಗಳು ಮತ್ತು ಕೆಲವು ಉತ್ತಮ ಕಲಾಕೃತಿಗಳೊಂದಿಗೆ ಮುಂಬೈಗೆ ಪ್ರಯಾಣ ಬೆಳೆಸಲು ಸನ್ನದ್ಧರಾದರು. ೧೯೬೦ರ ಮೇ ೧೯ ರಂದು ಮುಂಬೈಗೆ ಪ್ರಯಾಣ ಬೆಳೆಸಿ, ಮರುದಿನ ಬೆಳಗ್ಗೆ ೯ ಗಂಟೆ ಸುಮಾರಿಗೆ ಜೆ.ಜೆ.ಕಲಾಶಾಲೆಗೆ ಹೋದರು. ಇಲ್ಲಿ ಭಾರತದ ಮೂಲೆಗಳಿಂದ ಅಸಂಖ್ಯಾತ ವಿದ್ಯಾರ್ಥಿಗಳು ಸಂದರ್ಶನಕ್ಕೆಂದು ಬಂದಿದ್ದರು. ಖಂಡೆರಾವರು ತೆಗೆದುಕೊಂಡು ಹೋಗಿದ್ದ ಮೂಲ ಅಂಕಪಟ್ಟಿ ಹಾಗೂ ಕಲಾಕೃತಿಗಳನ್ನು ಸಂದರ್ಶಕರೆದುರಿಗೆ ಇಟ್ಟರು.

ಮೂರು ಜನ ಸಂದರ್ಶಕರ ಸಮಿತಿಯಲ್ಲಿ ಖಂಡೆರಾವರ ಕಲಾಕೃತಿಗಳು ಇಷ್ಟವಾಗುತ್ತವೆ. ಹಾಗೂ ಸಂದರ್ಶಕರ ಪ್ರಶ್ನೆಗೆ ಉತ್ತಮ ರೀತಿಯ ಉತ್ತರವನ್ನು ಆಲಿಸಿದ. ಸಂದರ್ಶಕರು ಒಂದು ಪ್ರಶ್ನೆ ಕೇಳುತ್ತಾರೆ. ಯಾಕೆ ಚಿತ್ರಕಲೆ ಅಧ್ಯಯನ ಮಾಡುತ್ತೀಯಾ ? ಎಂದು ಕೇಳಿದಾಗ ನನಗೆ ಚಿತ್ರಕಲೆ ತುಂಬಾ ಅಚ್ಚುಮೆಚ್ಚು ಅಷ್ಟೇ ಆಸಕ್ತಿ ಎಂದು ಹಿಂದಿ ಭಾಷೆಯಲ್ಲಿಯೇ ಚೆನ್ನಾಗಿ ಮಾತನಾಡುತ್ತಾರೆ. ಸಂದರ್ಶನ ನಡೆದ ಮರುದಿನ ಫಲಿತಾಂಶ ಬಂದಿತ್ತು. ಖಂಡೆರಾವ್ ಅವರು ಆಯ್ಕೆ ಆಗಿದ್ದರು. ಪ್ರವೇಶ ಶುಲ್ಕ ತುಂಬಿ ಮರಳಿ ಕಲಬುರ್ಗಿಗೆ ಬರುತ್ತಾರೆ.

ಮುಂಬೈನ ಜೆ.ಜೆ.ಕಲಾ ಶಾಲೆಯಲ್ಲಿ ಪ್ರವೇಶ ದೊರೆತಿದ್ದನ್ನು ತಮ್ಮ ಮನೆಯವರೆಲ್ಲರಿಗೂ ತಿಳಿಸುತ್ತಾರೆ. ಹಾಗೆಯೇ ಹದಿನೈದು ದಿನಗಳೊಳಗೆ ತರಗತಿಗಳಿಗೆ ಹಾಜರಾಗುವ ಕುರಿತಾಗಿಯೂ ಹೇಳುತ್ತಾರೆ. ಮುಂಬೈನ ಜೆ.ಜೆ.ಕಲಾಶಾಲೆಯಲ್ಲಿ ಪ್ರವೇಶವೇನೋ ದೊರೆಯಿತು. ಆದರೆ ತಮ್ಮ ಮಗ ಎಲ್ಲಿ ಇದ್ದುಕೊಂಡು ಅಭ್ಯಾಸ ಮಾಡುವುದು ಎನ್ನುವ ಚಿಂತೆ ತಂದೆ ಶಂಕರಪ್ಪನವರಿಗೆ ಕಾಡಹತ್ತಿತ್ತು.

ಶಂಕರಪ್ಪನವರು ಜಾರದಾನಿ ವ್ಯವಹಾರದಲ್ಲಿ ತೊಡಗಿಕೊಂಡಿರುವ ಕಾರಣ ಮುಂಬೈನೊಂದಿಗೆ ವ್ಯಾಪಾರದ ನಂಟನ್ನು ಹೊಂದಿದ್ದರು. ಮುಂಬೈನ ದಲ್ಲಾಳಿ ವ್ಯಾಪಾರಸ್ಥರೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದನ್ನು ಮುಂಬೈನ ದಲ್ಲಾಳಿಯವರನ್ನು ಪೇಡಿ ಎಂದು ಕರೆಯಲಾಗುತ್ತಿತ್ತು. ತಮಗೆ ಪರಿಚಯವಿರುವ ಪೇಡಿಯೊಬ್ಬರನ್ನು ಪತ್ರದ ಮೂಲಕ ಸಂಪರ್ಕಿಸಿ ತಮ್ಮ ಮಗನಿಗೆ ಉಳಿದುಕೊಳ್ಳಲು ವ್ಯವಸ್ಥೆಯನ್ನು ಮಾಡಿದರು. ಕೆಲದಿನಗಳ ನಂತರ ಜಗದೇವಪ್ಪನವರು ತಮ್ಮ ಕಲಾ ಸಾಮಾಗ್ರಿಗಳನ್ನು ಹೊತ್ತು ಮುಂಬೈಗೆ ಪ್ರಯಾಣ ಬೆಳೆಸಿದರು.[೧೦]

೧೮೫೭ರ ಮಾರ್ಚ್ ೨ ರಂದು ಜೆ.ಜೆ.ಕಲಾ ಶಾಲೆ ಅಸ್ತಿತ್ವಕ್ಕೆ ಬಂದಿತು. ಆರಂಭದಲ್ಲಿ ಯುರೋಪಿಯನ್ ಕಲಾವಿದರೇ ಇಲ್ಲಿ ಶಿಕ್ಷಕರಾಗಿ ನೇಮಕಗೊಂಡಿರುವ ಕಾರಣ ಬ್ರಿಟೀಷ್ ಶೈಕ್ಷಣಿಕ ಪದ್ಧತಿಗಳೇ ಇಲ್ಲೂ ಬೋಧಿಸಲಾಗುತ್ತಿತ್ತು. ಇಂಥ ಒಂದು ಉನ್ನತ ಕಲಾ ಸಂಸ್ಥೆಯೊಂದರಲ್ಲಿ ಖಂಡೇರಾವ್ ಅಧ್ಯಯನಕ್ಕೆಂದು ಪ್ರವೇಶ ಪಡೆದರು. ಬ್ರಿಟೀಷ್ ಅಕಾಡೆಮಿಕ್ ಕಲಾ ಪದ್ಧತಿಯು ಎಂಥವರನ್ನೂ ಆಕರ್ಷಿಸುವಂತಿತ್ತು. ಈ ಹಿಂದೆಯೇ ನಾನು ಎಲಿಮೆಂಟರಿ ಪರೀಕ್ಷೆಗಾಗಿ ಮುಂಬೈಗೆ ಹೋದಾಗ ಜೆ.ಜೆ.ಕಲಾಶಾಲೆಗೆ ಭೇಟ್ಟಿ ನೀಡಿದ್ದೆ. ಬ್ರಿಟೀಷ್ ಮಾಧರಿಯ ಈ ಕಲಾಶಾಲೆಯ ಕಟ್ಟಡ ನನ್ನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿತ್ತು. ಅಲ್ಲಿನ ವಾತಾವರಣ, ವಿದ್ಯಾರ್ಥಿಗಳ ಒಡನಾಟ ಇದೆಲ್ಲದಕ್ಕೆ ಮನಸೋತು ಏನೇ ಆಗಲಿ. ನಾನು ಇಲ್ಲೇ ಉನ್ನತ್ತ ಕಲಾ ಶಿಕ್ಷಣ ಪಡೆಯಬೇಕು ಎಂದು ಆಗಲೇ ನಿಶ್ಚಯ ಮಾಡಿದ್ದೆ. ೧೯೬೦ ರಲ್ಲಿ ನನ್ನಾಸೆ ಈಡೇರಿತು" ಎಂದು ಖಂಡೆರಾವ್ ಅವರು ಜೆ.ಜೆ.ಕಲಾಶಾಲೆಯಲ್ಲಿ ಅಧ್ಯಯನ ಮಾಡುವ ಆಸೆ ಕೈಗೂಡಿದ್ದನ್ನು ಈ ರೀತಿ ನೆನಪಿಸಿಕೊಳ್ಳುತ್ತಾರೆ.[೧೧]

ಡಿಪ್ಲೊಮಾ ವ್ಯಾಸಂಗದ ಅವಧಿಯಲ್ಲಿ ಜೆ.ಜೆ.ಕಲಾಶಾಲೆಯ ಖ್ಯಾತ ಕಲಾಶಿಕ್ಷಕರಾದ ಪಳಶೀಕರ, ಬಾಬೂರಾವ್, ಸಂಡೊಪ್ಪಲ್ಕರ್, ನೂತನ ಕಲಾ ಮಂದಿರದ ಡಿ.ಎ.ಸೆಟ್ಟಿಯವರಿಂದಲೂ ಮಾರ್ಗದರ್ಶನ ಪಡೆದರು. ಪಳಶೀಕರವರ ಭಾವಚಿತ್ರ ರಚನೆ ಖಂಡೇರಾವರನ್ನು ಹೆಚ್ಚು ಆಕರ್ಷಿಸಿತು. ಕಲಾಮಂದಿರ ಮಾರ್ನಿಂಗ್ ಕ್ಲಾಸ್‌ಗಳಿಗೂ ಇವರು ಹಾಜರಾಗುತ್ತಿದ್ದರು. ಆಗಿನ ಸಮಕಾಲೀನ ಕಲಾವಿದರಾದ ಎನ್.ಎಸ್.ಬೇಂದ್ರೆ, ಬಿ.ಪ್ರಭಾ, ಆಲಮೇಲಕರ್ ಮುಂತಾದವರು ಅಕಾಡೆಮಿಕ್ ಪ್ರಭಾವದಿಂದ ಹೊರಬಂದು ಕ್ರಿಯೇಟಿವ್ ಶೈಲಿಯಲ್ಲಿ ಕಲಾಕೃತಿಯಲ್ಲಿ ರಚಿಸುತ್ತಿದ್ದ ಕಾಲವದು. ಇದು ಸಹಜವಾಗಿಯೇ ಸೃಜನಾತ್ಮಕ ಮನೋಭಾವವನ್ನು ಹೊಂದಿದ್ದ ಖಂಡೇರಾವ್‌ರನ್ನು ಆಕರ್ಷಿಸುತ್ತಿತ್ತು. ಈ ಕಲಾವಿದರ ಯಾವುದೇ ಪ್ರವೃತ್ತಿಗಳನ್ನು ಇವರು ತಪ್ಪಿಸಿಕೊಳ್ಳುತ್ತಿರಲಿಲ್ಲ. ಇವರಲ್ಲಿ ಅತಿ ಆಳವಾದ ಪ್ರಭಾವ ಬೀರಿದವರೆಂದರೆ

ಎಸ್.ಎಸ್.ಬೇಂದ್ರೆಯವರು ಅವರ ಸಂಯೋಜನಾ ವಿಧಾನ. ವರ್ಣಗಳ ಬಳಕೆ ಇವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದವು.[೧೭]

ಖಂಡೇರಾವರವರು ವಿದ್ಯಾರ್ಥಿ ದೆಸೆಯಲ್ಲಿ ಶಿಸ್ತಿನ ವ್ಯಾಸಂಗ ಪದ್ಧತಿ. ಕಲೆಯ ಸತ್ವ ಆಯಾ ಮಗಳನ್ನು. ಪ್ರತಿದಿನ ಡ್ರಾಯಿಂಗ್ ಮಾಡುತ್ತಾ ಪತ್ರಿಕಗಳ ಜೊತೆಗೆ ಕಲಾ ಪುಸ್ತಕಗಳು. ಕಲಾ ಪ್ರದರ್ಶನಗಳು ಭೇಟಿ ಕೊಟ್ಟು ವೀಕ್ಷಿಸಿ ಸಮಕಾಲೀನ ಪ್ರಯೋಗಗಳ ವಿಧಾನಗಳನ್ನು ಅರಿಯಲು ಒಂದು ಅವಕಾಶ ಅಲ್ಲಿ ಸಿಕ್ಕಿತ್ತು.

ವಿದ್ಯಾರ್ಥಿ ದೆಸೆಯಲ್ಲಿಯೇ ಭಾವಚಿತ್ರ, ಪ್ರಕೃತಿ ಚಿತ್ರ ರಚಿಸುವಲಿ ಪ್ರಾವಿಣ್ಯತೆ ಪಡೆದಿದ್ದ ಇವರು ಆಗಿನ ಪ್ರತಿಭಾವಂತ ವಿದ್ಯಾರ್ಥಿಗಳ ಸಾಲಿನಲ್ಲಿದ್ದರು. ಕಲಾಪರೀಕ್ಷೆಗಳಲ್ಲಿಯೂ ಅಂತಿಮ ತರಗತಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದುತ್ತ ೧೯೬೩ರಲ್ಲಿ ಡಿಪ್ಲೋಮಾ ಮುಗಿಸಿದರು.[೧೮] ಮುಂಬೈನ ನೂತನ ಕಲಾಮಂದಿರವೂ ಸಹ ಖಂಡೇರಾವ್ ಅವರಿಗೆ ಆಸರೆಯಾಗಿದ್ದನ್ನು ನಾವು ಮರೆಯುವಂತಿಲ್ಲ ಕರ್ನಾಟಕದವರೇ ಆದ "ಕಲಾಗುರು" ಎಂದೇ ಪ್ರಖ್ಯಾತರಾಗಿದ್ದ ಜಿ.ಎಸ್.ದಂಡಾವತಿಮಠ ಅವರು ಈ ಕಲಾಶಾಲೆಯ ರೂವಾರಿಗಳು ಅವರು ಮಾರ್ಗದರ್ಶನ ಸಹಾಯ, ಸಹಕಾರ ಮೂಲಕ ಅಗಾಧವಾದ ಪ್ರತಿಭೆಯ ಮೂಲಕ ಭಾವಚಿತ್ರದ ರಚನೆಯ ಪ್ರಯೋಗಶೀಲ ಕಲಾವಿದರಾಗಿ ಕಲಾಕ್ಷೇತ್ರಕ್ಕೆ ಕಾಣಿಕೆ ನೀಡಿದ್ದಾರೆ.

ಕಲಾಶಾಲೆಯಲ್ಲಿ ಸ್ನೇಹಿತರ ಬಳಗವೇ ಇತ್ತು. ಸಮಯ ಸಿಕ್ಕಾಗ ಪ್ರಾತ್ಯಕ್ಷಿಕೆ, ಚರ್ಚೆ ಸಂವಾದಗಳ ಮೂಲಕ ಕಲಾವಲಯದ ಎಲ್ಲ ವಿಷಯಗಳಲ್ಲಿ ಆಸಕ್ತಿಯಿಂದ ಭಾಗವಹಿಸಿ ತಮ್ಮ ಕಲಾ ಬದುಕನ್ನು ಕಟ್ಟಿಕೊಂಡರು.

ಡಿಪ್ಲೊಮಾ ಶಿಕ್ಷಣ ಮುಗಿದ ಮೇಲೆ ಜೆ.ಜೆ.ಕಲಾಶಾಲೆಯಲ್ಲಿ ಭಿತ್ತಿಚಿತ್ರಗಳ ಸ್ನಾತಕೋತ್ತರ ಪದವಿಯನ್ನು ಪಡೆಯಬೇಕೆಂಬುದು ಇವರ ಇಚ್ಛೆಯಾಗಿತು. ಜೊತೆಗೆ ಡಿ.ಟಿ.ಸಿ. ಕೋರ್ಸನ್ನು ಸಹ ಮಾಡುವ ಹಂಬಲವಿತ್ತು. ಆದರೆ ಕೌಟುಂಬಿಕ ಸಮಸ್ಯೆಗಳು ಇವರ ಆಸೆಗೆ ವ್ಯತಿರಿಕ್ತವಾಗಿದ್ದವು. ತಂದೆ-ತಾಯಿಯ ಒತ್ತಾಯದ ಮೇರೆಗೆ ಹಿಂದಿರುಗಿ ಕಲಬುರ್ಗಿಗೆ ಬಂದರು. ೧೯೬೪ರಲ್ಲಿ ಶ್ರೀಮತಿ ವೀರಮ್ಮನವರೊಡನೆ ಮದುವೆಯಾಯಿತು.[೧೯] ಆರ್ಥಿಕ ನೆಲೆ ಕಂಡುಕೊಳ್ಳಲು ಯಾವುದಾದರೊಂದು ಕೆಲಸ ಮಾಡಲೇಬೇಕಾದ ಅನಿವಾರ್ಯವು ಎದುರಾಯಿತು.

ವೃತ್ತಿ ಜೀವನ

ಖಂಡೇರಾವ್ ಅವರಿಗೆ ಆಪ್ತರಾಗಿದ್ದ ಸಿ.ವಿ.ಕರಡಗಿ ಅವರು ಕರ್ನಾಟಕ ಸರಕಾರ "Art&Craft" ವಿಭಾಗದಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಕಲೆಯ ಮೇರೆಗೆ ಖಂಡೇರಾವ್ ಅವರು

ಬೆಂಗಳೂರಿಗೆ ಹೋಗಿ, ವಾರ್ತಾ ಇಲಾಖೆಯಲ್ಲಿ ಖಾಲಿಯಿದ್ದ ಕಲಾವಿದ ಹುದ್ದೆಗೆ ಅರ್ಜಿ ಸಲ್ಲಿಸಿದರು. ಕರಡಗಿಯವರ ಸಹಕಾರದಿಂದಾಗಿ ವಾರ್ತಾ ಇಲಾಖೆಯಲ್ಲಿ ಕೆಲಸವೂ ಸಿಕ್ಕಿತು. ಆದರೆ ಖಂಡೇರಾವ್ ಅವರ ಮನಸ್ಥಿತಿಗೆ ಈ ಕೆಲಸ ಸರಿಹೊಂದಲಿಲ್ಲ. ಮರಳಿ ಕಲಬುರ್ಗಿಗೆ ಬಂದರು. ಆಗ ಆರ್ಥಿಕವಾಗಿ ಸಾಕಷ್ಟು ಸಮಸ್ಯೆಯನ್ನು ಎದುರಿಸಬೇಕಾಯಿತು. ಸಂಸಾರವನ್ನು ನಿಭಾಯಿಸಲು ಮತ್ತೆ ಯಾವುದಾದರೊಂದು ಉದ್ಯೋಗ ಮಾಡಲೇಬೇಕಾದ ಒತ್ತಡವನ್ನು ಅನುಭವಿಸಿದರು. ಈ ವೇಳೆ ಅವರು ನಾಲ್ಕಾರು ವಿದ್ಯಾರ್ಥಿಗಳಿಗೆ ಮನೆಯಲ್ಲೇ ಚಿತ್ರಕಲೆಯ ಪಾಠಗಳನ್ನು ಹೇಳಿಕೊಡಲು ಆರಂಭಿಸಿದರು. ಅದಿಷ್ಟು ಸಾಕಾಗದೇ ೧೯೬೫ರಲ್ಲಿ ಈಗಿನ ಕಿರಾಣಾ ಬಜಾರ್‌ನಲ್ಲಿ ವಿಶಾಲವಾದ ಕೋಣೆಯೊಂದನ್ನು ಬಾಡಿಗೆಗೆ ಪಡೆದು "ಆದರ್ಶ ಕಲಾಶಾಲೆಯನ್ನು ಹುಟ್ಟುಹಾಕಿದರು. ತನ್ಮೂಲಕ ಈ ಭಾಗದಲ್ಲಿ ಚಿತ್ರಕಲಾ ಶಿಕ್ಷಣ ಪರಂಪರೆಯು ಪುನರುಜ್ಜೀವನಗೊಳ್ಳಲು ಸಾಧ್ಯವಾಯಿತೆನ್ನಬಹುದು. ಹೆಸರಾಂತ ಕಲಾವಿದರಾದ ವಿ.ಜಿ.ಅಂದಾನಿ. ಎಸ್.ಜಿ.ಆರ್., ಇಟ್ಟಿನ್, ಎಂ.ಜಿ.ಲೋಹಾರ್, ಇವರೆಲ್ಲರೂ ಆದರ್ಶ ಕಲಾಶಾಲೆಯಲ್ಲಿ ಅಧ್ಯಯನ ಮಾಡಿದ ಮೊದಲ ತಂಡವಾಗಿ ಹೊರಬಂದರು.[೧೫] ಅದುವೇ "ದಿ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆ" ಆ ಸಂಸ್ಥೆಗೆ ಏಳು ವರ್ಷಗಳ ಕಾಲ ಅವರು ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಕಲಬುರ್ಗಿಯ "ಕಲಾ ಪ್ರಗತಿ" ಎಂಬ ಕಲಾಸಂಘದ ಸಂಘಟನೆ ಮಾಡಿದ್ದಾರೆ. ಅಲ್ಲದೆ ಕಲಬುರ್ಗಿಯಲ್ಲಿ ಸ್ನಾತಕೋತ್ತರ ಲಲಿತಕಲಾ ಶಿಕ್ಷಣವು ವಿಶ್ವವಿದ್ಯಾಲಯ ಮಟ್ಟದಲ್ಲಿ ರೂಪತಳೆಯುವಲ್ಲಿ ಪ್ರಮುಖ ಪಾತ್ರವಹಿಸಿದರು.[೧೬]

೧೯೭೧ರಲ್ಲಿ ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ವಿಭಾಗವೊಂದು ಆರಂಭಗೊಂಡಿತು. ಖಂಡೇರಾವ್ ಅವರು ತಮ್ಮ ಆದರ್ಶ ಕಲಾಶಾಲೆಯ ಪನೆಲ್ಲ ಜವಾಬ್ದಾರಿಯನ್ನು ಶಿಷ್ಯ ಅಂದಾನಿಯವರಿಗೆ ವಹಿಸಿ ಶರಣ ಬಸವೇಶ್ವರ ಕಲಾವಿಭಾಗದಲ್ಲಿ ಸೇವೆಗೆ ಸೇರಿದರು.

ಈ ಸಂದರ್ಭದಲ್ಲಿ ಅನೇಕ ವಿದ್ಯಾರ್ಥಿಗಳ ಬದುಕಿಗೆ ಬೆಳಕಾದರು. ಮಾತ್ರವಲ್ಲ ಸಾಕಷ್ಟು ಸಂಖ್ಯೆಯ ಚಿತ್ರಕಲಾವಿದರು ಬೆಳೆದು ಬರುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಸುಮಾರು ಮೂರು ದಶಕಗಳ ಕಾಲ ಶ್ರೀ ಶರಣಬಸವೇಶ್ವರ ಸಂಸ್ಥೆಯಲ್ಲಿ ಕಲಾ ಶಿಕ್ಷಕರಾಗಿ, ವಿಭಾಗವೊಂದರ ಮುಖ್ಯಸ್ಥರಾಗಿ ಅಲ್ಲದೆ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿಸುವುದರೊಂದಿಗೆ ೧೯೯೮ರಲ್ಲಿ ನಿವೃತ್ತಿಯನ್ನು ಹೊಂದಿದರು.[೧೭]

ಖಂಡೇರಾವ್ ಅವರು ಕಲಾಪ್ರಜ್ಞೆಯಿಂದ ಉತ್ತಮ ಸಂಘಟಕರಾಗಿ ಸಾಕಷ್ಟು ಕಲಾಚಟುವಟಿಕೆಗಳನ್ನು ಹಮ್ಮಿಕೊಂಡು ಕಲಾ ಶಿಕ್ಷಕರಾಗಿ ನಾಡಿಗೆ ಶ್ರೇಷ್ಠ ಕಲಾವಿದರನ್ನು ಹುಟ್ಟು ಹಾಕಿದ ಪ್ರಜ್ಞಾವಂತರು ಸಂಘ ಸಂಸ್ಥೆಗಳಲ್ಲಿ ಉತ್ತಮ ಆಡಳಿತಗಾರನಾಗಿ ಆತ್ಮೀಯ ಸ್ನೇಹ ಬಾಂಧವ್ಯದಲ್ಲಿ ತಮ್ಮ ವ್ಯಕ್ತಿತ್ವ ಮತ್ತು ಸಾಧನೆಯ ಜೊತೆಗೆ ನಾಡಿನ ಉದ್ದಕ್ಕೂ ಕಲಾ ಸ್ನೇಹಿತರ ಬಳಗವನ್ನೇ ಕಟ್ಟಿಕೊಂಡಿದ್ದಾರೆ. ದೊಡ್ಡ ಪ್ರಮಾಣದ ಶಿಷ್ಯ ಬಳಗ ಅವರ ಅತ್ಯಂತ ಹೆಮ್ಮೆಯ ವಿಷಯವೆನಿಸುತ್ತದೆ. ಕಲಾಶಿಕ್ಷಕರಾಗಿ ಮಾತ್ರವಲ್ಲದೆ, ಈ ನಾಡಿನ ಸೃಜನಶೀಲ ಕಲಾವಿದರಾಗಿ ಹಲವಾರು ಪ್ರಕಾರಗಳಲ್ಲಿ ಕಲಾಪ್ರಯೋಗ ಮಾಡುತ್ತಾ ವಿದ್ಯಾರ್ಥಿ ಬಳಗಕ್ಕೂ

ಪ್ರಾತ್ಯಕ್ಷಿಕೆ ನೀಡುತ್ತಾ ಕಲಾಕೃತಿ ರಚನೆ ಮಾಡುತ್ತಾ ನಿಸರ್ಗ, ಭಾವಚಿತ್ರ, ವ್ಯಂಗ್ಯಚಿತ್ರಗಳು, ಸಂಯೋಜನೆಯಂತಹ ಕಲಾವಲಯಗಳಲ್ಲಿ ಕೃಷಿ ಮಾಡಿದ್ದಾರೆ.

ಕಲಾಕೃತಿಗಳ ರಚನೆ

ಖಂಡೇರಾವ್ ಅವರು ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಪ್ರಾಥಮಿಕ ಹಂತದಿಂದ ಇವತ್ತಿನವರಿಗೂ ವಿಭಿನ್ನ ಕಲಾಸೃಷ್ಟಿಯಲ್ಲಿ, ಪೆನ್ಸಿಲ್, ಇಂಕ್ ಹಾಗೂ ಚಾರ್ಕೋಲ್, ಮಾಧ್ಯಮದಿಂದ ರೇಖೆಗಳನ್ನು ಚಿತ್ರಿಸಿದ್ದಾರೆ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಾ ಕಲಾಕೃತಿಗಳ ಸತ್ವವನ್ನು ತಿಳಿಯುತ್ತಾ ಅನುಭವದ ಮೂಲಕ ಚಿತ್ರ ರಚಿಸಿದ್ದಾರೆ. ಅಧ್ಯಾಪಕರ ವೃತ್ತಿಯಲ್ಲಿ ಚಿತ್ರಿಸುತ್ತಿದ್ದ ವಿಷಯಗಳನ್ನೇ ನಿವೃತ್ತಿಯ ನಂತರದಲ್ಲೂ ಮುಂದುವರೆಸಿಕೊಂಡು ವಸ್ತು ವಿಷಯಗಳಲ್ಲಿ ಕೆಲ ಬದಲಾವಣೆಗಳನ್ನು ಗಮನಿಸುತ್ತಾ ತೈಲವರ್ಣದಲ್ಲಿ ಹೆಚ್ಚು ಪ್ರಯೋಗ ಮಾಡಿ ಕಲಾಕೃತಿಗಳನ್ನು ರಚಿಸಿದ್ದಾರೆ. ಭಾವಚಿತ್ರಗಳನ್ನು ಶರಣರ ಜೀವನಾಧಾರಿತ ಚಿತ್ರಗಳನ್ನು ಪೌರಾಣಿಕ ಹಿನ್ನಲೆಯ ಚಿತ್ರಗಳನ್ನು ಭೂದೃಶ್ಯ ವಿಂಡೋ ಸರಣಿ" ಶೀರ್ಷಿಕೆಯ ಮೂಲಕ ನೂರಾರು ವರ್ಣಚಿತ್ರಗಳನ್ನು ಚಿತ್ರಿಸಿ ಖಂಡೇರಾವರು ಸಾಕಷ್ಟು ಪ್ರಸಿದ್ಧಿ ಪಡೆದಿರುತ್ತಾರೆ. ಸಾಕಷ್ಟು ಸಂಖ್ಯೆಯ ಭಾವಚಿತ್ರಗಳನ್ನೂ ಚಿತ್ರಿಸುತ್ತಿದ್ದರು. ಖಂಡೇರಾವ್‌ರು ಚಿತ್ರಿಸುವ ಚಿತ್ರಗಳಲ್ಲಿ ಎರಡು ರೀತಿಯ ಲೇಪನ ಪದ್ಧತಿಯನ್ನು ಗಮನಿಸಬಹುದು. ಪ್ರಾತ್ಯಕ್ಷಿತೆ ನೀಡುವ ಸಂದರ್ಭದಲ್ಲಿ ವ್ಯಕ್ತಿಯ ಹಾವ ಭಾವಗಳನ್ನು ಒಂದೆರಡು ಕುಂಚಗಳ ಸಹಾಯದಿಂದ ವರ್ಣದಲ್ಲಿ (ವ್ಯಕ್ತಿಗಳ) ತುಣುಕಗಳನಿಡುತ್ತ ಕೆಲವೇ ನಿಮಿಷಗಳಲ್ಲಿ ಚಿತ್ರವನ್ನು ಪೂರ್ಣಗೊಳಿಸುತನದಿಂದ ಕ್ಯಾನ್ವಾಸ್‌ನ ಹಿನ್ನೆಲೆ ಮುನ್ನೋಲೆಗಳು, ನೈಜತೆ ಮತ್ತು ಪರಿಪೂರ್ಣತೆಯನ್ನು ವ್ಯಕ್ತಪಡಿಸುತ್ತೇವೆ. ಕಲಾವಸ್ತು ಶ್ರೀಮಂತ ವ್ಯಕ್ತಿಗಳು ತಮ್ಮ ಹಾಗೂ ತಮ್ಮ ಪರಿವಾರದವರು ಭಾವಚಿತ್ರಗಳನ್ನು ಚಿತ್ರಿಸಿಕೊಂಡಿದ್ದಾರೆ. ರಾಜ್ಯದ ಕಲಾಶಾಲೆಗಳಲ್ಲದೇ ಮತ್ತಿತರ ಖಾಸಗಿ ಸಂಘ–ಸಂಸ್ಥೆಗಳು ತಮ್ಮ ಉಳಿಯಲೂ ಖಂಡೇರಾವ್‌ರ ಕೃತಿ ಇರಲೆಂಬ ಕಾರಣಕ್ಕೆ ವಿಶೇಷ ಕಾರ್ಯಕ್ರಮಗಳು ಹಮ್ಮಿಕೊಳ್ಳುವುದು ಸಾಮಾನ್ಯವಾಗಿದೆ. ಬಹುಶಃ ಕರ್ನಾಟಕ ಖಂಡೇರಾವ್ ಅವರು ಕಲಾಕೃತಿಗಳು ಸಂಗ್ರಹವಿಲ್ಲದ ಕಲಾ ಸಂಸ್ಥೆಯಿಲ್ಲ ಎನ್ನುವಷ್ಟರ ಮಟ್ಟಿಗೆ ನಾಡಿನುದ್ದಕ್ಕೂ ಚಿರಪರಿಚಿತರು.[೧೮]

ಭಾವಚಿತ್ರ ರಚಿಸುವಲ್ಲಿಯೂ ಇವರು ಸಿದ್ಧಹಸ್ತರು. ಈ ವಿಷಯದತ್ತ ಇವರ ವಿಶೇಷ ಒಲವು ವಿದ್ಯಾರ್ಥಿ ದಿಶೆಯಿಂದಲೇ ಪ್ರಾರಂಭಗೊಂಡು ಇನ್ನೂ ಉಳಿದುಕೊಂಡು ಬಂದಿದೆ. ಅಕಾಡೆಮಿಕ್ ಶೈಲಿಯ ಭಾವಚಿತ್ರ ರಚನೆ ಕ್ರಮೇಣವಾಗಿ ಕಲಾಕ್ಷೇತ್ರದಿಂದ ಕಣ್ಮರೆಯಾಗುತ್ತಿರುವಾಗ ಅದನ್ನು ಜೀವಂತವಾಗಿಟ್ಟು, ಅದರ ತನ್ನದೇ ಆದ ಮಹತ್ವವನ್ನು ಕಲಾರಂಗಕ್ಕೆ ಮನವರಿಕೆ ಮಾಡಿಕೊಡುವ ಕೆಲವೇ ಕಲಾವಿದರಲ್ಲಿ ಖಂಡೇರಾವ್‌ರವರು ಪ್ರಮುಖರೆಂದೇ ಪರಿಗಣಿಸಲ್ಪಡುತ್ತಾರೆ. ಈ ಬಗೆಯ ಚಿತ್ರರಚನೆಯಲ್ಲಿ ಇವರ ವರ್ಣಪ್ರಜ್ಞೆ ವಿಶಿಷ್ಟವಾದದು. ಅನೇಕ ವರ್ಣಗಳನ್ನು ಉಪಯೋಗಿಸಿ ಅತಿ ಕಡಿಮೆ ಬಣ್ಣಗಳನ್ನು ಬಳಸಿದಂತೆ ಭಾಸವಾಗುವಂತೆ ಮಾಡಿ ಭಾವಚಿತ್ರದಲ್ಲಿ ಮೈ ಬಣ್ಣದ ಪರಿಣಾಮ ತರುವುದು ಇವರ ವಿಶೇಷತೆ ಇತರೆ

ಕಲಾವಿದರಂತೆ ಕಪ್ಪು ಮತ್ತು ಬರ್ನ್ ಸಿಯಾನ್ನಾಗಳನ್ನು ಬಳಸದೆ ಇತರೆ ವರ್ಣಗಳಿಂದ... ಕಪ್ಪು ಆ ವರ್ಣದ ಪರಿಣಾಮವನ್ನು ಕೃತಿಯಲ್ಲಿ ತರುವುದೂ ದಪ್ಪನಾಗಿ ಬಣ್ಣಗಳನ್ನು ಮೆತ್ತಿ ಬೆಳಕಿನ ಪ್ರಭಾವ ಮಾಡುವಂತೆ ಮಾಡುವುದೂ ಇವರ ಶೈಲಿಯ ಮತ್ತೊಂದು ವಿಶೇಷತೆ. ಕೇವಲ ರೂಪದರ್ಶಿಯ ಹೋಲಿಕೆಗಷ್ಟೆ ಸೀಮಿತವಾಗದೆ. ಅವರ ಭಾವಚಿತ್ರಗಳು ವ್ಯಕ್ತಿತ್ವದ ಆಳಕ್ಕಿಳಿದು ಭಾವನೆಗಳನ್ನು ಹೊರಹೊಮ್ಮಿಸುತ್ತವೆ. ಭಾವಚಿತ್ರಗಳಲ್ಲಿ ಬಿರುಸು ಬೀಸುಗಳು ಪ್ರಧಾನವಾಗಿದ್ದರೂ, ಕೃತಿಗಳ ರಮ್ಯತೆ ಮತ್ತು ಲಾಲಿತ್ಯವನ್ನು ಹೊರಸೂಸುತ್ತವೆ. ಯಾವುದೇ ಒಬ್ಬ ಪ್ರಸಿದ್ಧ ಸಂಗೀತಗಾರನಿಂದ ಒಂದು ನಿರ್ದಿಷ್ಟವಾದ ಗಾಯನವನ್ನು ನಿರೀಕ್ಷಿಸುವ ಪ್ರೇಕ್ಷಕರಂತೆ, ಖಂಡೇರಾವರು ನಡೆಸುವ ಪ್ರತಿಯೊಂದು ಪ್ರಾತ್ಯಕ್ಷಿಕೆಯಲ್ಲಿಯೂ ಕಲಾ ವಿದ್ಯಾರ್ಥಿಗಳು ಕಲಾವಿದರು ಮತ್ತು ವೀಕ್ಷಕರು ಇವರು ಭಾವಚಿತ್ರ ರಚಿಸುವುದನ್ನೇ ಇಷ್ಟಪಡುತ್ತಾರೆ. ಅತಿ ಕುತೂಹಲದಿಂದ ಚಿತ್ರ ರಚನೆಯನ್ನು ವೀಕ್ಷಿಸುತ್ತಿರುವ ಜನದಟ್ಟಣೆಯ ಮಧ್ಯದಲ್ಲಿ ಅತ್ಯಂತ ವೇಗವಾಗಿ ಅತ್ಯಲ್ಪ ಸಮಯದಲ್ಲಿಯೇ ಭಾವಚಿತ್ರ ರಚಿಸಿ, ವೀಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸುವುದು ಖಂಡೇರಾವರ ಹೆಗ್ಗಳಿಕೆ. ಸುಮಾರು ಎರಡೂವರೆ ದಶಕಗಳಿಂದ ನವ್ಯಕಲೆಯತ್ತ ಒಲಿದು ಅಮೂರ್ತ ಶೈಲಿಯಲ್ಲಿ ಚಿತ್ರ ರಚಿಸುತ್ತಿದ್ದರೂ ಅಕಾಡೆಮಿಕ್ ಶೈಲಿಯ ಭಾವಚಿತ್ರ ರಚಿಸುವುದನ್ನು ಮುಂದುವರೆಸಿಕೊಂಡು ಒಂದು ಆ ಹಳೆಯ ತಲೆಮಾರಿನ ಗೌರವಾನ್ವಿತ ಪ್ರತಿನಿಧಿಯಾಗಿದ್ದಾರೆ.[೧೯]

ಬಹುಶಃ ಕರ್ನಾಟಕದಲ್ಲಿ ಖಂಡೇರಾವ್ ಅವರ ಕಲಾಕೃತಿಗಳು ಸಂಗ್ರಹವಿಲ್ಲದ ಕಲಾ ಸಂಸ್ಥೆಯಿಲ್ಲ ಎನ್ನುವಷ್ಟರ ಮಟ್ಟಿಗೆ ನಾಡಿನುದ್ದಕ್ಕೂ ಚಿರಪರಿಚಿತರು. ಇವರ ಭಾವಚಿತ್ರಗಳು ಇವರದೇ ಶೈಲಿಯಿಂದ (ಖಂಡೇರಾವ್ ಶೈಲಿ) ಪ್ರಸಿದ್ಧಿ ಪಡೆದಿವೆ. ಕೇವಲ ೩೦ ರಿಂದ ೪೦ ನಿಮಿಷಗಳಲ್ಲಿ ಒಂದೆರಡು ಕುಂಚಗಳ ಸಹಾಯದಿಂದ ಬಣ್ಣ ಬಣ್ಣದ ತೆಪ್ಪೆಯನ್ನು ಕ್ಯಾನ್ವಾಸ್ ಮೇಲೆ ಲೇಪಿಸುತ್ತ ವ್ಯಕ್ತಿಯ ಹಾವ-ಭಾವ, ಎಲ್ಲವನ್ನೂ ಕ್ಷಣಾರ್ಧದಲ್ಲಿ ತೋರಿಸಬಲ್ಲ ಇವರ ಸಾಮರ್ಥ್ಯ ಎಂಥವರನ್ನೂ ಬೆರಗುಗೊಳಿಸಬಲ್ಲದು. ಕಲಾಸಕ್ತ ಶ್ರೀಮಂತ ವ್ಯಕ್ತಿಗಳು ಈ ಕಲಾವಿದರಿಂದ ತಮ್ಮ ಹಾಗೂ ತಮ್ಮ ಪರಿವಾರದವರ ಭಾವಚಿತ್ರಗಳನ್ನು ಚಿತ್ರಿಸಿಕೊಂಡಿದ್ದಾರೆ.[೨೦]

ಖಂಡೇರಾವರು ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಹೊಂದಿ, ಕಲಾ ಶಿಕ್ಷಕರಾಗಿ ಮಾತ್ರವಲ್ಲದೇ ಸೃಜನಶೀಲ ಕಲಾವಿದರಾಗಿ ರಾಷ್ಟ್ರ, ರಾಜ್ಯದಲ್ಲಿ ಖ್ಯಾತಿಗಳಿಸಿದ್ದಾರೆ. ಹಾಗೆ ಅನೇಕ ಕಡೆ ಕಲಾ ಪ್ರದರ್ಶನಗಳನ್ನು ಏರ್ಪಡಿಸಿ, ಸಾಕಷ್ಟು ಪ್ರಮಾಣದ ಕಲಾ ಶಿಬಿರ ಕಲಾ ಕಾರ್ಯಾಗಾರಗಳಲ್ಲಿ ಭಾಗವಹಿಸಿ ಪ್ರಾತ್ಯಕ್ಷಿಕೆ ನೀಡಿ ಸಾರ್ವಜನಿಕವಾಗಿ ಕಲಾಭಿಮಾನಿಗಳು ಹಾಗೂ ಕಲಾ ವಿಮರ್ಶಕರ ಪ್ರಶಂಸೆಗೆ ಪಾತ್ರರಾಗಿ ಕಲಾ ಸಾಧಕರಿಗೆ ಕೊಡಮಾಡುವ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯ ನಾಡೋಜ, ಗುಲಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್, ಕರ್ನಾಟಕ ಲಲಿತ ಕಲಾ ಅಕಾಡೆಮಿ ಗೌರವ ಪ್ರಶಸ್ತಿ, ಭಾರತ ಸರ್ಕಾರದ ಸೀನಿಯರ್, ಫೆಲೋಶಿಪ್ ಹಾಗೂ ಖಾಸಗಿಯಾಗಿ ಕೊಡುವ ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ

ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ. ಕಲಾಕ್ಷೇತ್ರದ ಬೆಳವಣಿಗೆಯನ್ನು ಕಟ್ಟುವಲ್ಲಿ ಭಾಗಿಯಾಗಿ ಖಂಡೇರಾವ್ ಸೇವೆ ಸಲ್ಲಿಸುತ್ತಿದ್ದಾರೆ ಜೆ.ಎಸ್.ಖಂಡೇರಾವ್.

ಡಾ.ಎಸ್.ಎಂ.ಪಂಡಿತ ಅವರ ಭಾವಚಿತ್ರ–೧

ಜೆ.ಎಸ್.ಖಂಡೇರಾವ್ ಬಾಲ್ಯದಲ್ಲಿ ಎಸ್.ಎಂ.ಪಂಡಿತರ ಕಲಾಕೃತಿಗಳನ್ನು ನೋಡಿ ಪ್ರಭಾವಗೊಂಡವರು. ಮುಂದೆ ಅದೇ ಗುರುವಿನ ಭಾವಚಿತ್ರದಲ್ಲಿ ನೈಜತೆಯ ಕಲಾಸ್ಪರ್ಶ ನೀಡಿ ನುಡಿನಮನ ಸಲ್ಲಿಸಿದ ಪ್ರತಿಭೆ ಜೆ.ಎಸ್.ಖಂಡೇರಾವರದ್ದು. ಎಸ್.ಎಂ.ಪಂಡಿತರ ಫೋಟೋಗ್ರಫಿ ನೋಡಿ ಚಿತ್ರಿಸಿದ ತೈಲವರ್ಣ ಕಲಾಕೃತಿಯು ವರ್ಣಗಳ ವೈವಿಧ್ಯತೆಯನ್ನು ಸೂಕ್ಷ್ಮವಾಗಿ ಲೇಪಿಸಿ ವ್ಯಕ್ತಿಯ ಬಾಹ್ಯ ಮತ್ತು ಅಂತರಿಕ ಕುಳಿತಿರುವ ಭಂಗಿಯನ್ನು ಆಳತೆಯ ಪ್ರಮಾಣ, ಮುಖಲಕ್ಷಣ ಹೋಲಿಕೆ, ತದ್ರೂಪಿತ ಕಡೆಗೆ ಹೆಚ್ಚು ಗಮನ ಕೊಟ್ಟು ಪಂಡಿತರು ಬಳಸುವ ಕನ್ನಡಕ, ವಸ್ತ್ರಾಭರಣಗಳ ಸಂಬಂಧವನ್ನು ಹಾಗೆ ಮೀಸೆ, ಗಡ್ಡದ ಕೂದಲಿನಲ್ಲಿಯೂ ಬಿಳಿ ವರ್ಣ ಲೇಪಿಸಿ, ಸೊಬಗನ್ನು ಆಕರ್ಷಿಸುವಾಗ ಮತ್ತು ಮೈ ಬಣ್ಣದಲ್ಲಿ ನರನಾಡಿಗಳು ಕಾಣಿಸುವಹಾಗೆ ಬಣ್ಣದ ಲೇಪನದಲ್ಲಿ ತೋರಿಸುವ ತಂತ್ರ ವಿಧಾನ ಖಂಡೆರವರದು.

ಒಂದು ಕಟ್ಟಿಗೆ ಆಸರೆಯಾಗಿ ಹಣೆಗೆ ಕೈ ಹತ್ತಿ ಕುಂತು ಕಲೆಯ ಬಗ್ಗೆ ಗಾಢವಾಗಿ ಯೋಜಿಸುವ ಭಾವ ಭಂಗಿ ಫೋಟೋಗ್ರಫಿ ಮೀರಿ ನಿಂತ ಕಲಾಕೃತಿಯೊಂದು ಗುರುತಿಸಬಹುದು. ಪರಿಪೂರ್ಣವಾದ ನೈಜತೆಯ ನೆರಳು–ಬೆಳಕಿನ ಪ್ರಮಾಣ ಮತ್ತು ವಸ್ತುಗಳ ಮೇಲಿನ ನೀರಿಗೆಗಳಲ್ಲಿ ತೋರಿಸಿರು ನೆರಳು ಬೆಳಕು–ವರ್ಣಗಳ ಮಿಶ್ರಣ. ಕಲಾಕೃತಿಯ ಸೌಂದರ್ಯತೆ ಹೆಚ್ಚಿಸಿದೆ.

೨) ಭಾವಚಿತ್ರ

ತೈಲವರ್ಣದಲ್ಲಿ ರಚನೆಯಾದ ಈ ಭಾವಚಿರವು ರೂಪದರ್ಶಿಯ ನೈಜತೆ, ನೆರಳು–ಬೆಳಕನ್ನು ಬಣ್ಣ ವೈವಿಧ್ಯತೆಯಲ್ಲಿ ಕುಂಚಗಳ ಮೂಲಕ ಲೇಪಿಸಿದನ್ನು ಕಾಣುತ್ತೇವೆ. ಈ ವ್ಯಕ್ತಿಯ ೨೦ ರಿಂದ ೩೦ ರ ವಯಸ್ಸಿನ ಯುವಕರ ಯಾವುದೊ ಆಲೋಚನೆಯಲ್ಲಿ ಇರಬಹುದು. ಎನ್ನುವ ರೀತಿಯಲ್ಲಿ ಕಲಾಕೃತಿಯಲ್ಲಿ ಭಾಸವಾಗುತ್ತದೆ. ನೂರಾರು ವರ್ಣಗಳ ಮಿಶ್ರಣವು ಒಂದು ಭಾವಚಿತ್ರದಲ್ಲಿ ರಚನೆ ಮಾಡುವ ತಂತ್ರದ ಶೈಲಿ ಜೆ.ಎಸ್.ಖಂಡೇರಾವ್ ಭಾವಚಿತ್ರದಲ್ಲಿ ವಿಶೇಷತೆ,

ಭಾವಚಿತ್ರ–೩

೧೯೯೫ರಲ್ಲಿ ತೈಲವರ್ಣದಲ್ಲಿ ರಚಿಸಿದ ಭಾವಚಿತ್ರವು ಭಾವಚಿತ್ರದ ಮೈವಳಿಕೆ. ಹಿತಮಿತವಾದ ನೆರಳು ಬೆಳಕಿನ ಛಾಯೆಯನ್ನು, ಸಮನಾಗಿ ತೋರಿಸಿದ್ದಾರೆ. ನೆರಳಿನ ಆಳ ಹಾಗೂ ಉಬ್ಬಿದ್ದ ಭಾಗದಲ್ಲಿ ಬೆಳಕಿನ ಛಾಯೆಯನ್ನು ಅತ್ಯಂತ ಸೂಕ್ಷ್ಮವಾಗಿ ಜೀವಂತಿಕೆಯ ಅಂತಸತ್ವವನ್ನು ಕುಂಚದ ಮೂಲಕ ವರ್ಣದ ಪ್ಯಾಚ್‌ಗಳನ್ನು ಹಾಕುತ್ತ ವರ್ಣದಲ್ಲಿಯೇ ಸೌಂದರ್ಯದ ಕಳೆ ಈ ಭಾವಚಿತ್ರದಲ್ಲಿ ಹೇಳಬಹುದು.

ಭಾವಚಿತ್ರ -೪

ಇದು ತೈಲವರ್ಣದಲ್ಲಿ ಮುಖದ ಮಂದಹಾಸ ಸೂಸುವ ಈ ಚಿತ್ರದಲ್ಲಿ ಕಡಿಮೆ ಬಣ್ಣಗಳನ್ನು ಬಳಸಿದರು. ಮೈ ಬಣ್ಣದ ನೈಜತೆಯು ದಪ್ಪದಪ್ಪವಾಗಿ ಕುಂಚದಿಂದ ಲೇಪಿಸಿದ ಸಳೆತ ಗೆರೆಗಳು ಭಾವಚಿತ್ರಕ್ಕೆ ಮತ್ತೊಷ್ಟು ಮೆರಗು ಮತ್ತು ಕಲಾತ್ಮವಾಗಿ ಕಂಡುಬರುತ್ತದೆ. ಎದುರು ಮುಖವಾಗಿ ರೂಪದರ್ಶಿಯನ್ನು ನೋಡುತ್ತಾ ಮುಖದಲ್ಲಿನ ಆಳ, ಉಬ್ಬುಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ಚಿತ್ರಿಸಿದ ಕಲಾಕೃತಿಯೆಂದು ಗ್ರಹಿಕೆಯಾಗುತ್ತದೆ. ಕಣ್ಣಿನ ನೋಟ, ಮೈ ಬಣ್ಣ ತಲೆ ಕೂದಲಿನ ಸೂಕ್ಷ್ಮತೆ ರೂಪದರ್ಶಿಯ ನೈಜತೆಯು ಜೀವಂತಿಕೆ ಕಾಣಬಹುದು.

ಭಾವಚಿತ್ರ -೫

೨೦೦೦ ರಲ್ಲಿ ರಚಿಸಿದ ಈ ಭಾವಚಿತ್ರವು ನೋಡಿದಾಗ ಇಲ್ಲಿಯೂ ಕೂಡಾ ಯುವತಿಯ ವಯಸ್ಸು ೧೫-೨೫ ಇರಬಹುದು ಯಾವುದೋ ಗಾಢವಾದ ಆಲೋಚನೆಯಲ್ಲಿ ಇದ್ದ ಹಾಗೆ ಗಾಂಭೀರತೆ, ವರ್ಣಗಳ ಸಂಯೋಜನೆ, ನೆರಳು ಬೆಳಕಿನ ಸೂಕ್ಷ್ಮತೆ ವಿಶೇಷವಾಗಿ ಜೀಡೆಯನ್ನು ಮುಂದುಗಡೆ ಹಾಕಿ ರೂಪದರ್ಶಿಯನ್ನು ಬಳಸಿಕೊಂಡು, ನೈಜತೆಯನ್ನು ವರ್ಣಗಳ ಸಮ್ಮಿಲನದಲ್ಲಿಯೇ ಭಾವಚಿತ್ರದಲ್ಲಿ ಯಶಸ್ವಿಯಾಗಿ ಚಿತ್ರಿಸಿದ್ದಾರೆ.

ಅಡಿ ಟಿಪ್ಪಣಿ

೧) ಜಿ.ಎಸ್.ಖಂಡೇರಾವ್-ಕುಪ್ಪಣ್ಣ ಕಂದಗಲ್-ಪುಟ-೧
೨) ದೃಶ್ಯ-ಸಂಸ್ಕೃತಿ-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ ಪುಟ-೨೧
೩) ದೃಶ್ಯ-ಸಂಸ್ಕ-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ ಪುಟ-೨೧
೪) ನಾಡೋಜ ಜಿ.ಎಸ್.ಖಂಡೇರಾವ್-ಡಾ.ಮಲ್ಲಿಕಾರ್ಜುನ.ಸಿ.ಬಾಗೋಡಿ ಪುಟ-೫
೫) ಜಿ.ಎಸ್.ಖಂಡೇರಾವ್-ಕುಪ್ಪಣ್ಣ ಕಂದಗಲ್ ಪುಟ-೧
೬) ದೃಶ್ಯ ಸಂಸ್ಕೃತಿ-ಡಾ.ಮಲ್ಲಿಕಾರ್ಜುನ ಸಿ ಬಾಗೋಡಿ ಪುಟ-೨೨
೭) ಜಿ.ಎಸ್.ಖಂಡೇರಾವ್-ಕುಪ್ಪಣ್ಣ ಕಂದಗಲ್ ಪುಟ-೩
೮) ಜಿ.ಎಸ್.ಖಂಡೇರಾವ್-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ ಪುಟ-೨೩
೯) ನಾಡೋಜ ಜಿ.ಎಸ್.ಖಂಡೇರಾವ್-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ ಪುಟ-೧೨
೧೦) ನಾಡೋಜ ಜಿ.ಎಸ್.ಖಂಡೇರಾವ್-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ ಪುಟ-೧೩
೧೧) ದೃಶ್ಯ ಸಂಸ್ಕೃತಿ-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ ಪುಟ-೨೪
೧೨) ಜಿ.ಎಸ್.ಖಂಡೇರಾವ್-ಕುಪ್ಪಣ್ಣ ಕಂದಗಲ್ ಪುಟ-೩
೧೩) ಜಿ.ಎಸ್.ಖಂಡೇರಾವ್-ಕುಪ್ಪಣ್ಣ ಕಂದಗಲ್ ಪುಟ-೪
೧೪) ಅದೇ ಪುಟ-೪
೧೫) ದೃಶ್ಯ ಸಂಸ್ಕೃತಿ-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ ಪುಟ-೨೬/೨೭
೧೬) ನಮ್ಮ ನಡೆದ ಕಲಾವಿದರು-ಸ.ಪ್ರ:ಪಿ.ಆರ್.ತಿಪ್ಪೇಸ್ವಾಮಿ-೧೭೩
೧೭) ದೃಶ್ಯ ಸಂಸ್ಕೃತಿ-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ ಪುಟ-೨೭
೧೮) ನಾಡೋಜ ಜಿ.ಎಸ್.ಖಂಡೇರಾವ್-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ -[illegible]
೧೯) ಜಿ.ಎಸ್.ಖಂಡೇರಾವ್-ಕುಪ್ಪಣ್ಣ ಕಂದಗಲ್-೧೦
೨೦) ದೃಶ್ಯ ಸಂಸ್ಕೃತಿ-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ ಪುಟ-೨೭

ಎಸ್.ಎಂ.ಪಂಡಿತ್ ಅವರ ಭಾವಚಿತ್ರ ೧





ಕೆ.ಬಿ.ಕುಲಕರ್ಣಿ



ಬೆಳಗಾಂವಿಯ ಪಶ್ಚಿಮ ದಿಕ್ಕಿನಲ್ಲಿರುವ "ಹಿಂಡಲಗಾ" ಗ್ರಾಮದಲ್ಲಿದ್ದ ಭೀಮರಾವ್ ಕುಲಕರ್ಣಿ ಮತ್ತು ಯಮುನಾ ಬಾಯಿಯವರ ಆದರ್ಶ ಕುಟುಂಬದ ಈ ದಂಪತಿಗಳಿಗೆ ಆರು ಜನ ಮಕ್ಕಳು ಇವರಲ್ಲಿ ಕೊನೆಯ ಮಗನಾಗಿ ೧೯೨೦ ಫೆಬ್ರವರಿ ೪ ರಂದು ಕೃಷ್ಣರಾವ್‌ರವರು ಜನಿಸಿದರು. ಇವರಿಗೆ ಇಬ್ಬರು ಅಣ್ಣಂದಿರು ಮೂವರು ಅಕ್ಕಂದಿರು ಇದ್ದರು. ಹಿರಿಯ ಅಣ್ಣನಾದ ಶಂಕರರಾವ್ ಅವರು ಕೃಷ್ಣರಾವ್ ಅವರಲ್ಲಿರುವ ಚಿತ್ರಕಲೆಯ ಅಭಿರುಚಿ ಅವರ ಬೆಳವಣಿಗೆಗೆ ಸೂಕ್ತ ಅವಕಾಶಗಳನ್ನು ಮಾಡಿಕೊಟ್ಟರು.[೧]

ಕೃಷ್ಣರಾವ್ ಕುಲಕರ್ಣಿ ಅವರು ತಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಬೆಳಗಾವಿಯಲ್ಲಿಯೇ ಮುಗಿಸಿದರು. ಈ ಹಂತದಲ್ಲಿಯೇ ಕೃಷ್ಣರಾವ್ ಅವರು ಚಿತ್ರಕಲೆಯ ಕುರಿತು ವಿಶೇಷ ಆಸಕ್ತಿಯನ್ನು ಹೊಂದಿದ್ದರು. ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಚಿತ್ರಕಲೆಯನ್ನು ಕಲಿಸುವ ವಾರದ ಅವಧಿ ಕೇವಲ ಎರಡು ಮಾತ್ರ ಆಗಿತ್ತು. ಚಿತ್ರಕಲೆಗೆ ಸಂಬಂಧಿಸಿದ ಈ ಎರಡು ಅವಧಿಗಳಿಗಾಗಿಯೇ ಜಾತಕ ಪಕ್ಷಿಯಂತೆ ಕಾಯುತ್ತಾ ಕುಳಿತಿರುತ್ತಿದ್ದರು.

ಕುಲಕರ್ಣಿ ಅವರು ಚಿತ್ರಕಲೆಗೆ ಸಂಬಂಧಿಸಿದ ರೇಖೆವರ್ಣ ತಂತ್ರ ವಿನ್ಯಾಸಗಳ ಕುರಿತು ಏನೇ ಹೇಳಿದರೂ ಅತ್ಯಂತ ಶ್ರದ್ಧೆಯಿಂದ ಕಲಿಯುತ್ತಿದ್ದರು. ಎಂದು ಅಂದಿನ ನೆನಪುಗಳನ್ನು ಮೆಲುಕು ಹಾಕುವ ಕೃಷ್ಣರಾವ್ ಅವರು ಚಿಕ್ಕಂದಿನಿಂದಲೇ ಚಿತ್ರಕಲೆಯಲ್ಲಿ ಆಸಕ್ತಿ ಇದ್ದುದರಿಂದ ಕಣ್ಣಿಗೆ ಏನು ಕಾಣಿಸುತ್ತದೆಯೋ ಅದು ಮನಸ್ಸಿಗೂ ಹಿಡಿಸಿದರೆ ಚಿತ್ರಿಸಿಯೇ ಬಿಡುವ ಹವ್ಯಾಸ ಅವರದಾಗಿತ್ತು. ಉಳಿದೆಲ್ಲ ವಿಷಯಗಳು ಅವರ ಪಾಲಿಗೆ ಗೌಣವಾಗಿದ್ದವು. ಎಷ್ಟೋ ಸಲ ಶಿಕ್ಷಕರು ಮುಂದುಗಡೆ ಪಾಠವನ್ನು ಮಾಡುತ್ತಿದ್ದರೆ, ಹಿಂದಿನಿಂದ ಇವರು ಯಾವುದರ ಮೇಲಾದರೂ ಚಿತ್ರವನ್ನು ಗೀಚುತ್ತಾ ಕುಳಿತಿರುತ್ತಿದ್ದರು. ಈ ವಿಷಯವಾಗಿ ಕೆಲವೊಂದು ಶಿಕ್ಷಕರಿಂದ ಶಿಕ್ಷೆಯನ್ನು ಅನುಭವಿಸಬೇಕಾಗುತ್ತಿತ್ತು. ಕೊನೆಗೆ ಅಂತೂ ೧೯೩೭ ರಲ್ಲಿ ಮೆಟ್ರಿಕ್ ಪರೀಕ್ಷೆಯನ್ನು ಪೂರ್ಣಗೊಳಿಸಿದರು. ನಂತರ ಚಿತ್ರಕಲೆಯ ಅಧ್ಯಯನ ಮಾಡಲು ನಿರ್ಧರಿಸಿದರು.[೨]

ಆಗಿನ ಕಾಲದಲ್ಲಿ ಕಲೆಯನ್ನು ಕಲಿಯಬೇಕಾದರೆ, ಕಲಾಕೃತಿಗಳನ್ನು ನೋಡಬೇಕೆಂದರೆ ಚಿತ್ರಕಲೆಯನ್ನು ಕಲಿಯಬೇಕಾದರೆ, ಪುಣೆ, ಮುಂಬೈಗಳಂತಹ ಪಟ್ಟಣಗಳಿಗೆ ಹೋಗಬೇಕಾಗುತ್ತಿತ್ತು. ಆಗ ಈಗಿನಂತೆ ವಾಹನಗಳ ವ್ಯವಸ್ಥೆಯೂ ಅಷ್ಟೊಂದು ಸರಿಯಾಗಿರಲಿಲ್ಲ. ಅಂತಹ ದೊಡ್ಡ ಪಟ್ಟಣದಲ್ಲಿ ಉಳಿದುಕೊಂಡು ಅಧ್ಯಯನ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ. ಸಹೋದರ ಶಂಕರರಾವ್ ಅವರ ಸಹಾಯ ಹಾಗೂ ಸಹಕಾರದೊಂದಿಗೆ ಹೆಚ್ಚಿನ ಕಲಾವಿದ್ಯಾಭ್ಯಾಸ ಮಾಡಲು ಮುಂಬೈಗೆ ಹೋಗಲು ಸಾಧ್ಯವಾಯಿತೆಂದು ಕೃಷ್ಣರಾವ್ ಮತ್ತೆ ಮತ್ತೆ ನೆನೆಯುತ್ತಾರೆ.[೩]

ಕಲಾ ಶಿಕ್ಷಣ ಮತ್ತು ವೃತ್ತಿ ಜೀವನ

ಕೆ.ಬಿ.ಕುಲಕರ್ಣಿ ಅವರು ೧೯೪೨ರಲ್ಲಿ ಚಿತ್ರಕಲಾ ಶಿಕ್ಷಕರಾಗಿ ಬೆಳಗಾವಿಯ ಸೆಂಟ್ರಲ್ ಸ್ಕೂಲ್‌ದಲ್ಲಿ ಎರಡು ವರ್ಷ ಕೆಲಸ ಮಾಡಿದರು. ಮುಂದೆ ಮುಂಬೈದ ಸರ್.ಜೆ.ಜೆ.ಕಲಾ ಕಾಲೇಜಿಗೆ ಸೇರಿಕೊಂಡರು. ೧೯೪೫ರಲ್ಲಿ ಚಿತ್ರಕಲಾ ಶಿಕ್ಷಕರ ತರಬೇತಿ ಕೋರ್ಸನ್ನು (ಡಿ.ಟಿ.ಸಿ.) ಪಾಸಾದರು. ಅದೇ ವರುಷ ಅಂದರೆ ೧೯೪೬ರಲ್ಲಿಯೇ ಬೆಳಗಾವಿಯ ಮರಾಠಾ ಮಂಡಳ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡರು. ೪ ವರುಷಗಳವರೆಗೆ ಅಂದರೆ ೧೯೪೯ರ ವರೆಗೆ ಸೇವೆ ಸಲ್ಲಿಸಿದರು. ಈ ಮಧ್ಯೆ ಆರ್ಟ್ ಮಾಸ್ಟರ್ (ಎ.ಎಂ.) ಪದವಿಯನ್ನು ೧೯೪೭ರಲ್ಲಿ ಜೆ.ಜೆ.ಕಲಾ ಶಾಲೆಯಿಂದ ಪಡೆದುಕೊಂಡರು. ೧೯೪೯ರಲ್ಲಿ ಮತ್ತೇ ಬೇರೆ ಸೆಂಟಪಾಲ್ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಹೀಗೆ ವಿವಿಧ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಾ ಕಲಾಶಿಕ್ಷಣವನ್ನು ಪೂರೈಸಿಕೊಂಡ ಕುಲಕರ್ಣಿ ಅವರು ಮುಂಬೈದಲ್ಲಿರುವ ಹಲ್ದನ್‌ಕರ್ ಕಲಾ ಶಾಲೆಯೊಂದಿಗೆ ಹೆಚ್ಚಿನ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಇದರಿಂದಾಗಿ ಚಿತ್ರಕಲೆಯ ಮೂಲತತ್ವಗಳಾದ ರೇಖೆ, ವರ್ಣ, ವಿನ್ಯಾಸ, ಆಕಾರ, ಆಕೃತಿ, ತಂತ್ರಗಳ ಕುರಿತು ಆಳವಾದ ಅಧ್ಯಯನ ಮಾಡಲು ಅವಕಾಶ ಒದಗಿಸಿತು. ಆ ಕಲಾಶಾಲೆಯ ಕಲಾಕೃತಿಗಳನ್ನು ಪದೇ ನೋಡುವುದರಿಂದಲೂ ಕಲೆಯ ಕುರಿತಾದ ಹೊಸ ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಅನುಕೂಲವಾಯಿತು. ಅಲ್ಲಿಯ ರೇಖಾಚಿತ್ರಗಳು, ಜಲವರ್ಣ ಚಿತ್ರಗಳು, ತೈಲವರ್ಣ ಚಿತ್ರಗಳು ಅಲ್ಲದೇ ವಿವಿಧ ಮಾಧ್ಯಮಗಳ ಕುರಿತು ಅರಿತುಕೊಳ್ಳಲು ಒಳ್ಳೆಯ ಅವಕಾಶ ದೊರೆಯಿತು.

ಕೆ.ಬಿ.ಕುಲಕರ್ಣಿ ಅವರ ಭಾವಚಿತ್ರಗಳ ರಚನೆ

ಬದುಕಿನ ನೋವು ನಲಿವುಗಳ ಹಲವಾರು ಮಜಲುಗಳನ್ನು ಕಂಡ ಬದುಕಿನ ಸ್ವಾನುಭವ ದ್ರವ್ಯಗಳನ್ನು ತಮ್ಮ ಕೃತಿಗಳಲ್ಲಿ ಯಶಸ್ವಿಯಾಗಿ ತಂದಿರುವ ಇವರ ಕಲಾಶೈಲಿ ವೈವಿದ್ಯಮಯ ವ್ಯಕ್ತಿತ್ವದ ಹಲವು ಸರಣಿಗಳಾಗಿ ಮೂಡಿಬಂದಿವೆ. ಇವರ ಕಲಾಸೃಷ್ಟಿ ನಿರಂತರವಾಗಿ ಕುಡಿಯೊಡೆಯುತ್ತಲೇ ಇತ್ತು ಬದುಕಿನ ಹಲವು ಪರಿಗಳನ್ನು ಕಂಡು ಅನುಭವಿಸಿದ ಕೆ.ಬಿ.ಕುಲಕರ್ಣಿ ಅವರ ಕಲಾಕೃತಿಗಳು ಹೆಚ್ಚಾಗಿ ಸ್ವಾನುಭವದ ದೃಶ್ಯಗಳನ್ನೇ ಮಡಿಸಿಕೊಂಡು ಬೆಳದಿದೆ. ಈ ಹಿನ್ನೆಲೆಯಲ್ಲಿ ಅವರ ವರ್ಣಚಿತ್ರಗಳು ಭಾವಚಿತ್ರಗಳು, ರೇಖಾಚಿತ್ರಗಳು ಇತರ ಹಲವು ಕಲಾವಿದರ ಕೃತಿಗಳಿಗಿಂತ ವಿಶಿಷ್ಟ ಆವರಣವನ್ನು ಪಡೆದುಕೊಳ್ಳುತ್ತವೆ. ಹೀಗೆ ಸ್ವಾನುಭವ, ವೈಚಾರಿಕತೆ, ಮಾನವೀಯ ಕಾಳಜಿ ಮುಂತಾದವುಗಳ ಸಂಗಮವಾಗಿ ಇವರ ಕಲಾಕೃತಿಗಳನ್ನು ಹಲವು ನೆಲೆಗಳಲ್ಲಿ ಕಾಣಬಹುದಾಗಿದೆ.

ಕೆ.ಬಿ.ಕುಲಕರ್ಣಿ ಅವರು ಜಲವರ್ಣ ಮತ್ತು ತೈಲವರ್ಣವನ್ನೆ ಪ್ರಾತಿನಿಧಿಕ ಮಾಧ್ಯಮವಾಗಿ ಬಳಸಿಕೊಂಡು ಕ್ಯಾನ್ವಾಸ್ ಮೇಲೆ ಚಾರ್ಕೋಲ್‌ನಿಂದ ರೇಖೆಗಳ ಮೂಲಕ ಆಕೃತಿಗಳನ್ನು ಬರೆದ ನಂತರ ಪ್ಯಾಲೆಟ್‌ನಲ್ಲಿ ಅವರ ಆಯ್ಕೆಯ ಕೆಲವೇ ವರ್ಣಗಳನ್ನು ಹಾಕಿಕೊಂಡು ಅಗತ್ಯಕ್ಕೆ ತಕ್ಕಂತೆ ಲಿನ್‌ಸೀಡ್ ಆಯಿಲ್‌ನ್ನು ಮಿಶ್ರಣ ಮಾಡಿಕೊಂಡು ಕುಂಚದ ಮೂಲಕ ಅಲ್ಲಲ್ಲಿ ಹಚ್ಚುತ್ತಾ ಹೋಗುತ್ತಾರೆ. ಇವರು

ವರ್ಣದಲ್ಲಿ ತೈಲ ಮಿಶ್ರಣ ಮಾಡಿಕೊಂಡು ಜಲವರ್ಣದಂತೆ ತೆಳ್ಳಗೆ ವರ್ಣವನ್ನು ಹಚ್ಚುತ್ತಾರೆ. ಅರೆ ಪಾರದರ್ಶಕವಾಗಿ, ಕಾಣುವಂತೆ ಶ್ರೀಮಂತ ವರ್ಣಗಳನ್ನು ಬಳಸುವುದರೊಂದಿಗೆ ಚಿತ್ರದ ಮೈವಳಿಕೆಯಲ್ಲಿನ ವೈವಿಧ್ಯತೆಗಳ ಮೂಲಕ ನೋಡುಗ ದೃಷ್ಟಿಯನ್ನು ಹಿಡಿದಿಡುವ ಪ್ರಯತ್ನ ಮಾಡುತ್ತಾರೆ ಕೆ.ಬಿ.ಕುಲಕರ್ಣಿ ಅವರು.[1]

ವರ್ಣಚಿತ್ರಗಳ ವಸ್ತು ವಿಷಯಗಳನ್ನು ಗಮನಿಸಿದಾಗ ಸ್ವಕೀಯವೆನಿಸುತ್ತವೆ ಹೀಗೆ ವಸ್ತು ನಮ್ಮದಾಗಿರುವಂತೆ ರೂಪದಲ್ಲಿಯೂ ನವ್ಯವನ್ನು ದೇಶೀಯತೆಗೆ ಒಗ್ಗಿಸುವ ಗುಣ ವಿಶೇಷ ಇವರದ್ದು ಹಾಗೂ ವ್ಯಕ್ತಿ ಚಿತ್ರಗಳಲ್ಲಿ ಹಾಗೂ ಭಾವಚಿತ್ರಗಳಲ್ಲಿ ಅತ್ಯಂತ ಪರಿಣತರು ಆದರೆ ಇದರಲ್ಲಿ ಬಳಸುವ ಮಾಡಲ್ (ವ್ಯಕ್ತಿ)ಗಳು ವಿಶೇಷವಾಗಿ ಮಹಿಳೆಯರೇ ಆಗಿರುತ್ತವೆ. ಅದು ತಮ್ಮ ವಿದ್ಯಾರ್ಥಿಗಳನ್ನೇ ಮಾಡಲ್ (ವ್ಯಕ್ತಿ)ಗಳಾಗಿ ಬಳಸುವುದು ವಿಶೇಷ. ಬೇರೆಡೆ ಪ್ರಾತ್ಯಕ್ಷಿಕೆ ನೀಡಲು ಹೋಗುವುದಾದರೆ ತಾವೇ ಆಯ್ಕೆ ಮಾಡಿದ ಮಾಡಲ್‌ಗಳನ್ನು ಕರೆದುಕೊಂಡು ಹೋಗುತ್ತಿದ್ದರು.[2]

೧) ಯುವತಿಯ ಭಾವಚಿತ್ರ

ವಿದ್ಯಾರ್ಥಿನಿಯೋರ್ವಳ ಭಾವಚಿತ್ರವನ್ನು ೧೯೫೭ರಲ್ಲಿ ಜಲವರ್ಣ ಮಾಧ್ಯದಲ್ಲಿ ರಚಿಸಿದ್ದು, ಈ ಕಲಾಕೃತಿಯಲ್ಲಿ ಮುಖದ ಭಾಗ ನೇರವಾಗಿದ್ದು ದೇಹ ಬಲಭಾಗಕ್ಕೆ ಹೊರಳಿದೆ. ಮುಖದ ಮೇಲೆ ಗಾಂಭೀರ್ಯತೆ, ಹಣೆಯ ಮೇಲಿನ ಕುಂಕುಮ. ಜೀವಂತಿಕೆಯನ್ನು ಹೊರಸೂಸುವ ಕಣ್ಣುಗಳು, ನೆರಳು ಬೆಳಕಿನ ವಿನ್ಯಾಸದೊಂದಿಗೆ ಮುಖದಲ್ಲಿಯ ನೈಜತೆ ಮೂಡಿಬಂದಿದೆ. ಜಲವರ್ಣದ ಬಣ್ಣಗಳ ಮಿಶ್ರಣದೊಂದಿಗೆ ಮುಗ್ಧ ಮುಖದ ಭಾವನೋಟ ನೆರಳು ಬೆಳಕಿನ ಪ್ರಮಾಣದಲ್ಲಿ ಯುವತಿಯ ಭಾವಚಿತ್ರ ಸೌಂದರ್ಯಾತ್ಮಕವಾಗಿ ಮೂಡಿ ಬಂದಿದೆ ಪೇಪರಿನಲ್ಲಿ.

೨) ಮಹಿಳೆಯ ಭಾವಚಿತ್ರ

ಕಪ್ಪು ಬಣ್ಣದ ಮಹಿಳೆಯೋರ್ವಳ ತೈಲಚಿತ್ರವನ್ನು ೧೯೫೧ರಲ್ಲಿ ಚಿತ್ರಿಸಿದ್ದು. ಮಹಿಳೆಯ ಮುಖದ ನೇರವಾದ ನೋಟ, ಗಾಢವಾದ ನೆರಳು ಬೆಳಕನ್ನು ತೋರಿಸಿ ಕಲಾಕೃತಿಗೆ ಹೆಚ್ಚಿನ ಮೆರುಗನ್ನು ನೀಡಿರುವರು. ಭಾವಚಿತ್ರದ ಹಿನ್ನಲೆಯಲ್ಲಿ ಹಳದಿ ಮಿಶ್ರಣದ ವರ್ಣ ಲೇಪನದ ತಂತ್ರ ಕೃಲಾಕೃತಿಗೆ ಸೌಂದರ್ಯ ನೀಡಿದೆ. ಮಹಿಳೆಯು ಗಂಭೀರವಾಗಿ ನೋಡುವ ನೋಟ ಹದಿಹರೆಯದ ಯೌವನತೆಯ ಗುಂಡಾದ ಮುಖದಲ್ಲಿ ಕಾಣಿಸುವಾಗೆ ಚಿತ್ರಿಸಿದ್ದಾರೆ. ವಿಶೇಷವಾಗಿ ಈ ಭಾವಚಿತ್ರವು ಪ್ರಮಾಣ ಬದ್ಧತೆ ಹಾಗೂ ಬಣ್ಣಗಳ ಸಂಯೋಜನೆ ಹಳದಿ ಮಿಶ್ರಿತ, ಕೆಂಪು ಕಪ್ಪು ವರ್ಣಗಳ ಲೇಪನದಿಂದ ಪ್ರತಿಯೊಂದು ಭಾವಭಂಗಿಯ ಮೈವಳಿಕೆಯೂ ವಿಶಿಷ್ಟವಾಗಿ ಮೂಡಿಬಂದಿದೆ. ಈ ಕಲಾಕೃತಿಯು ಕ್ಯಾನ್ವಾಸಿನಲ್ಲಿ ರಚನೆಯಾಗಿದೆ.

೩) ವಿದ್ಯಾರ್ಥಿಯ ಭಾವಚಿತ್ರ

ತಮ್ಮ ವಿದ್ಯಾರ್ಥಿಗಳನ್ನೇ ಹೆಚ್ಚಾಗಿ ರೂಪದರ್ಶಿಯಾಗಿ ಬಳಸಿಕೊಳ್ಳುತ್ತಿದ್ದರು. ಅಂತೆಯೇ ಈ ತೈಲವರ್ಣದಲ್ಲಿ ಎಡಪಾರ್ಶ್ವನೋಟದಲ್ಲಿ, ಜೀವಂತಿಕೆಯನ್ನು ಹೊರಸೂಸುವ ಕಣ್ಣುಗಳು, ಗುಂಡು ಗುಂಡಾದ ಮೂಗು ಗಲ್ಲಗಳು ಹಾಗೂ ಹಣೆಯ ಮೇಲಿನ ಚಿಕ್ಕದಾದ ಕುಂಕುಮದ ಬೊಟ್ಟು ಮುಖದ ಅಂದವನ್ನು ಹೆಚ್ಚಿಸಿದ್ದು ಸೂಕ್ತವಾದ ನೆರಳಿನೊಂದಿಗೆ ಬಿಳಿಯ ಬಣ್ಣದ ವಿದ್ಯಾರ್ಥಿನಿಯ ಚಿತ್ರವನ್ನು ಸುಂದರವಾಗಿ ರಚಿಸಿದ್ದಾರೆ. ಕಪ್ಪು ತಲೆಯ ವರ್ಣ ಹಾಗೂ ಹಿಂದುಗಡೆ ಎರಡು ಹೆಣೆದ ಜಡೆಗಳಿಗೆ ಕೆಂಪುವರ್ಣದ ರಿಬ್ಬನ್ ಹಾಕಿಕೊಂಡಿದ್ದು ಬಿಳಿಯ ರವಿಕೆ ಹಾಗೂ ಕೆಂಪು ವರ್ಣದ ಸೀರೆಯ ನೆರಿಗೆಗಳಿಂದ ಪೂರ್ಣಗೊಳಿಸಿರುವ ಭಾವಚಿತ್ರದ ಹಿನ್ನಲೆಯಲ್ಲಿ ಹಳದಿ ಕಂದು ಗೆಂಪು ಬಣ್ಣದ ಮಿಶ್ರಣವನ್ನು ಬಳಸಿರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಜೀವಂತಿಕೆಯನ್ನು ಈ ಭಾವಚಿತ್ರದಲ್ಲಿ ನೋಡಬಹುದು ೧೫"/೧೨" ಅಳತೆಯ ಕ್ಯಾನ್ವಾಸದಲ್ಲಿ.

ಭಾವಚಿತ್ರ–೪

ವಯಸ್ಸಾದ ರೈತನ ಚಿತ್ರಣವನ್ನು ತೈಲವರ್ಣದಿಂದ ೧೯೬೦ರಲ್ಲಿ ಕೆ.ಬಿ.ಕುಲಕರ್ಣಿಯವರು ರಚಿಸಿದ್ದಾರೆ. ಈ ಚಿತ್ರದಲ್ಲಿ ಕುಳಿತಿರುವ ವ್ಯಕ್ತಿಯ ಕೈಯಲ್ಲಿ ಕೋಲನ್ನು ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ಬೀಡಿ ಸೇದುತ್ತಿರುವುದು (ಹೊಗೆ ಸೇವನೆ) ಕಂಡುಬರುತ್ತದೆ. ಈ ವ್ಯಕ್ತಿಯ ಉಡುಗೆಯಲ್ಲಿ ಹಳ್ಳಿಯ ರೈತನ ಭಾವನೆಗಳನ್ನು ಸುಲಭವಾಗಿ ಕಂಡು ಹಿಡಿಯುವಂತೆ ತಲೆಯಲ್ಲಿ ರುಮಾಲು, ಅಂಗಿ, ಪಂಚೆಯನ್ನು ಉಟ್ಟಿರುವುದು ವಿಶೇಷವಾಗಿದೆ. ಬಟ್ಟೆಯನ್ನು ಬಿಳಿವರ್ಣದಿಂದ ರಚಿಸಿದ್ದು ಹಳದಿ ಮಿಶ್ರಣದಿಂದ ನೆರಳು ಬೆಳಕು ಕೂಡಿದೆ. ಹಿನ್ನಲೆಯಲ್ಲಿ ಹಸಿರು ಮತ್ತು ಕಪ್ಪುವಿನೊಂದಿಗೆ ರಚಿಸಿದ್ದಾರೆ. ತಲೆಯ ಮೇಲಿನ ರುಮಾಲು ಹಳದಿ ವರ್ಣದೊಂದಿಗೆ ಚಿತ್ರಿಸಿ ಪೂರ್ತಿ ಚಿತ್ರವು ಅತ್ಯಂತ ಸೊಬಗಿನಿಂದ ಕೂಡಿದೆ.

ಕೆ.ಬಿ.ಕುಲಕರ್ಣಿ ಅವರು ಹಲವಾರು ಭಾವಚಿತ್ರಗಳನ್ನು ಮತ್ತು ವ್ಯಕ್ತಿಚಿತ್ರಗಳ ಸಂಯೋಜನೆ, ರೇಖಾಚಿತ್ರಗಳನ್ನು ತಮ್ಮ ಅನುಭವದ ಮೂಲಕ ತಮಗೆ ದೊರೆತ ಮಾಧ್ಯಮದಲ್ಲಿ ಕಲಾಕೃತಿಗಳನ್ನು ರಚಿಸುತ್ತಾ ಅನೇಕ ಕಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ. ಏಕವ್ಯಕ್ತಿ, ಸಮೂಹ ಕಲಾ ಪ್ರದರ್ಶನಗಳು ಕಲಾಶಿಬಿರದಲ್ಲಿ ಭಾಗಿಯಾಗಿ ಹಲವಾರು ಅನುಭವಗಳು ಕಲಾಕೃತಿಗಳ ಮೂಲಕ ತಮ್ಮ ಆದರ್ಶದ ಕಲಾ ಜೀವನ ೯ ಮಾರ್ಚ್ ೨೦೦೭ ರಲ್ಲಿ ಬಿಟ್ಟು ಹೋದರು. (ಇಹಲೋಕಕ್ಕೆ) ಆದರೆ ಅವರ ಕಲಾಕೃತಿಗಳು ಇಂದಿಗೂ ಸ್ಮರಣೀಯವಾಗಿದೆ.

ಅಡಿ ಟಿಪ್ಪಣಿ

೧ ಕೆ.ಬಿ.ಕುಲಕರ್ಣಿ:ಬಿ ಎಂ ಪಾಟೀಲ. ಪುಟ-೧೧
೨ ಅದೇ ಪುಟ-[illegible]
೩ ಅದೇ ಪುಟ-[illegible]
೪ ಕೆ.ಬಿ.ಕುಲಕರ್ಣಿ:ಬಿ ಎಂ ಪಾಟೀಲ. ಪುಟ-[illegible]
೫ ಕೆ.ಬಿ.ಕುಲಕರ್ಣಿ:ಬಿ ಎಂ ಪಾಟೀಲ. ಪುಟ-[illegible]
೬ ಕೆ.ಬಿ.ಕುಲಕರ್ಣಿ:ಬಿ ಎಂ ಪಾಟೀಲ. ಪುಟ-[illegible]
೭ ಅದೇ ಪುಟ-[illegible]



ಭಾವಚಿತ್ರ ೧

ಭಾವಚಿತ್ರ ೨





ಭಾವಚಿತ್ರ ೩

ಭಾವಚಿತ್ರ ೪





ಎಸ್.ಎಂ.ಪಂಡಿತ್



ಡಾ.ಎಸ್.ಎಸ್.ಪಂಡಿತ್ (೧೯೧೬-೧೯೯೩)

ಭಾರತೀಯ ದೃಶ್ಯಕಲಾ ಸಾಧಕರಲ್ಲಿ ಒಬ್ಬರಾದ ಎಸ್.ಎಂ.ಪಂಡಿತರೊಬ್ಬರು.ಹಿಂದೊಮ್ಮೆ ಬಹಮನಿ ಸುಲ್ತಾನರ ಕಾರ್ಯಕ್ಷೇತ್ರವಾಗಿ ಐತಿಹಾಸಿಕ ವೈಭವವನ್ನು ಮೆರೆದ. ಹಾಗೂ ಶರಣಬಸವೇಶ್ವರ, ಸಂತ ಖಾಜಾ ಬಂದೇನವಾಜ ಮೊದಲಾದ ಪುಣ್ಯ ಪುರುಷರು ನಡೆದಾಡಿ ನೆಲವನ್ನು ಪಾವನಗೊಳಿಸಿಕೊಂಡ ಕಲಬುರ್ಗಿ ರಸಋಷಿ ಎಸ್.ಎಂ.ಪಂಡಿತರ ಹುಟ್ಟೂರು ಅಂದಿನ ಗುಲಬರ್ಗಾ ಇಂದು ಕಲಬುರ್ಗಿ ಎಂಬ ನಾಮಧೇಯದಿಂದ ವಿಭಾಗೀಯ ಗಂಡು ಮೆಚ್ಚಿನ ಸ್ಥಳವಾಗಿದೆ.

ಈ ಶತಮಾನದ ಎರಡನೆಯ ದಶಕ. ವಿಶ್ವದ ಭವಿಷ್ಯವನ್ನೇ ಬದಲಾಯಿಸಿದ ಜಾಗತಿಕ ಮೊದಲನೆಯ ಮಹಾಯುದ್ಧ ನಡೆಯುತ್ತಿದ್ದ ಕಾಲ. ಭಾರತ ದೇಶವನ್ನೆ ಕಬಳಿಸಿಬಿಡಲು ಬಾಯ್ತೆರೆದು ಹರಡಿದ ಪ್ಲೇಗುಮಾರಿಯಿಂದ ಇಡೀ ದೇಶವೆಲ್ಲ ನಡುಗಿ ತತ್ತರಿಸುತ್ತಿದ್ದ ಸಮಯ ಜೀವ ಉಳಿಸಿಕೊಳ್ಳಲು ಊರು ತೊರೆದು ಕಾಡಿನಲ್ಲಿ ಗುಡಿಸಲುಗಳಲ್ಲಿ ಜನರು ವಾಸಿಸುತ್ತಿದ್ದ ಭೀಕರ ಪ್ರಸಂಗದಲ್ಲಿ ಅಂದರೆ ಕ್ರಿ.ಶ.೧೯೧೬ರ ಮಾರ್ಚ್ ೨೫ ರಂದು ಪಂಡಿತರ ಜನನ "ಸಾಂಬಾನಂದ ಮೋನಪ್ಪ ಪಂಡಿತ" ಅವರ ಪೂರ್ಣ ಹೆಸರು.

ಕಲಬುರ್ಗಿಯಲ್ಲಿ ಕಂಚುಗಾರ ವೃತ್ತಿಯಲ್ಲಿ ನಿರತರಾದ "ಪಂಡಿತ" ಮನೆತನದ ಮೋನಪ್ಪ ಸತಿ ಕಾಳಮ್ಮನೊಡಗೂಡಿ ಸಂಸಾರ ನಿರ್ವಹಣೆಯಲ್ಲಿ ತೊಡಗಿದ್ದರು. ದಂಪತಿಗಳಿಬ್ಬರೂ ತಿಂಥಿಣಿಯ ಮೌನೇಶ್ವರ ಸ್ವಾಮಿಯ ಪರಮ ಭಕ್ತರು. ಕಲಬುರ್ಗಿಯಿಂದ ತಿಂಥಿಣಿಯವರೆಗೆ ಸುಮಾರು ೧೫೦ ಕಿಲೋ ಮೀಟರುಗಳ ದೂರವನ್ನು ಕಾಲು ನಡಿಗೆಯಿಂದಲೇ ಕ್ರಮಿಸಿ. ಸ್ವಾಮಿಯ ದರ್ಶನ ಪಡೆದು, ಸ್ವಾಮಿಯ ಎದುರಿನಲ್ಲಿ ತಮ್ಮ ಮನೋಭಿಲಾಷೆಯನ್ನು ತೋಡಿಕೊಳ್ಳುವ ಪರಿಪಾಠವನ್ನುಂಟುಕೊಂಡವರು. ವೃತ್ತಿ, ಪ್ರವೃತ್ತಿಗಳೆರಡನ್ನೂ ಮೌನೇಶ್ವರನ ಅಪೇಕ್ಷೆಯಂತೆ ನಡೆಸಿಕೊಂಡು ಬಂದವರು. ಇಂಥ, ಸಾತ್ವಿಕ ದಂಪತಿಗಳ ಗರ್ಭ ಸಂಜಾತರಾದ ವಿಶ್ವವಿಖ್ಯಾತ ಕಲಾವಿದ ಎಸ್.ಎಂ.ಪಂಡಿತರು ತಮ್ಮ ಜನನ ಕಾಲದ ಪ್ರಸಂಗವನ್ನು ಕುರಿತು ಭಾವಲೀನರಾಗಿ ಹೇಳುವಾಗ ಅವರ ಮನೋಭಾವನೆಯ ಸ್ತರಗಳ ಮಿಡಿತದ ಕಲ್ಪನೆಯುಂಟಾಗುತ್ತದೆ. ಅವರಲ್ಲಿನ ಅದಮ್ಯವಾದ ದೈವಭಕ್ತಿಯ ಸುಳಿವು ಎದ್ದು ಕಾಣುತ್ತದೆ.[1]

ಕಲಾ ಶಿಕ್ಷಣ

ಎಸ್.ಎಂ.ಪಂಡಿತರಿಗೆ ಮನೆಯೇ ಮೊದಲ ಕಲಾ ಶಾಲೆಯಾಗಿ ರೂಪಗೊಂಡಿತು. ಮನೆಯಲ್ಲಿ ಹಬ್ಬಹರಿದಿನಗಳಂದು ತಂದೆ ಎತ್ತು, ಬಸವ, ದೋಣಿ, ಗಣಪತಿ ವಿಗ್ರಹಗಳನ್ನು ಮಣ್ಣಿನಲ್ಲಿ ರಚಿಸುತ್ತಿದ್ದರು. ಮತ್ತು ಮನೆಯ ಗೋಡೆಯ ಮೇಲೆ ಪುರಾಣಿಕ ಪ್ರತಿಕೃತಿಗಳನ್ನು ತೂಗಿಹಾಕಿದ್ದರು. ಇಂತಹ ಕಲಾ ಪರಿಸರ, ಹೊಂದಿದ್ದ ಮನೆಯಲ್ಲಿ ಜನಿಸಿದ ಪಂಡಿತರಿಗೆ ಬಾಲ್ಯದಲ್ಲಿ ಕಲಾ ಅಭಿರುಚಿ, ಸಹಜವಾಗಿಯೇ ಬೆಳೆಯುತ್ತಬಂದಿತು. ಈ ಪರಿಸರದಿಂದ ಪ್ರಭಾವಿತರಾದ ಬಾಲಕ ಪಂಡಿತರು ಸಹಜವಾಗಿ ಗೋಡೆಗಳ ಮೇಲೆ ಕರಕಲ ಇದ್ದಿಲುಗಳಿಂದ ಚಿತ್ರಿಸುತ್ತಿದ್ದರು. ಮಗ ಓದಿ ವಿದ್ಯಾವಂತನಾಗಲೆಂದು ಮಗನಿಗೆ ಸಾಮಗ್ರಿ

ಶಿಕ್ಷಣಕ್ಕಾಗಿ ಪ್ರವೇಶ ದೊರಕಿಸಿದರು. ಕಾಲಕಳೆಯುತ್ತಿದ್ದು ಕೆಲವೊಮ್ಮೆ ಮೈಮರೆತು ಮನೆಗೆ ಬರುತ್ತಿರಲಿಲ್ಲ. ಪಾಲಕರು ಹುಡುಕಾಡಿ ಮನೆಗೆ ಕರೆದುಕೊಂಡು ಬರುತ್ತಿದ್ದರಂತೆ. ಹಲವಾರು ಬಾರಿ ಮನೆತನ ವೃತ್ತಿಯಲ್ಲಿ ಮತ್ತು ಮಣ್ಣಿನ ಮೂರ್ತಿಗಳನ್ನು ರಚಿಸುವಾಗ ಬಾಲಕ ಪಂಡಿತರು ತುಂಬಾ ಆಸಕ್ತಿಯಿಂದ ಭಾಗವಹಿಸಿ ಸಹಕರಿಸುತ್ತಿದ್ದರು. ನೆಲಗೋಡೆಗಳ ಮೇಲೆ ಇವರು ಚಿತ್ರ ಚಿತ್ರಿಸುತ್ತಿರುವುದನ್ನು ಗಮನಿಸಿದ ಪಾಲಕರು ಕಾಗದದ ಮೇಲೆ ಚಿತ್ರಿಸಲು ಪ್ರೋತ್ಸಾಹಿಸುತ್ತಾರೆ. ಚಿತ್ರಕಲೆಯಲ್ಲಿ ಆಸಕ್ತನಾಗಿರುವಷ್ಟು ಓದಿನಲ್ಲಿ ಆಸಕ್ತಿ ಕಂಡುಬರಲಿಲ್ಲ. ಇದನ್ನು ಗಮನಿಸಿದ ಪಾಲಕರು ಪಂಡಿತರ ಆಸಕ್ತಿಯ ಚಿತ್ರಕಲಾ ಶಿಕ್ಷಣ ನೀಡುವುದು ಸೂಕ್ತವೆಂದು ಭಾವಿಸಿದರು. ಆಗ ಅವರ ಗಮನಕ್ಕೆ ಬಂದವರು ಬೀದರನಲ್ಲಿನ ಚಿತ್ರಕಲಾ ಶಿಕ್ಷಕರಾದ ಭಾಸ್ಕರರಾವ್. ಅವರಲ್ಲಿ ಕೆಲವು ಕಾಲ ಚಿತ್ರಕಲಾ ಅಭ್ಯಾಸವನ್ನು ಮಾಡಿಸುತ್ತಾರೆ. ಭಾಸ್ಕರರಾವ್. ಅವರು "ನೀನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ದೇಶದ ಹೆಸರಾಂತ ಸರ್.ಜೆ.ಜೆ.ಕಲಾಶಾಲೆ ಮುಂಬೈಯಲ್ಲಿ ವಿದ್ಯಾಭ್ಯಾಸ ಮಾಡಿದರೆ ಒಳ್ಳೆಯದೆಂದು ಸೂಚಿಸಿದರು. ಮುಂದೆ ಶಂಕರರಾವ್ ಆಳಂದಕರ್ ಅವರು ಪಂಡಿತರನ್ನು ಶಿಷ್ಯರನ್ನಾಗಿ ಸ್ವೀಕರಿಸಿದರು.[೨]

ಕಲಾಶಾಲೆ ಪ್ರವೇಶ

ಗುಲಬರ್ಗಾದ ಎಸ್.ವ್ಹಿ.ಶಿಕ್ಷಣ ಸಂಸ್ಥೆಯಲ್ಲಿ ಚಿತ್ರಕಲಾ ವಿಭಾಗವನ್ನು ಶಂಕರರಾವ್ ಆಳಂದಕರ ಅವರು ಆಗತಾನೆ ಆರಂಭಿಸಿದ್ದರು. ಪಂಡಿತರು ಅಲ್ಲಿ ವಿದ್ಯಾರ್ಥಿಯಾಗಿ ಸೇರುತ್ತಾರೆ. ಎಸ್.ವಿ.ಸಂಸ್ಥೆ ಮೂಲಕ ೧೯೬೧ರಲ್ಲಿ ಮದ್ರಾಸ್ ಸ್ಕೂಲ್ ಆರ್ಟ್ಸ್‌ನಿಂದ ಡಿಪ್ಲೊಮಾ ಪದವಿಯನ್ನು ಪಡೆದುಕೊಳ್ಳುತ್ತಾರೆ. ಅಲ್ಲಿಯ ಹೆಸರಾಂತ ಕಲಾವಿದರಾದ ಡಿ.ಪಿ.ರಾಯಪ್ರಸಾದ ಚೌದರಿಯವರ ಪರಿಚಯವು ಪಂಡಿತರಿಗೆ ಆಗುತ್ತದೆ. ನಂತರ ಹೆಚ್ಚಿನ ಅಧ್ಯಯನಕ್ಕಾಗಿ ಮುಂಬೈಯಲ್ಲಿ ಸರ್.ಜೆ.ಜೆ.ಕಲಾ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಬೇಕೆಂಬ ಕನಸು ಮದ್ರಾಸನಿಂದ ಹಿಂದುರುಗಿದ ಮೇಲೆ ಮತ್ತಷ್ಟು ಹೆಚ್ಚಾಯಿತು. ಏನಾದರೂ ಮಾಡಿ ಮುಂಬೈಯಲ್ಲಿ ಚಿತ್ರಕಲಾ ಅಭ್ಯಾಸ ಮಾಡಲೇಬೇಕೆಂಬ ಉದ್ದೇಶದಿಂದ ಮುಂಬೈಯತ್ತ ಪ್ರಯಾಣ ಬೆಳೆಸುತ್ತಾರೆ.

ಆರ್ಥಿಕವಾಗಿ ಹಲವಾರು ತೊಂದರೆಗಳಿದ್ದರೂ ಚಿತ್ರಕಲೆ ಕಲಿಯುವ ಸಂಕಲ್ಪ ದೃಢವಾಗಿತ್ತು. ಮುಂಬೈಯಿಗೆ ಬಂದ ಪಂಡಿತರಿಗೆ ಮೊದಲ ವರ್ಷ ಸರ್. ಜೆ.ಜೆ.ಕಲಾ ಶಾಲೆಯಲ್ಲಿ ಪ್ರವೇಶ ದೊರೆಯಲಿಲ್ಲ. ಕರ್ನಾಟಕದವರಾದ ಜೆ.ಎಮ್.ದಂಡಾವತಿಮಠ ಮತ್ತು ಡಿ.ಜಿ.ಬಡಿಗೇರ ಅವರ ವಿಶೇಷ ಕಾಳಜಿಯಿಂದ ಪಂಡಿತರಿಗೆ ಎರಡನೆ ವರ್ಷದಲ್ಲಿ ಪ್ರವೇಶ ಸಿಗುತ್ತದೆ. ಅದರೊಂದಿಗೆ ಅರೆಕಾಲಿಕ ನೌಕರಿಗೂ ಸಹಕಾರ ಮಾಡುತ್ತಾರೆ. ಹಗಲು ಹೊತ್ತು ನೌಕರಿಗೆ ಹೋದರೆ ರಾತ್ರಿ ಚಿತ್ರಕಲಾ ಅಧ್ಯಯನ ಮಾಡಲು ದಂಡಾವತಿಮಠರು ಅನುಕೂಲ ಮಾಡಿಕೊಡುತ್ತಾರೆ. ಹೀಗೆ ಚಿತ್ರಕಲಾ ಅಧ್ಯಯನ ಮುಂದುವರಿಯುತ್ತದೆ.[೩]

ಪಂಡಿತರು ಜೆ.ಜೆ.ಕಲಾಶಾಲೆಯ ವಿಶೇಷ ಆಸಕ್ತಿಯೊಂದಿಗೆ ಅಧ್ಯಯನ ಮಾಡುವುದರೊಂದಿಗೆ ಹಲವಾರು ಬಹುಮಾನಗಳನ್ನು ಪಡೆದುಕೊಳ್ಳುವುದರೊಂದಿಗೆ ಕಲಾಶಾಲೆಯಿಂದ ಅಂತಿಮ ವರ್ಷದ

ವಿದ್ಯಾರ್ಥಿಗಳಿಗೆ ನೀಡುವ ಭಿತ್ತಿಚಿತ್ರ ರಚನೆಯ ಶಿಷ್ಯವೇತನವನ್ನು ಪಡೆದುಕೊಂಡರು. ಈ ಹಂತದಲ್ಲಿ ಎ.ಎ.ಭೋಸ್ಲೆ, ಕೆ.ಬಿ.ಚೂಡಕರ್, ಎಂ.ವ್ಹಿ.ದಂಡಾವತಿಮಠರವರಂತ ಪ್ರತಿಭಾನ್ವಿತ ಹೆಸರಾಂತ ಕಲಾ ಉಪನ್ಯಾಸಕರ ಮಾರ್ಗದರ್ಶನವು ಪಂಡಿತರಿಗೆ ದೊರೆಯಿತು. ಈ ಹಂತದಲ್ಲಿ ವರ್ಣಸಂಯೋಜನೆ, ರೇಖಾಚಿತ್ರಕಲೆ, ತಂತ್ರಗಾರಿಕೆಗಳು ಭಾವಚಿತ್ರ, ಸಂಯೋಜನಾಚಿತ್ರ, ವಸ್ತುಚಿತ್ರಣ, ನಿಸರ್ಗ ಚಿತ್ರಣ, ಹೀಗೆ ವಿಷಯಗಳ ಕುರಿತು ಅನುಭವಗಳನ್ನು ಪಡೆದು ಅವರೊಬ್ಬ ದೊಡ್ಡ ಕಲಾವಿದರಾಗುವ ಪೂರ್ವಭಾವಿ ಸಿದ್ಧತೆ ಇಲ್ಲಿಯೇ ಮಾಡಿಕೊಂಡರು.[೪]

ಕೌಟುಂಬಿಕ ಜೀವನ

೧೯೩೮ರಲ್ಲಿ ಎಸ್.ಎಮ್.ಪಂಡಿತರು ೨೨ನೆಯ ವಯಸ್ಸಿನಲ್ಲಿ ನಳಿನಿ ಎಂಬುವರೊಂದಿಗೆ ಮದುವೆಯಾಗುತ್ತಾರೆ. ಮುಂದೆ ಚಿತ್ರಕಲಾ ಕ್ಷೇತ್ರದಲ್ಲಿ ಹೆಸರುವಾಸಿಯಾದ ಪಂಡಿತರಲ್ಲಿ ಚಿತ್ರಕಲೆಯ ಶಿಕ್ಷಣ ಪಡೆಯಲು ಬಂದ ಕುಮಾರಿ ಶಾಂತಲಕ್ಷ್ಮಿಯವರೊಂದಿಗೆ ಪ್ರೇಮಾಂಕುರವಾಗಿ ೧೯೫೧ರಲ್ಲಿ ಎರಡನೆಯ ಮದುವೆಯಾಗುತ್ತಾರೆ. ನಳಿನಿಯರಿಗೆ ೧೧ ಮಕ್ಕಳು ಮತ್ತು ರಾಜಲಕ್ಷ್ಮೀಯವರಿಗೆ ೩ ಮಕ್ಕಳು ಒಟ್ಟು ೧೪ ಜನ ಮಕ್ಕಳೊಂದಿಗೆ ದೊಡ್ಡ ಕುಟುಂಬದ ಜವಾಬ್ದಾರಿಯನ್ನು ಪಂಡಿತರು ನಿಭಾಯಿಸಿದರು.

೧೯೯೧ರಲ್ಲಿ ಪಂಡಿತರ ಚಿತ್ರಕಲಾ ಪ್ರದರ್ಶನವು ಪುಣೆಯಲ್ಲಿ ನಡೆದಿತ್ತು. ಅದೇ ದಿನ ರಾಜಲಕ್ಷ್ಮಿ ತೀರಿಕೊಳ್ಳುತ್ತಾರೆ ೨೦೦೩ರಲ್ಲಿ ನಳಿನಿಯವರು ತೀರಿಕೊಳ್ಳುತ್ತಾರೆ ಇಬ್ಬರು ಹೆಂಡಂದಿರು ಇದ್ದರೂ ಅನ್ಯೋನ್ಯವಾದ ದಾಂಪತ್ಯ ಜೀವನವಾಗಿತ್ತೆಂದು ತಿಳಿದುಬರುತ್ತದೆ.

ಕಲಾ ಬದುಕು

ಜೆ.ಜೆ.ಕಲಾಶಾಲೆಯಿಂದ ಪದವೀಧರರಾಗಿ ಹೊರಬಂದ ಪಂಡಿತರು ಪೋಸ್ಟರ್ ಡಿಝಾಯನಗಳನ್ನು ಚಿತ್ರಿಸುವುದರೊಂದಿಗೆ ತಮ್ಮ ಕಲಾ ಜೀವನವನ್ನು ಪ್ರಾರಂಭಿಸಿದರು. ಈ ದಿಸೆಯಲ್ಲಿ "ಭಾರತದಲ್ಲಿ ಪೋಸ್ಟರ್ ಕಲಾಕೃತಿಗಳನ್ನು ಪ್ರಾರಂಭಿಸಿದ ಪ್ರಥಮ ಕಲಾವಿದ" ಎಂಬ ಶ್ರೇಯಸ್ಸು, ಕೀರ್ತಿ ಪಂಡಿತರಿಗೆ ಸಲ್ಲುತ್ತದೆ. "ಪೋಸ್ಟರ್ ಪ್ರಭುತ್ವವನ್ನು" ಕುರಿತು ಕೇಳಿದ ವಿಶ್ವವಿಖ್ಯಾತ ಚಲನಚಿತ್ರ ನಿರ್ಮಾಪಕ ಮೆಟ್ರೋ ಗೋಲ್ಡ್‌ವಿನ್ ಮೇಯರ್ (ಎಂ.ಜಿ.ಎಂ.ಪಿಕ್ಚರ್ಸ್ ಹಾಲಿವುಡ್) ಅವರು ತಮ್ಮ ಮುಂಬಯಿಯ ಸುಪ್ರಸಿದ್ಧ "ಮೆಟ್ರೋ" ಥಿಯೇಟರಿನಲ್ಲಿ ಬಿಡುಗಡೆಯಾಗುವ ಹೊಸ ಚಲನಚಿತ್ರಗಳ ಭಿತ್ತಿ ಪತ್ರಗಳಿಂದ ಥಿಯೇಟರನ್ನು ಅಲಂಕರಿಸಲು ಪಂಡಿತಜೀ ಅವರ ಸೇವೆಯನ್ನು ಪಡೆದುಕೊಂಡ ಕಾರಣವಾಗಿ ಎಂ.ಜಿ.ಎಂ.ಅವರಿಗಾಗಿ ಪೋಸ್ಟರ್ ಡಿಝಾಯನ್‌ಗಳನ್ನು ತಯಾರಿಸಿಕೊಟ್ಟ ಪ್ರಥಮ ಭಾರತೀಯ ಕಲಾವಿದನೆಂಬ ಹೆಗ್ಗಳಿಕೆ ಅವರದು. ಸುಮಾರು ಕ್ರಿ.ಶ.೧೯೩೮ ರಿಂದ ಹದಿಮೂರು ವರ್ಷಗಳ ಕಾಲ ಚಲನಚಿತ್ರ ಪ್ರಪಂಚಕ್ಕೆ ನೀಡಿದ ಕಾಣಿಕೆ ಅತ್ಯಮೋಘ.[೫]

ಇಲ್ಲಿಂದ ಹಲವಾರು ಚಲನಚಿತ್ರಗಳ ಸಂಯೋಜನಾ ಚಿತ್ರಗಳು ಭಾವಚಿತ್ರಗಳನ್ನು ವೈವಿಧ್ಯಮಯವಾಗಿ ಸುಮಾರು ಎರಡು ದಶಕಗಳ ಕಾಲ ಪಂಡಿತರು ಗಟ್ಟಿಯಾಗಿ ನಿಂತು ಕಲಾಕೃತಿ ರಚಿಸುತ್ತದೆ.

ಪೋಸ್ಟರ್ ಜಲವರ್ಣವನ್ನು ವೈವಿಧ್ಯಮಯವಾಗಿ ಅನೇಕ ತಂತ್ರ ಶೈಲಿಗಳಲ್ಲಿ ಪ್ರಯೋಗ ಮಾಡಿ ನಟನಟಿಯರ ಭಾವಚಿತ್ರಗಳನ್ನು ವಾಸ್ತವ ಸೌಂದರ್ಯಕ್ಕಿಂತ ಸುಂದರವಾಗಿ ಪಂಡಿತರ ಕಲಾಕೌಶಲ್ಯದಿಂದ ಅಭಿವ್ಯಕ್ತಿಪಡಿಸುತ್ತಿದ್ದರು. ಹೀಗಾಗಿ ಯಾವ ಭಾವಚಿತ್ರವನ್ನು ಚಲನಚಿತ್ರದ ವಿನ್ಯಾಸದಲ್ಲಿ ಬಳಸಿದ್ದಾರೆ. ಹಾಗೂ ಎಷ್ಟು ಸುಂದರವಾಗಿ ಚಿತ್ರಿಸಿದ್ದಾರೆಂದು ನೋಡಲು ಉತ್ಸುಕರಾಗಿ ನಾಯಕ-ನಾಯಕಿಯರು ಹಾತೊರೆಯುತ್ತಿದ್ದರು. ಪಂಡಿತರು ಹಗಲು-ರಾತ್ರಿ ಕಲಾಕೃತಿಗಳನ್ನು ರಚಿಸುತ್ತಿದ್ದರು. ಪಂಡಿತರು ನೀಡಿದ ದಿನಾಂಕದವರೆಗೂ ಕಾದು ತಮ್ಮ ಭಾವಚಿತ್ರಗಳನ್ನು ತೆಗೆದುಕೊಂಡು ಹೋಗುವ ಅನಿವಾರ್ಯ ಸಂದರ್ಭವಿತ್ತು. ಕೆಲವೊಮ್ಮೆ ಕೃತಿರಚನೆ ಮುಗಿಯದಿದ್ದುದ್ದಕ್ಕೆ ಚಲನಚಿತ್ರದ ಬಿಡುಗಡೆ ಸಮಾರಂಭದ ದಿನಾಂಕವನ್ನು ಮುಂದುವರಿಸಿದ ಉದಾಹರಣೆಗಳು ಸಾಕಷ್ಟಿದೆ.[೬]

ಚಲನಚಿತ್ರ ಕ್ಷೇತ್ರದ ನಂತರ ಪಂಡಿತರು ರಚಿಸಿದ ಕಲಾ ಕೃತಿಗಳನ್ನು ಹೆಚ್ಚಾಗಿ ಕ್ಯಾಲೆಂಡರ್ ಮುದ್ರಣಕ್ಕಾಗಿ ಬಳಸಿರುವಂತೆ ಕಂಡುಬರುತ್ತದೆ. ರಾಮಾಯಣ, ಮಹಾಭಾರತ, ವಿಷ್ಣುಧರ್ಮೋತ್ತರ ಪುರಾಣದ ಮತ್ತು ರೂಪದರ್ಶಿಗಳ ಭಾವಚಿತ್ರಗಳ ವಸ್ತುವಿಷಯಗಳಿಂದಾಯ್ದು ಕಲಾಕೃತಿಗಳನ್ನು ಪಂಡಿತರು ರಚಿಸಿದ್ದಾರೆ. ಇವುಗಳನ್ನು ಕಂಪನಿಯವರು ಜಾಹಿರಾತಿಗಾಗಿ ಕ್ಯಾಲಂಡರಿನ ವಿನ್ಯಾಸಕ್ಕಾಗಿ ಬಳಸುತ್ತಿದ್ದರು.[೭] ಎಸ್.ಎಂ.ಪಂಡಿತರು ಯಾವುದೇ ಒಂದು ಶೈಲಿಗೆ, ಸೀಮಿತವಾಗಿ ಕಲಾಕೃತಿ ರಚಿಸದೆ ಅನೇಕ ಶೈಲಿಗಳಲ್ಲಿ ಕಲಾಕೃತಿಗಳನ್ನು ರಚಿಸಿ ಹೊಸ-ಹೊಸ ತಂತ್ರಗಳನ್ನು ಶೋಧಿಸುತ್ತಿದ್ದರು. ಚಲನಚಿತ್ರ ಕ್ಯಾಲೆಂಡರ್ ಮಾಧ್ಯಮದ ಚಿತ್ರಗಳ ನಂತರ ನಮಗೆ ಕಂಡುಬರುವುದು ವೈವಿಧ್ಯಮಯವಾದ ಭಾವಚಿತ್ರಗಳ ನಂತರ ಅವರು ರಚಿಸಿದ ಭಾವಚಿತ್ರಗಳು ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿವೆ. ವಿದೇಶಿಯರ ಪ್ರಶಂಸೆಗೆ ಪಾತ್ರವಾಗಿವೆ. ವಿದೇಶಿಯರು ಎಸ್.ಎಂ.ಪಂಡಿತ್ ಭಾರತದ ರೆಂಬ್ರಾಂಟ್ ಎಂದೇ ಗುರುತಿಸುತ್ತಾರೆ. ೧೯೭೮ರಲ್ಲಿ ರಚಿಸಿದ ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ಆಧಾರವಾಗಿಟ್ಟುಕೊಂಡು ತೈಲವರ್ಣ ಮಾಧ್ಯಮದ ಕಂಚಿನ ಮೂರ್ತಿ ರಚಿಸಲಾಗಿದೆ.[೮]

ಶಿವಸೇನಾ ಪ್ರಮುಖ ಬಾಳಠಾಕ್ರೆ, ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಮಹಾರಾಷ್ಟ್ರದ ಗವರ್ನರ್, ಸಿ.ಸುಬ್ರಹ್ಮಣ್ಯಂ, ಇಂದಿರಾಗಾಂಧಿ, ದೀನಾನಾಥ ಮಂಗೇಸ್ಕರ್, ಸುಶೀಲಾರಾಣಿ ಪಟೇಲ್ ಹಾಗೂ ಆಂಥೋನಿ ಮಾಸ್ಕರನ್ ಹೆನ್ಸ್ ಸರ್.ಎಂ.ವಿಶ್ವೇಶ್ವರಯ್ಯ ಬಿ.ಆರ್.ಅಂಬೇಡ್ಕರ್ ಹೀಗೆ ಮುಂತಾದ ದೇಶ ವಿದೇಶದ ಗಣ್ಯವ್ಯಕ್ತಿಗಳ ನಾಯಕ ನಾಯಕಿಯರ ಭಾವಚಿತ್ರಗಳನ್ನು ಎಸ್.ಎಂ.ಪಂಡಿತರು ಚಿತ್ರಿಸಿದ್ದಾರೆ.

ಪಂಡಿತರು ವ್ಯಕ್ತಿ ಚಿತ್ರಗಳನ್ನು ತದ್ರೂಪತೆ ವಿಶಿಷ್ಟ ರೀತಿಯಲ್ಲಿ ಕಣ್ಣು ತುಟಿಯ ಮುಖಾಂತರ ಅಭಿವ್ಯಕ್ತಿಗೊಳಿಸಿ ಪರಿಪೂರ್ಣತೆ ಪಡೆಯುವುದರಲ್ಲಿ ಯಶಸ್ವಿಯಾಗಿದ್ದರು. ಮುಖದಲ್ಲಿ ಮನೋಭಾವನೆಗಳ ಜೀವಂತಿಕೆಯ ಕಳೆಯನ್ನು ಸ್ನಾಯುಗಳ ಅಲ್ಪ ಬದಲಾವಣೆಯಿರದೆ ಅಭಿವ್ಯಕ್ತಿಸುವ ಕೃತಿ ಅವರದಾಗಿತ್ತು. ೧೯೩೬ರಿಂದ ೧೯೮೯ರ ಅವಧಿಯಲ್ಲಿ ಅವರು ರಚಿಸಿದ ವಾಸ್ತವಿಕ ವ್ಯಕ್ತಿಚಿತ್ರಗಳು ಅವರ ಕಲಾ ನೈಪುಣ್ಯವನ್ನು ಎತ್ತಿ ತೋರಿಸುವ ಅದ್ಭುತ ಕಲಾಕೃತಿಗಳು ಸ್ವಾಮಿ ವಿವೇಕಾನಂದರ ತೇಜೋದಯ. ವ್ಯಕ್ತಿತ್ವ ಲೌಕಿಕವನ್ನು ಮೀರಿ ಬೆಳೆದುನಿಂತ ಎತ್ತರದ ನಿಲುವು ಕನ್ಯಾಕುಮಾರಿಯಲ್ಲಿರುವ ತೈಲಚಿತ್ರ. ಗಾಂಧೀಜಿಯವರ ಮುಖದ ಮೇಲೆ ಅಹಿಂಸೆ. ಇಂದಿರಾ ಗಾಂಧಿಯವರ ದಿಟ್ಟತನ. ಬ್ರಿಟೀಷ್ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ಸ್ನೇಹಿತರ ಅಸಂಖ್ಯಾತ ಭಾವಚಿತ್ರಗಳು ಪಂಡಿತರ ವ್ಯಕ್ತಿಚಿತ್ರಣ. ವೈಭವವನ್ನು ಮೆರೆಯುವ ಶ್ರೇಷ್ಠ ಕಲಾಕೃತಿಗಳಾಗಿವೆ ಮುಖದ ಮೇಲಿನ ಭಾವ್ಯಭಿವ್ಯಕ್ತಿ, ಅಪೂರ್ವವಾಗಿವೆ.[೯]

ಪಂಡಿತರು ಚಿತ್ರಿಸಿದ ಭಾವಚಿತ್ರ ಹಾಗೂ ಸಂಯೋಜನಾ ಚಿತ್ರಗಳಲ್ಲಿ ನೈಜತೆಯೇ ಪ್ರಧಾನವಾದ ಆಶಯವಾಗಿದೆ. ಇವರ ಕೃತಿಗಳಲ್ಲಿ ಪೌರಾತ್ಯ ಕಲಾವಿದರ ಪ್ರಭಾವ ಕಂಡುಬಂದರೂ. ಚಿತ್ರದ ವಸ್ತು ಭಾರತೀಯದ್ದೇ ಆಗಿದೆ. ನಮ್ಮ ರಾಷ್ಟ್ರವಲ್ಲದೆ ವಿದೇಶದ ಹೆಸರಾಂತ ವ್ಯಕ್ತಿಗಳ ಸಾಕಷ್ಟು ಭಾವಚಿತ್ರಗಳು ಪಂಡಿತರಿಂದ ಚಿತ್ರಿಸಲ್ಪಟ್ಟಿವೆ. ಈ ಭಾವಚಿತ್ರಗಳಲ್ಲಿ ವ್ಯಕ್ತಿಗಳ ಭಾವವನ್ನು ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಿಸಿದ್ದು. ಈ ಚಿತ್ರಗಳು ಮುದ್ರಿತಗೊಂಡು ವಿಶ್ವದಾದ್ಯಂತ ಪ್ರಸಿದ್ಧಿ ಪಡೆದಿವೆ.[೧೦]

ಭಾರತೀಯ ಹೈಕಮಿಷನ್ ಹಾಗೂ ಲಂಡನ್ನಿನಲ್ಲಿರುವ ಭಾರತೀಯ ಕಲಾವಿದ ಮಿತ್ರರ ಒತ್ತಾಸೆ ಮೇರೆಗೆ ೧೯೭೮ ಆಗಸ್ಟ್ ತಿಂಗಳಲ್ಲಿ ಲಂಡನ್ನಿನ ಇಂಡಿಯಾ ಹೌಸ್‌ನಲ್ಲಿ ಪಂಡಿತರ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಲಾಗುತ್ತದೆ. ಅಲ್ಲಿನ ಲಂಡನ್ನಿನ ನ್ಯೂಸ್. ಪತ್ರಿಕೆಯು "ಪೌರಾಣಿಕ ಚಿತ್ರಗಳ ಈ ಪ್ರದರ್ಶನ. ಕಾಳಿದಾಸನ ಅಭಿಜ್ಞಾನ ಶಾಕುಂತಲದ ಅಭಿನಯಾತ್ಮಕ ದೃಶ್ಯಗಳ ವೈಭವವನ್ನು ನೋಡುವ ಅವಕಾಶ ಒದಗಿಸಿತು ಎಂದು ಮೆಚ್ಚುಗೆ ವ್ಯಕ್ತಪಡಿಸಿದೆ. ಈ ಪ್ರದರ್ಶನ ಪಂಡಿತರಿಗೆ ಎಲ್ಲಿಲ್ಲದ ಖುಷಿ ತಂದಿದೆ. ೧೯೭೮ರಲ್ಲೇ ಲಂಡನ್ನಿನ ಪ್ರತಿಷ್ಠಿತ ರಾಯಲ್ ಸೊಸೈಟಿಯ ಫೆಲೋಷಿಪ್‌ಗೆ ಆಯ್ಕೆಯಾಗುತ್ತಾರೆ.[೧೧]

ಹೀಗೆ ಕಲೆಯ ಮೂಲಕ ರಾಜ್ಯ. ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡು. ಕಲಾಕೀರ್ತಿಗೆ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕ ಲಲಿತ ಕಲಾ ಅಕಾಡೆಮಿ ೧೯೮೩ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ೧೯೮೮ರಲ್ಲಿ ಕರ್ನಾಟಕ ರಾಜ್ಯೋತ್ಸವದ. ಗುಲಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಸನ್ಮಾನಿಸಿದೆ.

ಪ್ರಧಾನಿ ಮಾರ್ಗರೇಟ್ ಥ್ಯಾಚರ್‌ಭಾವಚಿತ್ರ

ವ್ಯಕ್ತಿಯ ಆಂತರಿಕ. ಬಾಹ್ಯ ಸೌಂದರ್ಯದ ಎಳೆಯನ್ನು ಹಿಡಿದು ಅವರಲ್ಲಿದ್ದ ಅನುಭೂತಿಯ ತೊಡಕುಗಳನ್ನು ಬಿಚ್ಚುತ್ತದೆ. ವ್ಯಕ್ತಿ ಚಿತ್ರಣ ವೈಭವ ತದ್ರೂಪಿತ. ಮಂದಹಾಸ ನಗು. ಮೈ ಬಣ್ಣ ನೈಜತೆಯ

ವರ್ಣಗಳ ಮಿಶ್ರಣದಿಂದ ಲೇಪಿಸಿದ ಕುಂಚಗಳ ಸೆಳೆತ ಎಸ್.ಎಂ.ಪಂಡಿತರ ಕಲಾಕೃತಿಗಳಿಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಮಾರ್ಗರೇಟ್ ಥ್ಯಾಚರ್ ಭಾವಚಿತ್ರದಲ್ಲಿ ಇದೊಂದು ಛಾಯಾಚಿತ್ರಕ್ಕೆ ರೂಪದರ್ಶಿಯಾಗಿರಬೇಕು. ಎಂಬ ಭ್ರಮೆ ಮುಖದಲ್ಲಿನ ಜೀವಂತಿಕೆಯ ಕಳೆ ಮತ್ತು ಪಂಡಿತರ ತಂತ್ರ, ಶೈಲಿಯು ನೋಡುಗರನ್ನು ಮಂತ್ರ ಮುಗ್ಧರಾಗಿಸುತ್ತದೆ.

ಇಂದಿರಾ ಗಾಂಧಿ ಭಾವಚಿತ್ರ

ತೈಲವರ್ಣದಲ್ಲಿ ಚಿತ್ರಿಸಿದ ಇಂದಿರಾಗಾಂಧಿ ಅವರ ಭಾವಚಿತ್ರವು ನೈಜ ಚಿತ್ರಣದ ಮೂಲಕ ನೋಡುಗರನ್ನು ಬೆರಗುಗೊಳಿಸುವುದು ರೂಪದರ್ಶಿಯ ಫೋಟೋಗ್ರಫಿಯ ಛಾಯೆಯನ್ನು ಮೀರಿಸುವಂಥ ಒಂದು ಕಲಾಕೃತಿಗಳಿಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಮುಖದಲ್ಲಿ ಮಂದಹಾಸ ನಗು ಅಷ್ಟೇ ಸೂಕ್ಷ್ಮವಾಗಿ ಬಿಳಿ ಮತ್ತು ಕಪ್ಪು ವರ್ಣದ ಕೂದಲು ಇಂದಿರಾಗಾಂಧಿಯ ಸೌಂದರ್ಯ ಅತ್ಯಂತ ಸೂಕ್ಷ್ಮವಾಗಿ ನೆರಳು, ಬೆಳಕಿನ ಛಾಯೆಯನ್ನು ವರ್ಣಗಳ ಮೂಲಕ ಜೀವಕಳೆ ತುಂಬಿಸಿದ್ದಾರೆ. ಎಸ್.ಎಂ.ಪಂಡಿತರು.

ಹೀಗೆ ನೈಜ ಚಿತ್ರಣದ ಮೂಲಕ ನೋಡುಗನನ್ನು ಬೆರಗುಗೊಳಿಸುವ ಶೈಲಿ ತಮ್ಮದಾಗಿಸಿಕೊಂಡು ಶ್ರದ್ಧೆ ಮತ್ತು ಭಕ್ತಿಯಿಂದ ಹಲವಾರು ಮಾಧ್ಯಮದಲ್ಲಿ ಪ್ರಯೋಗ ಮಾಡಿ ಕೌಶಲ್ಯದ ವೈಶಿಷ್ಟತೆಯನ್ನು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿದ ಅಪೂರ್ವ ಕಲಾವಿದರು ಎಸ್.ಎಂ.ಪಂಡಿತರು.

ಮಹಾತ್ಮ ಗಾಂಧೀಜಿ ಭಾವಚಿತ್ರ

ಚಿತ್ರದಲ್ಲಿ ವಾಸ್ತವಿಕತೆ ಎಂದರೆ ವಸ್ತು ಮತ್ತು ವ್ಯಕ್ತಿಗಳಲ್ಲಿರುವ ಸತ್ಯವನ್ನು ಅಂಗ ಉಪಾಂಗ್‌ಗಳೊಂದಿಗೆ ಛಾಯೆ ಪ್ರತಿಛಾಯೆಯೊಂದಿಗೆ ಚಿತ್ರಿಸುವ ವಿಧಾನ. ವಾಸ್ತವಿಕ ಶೈಲಿಯಲ್ಲಿ ವ್ಯಕ್ತಿ ಚಿತ್ರಗಳನ್ನು ರಚಿಸುವಾಗ ವ್ಯಕ್ತಿಯ ಮುಖ ಲಕ್ಷಣ ಹೋಲಿಕೆ, ತದ್ರೂಪಿತ ಕಡೆಗೆ ಗಮನ ಕೊಡಬೇಕಾಗುತ್ತದೆ. ವ್ಯಕ್ತಿಯ ಅಂತರಂಗದ ಭಾವನೆಗಳನ್ನು ನೆರಳು ಬೆಳಕಿನ ಸಹಾಯದೊಂದಿಗೆ ಗಾಂಧೀಜಿಯವರ ಮುಖದ ಮೇಲಿನ ಅಹಿಂಸೆ. ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.[೨೨]

೪) ಸ್ವಾಮಿ ವಿವೇಕಾನಂದರ ಭಾವಚಿತ್ರ

ಕನ್ಯಾಕುಮಾರಿಯಲ್ಲಿರುವ ಆಳೆತ್ತರದ ಸ್ವಾಮಿ ವಿವೇಕಾನಂದರ ಭವ್ಯ ತೈಲಚಿತ್ರ ಪಂಡಿತರ ಕಲಾವೈಖರಿಯನ್ನು ಪ್ರತಿನಿಧಿಸುವ ಪ್ರತ್ಯಕ್ಷ ನಿದರ್ಶನ. ಈ ಚಿತ್ರದ ಪ್ರಾರಂಭದಿಂದ ಪೂರ್ಣಗೊಳ್ಳುವವರೆಗೆ ಅವರು ಉಪವಾಸ ವ್ರತಾಚಾರಣೆಯನ್ನು ಮಾಡಬೇಕಾಯಿತು.

“ಸ್ವಾಮಿ ವಿವೇಕಾನಂದರದು ತೇಜೋಮಯ ವ್ಯಕ್ತಿತ್ವ. ಲೌಕಿಕರನ್ನು ಮೀರಿ ಬೆಳೆದು ನಿಂತ ಸ್ವಾಮೀಜಿಯವರ ಎತ್ತರದ ನಿಲುವು. ಅವರ ಮನಸ್ಸಿನಲ್ಲಿ ಆಳವಾಗಿ ಬೇರೂರಿ ಕೊರೆಯುತ್ತಿದ್ದ ಪ್ರಪಂಚದ ಭವಿಷ್ಯದ ಚಿಂತನ. ತನ್ಮೂಲಕ ಪ್ರಪಂಚದ ಒಳಿತಿಗಾಗಿ ‘ನಾನು ಏನನ್ನಾದರೂ ಸಾಧಿಸಬಲ್ಲೆ’ನೆಂಬ ಮನೋಸ್ಥೈರ್ಯಗಳು. ಈ ಚಿತ್ರದಲ್ಲಿ ಸ್ವಾಮೀಜಿಯವರ ವ್ಯಕ್ತಿತ್ವಕ್ಕೆ ಧಕ್ಕೆ ಬರದಂತೆ ಉದಾತ್ತವಾಗಿ

ಮೂಡಿಬರಲು ನಾನು ಉಪವಾಸ ವ್ರತವನ್ನು ಆಚರಿಸುವುದು ಅಗತ್ಯವಾಗಿತ್ತು." ಎಂದು ಹೇಳುತ್ತಾರೆ. ಪಂಡಿತಜೀ.[13]

ಈ ಚಿತ್ರದಲ್ಲಿ ಪ್ರಮಾಣ ಬದ್ಧ, ಅಳತೆ, ವರ್ಣ ಮಿಶ್ರಣದಲಿ ಅದ್ವಿತೀಯ ಸಾಧನೆಗೈದು ತಮ್ಮ ವಿಶಿಷ್ಟ ತಂತ್ರ ಶೈಲಿ ಹೆಚ್ಚು ಸೌಂದರ್ಯವಾಗಿ ಕಾಣಿಸುವಲ್ಲಿ ಯಶಸ್ವಿಯಾಗಿ ನಿರೂಪಿಸಿದ್ದಾರೆ.

ಅಡಿ ಟಿಪ್ಪಣಿ :

೧) ಎಸ್.ಎಂ.ಪಂಡಿತ-ವಿ.ಟಿ.ಕಾಳೆ ಪುಟ-೧/೨

೨) ಎಸ್.ಎಂ.ಪಂಡಿತ-ವಿ.ಟಿ.ಕಾಳೆ ಪುಟ-೩/೪

೩) ಚಿತ್ರಕಲಾವಿದ-ಡಾ.ಎಸ್.ಎಂ.ಪಂಡಿತ-ಡಾ.ಮೋಹನ.ಬಿ. ಪಾಂಚಾಳ.ಪುಟ-೪

೪) ಚಿತ್ರಕಲಾವಿದ-ಡಾ.ಎಸ್.ಎಂ.ಪಂಡಿತ-ಡಾ.ಮೋಹನ.ಬಿ. ಪಾಂಚಾಳ.ಪುಟ-೫

೫) ಚಿತ್ರಕಲಾವಿದ-ಡಾ.ಎಸ್.ಎಂ.ಪಂಡಿತ-ಡಾ.ಮೋಹನ.ಬಿ. ಪಾಂಚಾಳ.ಪುಟ-೭

೬) ಚಿತ್ರಕಲಾವಿದ-ಡಾ.ಎಸ್.ಎಂ.ಪಂಡಿತ-ಡಾ.ಮೋಹನ.ಬಿ. ಪಾಂಚಾಳ.ಪುಟ-೬/೭

೭) ಚಿತ್ರಕಲಾವಿದ-ಡಾ.ಎಸ್.ಎಂ.ಪಂಡಿತ-ಡಾ.ಮೋಹನ.ಬಿ. ಪಾಂಚಾಳ.ಪುಟ-೭

೮) ಚಿತ್ರಕಲಾವಿದ-ಡಾ.ಎಸ್.ಎಂ.ಪಂಡಿತ-ಡಾ.ಮೋಹನ.ಬಿ. ಪಾಂಚಾಳ.ಪುಟ-೯

೯) ದೃಶ್ಯಬೆಳಕು ಸಂ.:ಡಾ.ಪರಶುರಾಮ.ಪಿ.-ಪುಟ-೫೧

೧೦) ಚಿತ್ರಲೇಖ-ಡಾ.ಮಲ್ಲಿಕಾರ್ಜುನ ಸಿ.ಬಾಗೋಡಿ-೬೭

೧೧) ದೃಶ್ಯ ಬೆಳಕು-ಸಂ.ಡಾ.ಪರಶುರಾಮ.ಪಿ.-ಪುಟ-೧೩

೧೨) ದೃಶ್ಯ ಬೆಳಕು-ಸಂ.ಡಾ.ಪರಶುರಾಮ.ಪಿ.-ಪುಟ-೫೦

೧೩) ಎಸ್.ಎಂ.ಪಂಡಿತ-ವಿ.ಟಿ.ಕಾಳೆ-ಪುಟ-೧೩

ಎಸ್.ಎಂ.ಪಂಡಿತ್ ಅವರ ಭಾವಚಿತ್ರಗಳು



ಮಾರ್ಗರೇಟ್ ಥ್ಯಾಚರ್
ಭಾವಚಿತ್ರ ೧

ಗಾಂಧೀಜಿ ಅವರ
ಭಾವಚಿತ್ರ ೨



ಎಸ್.ಎಂ.ಪಂಡಿತ್ ಅವರ ಭಾವಚಿತ್ರಗಳು



ಇಂದಿರಾ ಗಾಂಧಿ
ಭಾವಚಿತ್ರ ೩

ಸ್ವಾಮಿ ವಿವೇಕಾನಂದರ
ಭಾವಚಿತ್ರ ೪





ಎಂ.ಆರ್.ಬಾಳಿಕಾಯಿ



ಕಲಾವಿದನನ್ನು ವಿಶೇಷ ವ್ಯಕ್ತಿ ಎಂದು ತಿಳಿಯದೇ ಹೋದರೂ ಅವನ ಸ್ವಭಾವ, ಮಾನಸಿಕ ಪ್ರವೃತ್ತಿ, ಗುಣ, ಅವನ ಸೌಂದರ್ಯ ಗುಣಗ್ರಹಣದ ಬಗೆಗಿನ ತೀವ್ರತೆ ಹಾಗೂ ಸಂವೇದನಾಶೀಲತೆಯನ್ನು ಬೆಳೆಸಿಕೊಂಡು ಬರಲು ಅವನಿಗೆ ವಿಶೇಷವಾದ ಉಪಚಾರ ಹಾಗೂ ಪರಿಸರವನ್ನು ಒದಗಿಸುವ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ. ಕಲೆ ಹುಟ್ಟನಿಂದ ಬರುವಂತಹದು ಎಂದು ಬಹುಜನರು ಹೇಳುತ್ತಾರೆ. ಆದರೆ ಹುಟ್ಟಿನಿಂದಲೇ ಕಲಾವಿದರಾಗಿರುವವರು ವಿರಳ. ಒಳ್ಳೇ ಪರಿಸರ ಒಬ್ಬ ಒಳ್ಳೇ ಕಲಾವಿದನನ್ನು ಸೃಷ್ಟಿಸಬಹುದು ಎಂಬುದನ್ನು ಅನೇಕರು ಒಪ್ಪುತ್ತಾರೆ.

ಪರಿಸರದಲ್ಲಿ ಬೆಳೆದು ಕಲಾವಿದರಾದವರೇ ಬಹಳಷ್ಟು ಜನ ಹುಟ್ಟು ಕಲಾವಿದರು ಅಸಾಧಾರಣ ಬುದ್ಧಿ ಶಕ್ತಿ ಹೊಂದಿದ್ದು ಪ್ರತಿಭಾವಂತರಾಗಿರುತ್ತಾರೆ. ಸೂಕ್ಷ್ಮ ಮನಸ್ಸಿನ ಶೀಘ್ರಗ್ರಾಹಿಗಳಾಗಿರುತ್ತಾರೆ. ಮಾನಸಿಕ ಉದ್ವೇಗ, ಉದ್ರೇಕ, ಆವೇಶ ಹಾಗೂ ಕಳವಳದ ಭಾವದ ವಿಲಕ್ಷಣವಾದ ಹುಚ್ಚು ಸ್ವಭಾವದಿಂದ ಕೂಡಿದವರಾಗಿರುತ್ತಾರೆ. ಅಲ್ಲದೇ ಅದ್ಭುತವಾದ ಅಂತರ ದೃಷ್ಟಿ, ಅಂತಃಸ್ಫೂರ್ತಿ ಹಾಗೂ ಒಳ ಅರಿವನ್ನು ಹೊಂದಿದವರಾಗಿರುತ್ತಾರೆ. ಅವರಿಗೆ ಊಹಾತ್ಮಕ, ಕಲ್ಪನಾಶಕ್ತಿ, ಭಾವನಾ ಶಕ್ತಿ, ಯೋಚನಾಶಕ್ತಿ, ತರ್ಕಶಕ್ತಿ, ಇವೆಲ್ಲಾ ಮೈಗೂಡಿಸಿಕೊಂಡಿರುತ್ತಾರೆ ಈ ಕಾರಣಕ್ಕಾಗಿ ಹುಟ್ಟು ಕಲಾವಿದ ಎಲ್ಲಿಲ್ಲದ ಸೃಜನಶೀಲತೆಯನ್ನು ಹೊಂದಿರುತ್ತಾನೆ ಸ್ವಂತಿಕೆಯನ್ನು ಪಡೆದವನಾಗಿರುತ್ತಾನೆ.[೧]

ಅಂಥ ಕಲಾವಿದರಾದ ಬೆಳಗಾವಿ ಜಿಲ್ಲೆ, ಹುಕ್ಕೇರಿ ತಾಲೂಕಿನ ಹೆಬ್ಬಾಳದಲ್ಲಿ ೦೧-೦೬-೧೯೪೧ ರಂದು ಮಹಾವೀರ ರಾಯಪ್ಪ ಬಾಳಿಕಾಯಿ ಅವರ ಜನನವಾಯಿತು. ತಾಯಿ ಅಮ್ಮವ್ವ ತಂದೆ ರಾಯಪ್ಪ ಬಡ ಕೃಷಿಕರು, ವಂಶಪಾರಂಪರ್ಯವಾಗಿ ಬಂದಿದ್ದ ಬಾಳೇತೋಟದ ಹಾಗೂ ಅದರ ವ್ಯಾಪಾರದಿಂದ ಮನೆತನಕೆ ಬಂದ ಹೆಸರು "ಬಾಳಿಕಾಯಿ" ಕುಲದ ಹೆಸರಿನ ಜೊತೆಗೆ "ಮಹಾವೀರ" ಎಂದಾಗಲೆ ಇವರು ಜೈನ ಸಮುದಾಯದವರೆಂದು ತಿಳಿಯಬೇಕು. ಭಾರತೀಯ ಚಿತ್ರ, ಶಿಲ್ಪ, ವಾಸ್ತು ಕಲಾಪ್ರಪಂಚಕ್ಕೆ ಜೈನ ಸಮುದಾಯದ ಕಾಣಿಕೆ ಅತ್ಯಂತ ಮಹತ್ತರವಾದುದು. ಬಾಲ್ಯದಲ್ಲಿಯೇ ಕಲೆಯ ಬಗ್ಗೆ ಆಸಕ್ತಿ ಇದ್ದರೂ ಕ್ರಮಬದ್ಧವಾಗಿ ಕಲಿಯಲಾರದಂತಹ ಪರಿಸ್ಥಿತಿ. ಹೆಬ್ಬಾಳ ಸಂಕೇಶ್ವರದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ವ್ಯಾಸಂಗ ಮಾಡಿದರು. ಶಾಲೆಯಲ್ಲಿ ಚಿತ್ರಕಲೆಯನ್ನು ಒಂದು ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರು. ಬಿಡುವಿನ ವೇಳೆಯಲ್ಲಿ ಚಿತ್ರಶೀಲ, ಕರಕುಶಲ ವಸ್ತುಗಳನ್ನು ನಿರ್ಮಿಸಿ ಕಲಾಭಿರುಚಿ ಬೆಳೆಸಿಕೊಂಡರು. ಹಾಗೂ ಡ್ರಾಯಿಂಗ್ ಲೋಯರ್ ಮತ್ತು ಹೈಯರ್ ಗ್ರೇಡ್ ಪರೀಕ್ಷೆಗಳನ್ನು ಮಾಡಿದರು.

ಕಲಾ ಶಿಕ್ಷಣ

ಮಹಾವೀರರು ಮುಂದೆ ಚಿತ್ರಕಲಾ ಅಭ್ಯಾಸ ಮಾಡಲು ಗದುಗಿನ ವಿಜಯ ಕಲಾ ಮಂದಿರದಲ್ಲಿ ಪ್ರವೇಶ ಪಡೆದರು. ಆಗ ದಿನಪತ್ರಿಕೆಗಳಲ್ಲಿ ರ್‍ಯಾಂಕ್ ಬಂದ ವಿದ್ಯಾರ್ಥಿಗಳ ಹೆಸರು ಮತ್ತು ಫೋಟೋ

ಪ್ರಕಟವಾಗಿದ್ದನ್ನು ನೋಡಿ, ಇವರು ಗದುಗಿನ ವಿಜಯ ಕಲಾ ಮಂದಿರವೆಂದು ಗೊತ್ತಾಯ್ತು. ಕಾರಣ ಅಲ್ಲಿಯೇ ಪ್ರವೇಶ ಪಡೆಯಲು ಪ್ರೇರಣೆಯಾಯಿತು.

ಅವರ ಅಣ್ಣನವರಾದ ಬಾಬುರಾವ್ ಬಾಳೆಬಾಯಿಯವರು ಇವರನ್ನು ಕರೆದುಕೊಂಡು ಹೋಗಿ ಪ್ರಾಚಾರ್ಯ ಟಿ.ಪಿ.ಅಕ್ಕಿಯವರನ್ನು ಭೆಟ್ಟಿಯಾದರು. ಚಿಕ್ಕ ವಯಸ್ಸು ಮತ್ತು ಸಣ್ಣಕಾಯದವರಾದ ಮಹಾವೀರನನ್ನು ಅಕ್ಕಿಯವರು ನೋಡಿ "ಈತನು ಬಹಳ ಚಿಕ್ಕವನಿದ್ದಾರೆ. ಇಲ್ಲಿಯ ಅಭ್ಯಾಸ ಈತನಿಗೆ ಬಹಳ ಭಾರವಾಗಬಹುದು" ಎಂದು ಪ್ರವೇಶಕ್ಕೆ ನಿರಾಕರಿಸುತ್ತಾರೆ. ಇವರ ಅಣ್ಣನವರು ಅಕ್ಕಿಯವರನ್ನು ವಿನಂತಿಸಿಕೊಂಡಾಗ ಪ್ರವೇಶಕ್ಕೆ ಒಪ್ಪುತ್ತಾರೆ. ಬಾಳಿಕಾಯಿ ಅವರು ಬಹಳ ಆಸಕ್ತಿಯಿಂದ ಕೆಲಸ ಮಾಡುತ್ತಾರೆ. ೧೯೬೨ ರಲ್ಲಿ ಡಿ.ಟಿ.ಸಿ. ಯಲ್ಲಿ ಅತಿ ಹೆಚ್ಚು ಅಂಕ ಪಡೆದು ಕಲಾ ಶಾಲೆಗೆ ಕೀರ್ತಿಯನ್ನು ತಂದರು. ಅಕ್ಕಿಯವರ ಪ್ರೀತಿಯ ವಿದ್ಯಾರ್ಥಿಯಾಗಿ, ಡಾ.ಬಿ.ಕೆ.ಹಿರೇಮಠ ಜಿ.ಬಿ.ಬಾರಿಯವರು ಪೇಂಟಿಂಗ್ ಕ್ಲಾಸಿನಲ್ಲಿ ಓದುತ್ತಿದ್ದರು. ಶ್ರೀಯುತರಾದ ಸಿ.ಎಸ್.ಪಾಟೀಲ, ಪ್ಪಿ.ಟಿ.ಕಾಳೆ, ಎನ್.ಎಸ್.ಶಿಲ್ಪಿ ಕಮಾನಗಾರ ಇವರ ಗುರುಗಳಾಗಿದ್ದರು. ಮುರಿಗೆಪ್ಪ ಚೆಟ್ಟಿಯವರು ಆಗಾಗ ಕ್ಲಾಸ್ ತೆಗೆದುಕೊಳ್ಳುತ್ತಿದ್ದರು. ಅವರ ಸಂಪರ್ಕದಲ್ಲಿದ್ದುಕೊಂಡು ಅವರಿಂದ ಬೆಳೆಯಲಿಕ್ಕೆ ಸಾಧ್ಯವಾಯಿತೆಂದು ಮಹಾವೀರರು ಸ್ಮರಿಸುತ್ತಾರೆ.

೧೯೬೩ರಲ್ಲಿ ಇಂಟರ್ ಮೀಡಿಯಟ್ ಪೇಂಟಿಂಗ್ ವರ್ಗದಲ್ಲಿ ಓದುತ್ತಿದ್ದರು. ಆಗ ಚಿತ್ರದುರ್ಗ ವಿಭಾಗದವರು "ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್" ಮುಖಾಂತರ ಚಿತ್ರಕಲಾ ಶಿಕ್ಷಕರ ಹುದ್ದೆಗೆ ಶಿಕ್ಷಕರನ್ನು ಕಳಿಸಲು ಅಕ್ಕಿಯವರಿಗೆ ಕೇಳಿಕೊಂಡಾಗ ಅವರು ಬಾಳೀಕಾಯಿಯವರು ಮತ್ತು ಎಸ್.ಬಿ.ಸುಂಕದ ಅವರ ಹೆಸರುಗಳನ್ನು ಸೂಚಿಸಿದರು. ಆಗ ಆ ಕಲಾ ಶಾಲೆಯಿಂದ ಚಿತ್ರಕಲಾ ಶಿಕ್ಷಕರಾಗಿ ಆ ವರ್ಷಕ್ಕೆ ನೇಮಕಗೊಂಡವರು ಇವರಿಬ್ಬರೇ. ಇದಕ್ಕಾಗಿ ಅಕ್ಕಿಯವರನ್ನು ಇವರು ಕೃತಜ್ಞಾಪೂರ್ವಕವಾಗಿ ನೆನೆಸುತ್ತಾರೆ.

ವೃತ್ತಿ ಜೀವನ (ಚಿತ್ರಕಲಾ ಶಿಕ್ಷಕರಾಗಿ)

ಬಾಳೀಕಾಯಿಯವರು ಶಿಕ್ಷಕರಾಗಿ ಕರ್ನಾಟಕದ ಹಲವಾರು ಭಾಗಗಳಲ್ಲಿ ಸರಕಾರಿ ಪ್ರೌಢಶಾಲೆಯಲ್ಲಿ ಮಕ್ಕಳಿಗೆ ಸ್ನೇಹ ಸ್ವಭಾವದಿಂದ ಹಾಗೂ ನಿಸ್ವಾರ್ಥ ಸೇವೆಯಿಂದ ಊರ ಜನರ ಪ್ರೀತಿಯಿಂದ ವಿದ್ಯಾರ್ಥಿಗಳಿಗೆ ಕಲಾಸಕ್ತಿ ಮೂಡುವಾಗೆ ಮಾರ್ಗದರ್ಶನ ಮಾಡಿ ಲೋಯರ್ ಮತ್ತು ಹೈಯರ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳಲ್ಲಿ ನೂರಕ್ಕೆ ನೂರು ಫಲಿತಾಂಶ ಬರುವಂತೆ ಮಾಡುತ್ತಿದ್ದರು.

೧೯೭೦ರಲ್ಲಿ ಧಾರವಾಡ ಸರಕಾರಿ ಹೆಣ್ಣು ಮಕ್ಕಳ ಟ್ರೇನಿಂಗ್ ಕಾಲೇಜಿಗೆ ಬಾಳೀಕಾಯಿಯವರಿಗೆ ವರ್ಗವಾಯಿತು. ಅಲ್ಲಿಯೂ ತಮ್ಮ ಕಾರ್ಯವನ್ನು ಬಹಳ ಚೆನ್ನಾಗಿ ಸೇವೆಯನ್ನು ಸಲ್ಲಿಸುತ್ತಾ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಅಲ್ಲಿಂದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜಿನ ಅಧೀನದಲ್ಲಿದ್ದ ಸೈನ್ಸ್ ಆರ್ಟ್ಸ್ ವಿಭಾಗಕ್ಕೆ ೧೯೭೩ರಲ್ಲಿ ವರ್ಗವಾಗಿ ಬಂದರು ಅಲ್ಲಿಯೂ ಕೂಡಾ ಮಕ್ಕಳಿಗೆ ಡ್ರಾಯಿಂಗ್‌ನ್ನು ಚಿತ್ರಿಸಲು ಮಾರ್ಗದರ್ಶನ ಮಾಡಿದರು. ಬಾಳೀಕಾಯಿಯವರು ಸರಕಾರಿ ಹೆಣ್ಣುಮಕ್ಕಳ ಟ್ರೇನಿಂಗ್

ಕಾಲೇಜಿನಲ್ಲಿದ್ದಾಗ ಮೇಲಾಧಿಕಾರಿಗಳ ಅಪ್ಪಣೆ ಪಡೆದು ೧೯೭೧ರಲ್ಲಿ ಡಿ.ವ್ಹಿ.ಹಾಲಭಾವಿಯವರ ಮಾರ್ಗದರ್ಶನದಲ್ಲಿ ಮಾಸ್ಟರ್ ಕೋರ್ಸ್ ಮುಗಿಸಿಕೊಂಡು, ೧೯೬೬ರಲ್ಲಿ ವಿಜಯ ಕಲಾ ಮಂದಿರ ಗದಗದಿಂದ ಡಿಪ್ಲೊಮಾ ಪೇಟಿಂಗ್ ಮಾಡಿಕೊಂಡು. ೧೯೭೨ ರಲ್ಲಿ ಭಾರತೀಯ ಕಲಾಕೇಂದ್ರದಿಂದ ಆರ್ಟ್ಸ್ ಮಾಸ್ಟರ್ ಅಧ್ಯಯನ ಮಾಡಿಕೊಂಡು ವೃತ್ತಿ ಜೊತೆಗೆ ಒಬ್ಬ ಶ್ರೇಷ್ಠ ಕಲಾವಿದರಾಗಿ ತಮ್ಮ ಕಲಾಕೃತಿ ರಚನೆಯೊಂದಿಗೆ ಅನೇಕ ಕಲಾಪ್ರದರ್ಶನಗಳು, ವಿಚಾರ ಸಂಕೀರ್ಣಗಳಂತಹ ಕಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಿ ಪ್ರೇರೇಪಿಸುತ್ತಿದ್ದರು.

ಬಾಳೀಕಾಯಿಯವರು ನಿವೃತ್ತಿ ನಂತರ ಕಲಾ ಜೀವನವನ್ನು ಕಲಾ ಶಾಲೆಗಳಲ್ಲಿ ಗೌರವ ಉಪನ್ಯಾಸಕರಾಗಿ ಗದಗ ವಿಜಯ ಕಲಾಮಂದಿರ, ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ ಹಂಪಿ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ ಬನಶಂಕರಿ-ಬಾದಾಮಿಯಲ್ಲಿ ಉಪನ್ಯಾಸ ಮಾಡುತ್ತಾ ತಾವು ಕಲಾ ಪ್ರಯೋಗಗಳನ್ನು ಮಾಡುವುದರೊಂದಿಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು.

ವಿಭಿನ್ನ ಮಾಧ್ಯಮಗಳಲ್ಲಿ ಕಲಾ ಪ್ರಯೋಗ

ಬಾಳೀಕಾಯಿ ಅವರು ತೈಲವರ್ಣ, ಜಲವರ್ಣ, ಅಕ್ರಾಲಿಕ್ ಗ್ಲಾಸ್ ಪೇಂಟ್, ಆಯಿಲ್ ಪೇಸ್ಟಲ್ಸ್, ಡ್ರೈ ಪೇಸ್ಟಲ್, ಇಂಡಿಯನ್ ಇಂಕ್, ಪ್ರಿಂಟಿಂಗ್ ಇಂಕ್ ಚಾರ್ಕೋಲ್ ಹೀಗೆ ಮುಂತಾದ ವರ್ಣಗಳಲ್ಲಿ ಚಿತ್ರ ರಚನೆ ಮಾಡಿದ್ದಾರೆ. ಸೆರಿಗ್ರಾಫಿ, ಸ್ಕ್ರೀನ್‌ಪ್ರಿಂಟಿಂಗ್‌ಗಳಲ್ಲಿ ಕಲಾಕೃತಿ ರಚಿಸಿದ್ದಾರೆ.

ತಮ್ಮದೇ ಆದ ರೂಪಗಳನ್ನು ರಚಿಸಿ ಬಣ್ಣಗಾರಿಕೆಯಿಂದ ಬ್ರಶ್ ಹಾಗೂ ನೈಫ್ ಮತ್ತು ಪೆನ್ಸಿಲ್ ಹಾಗೂ ಪೆನ್‌ಗಳು ಬಹಳ ಜಾಗರೂಕತೆಯ ಬಳಕೆಯಿಂದ ತಮ್ಮದೇ ಆದ ತಂತ್ರಗಾರಿಕೆಯಿಂದ ರಚಿಸಿದ್ದಾರೆ. ಇದು ಅಲ್ಲದೆ ಕೋಲಾಜದಲ್ಲಿ ಬಣ್ಣ ಬಣ್ಣಗಳ ತುಂಡು ಪೇಪರ್‌ಗಳನ್ನು ಅಂಟಿಸಿ ಚಿತ್ರ ರಚಿಸಿದ್ದಾರೆ. ಜಲವರ್ಣದಲ್ಲಿ ಬಳಸುವ ತಂತ್ರಗಾರಿಕೆಯನ್ನು ಮಿಶ್ರಮಾಧ್ಯಮದಲ್ಲಿಯೂ ಹೊಸ ಪ್ರಯೋಗಗಳ ಜೊತೆಗೆ ರಂಗೋಲಿ ಕಲೆಯಲ್ಲಿ ನಿಪುಣರಾಗಿ ರಂಗೋಲಿ ಪುಡಿಯಲ್ಲಿ ಹಲವಾರು ಕಲಾಕೃತಿಗಳು ಭಾವಚಿತ್ರಗಳನ್ನು ರಚಿಸಿ ಪ್ರದರ್ಶನ ಮಾಡಿ ಬಹುಮಾನಗಳನ್ನು ಪಡೆದು, ತಮ್ಮ ಬಹುಮುಖಿ ಪ್ರತಿಭೆಯನ್ನು ಸೃಜನಾತ್ಮಕತೆಯನ್ನು ಕಲಾಕೃತಿಗಳಲ್ಲಿ ಹೊಸತನ್ನು ಹುಡುಕಿ, ಪ್ರಯೋಗ ಮಾಡುವ ವಿಶೇಷ ಕಲಾವಿದರು ಬಾಳೀಕಾಯಿ ಅವರು.[೪]

ಭಾವಚಿತ್ರಗಳು

ಬಾಳೀಕಾಯಿ ಅವರು ಭಾವಚಿತ್ರವು ಹಲವು ತಂತ್ರಗಳ ಆಯಾಮಗಳ ಶೈಲಿಗಳನ್ನು ಮುಖ್ಯವಾಗಿ ಸೃಜನಶೀಲ ಚಿಂತನೆಗಳ ವಿಸ್ತಾರಕ್ಕೆ ಮಾಡಿಕೊಟ್ಟ ಪ್ರಮುಖ ಕಲಾ ಪ್ರಕಾರವಾಗಿದೆ. ತಮ್ಮ ಬದುಕಿನುದ್ದಕ್ಕೂ ಬಹುಸಂಖ್ಯೆಯಲ್ಲಿ ಭಾವಚಿತ್ರಗಳನ್ನು ಅನೇಕ ಸಂದರ್ಭಗಳಲ್ಲಿ ರಚಿಸುವ ಅವಕಾಶವನ್ನು

ಬಾಳೀಕಾಯಿಯವರು ಪಡೆದಿದ್ದಾರೆ. ಅವುಗಳಲ್ಲಿ ಬೇರೆ ಬೇರೆ ಕಲಾಶಾಲೆಗಳಿಗೆ ಬೆಟ್ಟಿ ನೀಡಿದ ಸಂದರ್ಭದಲ್ಲಿ ಪ್ರಾತ್ಯಕ್ಷಿಕೆ ನೀಡಿದ ಭಾವಚಿತ್ರಗಳೇ ಇವರಿಗೆ ಭಾವಚಿತ್ರದ ರಚನೆಯಲ್ಲಿ ವೈವಿಧ್ಯಮಯವಾದ ಅನುಭವ ನೀಡಿವೆ. ಇವರು ಜಲವರ್ಣ, ತೈಲವರ್ಣ, ಕೋಲಾಜ, ಪೆನ್ನು, ಮತ್ತು ಪೆನ್ಸಿಲ್‌ನಲ್ಲಿ ರೇಖೆಗಳಲ್ಲಿಯೇ ಭಾವಚಿತ್ರಗಳನ್ನು ರಚಿಸಿದ್ದಾರೆ.

ಚಿತ್ರಕಲೆಯಲ್ಲಿ ಜಲವರ್ಣಕ್ಕೆ ತನ್ನದೇ ಆದ ಅನನ್ಯತೆಯ ಮಹತ್ವವಿದೆ. ಪ್ರತಿಯೊಬ್ಬ ಕಲಾವಿದನ ಪ್ರವೇಶ ಬಹುತೇಕ ಜಲವರ್ಣದ ಮೂಲಕವೇ ಎಂದು ಹೇಳಬಹುದು. ನೀರಿನಲ್ಲಿ ಮಿಶ್ರಣ ಮಾಡುವ ಉದ್ದೇಶದಿಂದಲೇ ತಯಾರಿಸಿದ ಬಣ್ಣಗಳಲ್ಲಿ ನೀರನ್ನು ಮಿಶ್ರಣ ಮಾಡಿ ಚಿತ್ರಗಳನ್ನು ಚಿತ್ರಿಸುವುದೇ ಜಲವರ್ಣದ ವಿಧಾನ. ಜಲವರ್ಣ ಮಾಧ್ಯಮವು ಇನ್ನುಳಿದ ಯಾವುದೇ ಮಾಧ್ಯಮಗಳಂತಲೂ ನಿಸರ್ಗದೃಶ್ಯ ಚಿತ್ರ ಕಲಾಕೃತಿಗಳ ರಚನೆಗೆ ಅತ್ಯುತ್ತಮವಾದ ಮಾಧ್ಯಮವಾಗಿದೆ. ಅಂಥ ಮಾಧ್ಯಮದಲ್ಲಿ ಎಂ.ಆರ್.ಬಾಳೀಕಾಯಿ ಅವರು ಭಾವಚಿತ್ರಗಳಲ್ಲಿ ಮನುಷ್ಯ ಸಹಜ ಭಾವಲಹರಿಯ ವೈವಿಧ್ಯತೆಯನ್ನು ಹಿಡಿಯಲು ಪ್ರಯತ್ನಿಸಿದ್ದಾರೆ. ಜಲವರ್ಣದ ಸೂಕ್ಷ್ಮತೆಯನು ಭಾವಚಿತ್ರ ರಚನೆ ಮಾಡುತ್ತ ವ್ಯಕ್ತಿಯ ನೈಜತೆಯನ್ನು ಕಂಡಿದ್ದಾರೆ. ಕುವೆಂಪು, ದ.ರಾ.ಬೇಂದ್ರೆ, ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ.ಕೃ.ಗೋಕಾಕ್, ಯು.ಆರ್.ಅನಂತಮೂರ್ತಿ, ಗಿರೀಶ ಕಾರ್ನಾಡ್, ವೀರೇಂದ್ರ ಹೆಗಡೆ, ಹೀಗೆ ಹಲವಾರು ಚಿಂತಕರ ಗಣ್ಯ ವ್ಯಕ್ತಿಗಳ ಭಾವಚಿತ್ರಗಳಲ್ಲಿ ಜೀವಂತಿಕೆ ತುಂಬಿ ಚಿತ್ರಗಳನ್ನು ರಚಿಸಿದ್ದಾರೆ.

ಭಾವಚಿತ್ರ-೧

ಭಾವಚಿತ್ರಗಳಲ್ಲಿ ವಿಭಿನ್ನ ಪ್ರಯೋಗ ಮಾಡಿದ ಬಾಳೀಕಾಯಿ ಅವರು ಕೆಂಪು, ನೀಲಿ ಹಾಗೂ ಕಪ್ಪು ವರ್ಣದ ಪೆನ್ಸಿಲ್‌ಗಳ ಮೂಲಕ ತಮ್ಮ ಅಮೃತ ಕಲ್ಪನೆಯ ಮೂಲಕ ರೇಖೆಗಳನ್ನು ಗೀಚುತ್ತಾ ಗೀಚುತ್ತಾ ಅದರ ಜೊತೆಗೆ ಬಣ್ಣದ ರೇಖೆಗಳ ಸಂಯೋಜನೆ ಮಾಡಿಕೊಂಡು ಚಿಂತಿಸುವ ಲಹರಿ ಈ ಭಾವಚಿತ್ರದಲ್ಲಿ ಮಹತ್ವ ಕಾಣುತ್ತದೆ. ಮುಖವನ್ನು ಎರಡು ಭಾಗವಾಗಿ ಜೋಡಿಸಿದ ಹಾಗೆ ಒಂದು ಕಡೆ ಕೆಂಪು ಮತ್ತೊಂದು ಕಡೆ ನೀಲಿ ವರ್ಣದ ರೇಖೆಗಳಲ್ಲಿ ಕಪ್ಪು ವರ್ಣದ ರೇಖೆಗಳು ನೆರಳು ಬೆಳಕಿಗೆ ಸಹಾಯಕವಾಗಿ ಮುಖದ ಸ್ಪಷ್ಟತೆ ಕಾಣಿಸುತ್ತದೆ. ಹಿಂದುಗಡೆ ಕಪ್ಪು ವರ್ಣಗಳಲ್ಲಿ ನೀಡುವಿಕೆ ಒಂದು ಪ್ರಯೋಗದ ಭಾವಚಿತ್ರವೆಂದು ಹೇಳಬಹುದು.

ಭಾವಚಿತ್ರ-೨

ಆಧುನಿಕ ಕಲಾ ಪ್ರಯೋಗದಲ್ಲಿ ಕಲಾವಿದರು. ಒಂದಲ್ಲೊ ಒಂದು ಪ್ರಯೋಗ ಮಾಡುತ್ತಾ ಬರುತ್ತಾರೆ. ಅಂಥ ಪ್ರಯೋಗಾತ್ಮಕವಾಗಿ ರೇಖೆಗಳನ್ನು ಬಳಸಿಕೊಂಡು ಬಾಕ್ಸ್ (ಜಾಕ್) ಗಳನ್ನು ಹಾಕಿ ಭಾವಚಿತ್ರ ರಚಿಸಿದ್ದಾರೆ. ಹಿಂದುಗಡೆ ಗಾಢವಾದ ಬಣ್ಣ ಬಳಸಿದರೆ ವ್ಯಕ್ತಿಯ ಭಾಗವನ್ನು ಬಣ್ಣ ಬಳಸದೆ ರೇಖೆಗಳನ್ನು ಮಾತ್ರ ಹಾಕಿ ಅವಶ್ಯವಿದ್ದಲ್ಲಿ ಹೆಚ್ಚು ರೇಖೆಗಳು ಹಾಕಿ ಭಾವಚಿತ್ರ ಪೂರ್ಣಗೊಳಿಸಿದ್ದಾರೆ ಈ ತರಹದ ಭಾವಚಿತ್ರಗಳು ವಿದ್ಯಾರ್ಥಿ ಹಂತದಲ್ಲಿ ಹೆಚ್ಚು ಸ್ಫೂರ್ತಿಯಾಗಲಿದೆ.

ಭಾವಚಿತ್ರ-೩

ಗಿರೀಶರ ರಚಿಸಿದ ಈ ಭಾವಚಿತ್ರವು ಜಲವರ್ಣ ಮಾಧ್ಯಮದಲ್ಲಿ. ಹಂತ ಹಂತವಾಗಿ ಬಣ್ಣಗಳನ್ನು ಲೇಪಿಸುತ್ತಾ ಒಂದು ವಯೋಮಾನದ ಗಂಭೀರ್ಯತೆಯಿದೆ. ಮುಖದಲ್ಲಿನ ಉಬ್ಬುತಗ್ಗುಗಳ ಪರಿಣಾಮ, ನೆರಳು, ಬೆಳಕು, ತಲೆಯ ಕೂದಲು ಗಾಢವಾಗಿ ಬೆಳೆದು ಅದರ ನೆರಳು ಹಣೆಯ ಮೇಲೆ ಬಿದ್ದಿರುವುದು ಬಿಳಿ ಬಣ್ಣದ ಅಂಗಿಯನ್ನು ಹೆಚ್ಚು ಬೆಳಕನ್ನು ಬಣ್ಣವನ್ನು ಬಳಸದೆ ಪೇಪರನ್ನು ಹಾಗೆ ಬಿಟ್ಟಿರುವುದು. ಸ್ಪಷ್ಟತೆ ಕಂಡುಬರುತ್ತದೆ. ಇಲ್ಲಿ ನೆರಳು-ಬೆಳಕನ್ನು ಪ್ರಧಾನವಾಗಿ ಬಳಸಿ ಭಾವಕ್ಕೆ ತಕ್ಕಷ್ಟು ರೂಪದರ್ಶಿಯ ಹತ್ತಿರ ಹೋಗಿ ನೈಜತೆಗೆ ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬಂದಿದೆ.

ಭಾವಚಿತ್ರ-೪

ಜಲವರ್ಣದಲ್ಲಿ ರಚಿಸಿದ ಈ ಭಾವಚಿತ್ರ ರೂಪದರ್ಶಿಯ ಬಾಹ್ಯ ಚಹರೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದಾರೆ. ಈ ಚಿತ್ರದಲ್ಲಿ ಕುಂಚ ಬೀಸುಗಳು, ನೆರಳು ಬೆಳಕಿನ ಛಾಯೆ. ಆ ರೂಪದರ್ಶಿಯನ್ನು ನೋಡಿದರೆ ಯೌವನಕ್ಕೆ ಬಂದ ಪುರುಷ ಎಂಬ ಭಾಸವಾಗುತ್ತದೆ. ಒಂದರ ನಂತರ ಒಂದು ಗಾಢವಾಗಿ ಬಣ್ಣಗಳನ್ನು ಬಳಸಿ ವಿಶಿಷ್ಟಯ ಪ್ರಕಾರವಾಗಿ ಬಣ್ಣಗಳು ಮಿಶ್ರಣ ರೂಪದಲ್ಲಿ ಲೇಪಿಸಿ ಸೌಂದರ್ಯವಾಗಿ ಜೀವಂತಿಕೆಯನ್ನು ಹತ್ತಿರವಾದಂತೆ ವ್ಯಕ್ತಪಡಿಸಿದ್ದಾರೆ.

ಬಾಳೀಕಾಯಿ ಅವರು ಚಿತ್ರರಚನೆಯಲ್ಲಿ ತಮ್ಮದೇಯಾದ ಕೆಲವು ತಂತ್ರ ಸಂಯೋಜನೆ ಮತ್ತು ಬೇರೆ ಬೇರೆ ಮೈವಳಿಕೆಯನ್ನು ಹೊಸ ಹೊಸ ತಂತ್ರಗಾರಿಕೆಯನ್ನು ಚಿತ್ರಗಳ ಪ್ರಯೋಗ ಮಾಡಿದ್ದಾರೆ. ಶಾರೀರಿಕ ಪ್ರಮಾಣಬದ್ಧತೆ ಹಾಗೂ ನೈಜತೆಗೆ ಮಹತ್ವಕೊಟ್ಟು ಅಮೂರ್ತತೆಯ ರೇಖೆಗಳ ಮುಖ ಭಾವದಲ್ಲಿ ಪ್ರಯೋಗ ಮಾಡಿ, ತೈಲವರ್ಣ, ಜಲವರ್ಣ, ಪೆನ್ಸಿಲ್ ಕೋಲಾಜ ಮಾಧ್ಯಮದಲ್ಲಿ ಭಾವಚಿತ್ರಗಳನ್ನು ರಚಿಸಿ ಒಬ್ಬ ಆಧುನಿಕ ಕಲಾವಿದರಲ್ಲಿ ಪ್ರಯೋಗಶೀಲರಾಗಿ ಶಿಕ್ಷಕರಾಗಿ ವಿದ್ಯಾರ್ಥಿಗಳಿಗೆ ಪಾಠ ಮಾಡಿ ನಿವೃತ್ತಿಯಾದ ಮೇಲೆ ಅತಿಥಿ ಉಪನ್ಯಾಸಕರಾಗಿ ಮಾರ್ಗದರ್ಶನ, ಕಲಾ ಪ್ರಾತ್ಯಕ್ಷಿಕೆ, ಕಲಾ ಉಪನ್ಯಾಸಗಳು, ಕಲಾ ಪ್ರಯೋಗಗಳನ್ನು ಮಾಡುತ್ತಾ ಕಲಾ ಕೃತಿಗಳಲ್ಲಿ ಕಲಾ ಕೌಶಲ್ಯ ಅಭಿವ್ಯಕ್ತಪಡಿಸಿದ್ದಾರೆ. ಇವರಿಗೆ ರಾಜ್ಯ, ರಾಷ್ಟ್ರ ಮಟ್ಟದ ಗೌರವ ಪ್ರಶಸ್ತಿಗಳು ನೀಡಿ ಗೌರವಿಸಿದ್ದಾರೆ. ಇಂಥ ಬಹುಮುಖ ಪ್ರತಿಭೆಯ ಸೃಜನಶೀಲ ಕಲಾವಿದ ಎಂ.ಆರ್.ಬಾಳೀಕಾಯಿ ಅವರು ನಾಡಿನಾದ್ಯಂತ ಕೀರ್ತಿಗೆ ಪಾತ್ರರಾಗಿದ್ದಾರೆ.

ಅಡಿ ಟಿಪ್ಪಣಿ

೧) ಚಿತ್ರಾಕ್ಷಿ : ಸಂ.ಪ.-ಡಾ.ಎಸ್.ಸಿ.ಪಾಟೀಲ ಪುಟ-[illegible]

೨) ಎಂ.ಆರ್.ಬಾಳೀಕಾಯಿ-ಸುರೇಶ ಹಾಲಭಾವಿ ಪುಟ-೧೦

೩) ಎಂ.ಆರ್.ಬಾಳೀಕಾಯಿ-ಸುರೇಶ ಹಾಲಭಾವಿ ಪುಟ-೧೨

೪) [illegible]

೫) ಚಿತ್ರಕೃಪೆ ಎಂ.ಆರ್.ಬಾಳೀಕಾಯಿ-ಸುರೇಶ.ಡಿ. ಹಾಲಭಾವಿ

ಎಂ.ಆರ್.ಬಾಳೀಕಾಯಿ ಅವರ ಭಾವಚಿತ್ರಗಳು



ಭಾವಚಿತ್ರ ೧

ಭಾವಚಿತ್ರ ೨



ಎಂ.ಆರ್.ಬಾಳೀಕಾಯಿ ಅವರ ಭಾವಚಿತ್ರಗಳು



ಭಾವಚಿತ್ರ ೩

ಭಾವಚಿತ್ರ ೪



ಅಧ್ಯಾಯ-ಐದು

ಕಲಾವಿದರ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಅಧ್ಯಾಯ-ಐದು

ಕಲಾವಿದರ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಕಲಾಕೃತಿಯೊಂದು ತನ್ನಿಂದ ತಾನೇ ಹುಟ್ಟುವುದಿಲ್ಲ. ಕಲಾಕೃತಿಯೊಂದರ ಹುಟ್ಟುವಿಕೆಯ ಹಿಂದೆ ಕಲಾವಿದನಿಗೆ ಬದುಕಿನ ಪಟ್ಟ ಅನುಭವಗಳು ಇರಬೇಕು. ಅನುಭವ ರೂಪ ಪಡೆದುಕೊಂಡು ಅಭಿವ್ಯಕ್ತಗೊಳ್ಳಬೇಕಾದ ಹಿನ್ನಲೆಯ ಪ್ರೇರಣೆಯೂ ಬೇಕು. ಪ್ರೇರಣೆಯೊಂದರಿಂದ ಕೃತಿಯೊಂದನ್ನು ಹುಟ್ಟು ಹಾಕುವಾಗ ಯಾವುದೇ ಕಲಾಕಾರ, ಕಲಾ ಪರಂಪರೆ ಇಲ್ಲದೇ ಕಲಾಕೃತಿಯೊಂದರ ಪ್ರಭಾವದ ನೆಳಕು ಮೂಡಿರಬಹುದು. ಇಂತಹ ಪ್ರೇರಣೆ, ಪ್ರಭಾವದಿಂದ ಹುಟ್ಟು ಪಡೆದ ಕಲಾಕೃತಿಯ ರಚನೆಯೊಂದಕ್ಕೆ ರಚನಾ ತಂತ್ರಗಾರಿಕೆ, ಸ್ವಂತ ಶೈಲಿಯ ಸಾಥ್ ಕೂಡ ಬೇಕಾಗುತ್ತದೆ. ಅಂದರೆ ಕಲಾಸೃಷ್ಟಿಯೊಂದರ ರಚನೆಯ ಹಿಂದೆ ನಾಲ್ಕು ಬಗೆಯ ಮುಖ್ಯ ಕ್ರಿಯೆಗಳು ನಡೆಯುತ್ತವೆ ಎಂದಾಯಿತು. ಹಾಗೂ ಕಲಾಸೃಷ್ಟಿಯ ಬದ್ಧತೆಗಳನ್ನು ಇಲ್ಲಿ ಪರ್ಯಾಲೋಚಿಸಬಹುದು.[1]

ಪ್ರಸ್ತುತ ವಿಷಯವು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು ಉತ್ತರ ಕರ್ನಾಟಕದ ಪ್ರಮುಖ ಭಾವಚಿತ್ರ ಕಲಾವಿದರು ಮತ್ತು ಅವರ ಕಲಾಕೃತಿಗಳು ಅಧ್ಯಯನವನ್ನು ಕೈಗೊಂಡಿದ್ದು ಅವರ ಕಲಾಕೃತಿಗಳಲ್ಲಿ ವ್ಯಕ್ತಗೊಂಡ ಪ್ರಭಾವ, ಪ್ರೇರಣೆ, ತಂತ್ರ, ಶೈಲಿ ಮುಂತಾದ ಅಂಶಗಳ ಮಹತ್ವದ ಕಾಲ್ಪನಿಕ ಅಧ್ಯಯನದಲ್ಲಿ ಹೇಳಲು ಪ್ರಯತ್ನವಿದೆ.

ಆರ್.ಎಂ.ಹಡಪದರವರಿಗೆ ಬಾಲ್ಯದಲ್ಲಿ ಬಾದಾಮಿ ಪರಿಸರದ ಕಲ್ಲು ಬಂಡೆಗಳು. ಹೆಚ್ಚು ಪ್ರಭಾವ ಬೀರಿದೆ. ಅವರ ಕಲಾಕೃತಿಗಳಲ್ಲಿ ಆಧುನಿಕೋತ್ತರ ಸಂದರ್ಭದಲ್ಲಿ ತಂತ್ರಗಾರಿಕೆಗೆ ಇರುವ ಮಹತ್ವ ಅನನ್ಯವಾದದು. ತಮ್ಮ ಅನುಭವದ ತಂತ್ರಗಳು ಬಣ್ಣಗಳ ಬಳಕೆ ಅರ್ಥ ಪೂರ್ಣವಾಗಿ ನಿರೂಪಿಸಿದ್ದಾರೆ.

ಹಡಪದರು ರಚಿಸಿದ ಭಾವಚಿತ್ರಗಳಲ್ಲಿ ಸ್ತ್ರೀಗೆ ಅಗ್ರಸ್ಥಾನ. ಅಕಾಡೆಮಿಕ್ ಶೈಲಿಯ ಭಾವಚಿತ್ರದಲ್ಲಿ ಉಜ್ವಲ ವರ್ಣಗಳ ಬಳಕೆ, ಚೈತನ್ಯಯುಕ್ತ ನಿರ್ವಹಣೆ, ಕುಂಚದ ಬೀಸುಗಳು ಸ್ವಚ್ಛಂದವಾಗಿ ಹರದಾಡಿ ರೂಪದರ್ಶಿಯ ಮೊಗಕ್ಕೆ ದಂಡುತನದ ಅನುಭವ ನೀಡುತ್ತದೆ. ವ್ಯಕ್ತಿಯ ಬಾಹ್ಯ ಚಹರೆಯನ್ನು ಗುರುತಿಸುವ ಸಂಭ್ರಮ. ಕೆಲವು ಭಾವಚಿತ್ರಗಳ ಹಿನ್ನೆಲೆಯಲ್ಲಿ ಅಮೂರ್ತ ಚಿತ್ರದಂತೆ ಬಣ್ಣಗಳೊಂದಿಗೆ ಆಟವಾಡುವ ಹುಡುಗತನವನ್ನೂ ಪ್ರಕಟಿಸುವ ಮೂಲಕ ಪ್ರಯೋಗದ ಹಾದಿಯಲ್ಲಿ ಸಾಗುತ್ತಾರೆ. ಅಲ್ಲದೇ ಸೂಕ್ಷ್ಮ ಸಂವೇದನಾ ಗುಣವನ್ನು ಚಿತ್ರಕ್ಕೆ ಹಡಪದರು ತುಂಬುತ್ತಾರೆ.[2] ಅವರು ಬಳಸುವ ಮಾಧ್ಯಮದ ಜೊತೆ ತಮ್ಮ ತಂತ್ರ ಹಾಗೂ ಶೈಲಿಯನ್ನು ಪ್ರಯೋಗದಲ್ಲಿ ನೋಡಬಹುದು.

ವಿಜಯ ಸಿಂಧೂರವರು ಜಮಖಂಡಿಯ ಪ್ರಕೃತಿಯ ಸೌಂದರ್ಯಕ್ಕೆ ಖ್ಯಾತಿ ಹೊಂದಿ ಅಂತಹ ಪ್ರಕೃತಿ ಮಡಲಿನ ಸೊಬಗನ್ನು ಸವಿಯುತ್ತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದಲ್ಲಿ ಪಕ್ವತೆಯನ್ನು ಅದರ ಜೊತೆಗೆ ಕಲೆಯಲ್ಲಿಯೂ ನಿಪುಣತೆ ಆಸಕ್ತಿಯಿಂದ ಬಾಲ್ಯದಲ್ಲಿಯೇ ರವಿವರ್ಮನ ಚಿತ್ರದಲ್ಲಿಯ ಪುರಾಣ,

ಪುರುಷರ ದೃಶ್ಯಕ್ಕೆ ಮನಸೋತು ಕಲಾ ಸ್ಫೂರ್ತಿಯನ್ನು ಕರಗತ ಮಾಡಿಕೊಂಡು. ಶಿಸ್ತಿನ ಎಸ್.ಎಸ್.ಕಾಮತ ಅವರ ಕೃತಿಗೆ ಮಾರುಹೋದರು. ಅಲ್ಲಿಂದ ಅವರು ಭಾವ ಚಿತ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿ ಅಲ್ಲಿಂದ ತಮ್ಮ ಸಂಪೂರ್ಣ ಜೀವನವನ್ನು ಕಲೆಗಾಗಿ ಮುಡುಪಾಗಿ ಒಂದು ದೃಡವಾದ ನಿರ್ಧಾರವನ್ನು ತೆಗೆದುಕೊಂಡರು. ತಮ್ಮ ಇಚ್ಛಾಶಕ್ತಿಯಂತೆ ಮುಂಬಯಿಯ ಸರ್.ಜೆ.ಜೆ.ಕಲಾ ಕಾಲೇಜಿನಲ್ಲಿ ತಮ್ಮ ಶಿಕ್ಷಣವನ್ನು ಪಡೆಯುವಾಗ ಅಕಾಡೆಮಿಕ್ ಪದ್ಧತಿಯು ಮತ್ತು ಜೆ.ಜೆ.ಕಲಾ ಶಾಲೆಯ ಪ್ರಭಾವ ಅವರ ಭಾವಚಿತ್ರಗಳಲ್ಲಿ ಕಾಣುತ್ತದೆ.

ರೂಪದರ್ಶಿಯನ್ನು ಮೊದಲು ಏಕಾಗ್ರತೆಯಿಂದ ಭಾವಭಂಗಿಯನ್ನು ಆಲಿಸಿ. ರೂಪದರ್ಶಿಯ ನೈಜತೆಯನ್ನು ರೇಖೆಗಳಲ್ಲಿ ಪೂರ್ಣಗೊಳಿಸಿ ವರ್ಣಗಳ ಸಂಯೋಜನೆಯಲ್ಲಿ ಉಬ್ಬು-ತಗ್ಗುಗಳ ನೆರಳು-ಬೆಳಕಿನ ಮಂದಹಾಸ. ಅತ್ಯಂತ ಗಮನಾರ್ಹವಾದ ರೀತಿಯಲ್ಲಿ ಕಣ್ಣಿಗೆ ಇಂಪನ್ನು ಹಾಗೂ ಸಂತಸವನ್ನು ನೀಡುವಾಗೆ ಚಿತ್ರಗಳು ರಚಿಸಿದ್ದಾರೆ.

ಭಾವಚಿತ್ರ ರಚಿಸುವ ಪೂರ್ವದಲ್ಲಿ ರೂಪದರ್ಶಿಯ ಅಳತೆ ಪ್ರಮಾಣಕ್ಕೆ ಹೆಚ್ಚು ಮಹತ್ವ ನೀಡಿ. ಮುಗ್ದತೆ ಗಾಂಭೀರತೆ ನಿಜದ ರೂಪತೆಯನ್ನು ವರ್ಣಗಳ ಬಳಕೆಯಲ್ಲಿ ತಮ್ಮ ತಂತ್ರ. ಶೈಲಿಯಲ್ಲಿ ಪಕ್ವತೆ ಭಾವಚಿತ್ರ ರಚನೆಯಲ್ಲಿ ಗಮನಾರ್ಹವಾದ ಕಲಾಕೃತಿಯಾಗಿ ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ತೈಲಮಾಧ್ಯಮದಲ್ಲಿ ಭಾವಚಿತ್ರಗಳನ್ನು ತಂತ್ರಗಳ ಪ್ರಯೋಗ ಮಾಡಿ ತಮ್ಮ ಶೈಲಿಯನ್ನು ಗುರುತಿಸಿಕೊಂಡಿದ್ದಾರೆ. ವಿಜಯ ಸಿಂಧೂರ ಅವರು.

ಎಂ.ಆರ್.ಬಾಳೇಕಾಯಿಯವರು : ಬಾಲ್ಯದಲ್ಲಿಯೇ ಬಣ್ಣಗಳ ಪ್ರಭಾವಕ್ಕೆ ಒಳಗಾಗಿದ್ದರು. ಅವರು ಬಾಲ್ಯದ ದಿನಗಳಲ್ಲಿ ಶಾಲೆಗೆ ಕಟ್ಟಲು ಕೊಟ್ಟು ಫೀಜಿನ ಹಣದಿಂದಲೇ ಬಣ್ಣ ಪೇಪರ್ ತಂದು ಗೀಜುತ್ತಾ ಬಣ್ಣದ ಮೋಡಿ ಅವರಿಗೆ ಪ್ರಭಾವಿಸಿತ್ತು. ವಿದ್ಯಾರ್ಥಿ ದೆಸೆಯಿಂದಲೇ ಆಸಕ್ತಿ ಕಲಾ ಕೌಶಲ್ಯ. ಅಭಿವ್ಯಕ್ತಿಸಲು ಯತ್ನಿಸಿದ್ದಾರೆ. ಹಾಗಾಗಿ ಅವರ ಕೃತಿಗಳಲ್ಲಿ ಕ್ಯೂಬಿಸಂ. ಸರಿಯಾಲಿಸಂನ ಪ್ರಭಾವಗಳನ್ನು ರಿಯಾಲಿಸ್ಟಿಕ್‌ನ ಪ್ರಭಾವವು ಕಂಡುಬರುತ್ತದೆ.

ಆಧುನಿಕ ಶೈಲಿಯಲ್ಲಿ ತಮ್ಮ ರೇಖೆಗಳ ಜೊತೆಗೆ ಕಲಾಕೃತಿ ರಚನೆಯಲ್ಲಿ ವಿಶಿಷ್ಟ ತಂತ್ರಗಳನ್ನು. ಆಯಾಮಗಳು ಭಾವಚಿತ್ರಗಳಲ್ಲಿ ಕಾಣಬಹುದು. ಅದರ ಜೊತೆಗೆ ಜಲವರ್ಣ. ತೈಲವರ್ಣ. ಕೊಲಾಜ. ಪೆಸ್ಟಲ್. ಮಿಶ್ರಮಾಧ್ಯದಲ್ಲಿ ಪ್ರಯೋಗ ಮಾಡಿ ಕಲಾ ಸೌಂದರ್ಯದ ವಿಶಿಷ್ಟ ಗುಣ ಕಲಾಶೈಲಿ ಗುರುತಿಸಬಹುದು.

1920ರಲ್ಲಿ ಜನಿಸಿದ **ಕೆ.ಬಿ.ಕುಲಕರ್ಣಿ** ಅವರು ಬೆಳಗಾವಿಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದರು. ಬಾಲ್ಯದಲ್ಲಿಯೇ ಚಿತ್ರಕಲೆಗೆ ಹೆಚ್ಚು ಪ್ರಭಾವ ಹೊಂದಿದ್ದರಿಂದ ಮೆಟ್ರಿಕ್ ನಂತರ ಚಿತ್ರಕಲೆಯ ಅಧ್ಯಯನ ಮಾಡಲು ಮುಂಬೈದ ಜೆ.ಜೆ.ಕಲಾ ಶಾಲೆಗೆ ಪ್ರವೇಶ ಪಡೆದು ಅಕಾಡೆಮಿಕ್

ಅಧ್ಯಯನ ಅಲ್ಲಿಯ ಪ್ರಭಾವ ಪ್ರೇರಣೆ ಕಲಾವಿದರನ್ನಾಗಿ ರೂಪಿಸಿದೆ ಹಾಗೂ ಕಲಾಶಾಲೆ ಸಂಸ್ಕೃತಿ, ತಂತ್ರಗಳನ್ನು ಅಧ್ಯಯನ ಮಾಡಿ ತಾವು ತಮ್ಮ ಕಲಾಕೃತಿಗಳಲ್ಲಿ ಪ್ರಯೋಗ ಮಾಡಿದ ಅಂಶ ಗಮನಾರ್ಹವಾಗಿ ಕಾಣಿಸುತ್ತದೆ.

ಕಲಾ ಅಧ್ಯಾಪಕರಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಕಲಾ ವಿದ್ಯಾರ್ಥಿಗಳನ್ನು ರೂಪದರ್ಶಿಯಾಗಿ ಸುಂದರಿಸಿ ವಿದ್ಯಾರ್ಥಿಗಳ ಸೃಜತೆ, ಮುಗ್ಧತೆ ವರ್ಣಗಳ ಬಳಕೆಯಲ್ಲಿ ವಿಶಿಷ್ಟ ತಂತ್ರ ಹಾಗೂ ಕುಂಚದ ಸೆಳೆತಗಳು ಸೌಂದರ್ಯವಾಗಿ ಸೃಜನತೆಯಿಂದ ಭಾವಚಿತ್ರ ಪೂರ್ಣಗೊಳಿಸಿದ್ದಾರೆ.ಜಲವರ್ಣ ತೈಲವರ್ಣ ಹಾಗೂ ಪೆನ್ಸಿಲ್, ಪೆನ್ಸಿನಲ್ಲಿ ಭಾವಚಿತ್ರಗಳನ್ನು ಈ ಮಾಧ್ಯಮಗಳಲ್ಲಿ ನೆರಳು-ಬೆಳಕಿನ ಅಂಶ, ಸ್ಪಷ್ಟತೆಯನ್ನು ಕಲಾಕೃತಿಯಲ್ಲಿ ಕಾಣುವ ಹಾಗೆ ಸೂಕ್ಷ್ಮತೆಯನ್ನು ಚಿತ್ರ ರಚನೆಯಲ್ಲಿ ತೋರಿಸಿದ್ದಾರೆ.

ಶಂಕರಗೌಡ ಬೆಟ್ಟದೂರರು: ತಮ್ಮ ಸಮಗ್ರ ಚಿತ್ರಗಳ ಹಾಗೂ ತಮ್ಮ ಜೀವನ ಶೈಲಿಯ ಮೂಲಕ ಬೆಂಗಾಲ್ ಶಾಲೆಯ ಒಂದು ಅಗೋಚರ, ಅಂಚಿನ ಮುಖವನ್ನು ಪ್ರಸ್ತುತ ಪಡಿಸುತ್ತದೆ.

ಕಲಾಭವನದಲ್ಲಿ ವಿದ್ಯಾರ್ಥಿಯಾಗಿದ್ದಾಗ ವಿಪರೀತ ವೇಗದಿಂದ ಚಿತ್ರ ರಚಿಸುತ್ತಿದ್ದರಂತೆ ಮೊದಲು ಕರಡು ಪ್ರತಿ ನಂತರ ರೇಖಾಚಿತ್ರ ರಚನೆ, ನಂತರ ಬಣ್ಣ ಹಚ್ಚುತ್ತಿದ್ದಾರೆ.[೫] ಹೀಗೆ ಬೆಂಗಾಲಿ ಕಾಲೇಜಿನ ಪ್ರಭಾವ ಬಟ್ಟದೂರರಿಗೆ ಹೆಚ್ಚು ಸ್ಫೂರ್ತಿ ಮತ್ತು ಕಲಾಸೃಷ್ಟಿಗೆ ಪ್ರೇರಣೆಯೂ ಕಲಾಕೃತಿಗಳಲ್ಲಿ ವಾಶ ತಂತ್ರವನ್ನು ತಮ್ಮದೇ ಶೈಲಿಯಲ್ಲಿ ತೈಲವರ್ಣ, ಜಲವರ್ಣದಲ್ಲಿ ಪ್ರಯೋಗ ಮಾಡಿದ ವೈಯಕ್ತಿಕತೆಯೇ ಅವರ ಶೈಲಿಯಾಗಿ ಗುರುತಿಸಲಾಗುತ್ತದೆ.

ಎಸ್.ಎಂ.ಪಂಡಿತರಿಗೆ ಮನೆಯೇ ಅವರಿಗೆ ಕಲಾ ಶಾಲೆಯಾಗಿ ರೂಪಗೊಂಡು, ರವಿವರ್ಮರ ಕಲಾಕೃತಿಗಳಿಂದ ನಿಸರ್ಗ, ಸೌಂದರ್ಯಾನುಭೂತಿಯ ಪ್ರಭಾವ ಚಿತ್ರ ಕಲಾಕ್ಷೇತ್ರಕ್ಕೆ ಕಾಲಿರಿಸಲು ಪ್ರೇರಕ ಶಕ್ತಿಯಾಯಿತು.[೬]

ಮುಂಬಯಿಯ ಜೆ.ಜೆ.ಕಲಾಶಾಲೆಯ ಪಠ್ಯಕ್ರಮ ಮತ್ತು ವ್ಯಕ್ತಿಚಿತ್ರಣಕ್ಕೆ ಕೊಡುವಂತ ಮಹತ್ವ ಅಲ್ಲಿಯ ಅಧ್ಯಾಪಕರ ಪ್ರಭಾವ ಕೂಡಾ ಪಂಡಿತರ ಮೇಲೆ ಗಾಢವಾದ ಪ್ರಭಾವ ಬೀರಿ ಒಂದು ವೈಶಿಷ್ಟಪೂರ್ಣ ಶೈಲಿ ಕಲಾಕೃತಿಯಲ್ಲಿ ಕಾಣುತ್ತೇವೆ. ಸಾಂಪ್ರದಾಯಿಕ ಕಲೆಯಿಂದ ಪ್ರಭಾವಿತರಾಗಿ ಕೃತಿ ರಚನೆಯಲ್ಲಿ ತೊಡಗಿ ಪಾಶ್ಚಿಮಾತ್ಯ ಶೈಲಿಯ ವಾಸ್ತವ ಚಿತ್ರಣ ಶೈಲಿಯನ್ನು ಅರಿಯಬಹುದು.

ಪಂಡಿತರ ಭಾವಚಿತ್ರಗಳ ಪಾಶ್ಚಾತ್ಯ ಶೈಲಿಯಲ್ಲಿ ತಮ್ಮ ವರ್ಣಗಳ ಬಳಕೆಯಲ್ಲಿ ವಿಶಿಷ್ಟ ತಂತ್ರಗಳನ್ನು ಬಳಸಿಕೊಂಡು ರೂಪದರ್ಶಿಯ ಸೃಜತೆಯ ಮತ್ತು ಕೌಶಲ್ಯತೆಯ ಕೈಚಳಕ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆ ನಿಂತಿವೆ. ಪಂಡಿತರು ವರ್ಣಗಳ ಬಳಕೆಯಲ್ಲಿ ಹೆಚ್ಚು ಪೋಸ್ಟರ್ ಮತ್ತು ತೈಲವರ್ಣದಲ್ಲಿ ಸಾಕಷ್ಟು ಪ್ರಯೋಗ

ಮಾಡಿ ವಿವಿಧ ಭಾವಭಂಗಿಗಳು. ಅಭ್ಯಾಸ ಮಾಡಿ ಅವುಗಳಿಗೆ ಬಣ್ಣ ತುಂಬಿ ದೃಶ್ಯಭಾಷೆಗೆ ಹೊಸ ರೂಪ. ಶೈಲಿ. ತಂತ್ರವನ್ನು ಅವರ ಕಲಾಕೃತಿಗಳಲ್ಲಿ ವೈಶಿಷ್ಟ ಪೂರ್ಣವಾಗಿ ನೋಡಬಹುದು.

ಎಂ.ಎ.ಚೆಟ್ಟಿ ಅವರು ಬಾಲ್ಯದಲಿಯೇ ಚಿತ್ರಕಲೆಯಲ್ಲಿ ಹೊಂದಿದ್ದರು ಶಾಲಾ ದಿನಗಳಲ್ಲಿ ಶಿಕ್ಷಕರು ಗುರುತಿಸಿ. ಪ್ರೇರಣೆ ಮತ್ತು ಸ್ಫೂರ್ತಿ ನೀಡಿದರು. ಚಿತ್ರಕಲಾ ಅಭ್ಯಾಸ ಮಾಡುವಾಗಿನ ಸಂದರ್ಭದಲ್ಲಿ ಅವರ ಗುರುಗಳ ಅಲ್ಲಿನ ಅಕಾಡೆಮಿಕ್ ಕಲಾ ವಾತಾವರಣ, ಪ್ರಭಾವ ಒಂದೆಡೆಯಾದರೆ ಅಜಂತಾ ಕಿರುರೂಪ ಚಿತ್ರಗಳು ಹಾಗೂ ಆಗಿನ ಕಾಲದ ನಾಟಕದ ಪ್ರಭಾವವನ್ನು ಶಿಲ್ಪಗಳು ಪ್ರಭಾವ ಇವರ ಪ್ರಾರಂಭದ ದೆಸೆಯಲ್ಲಿಯ ಚಿತ್ರಗಳಲ್ಲಿ ನೋಡುತ್ತೇವೆ. ತದನಂತರದಲ್ಲಿ ಅವರು ತಮ್ಮದೇ ಆದ ಮಾರ್ಗದಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ.

ಚೆಟ್ಟಿಯವರು ಮುಂಬೈನ ಜೆ.ಜೆ.ಕಲಾ ಶಾಲೆಯಲ್ಲಿ ಕಲಿಯುವಾಗ ಪಾಶ್ಚಾತ್ಯರ ಆಳ್ವಿಕೆಗೆ ಒಳಪಟ್ಟಂಥ ಈ ಶಾಲೆಯಲ್ಲಿ ಪಾಶ್ಚಾತ್ಯ ಕಲಾಶಾಲೆಯಂತೆ. ಅಕಾಡೆಮಿಕ್ ಶೈಲಿಯ ತಂತ್ರವನ್ನು ಅಭ್ಯಾಸ ಕ್ರಮದ ನೆರಳನ್ನು ಆಗಿನ ಕಾಲದ ಎಲ್ಲಾ ಕಲಾವಿದರ ಕಲಾಕೃತಿಗಳಲ್ಲೂ ಕಾಣುತ್ತೇವೆ. ಹೀಗಾಗಿ ಭಾರತೀಯ ಹಾಗೂ ಪಾಶ್ಚಾತ್ಯ ಕಲಾ ಸಂಪ್ರದಾಯದ ಚಿತ್ರಕಾರರು ಬೆಳೆದು ಬಂದಹಾಗೆ ಅದರಲ್ಲಿ ಚೆಟ್ಟಿಯವರು ಒಬ್ಬರು.

ಅಕಾಡೆಮಿ ಶೈಲಿಯನ್ನು ರೂಢಿಸಿಕೊಂಡು ಅನೇಕ ಭಾವಚಿತ್ರಗಳನ್ನು ಜಲವರ್ಣ, ತೈಲವರ್ಣ, ಹಾಗೂ ಪೆನ್ಸಿಲ್ ಪೆಸ್ಟಲ್ ವರ್ಣಗಳಲ್ಲಿ ಅದ್ಭುತವಾಗಿ ಪ್ರಯೋಗ ಮಾಡಿದ್ದಾರೆ. ಭಾವಚಿತ್ರಗಳಲ್ಲಿ ಬಳಸಿದ ವರ್ಣಗಳು ಚರ್ಮದ ನೈಜದ ಅನುಭವ: ಜೀವಂತಿಕೆಯನ್ನು ಮೂಡಿಸಿ ಒಟ್ಟಾರೆ ವ್ಯಕ್ತಿತ್ವದ ಭಾವನೆಗಳು ಅಭಿವ್ಯಕ್ತಿಪಡಿಸಿದ್ದಾರೆ. ಎಂ.ಎ.ಚೆಟ್ಟಿಯವರು ಒಂದು ವಿಶಿಷ್ಟ ತಂತ್ರ ಎಂದರೆ ಭಾವಚಿತ್ರಗಳಲ್ಲಿ ಕಣ್ಣಿನಲ್ಲಿ ಜೀವ ಚೈತನ್ಯ ಹಾಗೂ ರೂಪದರ್ಶಿಯ ಮೈವಳಿಕೆ ವರ್ಣಗಳ ಮೂಲಕ ಅದೊಂದು ವಿಧಾನವಾಗಿ ಕಂಡುಕೊಂಡಿದ್ದಾರೆ. ಭಾವಚಿತ್ರ ರಚನೆಯನ್ನು ಪೂರ್ವ ತಯಾರಿಯಲ್ಲಿ ಭಾರತೀಯ ಸಂವೇದನೆಗಳಿಗೆ ಅನುಗುಣವಾಗಿ, ವೈಯಕ್ತಿಕವಾದ ತಂತ್ರ ಶೈಲಿ ಕಲಾ ನೈಪುಣ್ಯತೆಗಳಿಂದ ನೈಜ ಕಲೆಯ ಮೂಲಭೂತ ಸತ್ವಭರಿತ ರಕ್ತಗತ ಮಾಡಿಕೊಂಡು ಯಥಾವತ್ತಾಗಿ ರೂಪದರ್ಶಿಯ ನೈಜತೆ ವರ್ಣಗಳ ಸಂಯೋಜನೆಯೊಂದಿಗೆ ಪ್ರಯೋಗಿಸಿ ಸೌಂದರ್ಯತೆ ನಿರೂಪಿಸಿದ್ದಾರೆ.ಹಾಲಭಾವಿಯವರು ಪಾಶ್ಚಿಮಾತ್ಯ ಪದ್ಧತಿಯಲ್ಲಿ ಕಲಾಭ್ಯಾಸ ಮಾಡಿದರೂ ತಮ್ಮ ಕಲಾಕೃತಿಗಳನ್ನು ಭಾರತೀಯತೆಯ ಸೊಗಡನ್ನು ಅಭಿವ್ಯಕ್ತಿಸಿದ ರೀತಿ ಅನುಪಮವಾಗಿದೆ.

ಯುವಕನ ಭಾವಚಿತ್ರಗಳಲ್ಲಿ ನೇರವಾದ ರೇಖೆಗಳು ಸ್ಪಷ್ಟವಾಗಿ ಮೂಡಿಬಂದಿವೆ. ಅಷ್ಟೆ ಪ್ರಮಾಣದ ಗಾಂಭೀರ್ಯತೆಯನ್ನು ಕೃತಿಯು ಸೂಚಿಸುತ್ತದೆ. ಅಷ್ಟೆ ಪ್ರಮಾಣದಲ್ಲಿ ನೆರಳು ಬೆಳಕನ್ನು ಕಲಾಕೃತಿಯಲ್ಲಿ ತೋರಿಸಿದ್ದಾರೆ.

ಡಿ.ವಿ.ಹಾಲಭಾವಿಯವರು ಚಿತ್ರಕಲಾ ಅಭ್ಯಾಸ ಮಾಡುವ ಸಂದರ್ಭದಲ್ಲಿ ಅವರ ಗುರುಗಳ ಅಕಾಡೆಮಿಕ್ ಕಲಾ ವಾತಾವರಣದ ಪ್ರಭಾವ ಒಂದೆಡೆಯಾದರೆ, ಧಾರವಾಡದ ಪರಿಸರ ಹೊಸ್ಮಾವರ ಪರಿಸರ. ಹೀಗೆ ನಮ್ಮ ರಾಜರ ಸುತ್ತಮುತ್ತಲಿನ ಪರಿಸರ ಹಾಲಭಾವಿಯವರ ಮೇಲೆ ಗಾಢವಾದ ಪ್ರಭಾವ ಬೀರಿತು. ಹಾಗೂ ಜೆ.ಜೆ.ಕಲಾ ಶಾಲೆಯಲ್ಲಿ ಅಭ್ಯಾಸಿಸುವಾಗ ಪಾಶ್ಚಿಮಾತ್ಯ ಪದ್ಧತಿಯ ಅಕಾಡೆಮಿಕ್ ಶೈಲಿಯ ತಂತ್ರವನ್ನೇ ಹೇಳಿಕೊಡುತ್ತಿದ್ದರು. ಇದರಿಂದಾಗಿ ಆಲದ ಮರದಂತೆ ಹಬ್ಬಿನಿಂದ ಈ ಕಲಾಶಾಲೆಯ ಅಭ್ಯಾಸ ಕ್ರಮದ ನೆರಳನ್ನು ಆಗಿನ ಕಾಲದ ಎಲ್ಲಾ ಕಲಾವಿದರ ಕಲಾಕೃತಿಗಳಲ್ಲೂ ಕಾಣುತ್ತೇವೆ.

ಹಾಲಭಾವಿಯವರು ಭಾವಚಿತ್ರ ಕಲಾಕೃತಿಗಳನ್ನು ರಚಿಸುವ ಅವರು ಬಳಸಿದ ತಂತ್ರ ವಿಧಾನವನ್ನು ನಾವು ಗಮನಿಸಿದಾಗ ಅಧ್ಯಯನ ಕಾಲ ಹಂತದಲ್ಲಿಯ ಕಲಾಕೃತಿಗಳಲ್ಲಿ ಬಳಸಿದ ತಂತ್ರಗಾರಿಕೆ, ವರ್ಣಬಳಕೆಯಲ್ಲಿ ವಿಶಿಷ್ಟತೆಯ ಕಾಣುತ್ತದೆ. ನೆರಳು, ಬೆಳಕಿನಡೆ ಪ್ರಕಾರತೆ ರೂಪದರ್ಶಿಯ ನೈಜ ರೂಪತೆ, ಸ್ವಂತಿಕೆಯಾಗಿ ನಿರೂಪಿಸುತ್ತಿದ್ದಾರೆ.

ಭಾವಚಿತ್ರಗಳಲ್ಲಿ ತಮ್ಮದೇ ಆದ ಶೈಲಿ ವೈಶಿಷ್ಟತೆ ಮೈವಳಿಕೆಯ ಪ್ರಮಾಣ ಹಾಗೂ ವಿವಿಧ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ.

ಒಟ್ಟಾರೆಯಾಗಿ ಹಾಲಭಾವಿಯವರು ಕನ್ನಡ ನಾಡಿನ ಮಹಾನ್ ಕಲಾವಿದ, ಕಲಾತಪಸ್ವಿ, ಕುಂಚಬ್ರಹ್ಮ, ಎಂದು ಅನೇಕ ಸಾಹಿತಿಕಾರರು, ವಿದ್ವಾಂಸರು ಕರೆದರು ಅದಕ್ಕೆ ಕಾರಣ ಇವರು ಚಿತ್ರಣ ವಸ್ತು ಶೈಲಿ. ಇಂತಹ ನೈಜ ಕಲೆಯ ಪರಂಪರೆಯಲ್ಲಿ ನಡೆದವರು ಡಿ.ವಿ.ಹಾಲಭಾವಿಯವರು.

ಜೆ.ಎಸ್.ಖಂಡೇರಾವರು ತಮ್ಮ ಪ್ರಾಥಮಿಕ ಶಿಕ್ಷಣದಲ್ಲಿಯೇ ಹಲವಾರು ರೀತಿಯ ಪ್ರಭಾವಕ್ಕೆ ಒಳಗಾಗಿ ಕಲಾ ರಚನೆಯಲ್ಲಿ ತೊಡಗಿರುವುದನ್ನು ನೋಡಬಹುದು. ಯಾವುದೇ ಕಲಾವಿದನು ತನ್ನದೇ ಆದ ಒಂದು ಶೈಲಿಯನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅದು ಕ್ರಿಯಾತ್ಮಕವಾಗಿರಬಹುದು. ನೈಜವಾಗಿರುಹುವುದು ಅಥವಾ ಅಮೂರ್ತವಾಗಿರಬಹುದು. ಖಂಡೇರಾವರು ತಮ್ಮ ಭಾವಚಿತ್ರ ಕಲಾಕೃತಿ ರಚನಾ ಶೈಲಿಯನ್ನಾಗಿಸಿಕೊಂಡು ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಇನ್ನೂ ರಚಿಸುತ್ತಲೇ ಇದ್ದಾರೆ. ಇಲ್ಲಿ ಅವರದೇ ಆದಂತಿರುವ ಕೆಲವೇ ವರ್ಣಗಳನ್ನು ಬಳಸಿಕೊಂಡು ಕುಂಚದ ಮೂಲಕ ಲೇಪಿಸುವ ಚಾಕಚಕ್ಯತೆ ಖಂಡೇರಾವ ಭಾವಚಿತ್ರಗಳಲ್ಲಿ ಕಾಣಬಹುದು.

ಖಂಡೇರಾವ ಅವರು ಬಳಸುವ ವರ್ಣಗಳು ಸಾಮಾನ್ಯವಾದರೂ ಬಣ್ಣಗಳ ಮಿಶ್ರಣ ವ್ಯಕ್ತಿ ಭಾವಸ್ಪಂದನಕ್ಕೆ ಹತ್ತಿರವಾಗುವಂತೆ ಹಾವಭಾವಗಳು, ಮುಗ್ಧತೆ ಗಾಂಭೀರತೆಯನ್ನು ವರ್ಣಗಳ ಮಿಶ್ರಣದಲ್ಲಿಯೇ ಲೇಪಿಸುತ್ತ ಸೌಂದರ್ಯಗೊಳಿಸುವ ತಂತ್ರ-ವಿಧಾನವನ್ನು ಕಲಾಕೃತಿಗಳಲ್ಲಿ ಗುರುತಿಸಬಹುದು.

ಜೆ.ಜೆ.ಕಲಾ ಶಾಲೆಯಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಆಗಿನ ಖ್ಯಾತ ಕಲಾವಿದರಾದ ಎಸ್.ಎಸ್.ಬೇಂದ್ರೆಯವರ ಕಲಾಕೃತಿಗಳನ್ನು ನೋಡಿ ಪ್ರಭಾವಿತರಾಗಿ ಕಲಾ ಅಂಥದಲ್ಲಿಯೇ ತಮ್ಮದೇ ಶೈಲಿಯ ಕಲಾಕೃತಿಗಳಲ್ಲಿ ಪ್ರಯೋಗದ ಕಲಾಸೃಷ್ಟಿಯಲ್ಲಿ ತೊಡಗಿದರು. ವ್ಯಕ್ತಿ ಚಿತ್ರಗಳು-ಭಾವಚಿತ್ರಗಳಲ್ಲಿ ತಮ್ಮದೇ ಆದ ಒಂದು ಶೈಲಿಯನ್ನು ಕಂಡುಕೊಂಡು, ನೈಜತೆಯನ್ನು ನಿರೂಪಿಸಿ, ನೋಡುಗರಿಗೆ ಕುತೂಹಲ ಹುಟ್ಟಿಸಿದರು.

ಹೀಗೆ ಖಂಡೇರಾವರ ಪ್ರತಿಯೊಂದು ಹಂತದಲ್ಲಿ ರಚಿಸಿದ ಚಿತ್ರಗಳನ್ನು ಗಮನಿಸಿದಾಗ ಅವರ ವಿವಿಧ ವಿಧಾನ ಶೈಲಿ ಮತ್ತು ವೈವಿಧ್ಯಮವಾದ ತಂತ್ರ ವಿಧಾನದೊಂದಿಗೆ ಅನೇಕ ಭಾವಚಿತ್ರಗಳನ್ನು ರಚಿಸಿದ್ದಾರೆ ಅವುಗಳನ್ನು ನೋಡಬಹುದು.

ಕಲಾವಿದರಿಗೆ ಸವಾಲುಗಳೇನೂ ಹೊಸದಲ್ಲ. ಜೀವನದುದ್ದಕ್ಕೂ ಅವುಗಳನ್ನು ಎದುರಿಸಬೇಕಾಗುವ ಪ್ರಸಂಗಗಳೆಷ್ಟೋ ಆದರೆ ಅವುಗಳಿಂದ ವಿಚಲಿತರಾಗದೇ ಅದನ್ನು ಸದವಕಾಶಗಳನ್ನಾಗಿ ಪರಿವರ್ತಿಸಿಕೊಳ್ಳಲು ಉಪಕ್ರಮಿಸುವಾಗ ಅದರಿಂದುಂಟಾಗುವ ಸುಖ, ಸಾರ್ಥಕತೆ ಅನಿರ್ವಚನೀಯ.[೧೦]

ಅಂಥ ಅನುಭವಗಳನ್ನು ಪಡೆದ ಕಲಾವಿದರಲ್ಲಿ **ಎಂ.ಬಿ.ಪಾಟೀಲ**ರೊಬ್ಬರು. ವಿಜಾಪುರ ಜಿಲ್ಲೆಯ ತ್ರಿಕೋಟಾ ಗ್ರಾಮದಲ್ಲಿ ಜನಿಸಿದ ಇವರು ಓದು ತಲೆಗತ್ತದೆ ದನಕಾಯುವ ಕೆಲಸಕ್ಕೆ ಅಟ್ಟಿದರು. ಆದರೆ ಪಾಟೀಲರು ದನ ಕಾಯುವ ಜೊತೆಗೆ ಮಣ್ಣಿನಲ್ಲಿ ಗೊಂಬೆಗಳನ್ನು ಗಿಡ, ಮರಗಳ ಒಡನಾಟದಿಂದ ಗ್ರಾಮೀಣ ಪರಿಸರದ ಹಬ್ಬಗಳು ಪ್ರಭಾವ ಬೀರಿ ಒಬ್ಬ ಕಲಾವಿದನಾಗಲಿಕ್ಕೆ ವೇದಿಕೆ ನಿರ್ಮಾಣ ಮಾಡಿಕೊಟ್ಟಿತು. ಮುಂದೆ ಶಾಲೆಗೆ ಸೇರಿದವರು ಪಾಠಗಿಂತ ಚಿತ್ರಗಳ ಕಡೆ ಗಮನ ಹರಿಸಿದ ಬಾಲಕ ಮುಂದೆ ಮಲ್ಲಿಕಾರ್ಜುನ ಪಾಠಗಳನ್ನು ಮನಸ್ಸಿಟ್ಟು ಅಭ್ಯಾಸ ಮಾಡಿ ನಾಲ್ಕನೇ ಕ್ಲಾಸಿಗೆ ಪ್ರಥಮ ದರ್ಜೆಯಲ್ಲಿ ಪಾಸಾಗಿ ಮೊದಲ ಸ್ಥಾನ ಪಡೆದು ಪ್ರಶಂಸೆಗೆ ಪಾತ್ರರಾಗುತ್ತಾರೆ. ಹೀಗೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಕ್ಯಾಲೆಂಡರ್ ಚಿತ್ರಗಳು ರಾಮಾಯಣದ ದೃಶ್ಯಗಳು ಪಾಟೀಲರು ನೋಡಿ ಅದನ್ನೇ ಚಿತ್ರಿಸುತ್ತಿದ್ದರು. ಇವರ ಕಲಾಪ್ರತಿಭೆಯನ್ನು ಗಮನಿಸಿದ ಕಲಾ ಶಿಕ್ಷಕ ಎಂ.ಎಸ್.ಬಂಡ್ ಅವರನ್ನು ಕೃತಿ ರಚನೆಗೆ ಹುರಿದುಂಬಿಸಿದರು. ಹೀಗೆ ಮೊದಲುಗೊಂಡು ಅವರ ರೇಖೆ ಬಣ್ಣಗಳೊಡನೆಯ ಒಡನಾಟ "ಸತ್ಯವಾನ್ ಸಾವಿತ್ರಿ" ಎಂಬ ಚಿತ್ರದಿಂದ ಪ್ರಕಾಶಗೊಂಡಿತು. ಕೈಬರಹ ಪತ್ರಿಕೆಯೊಂದರ ಮೂಲಕ ಚಿತ್ರಗಳನ್ನು ಗಮನಿಸಿದ ಹಿರಿಯಣ್ಣ ಎಸ್.ಎಸ್.ಸಿ. ನಂತರ ಇವರನ್ನು ಕಲಾಭ್ಯಾಸಕ್ಕೆ ಮುಂಬೈಗೆ ಕಳುಹಿಸಲು ಒಪ್ಪಿದರು. ಜೆ.ಜೆ.ಕಲಾಶಾಲೆಯ ಪ್ರಭಾವ. ಅಲ್ಲಿಯ ಅಧ್ಯಾಪಕರ ಮಾರ್ಗದರ್ಶನದಿಂದ ಸ್ನೇಹಿತರ ಕೂಟದಲ್ಲಿ ಅತ್ಯಂತ ಉತ್ತಮ ಕಲಾವಿದ್ಯಾರ್ಥಿಯಾಗಿ. ವ್ಯಕ್ತಿಚಿತ್ರ ರಚನೆ ಸಂಯೋಜನೆ ಹಾಗೂ ಸ್ಕಿಚ್ ಲೈಫ್. ಹಾಗೂ ಭಾವಚಿತ್ರ ರಚನೆಯಲ್ಲಿ ಚಾರ್ಕೋಲ್, ಕ್ರೇಯಾನ ಹಾಗೂ ಇಂಕ್ ತೈಲವರ್ಣಗಳ ರೂಪವರ್ಣಿಯಗಳನ್ನು ಬಳಸಿ ಅನಾಟಮಿಕ್, ರೇಖೆಗಳ ಮೇಲೆ ಪ್ರಭುತ್ವವನ್ನು ಸಾಧಿಸಿದರು. ವಿದ್ಯಾರ್ಥಿಯ ದೆಸೆಯಲ್ಲಿಯೇ ನೂರಾರು

ಭಾವಚಿತ್ರಗಳನ್ನು ಎಲ್ಲಾ ಮಾಧ್ಯಮದಲ್ಲಿ ಪ್ರಯೋಗ ಮಾಡಿ ತಮ್ಮದೇ ಆದ ಶೈಲಿ; ತಂತ್ರಗಳನ್ನು ಕಂಡುಕೊಂಡರು.

ಎಂ.ಬಿ.ಪಾಟೀಲರ ಶೈಲಿಯಲ್ಲಿ ಅನುಕರಣೆಯಲ್ಲಿ ಅವರಲ್ಲಿರುವ ಕಲಾನುಭವ ಪ್ರತಿಯೊಂದು ಕೃತಿ ರಚನೆಯ ಪ್ರಾರಂಭದಲ್ಲೆ ಅವರನ್ನು ಅವರದ್ದೇ ಆದ ದಿಕ್ಕಿನಲ್ಲಿ ಸಾಗುವಂತೆ ಪ್ರೇರೇಪಿಸುತ್ತದೆ. ಪಾಟೀಲರ ಕೃತಿಯಲ್ಲಿ ಇತರ ಕೃತಿಗಳ ಛಾಯೆಯಿರದೆ ಭಿನ್ನ ರೀತಿಯ ಸಂಯೋಜನೆಗಳಿರುತ್ತವೆ. ಇವರ ಬಣ್ಣಗಳ ಸಮ್ಮಿಶ್ರಣ, ಬಣ್ಣಗಳ ಹೊಂದಾಣಿಕೆಯನ್ನು ಹುಡುಕಿಕೊಂಡು ಹೋಗುತ್ತದೆ.[11]

ಕಲಾ ಶಿಕ್ಷಣ ಮುಗಿಸಿಕೊಂಡ ಬಂದ ಮೇಲೆ ಉದ್ಯೋಗಕ್ಕೆ ಅಲೆದು ಅಲೆದು ಕೊನೆಗೆ ಕರ್ನಾಟಕ ಸರಕಾರದ ವಾರ್ತಾ ಇಲಾಖೆಯಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿ ಈ ವಿಶ್ರಾಂತಿ ಜೀವನ ನಡೆಸುತ್ತಿರುವ ಇವರ ಕಲಾಕೃತಿಗಳು ನಾಡಿನ ಅಭಿಮಾನಿಗಳ ಮನೆಮಾತಾಗಿವೆ ಅವಕಾಶ ಹಂಚಿಕೆ, ವರ್ಣವಿನ್ಯಾಸ, ಮಾಧ್ಯಮ, ತಂತ್ರಗಳ ನಿರ್ವಹಣೆ ಗಮನಾರ್ಹವಾಗಿದ್ದು,[12] ಕಲಾಕೃತಿಗಳಲ್ಲಿ ಅವರದೇ ಆದ ಛಾಪು ಎದ್ದು ಕಾಣುತ್ತದೆ.

ಎಂ.ಬಿ.ಪಾಟೀಲರು ಗ್ರಾಮೀಣ ಪ್ರದೇಶದಿಂದ ಪ್ರಭಾವವಾಗಿ ಕಲಾವಲಯದ ಮೂಲಕ ಪ್ರೇರಣೆ ಪಡೆದು ತಮ್ಮದೇ ಒಂದು ತಂತ್ರ ಶೈಲಿ ಕಂಡುಕೊಂಡು ಕಲಾಕೃತಿಗಳನ್ನು ರಚಿಸುತ್ತಾ ಜೀವನ ಕಳೆಯುತ್ತಿದ್ದಾರೆ.

ವಿ.ಟಿ.ಕಾಳೆಯವರು ಕಲಾಕೃತಿಗಳಲ್ಲಿ ತಮ್ಮದೇ ಆದ ತಂತ್ರ, ಶೈಲಿಯನ್ನು ಹೊಂದಿರುತ್ತದೆ. ಭಾವಚಿತ್ರಗಳ ಮೇಲೆ ಪಾಶ್ಚಾತ್ಯ ಮತ್ತು ಜೆ.ಜೆ.ಕಲಾ ಶಾಲೆಯ ಪ್ರಭಾವ ಬೀರಿದೆ. ಕಲಾವಿದರಾಗಿ ಕಾಳೆ ಅವರು ಭಾರತೀಯ ಪ್ರಾರಂಭಿಕ ಶೈಲಿಯ ಚಿತ್ರಕಲೆಯನ್ನು ಮುಂದುವರಿಸಿಕೊಂಡು ಬರುವುದರೊಂದಿಗೆ ಹೊಸತನವನ್ನು ಕಲಾಕೃತಿಗಳಲ್ಲಿ ಬಿಂಬಿಸಿದ್ದಾರೆ. ಅವರ ಕಲಾಕೃತಿಗಳಲ್ಲಿನ ಸೂಕ್ಷ್ಮ ರೇಖಾವಿನ್ಯಾಸ ಮತ್ತು ಬಣ್ಣಗಾರಿಕೆಯಲ್ಲಿನ ಪ್ರಬುದ್ಧತೆ, ಹದಗಾರಿಕೆ, ಆಶ್ಚರ್ಯ ಮತ್ತು ಸಂತೋಷಗಳನ್ನು ನೀಡುತ್ತವೆ ಎಂದು ಡಾ.ಶಿವಾನಂದ ಬಂಟನೂರು ಅವರು ಕಾಳೆಯವರ ಕಲಾಕೃತಿಗಳ ಕುರಿತು ಹೇಳಿದ್ದಾರೆ.[13]

ಕಾಳೆಯವರು ಸಾವಿರಾರು ಭಾವಚಿತ್ರಗಳನ್ನು ಬದುಕಿನುದ್ದಕ್ಕೂ ರಚಿಸುತ್ತಾ ಬಂದಿದ್ದಾರೆ. ಅಲ್ಲದೇ ಅವು ಪೆನ್ನು, ಪೆನ್ಸಿಲ್, ಇಂಕ್, ಜಲವರ್ಣ, ತೈಲವರ್ಣಗಳ ಮಾಧ್ಯಮದಿಂದ ಹೆಚ್ಚು ವಾಷ್ ತಂತ್ರದಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದಾರೆ. ಅನೇಕ ಬಗೆಯ ಚಿತ್ರರಚನಾ ಕೌಶಲ್ಯಗಳನ್ನು ವ್ಯಕ್ತಿತ್ವದ ದೈಹಿಕ ನೈತಿಕ ವಿಶೇಷ ಲಕ್ಷಣಗಳು ವಿಶಾಲ ಅರ್ಥದಲ್ಲಿ ಹೇಳಿದರೆ ಕಾಳೆ ಅವರ ಭಾವಚಿತ್ರದಲ್ಲಿ ಜೀವಂತಿಕೆ ಜೀವಾಳ ಎದ್ದು ಕಾಣುತ್ತದೆ.

ಕಾಳೆಯವರು ತೈಲವರ್ಣದಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದರೂ ಅವರ ಅತ್ಯಂತ ಮೆಚ್ಚುಗೆಯ ಮಾಧ್ಯಮ ಜಲವರ್ಣ ಮತ್ತು ವಾಷತಂತ್ರದಲ್ಲಿ.ರವೀಂದ್ರನಾಥ ಟ್ಯಾಗೋರರ ಕಲಾಕೃತಿಯಲ್ಲಿ ಕಾಣಬಹುದು. ಭಾವಚಿತ್ರದಲ್ಲಿ ಅಂತಃಸತ್ವವನ್ನು ತರಲು ಸಾಕಷ್ಟು ತಂತ್ರಗಳು ಬಳಸಿದ್ದಾರೆ.[೧೪] ವರ್ಣಗಳ ಮಿಶ್ರಣ ನೆರಳು-ಬೆಳಕಿನ ಸೂಕ್ಷ್ಮವಾಗಿ ಗಮನಿಸಿ. ವರ್ಣಗಳ ಸಂಯೋಜನೆಯಲ್ಲಿಯೇ ಶ್ರೀಮಂತಿಕೆಯನ್ನು ಗೋಚರಿಸುವ ಹಾಗೆ ವಿಭಿನ್ನತೆ ವಿಶಿಷ್ಟತೆಯ ತಂತ್ರಗಾರಿಕೆ ವಿ.ಟಿ.ಕಾಳೆಯವರ ಭಾವಚಿತ್ರಗಳಲ್ಲಿ ಕಾಣುತ್ತದೆ.

ಒಟ್ಟಾರೆಯಾಗಿ ಕಾಳೆಯವರ ಭಾವಚಿತ್ರಗಳಲ್ಲಿ ಜೆ.ಜೆ.ಕಲಾಶಾಲೆ ಮತ್ತು ಪಾಶ್ಚಾತ್ಯ ಪ್ರಭಾವದಿಂದ ಪ್ರೇರಣೆಯೂ ತಮ್ಮ ವರ್ಣಗಳ ಬಳಕೆಯಲ್ಲಿರುವ ತಂತ್ರಗಳ ಮೂಲಕ ಶೈಲಿ ಕಂಡುಕೊಂಡು ಕಲಾಕೃತಿಗಳ ಪ್ರಯೋಗ ಮಾಡುತ್ತಿದ್ದಾರೆ.

ಉತ್ತರ ಕರ್ನಾಟಕದ ಕಲಾವಿದರ ಮೇಲೆ ಹೆಚ್ಚು ಪ್ರಭಾವ ಬೀರಿದ್ದು ಜೆ.ಜೆ.ಕಲಾಶಾಲೆ ಯಾಕೆಂದರೆ ಸ್ವಾತಂತ್ರ್ಯಕ್ಕಿಂತಲೂ ಮೊದಲು ಬ್ರಿಟೀಷರ ಆಳ್ವಿಕೆಯ ಕಾಲ ಮತ್ತು ಭಾರತೀಯ ಕಲಾ ಸಂಪ್ರದಾಯದ ಅಧಃಪತನದ ಸಂಕ್ರಮಣದ ಕಾಲದಲ್ಲಿ ಮೊಟ್ಟ ಮೊದಲಿಗೆ ಭಾರತದಲ್ಲಿ ಪ್ರಾರಂಭವಾದ ಕಲಾಶಾಲೆ ಜೆ.ಜೆ.ಸ್ಕೂಲ್ ಮತ್ತು ಕಲ್ಕತ್ತಾ ನಂತರ ಮದ್ರಾಸ್ ಲಾಹೋರಗಳಲ್ಲಿ ಪ್ರಾರಂಭವಾದವು. ಆದರೆ ಉತ್ತರ ಕರ್ನಾಟಕದವರಿಗೆ ಮುಂಬಯಿ ಹತ್ತಿರವಾಗಿದ್ದರಿಂದ ಜೆ.ಜೆ.ಕಲಾಶಾಲೆಗೆ ಉನ್ನತ ಕಲಾ ಶಿಕ್ಷಣಕ್ಕೆ ಪ್ರವೇಶ ಪಡೆದಿವರು ಹಾಗೂ ಅಲ್ಲಿನ ಅಧ್ಯಾಪಕರು. ಶಿಸ್ತು ಬದ್ಧವಾದ ಪಾಠಗಳು ವಿದ್ಯಾರ್ಥಿಗಳಿಗೆ ಧಾರೆ ಹೇರಿದರು. ಮತ್ತು ಅಲ್ಲಿನ ಪ್ರಾಚಾರ್ಯರೆಲ್ಲಾ ಪಾಶ್ಚಾತ್ಯರಾಗಿದ್ದು ಹೀಗಾಗಿ ಜೆ.ಜೆ.ಕಲಾಶಾಲೆಯಲ್ಲಿ ಕಲಿತ ಕಲಾವಿದರಲ್ಲಿ ಕಲಾ ಶಾಲೆ ಜೊತೆಗೆ ಪಾಶ್ಚಾತ್ಯರ ಪ್ರಭಾವ ಕಲಾಕೃತಿಗಳಲ್ಲಿ ಹೆಚ್ಚು ಪರಿಣಾಮಗಳು ಬೀರಿವೆ. ಅಲ್ಲಿ ವ್ಯಕ್ತಿ ಚಿತ್ರಣಗಳನ್ನು ರಚಿಸಲು ನಗ್ನ ಆಕೃತಿಗೆ ಅಭ್ಯಾಸ. ಅಥವಾ ರೂಪದರ್ಶಿಗಳ ಬಳಕೆ ಮೂಲಕ ಚಿತ್ರ ರಚಿಸುವುದು ಮತ್ತು ಭಾವಚಿತ್ರದಲ್ಲಿ ಅಂಥ ಪ್ರಯೋಗಗಳು ವರ್ಣಗಳ ಬಳಕೆಯ ಮೂಲಕ ತಂತ್ರ. ಶೈಲಿ. ಶೈಲಿಯಲ್ಲಿಯೇ ಬೆಳೆದುಬಂದರು. ಇಂಥ ಕಲಾಶಾಲೆಯ ಪ್ರಭಾವ. ಕರ್ನಾಟಕದ ಹಲವಾರು ಕಲಾವಿದರು ಕಲಾ ಶಾಲೆಯಲ್ಲಿ ಅಧ್ಯಾಯನ ಮಾಡಿ ಜೆ.ಜೆ.ಕಲಾ ಶಾಲೆಯ ಪ್ರಭಾವಿತರಾಗಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ವ್ಯಕ್ತಿಚಿತ್ರಣ, ಭಾವಚಿತ್ರಗಳಲ್ಲಿ ಹೆಚ್ಚು ಕಲಾಕೃತಿಗಳು. ರಚನೆಯಲ್ಲಿ ತೊಡಗಿದವರಲ್ಲಿ ಉತ್ತರ ಕರ್ನಾಟಕದ ಪ್ರಮುಖ ಕಲಾವಿದರಾದ ವಿಜಯ ಸಿಂಧೂರ. ವಿ.ಟಿ.ಕಾಳೆ. ಜೆ.ಎಸ್.ಖಂಡೇರಾವ. ಕೆ.ಬಿ.ಕುಲರ್ಣಿ. ಎಂ.ಬಿ.ಪಾಟೀಲ. ಎಂ.ಎ.ಚೆಟ್ಟಿ. ಆರ್.ಎಂ.ಹಡಪದ. ಎಸ್.ಎಂ.ಪಂಡಿತ. ಡಿ.ವಿ.ಹಾಲಭಾವಿ ಈ ಕಲಾವಿದರ ಕಲಾಕೃತಿಗೆ ಜೆ.ಜೆ.ಕಲಾಶಾಲೆ ಮತ್ತು ಪಾಶ್ಚಾತ್ಯರ ಪ್ರಭಾವ ಬೀರಿ ಹೆಚ್ಚು ನೈಜತೆಗೆ ಹತ್ತಿರವಾಗುವಂತೆ ತಂತ್ರ. ಶೈಲಿಗಳ ವೈಶಿಷ್ಟ್ಯತೆಗಳು ಕಲಾಕೃತಿಗಳಲ್ಲಿ ಕಾಣಬಹುದು.

ಅಡಿ ಟಿಪ್ಪಣಿ

1) ಕಲಾನ್ವೇಷಕ ಆರ್.ಎಂ.ಹಡಪದ-ಡಾ.ಸಿದ್ದಲಿಂಗಸ್ವಾಮಿ ಹಿರೇಮಠ-ಪುಟ 317

2) ಕಲಾನ್ವೇಷಕ ಆರ್.ಎಂ.ಹಡಪದ-ಡಾ.ಸಿದ್ದಲಿಂಗಸ್ವಾಮಿ ಹಿರೇಮಠ-ಪುಟ 324

3) ಚೌಕಟ್ಟಿನಾಚೆ-ಚಿದಾನಂದ ಸಾಲಿ-ಪುಟ-3/4

4) ಎಸ್.ಎಂ.ಪಂಡಿತ -ವಿ.ಟಿ.ಕಾಳೆ-ಪುಟ-3

5) ಎಂ.ಎ.ಚೆಟ್ಟಿಯವರ ಜೀವನ, ಕಲಾಕೃತಿಗಳು-ಡಾ.ಲಕ್ಷ್ಮೀದೇವಿ ಪುಟ-351

6) ಎಂ.ಎ.ಚೆಟ್ಟಿಯವರ ಜೀವನ, ಕಲಾಕೃತಿಗಳು-ಡಾ.ಲಕ್ಷ್ಮೀದೇವಿ ಪುಟ-306

7) ಚಿತ್ರಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು-ಶಂಕರ ಕುಂದಗೋಳ-ಪುಟ 78

8) ಚಿತ್ರಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು-ಶಂಕರ ಕುಂದಗೋಳ-ಪುಟ 82

9) ಚಿತ್ರಕಲಾವಿದ ಡಿ.ವಿ.ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು-ಶಂಕರ ಕುಂದಗೋಳ-ಪುಟ 86

10) ಪ್ರಶಸ್ತಿ ಪಡೆದ ಕಲಾವಿದರು-ಸಂ.ಪಿ.ಆರ್.ತಿಪ್ಪೇಸ್ವಾಮಿ-ಪುಟ-151

11) ಅದೆ ಪುಟ-151

12) ಎಂ.ಜಿ.ಪಾಟೀಲ-ಜಿ.ಎಸ್.ವೆಂಕಟಲಕ್ಷ್ಮೀ-ಪುಟ 19

13) ದೃಶ್ಯ ಪದದೃಶ್ಯ-ಡಾ.ಶಿವಾನಂದ ಬಂಟನೂರ-ಪುಟ 82

14) ಕಲಾವಿದ ವಿ.ಟಿ.ಕಾಳೆ ಬದುಕು ಮತ್ತು ಕಲಾಕೃತಿಗಳು-ಸುಚಿತ್ರಾ ಜಿ.ಲಿಂಗದಳ್ಳಿ-ಪುಟ-178

ಅಧ್ಯಾಯ-ಆರು

ಸಮಾರೋಪ

ಸಮಾರೋಪ:

ಕಲೆ ಮಾನವನ ಅಭಿವ್ಯಕ್ತಿಯಿಂದುಂಟಾಗುವ ಸೃಷ್ಟಿ.ಕಲೆಗಳಲ್ಲಿ ಚಿತ್ರಕಲೆ ಅತ್ಯಂತ ಪ್ರಾಚೀನವಾದುದು. ಚಿತ್ರಕಲೆಯಲ್ಲಿ ಬಣ್ಣ, ರೇಖೆಗಳಿಗೆ ವಿಶಿಷ್ಟವಾದ ಅರ್ಥಗಳಿದ್ದು ಅವು ಮನೋವಿಜ್ಞಾನದ ಜೊತೆಗೆ ಪರೋಕ್ಷ ಸಂಬಂಧಿ ಹೊಂದಿವೆ. ಕಲಾಕೃತಿಯಲ್ಲಿ ಕೇವಲ ತಾಂತ್ರಿಕ ನೈಪುಣ್ಯತೆ ಒಂದಿದ್ದರೆ ಸಾಲದು. ಜೊತೆಗೆ ಕಲಾವಿದ ತಾನು ಅನುಭವಿಸಿದ ಲೋಕಾನುಭವಗಳನ್ನು ಮನೋವಿಜ್ಞಾನದ ತತ್ವಕ್ಕನುಸರಿಸಿ ಕಲಾಕೃತಿಯಲ್ಲಿ ಬಣ್ಣ ರೇಖೆಗಳ ಮುಖಾಂತರ ಅಭಿವ್ಯಕ್ತಿ ಪಡಿಸಿದಾಗ ಆ ಕೃತಿಯ ಮಹತ್ವ ಇನ್ನೂ ಹೆಚ್ಚುತ್ತದೆ. ಮತ್ತು ಅಂತಹ ಕಲಾಕೃತಿಗಳು ನೋಡುಗನ ಭಾವನೆಗೆ ತೀವ್ರವಾಗಿ ಸ್ಪಂಧಿಸುತ್ತದೆ. ಇಂತಹ ವಿಶಿಷ್ಟ ಗುಣಾತ್ಮಕ ಅಂಶಗಳನ್ನು ಅಳವಡಿಸಿಕೊಂಡು ಕೃತಿ ರಚನೆಯಲ್ಲಿ ತೊಡಗಿದ ಕರ್ನಾಟಕದಲ್ಲಿ ಹಲವಾರು ಕಲಾವಿದರು ಭಾವಚಿತ್ರಗಳ ರಚನೆಯು ಪ್ರಯೋಗ ಮಾಡಿದ ಕಲಾವಿದರಿಂದ ಗುರುತಿಸಲಾಗುತ್ತದೆ.

ಉತ್ತರ ಕರ್ನಾಟಕದ ಭಾವಚಿತ್ರ ಕಲಾವಿದರು ರಚಿಸಿದ ಕಲಾಕೃತಿಗಳನ್ನು ಸಹವಿಸ್ತಾರವಾದ ಅಧ್ಯಯನ ಮಾಡುವ ಅಗತ್ಯ ಇನ್ನೂ ಇದೆ ಎಂದು ಹೇಳಬಹುದು. ಭಾವಚಿತ್ರಕೆಯ ಹುಟ್ಟು ವಿಕಾಸದ ಬಗ್ಗೆ ಈ ಭಾವಚಿತ್ರ ಕಲಾವಿದರ ಬಗ್ಗೆ ಹಾಗೂ ಅವರು ರಚಿಸಿದ ಭಾವಚಿತ್ರಗಳ ಬಗ್ಗೆ ಅಧ್ಯಯನ ಮಾಡಲಾಗಿದೆ. ಅವರ ಬದುಕು ಮತ್ತು ಕಲಾಕೃತ್ತಿಗಳನ್ನು ಪರಿಚಯಿಸುವ ಚಿಕ್ಕ ಕಾರ್ಯವಾಗಿದೆ. ಕಾರಣ ಅಧ್ಯಯನದ ಅವಧಿ ಮತ್ತು ದೀರ್ಘವಾಗಿದೆ. ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಸ್ವತಂತ್ರ ಪೂರ್ವ ಕಲಾವಿದರ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದು ಅವರ ಜೀವನ ಹಾಗೂಕಲೆಯನ್ನು ಮುಂದಿನ ಜನಾಂಗಕ್ಕೆ ತಲುಪಿಸುವಂತ ಸಂಶೋಧನಾ ಕಾರ್ಯವನ್ನು ಕಲಾವಿದರು ಕಲಾ ಬರಹಗಾರರು ಕಲಾ ಸಂಶೋದಕರು ಮಾಡಬೇಕಾದ ಅನಿವಾರ್ಯತೆ ಇದೆ. ಇಲ್ಲಿ ಈ ಕಲಾವಿದರ ಬದುಕು ಮತ್ತು ಕಲಾಕೃತಿಗಳು ಬೆಳಕು ಕಾಣುತ್ತವೆ.

ಬಹಳ ಹಿಂದಿನ ಕಾಲದಿಂದಲೂ ಉತ್ತರ ಕರ್ನಾಟಕಕವನ್ನು ಭಾವಚಿತ್ರಗಳ ಕೂಟವೆಂದು ಕರೆಯುತ್ತಾರೆ. ಆದ್ದರಿಂದ ಭಾವಚಿತ್ರಗಳ ಬಗ್ಗೆ ಪರಿಪೂರ್ಣ ಹಾಗೂ ಪ್ರತ್ಯೇಕವಾದ ಅಧ್ಯಯನವನ್ನು ಕೈಗೊಳ್ಳಬಹುದಾದಷ್ಟು ವಿಷಯವನ್ನು ತನ್ನೊಡಲಲ್ಲಿ ತುಂಬಿಸಿಕೊಂಡಿದೆ.

ಈ ಭಾಗದ ಭಾವಚಿತ್ರ ಕಲಾವಿದರು ರಚಿಸಿದ ಚಿತ್ರಗಳು ಕರ್ನಾಟಕದ ಸುಸಂಸ್ಕೃತ ಪರಂಪರೆ, ಆಚಾರ ವಿಚಾರಗಳ ಆಧಾರದ ಮೇಲೆ ಭಾವಚಿತ್ರ ಕಲಾಕೃತಿಗಳು ರಚನೆಯಾಗಿವೆ. ಹೀಗೆ ಭಾವಚಿತ್ರ ಪ್ರಕಾರ ಒಂದೆಯಾದರೂ ಬೇರೆ ಬೇರೆ ಕಲಾವಿದರಿಂದಾಗಿ ಪ್ರಾದೇಶಿಕ ಕಲೆ ಅವರ ಮೇಲೆ ಬೀರಿದ ಪ್ರಭಾವದಿಂದಾಗಿ ಭಾವಚಿತ್ರ ಕಲಾಕೃತಿಗಳು ವಿಭಿನ್ನವಾಗಿವೆ. ಅಲ್ಲದೇ ಕಲಾ ವಿಧಾನ ಒಳ ಮತ್ತು ಹೊರ ಮನಸ್ಸು ಒಬ್ಬ ಕಲಾವಿದನಿಂದ ಇನ್ನೊಬ್ಬ ಕಲಾವಿದನಿಗೆ ವಿಭಿನ್ನವಾಗಿರುತ್ತವೆ. ಈ ಕಾರಣದಿಂದ ಕೃತಿಯಲ್ಲಿ ವಿಭಿನ್ನತೆಯು ಕಂಡುಬರುತ್ತವೆ.

ಕಲಾಕೃತಿಗಳ ಜೊತೆಗೆ ಕಲಾವಿದರು ತಮ್ಮ ಬದುಕನ್ನು ಹೀಗೆ ಕಟ್ಟಿಕೊಂಡರು ಎಂದು ತಿಳಿಯುದಕ್ಕೆ ಈ ಬಾಗದ ಕಲಾವಿದರನ್ನು ಮತ್ತು ಅವರ ಕಲೆಯನ್ನು ಕುರಿತು ಬೇರೆ ಬೇರೆ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಒಟ್ಟಾರೆಯಾಗಿ ಭಾವಚಿತ್ರ ಕಲಾವಿದರ ಬಗ್ಗೆ ಹೇಳುವ ಜೊತೆಗ ಭಾವಚಿತ್ರ ಕಲಾಕೃತಿಗಳನ್ನು ಪರಿಚಯಿಸುವಂತಹ ಮೂಲ ಉದ್ದೇಶವನ್ನು ಪ್ರಸ್ತುತ ಅಧ್ಯಯನವೂ ಹೊಂದಿದೆ.

ಪ್ರಸ್ತುತ ಈ ಭಾವಚಿತ್ರ ಕಲಾವಿದರ ಕಲಾಬದುಕು ಇವರು ರಚಿಸಿದ ಭಾವಚಿತ್ರ ಕಲಾಕೃತಿಗಳು ಹಾಗೂ ವಿಶೇಷವಾಗಿ ಭಾವಚಿತ್ರ ಕಲೆಯ ಐತಿಹಾಸಿಕ ಹಿನ್ನಲೆಯನ್ನು ಹೇಳುವಂತ ಗುರಿಯನ್ನು ಈ ಪ್ರಸ್ತುತ ಅಧ್ಯಯನವನ್ನು ಹೊಂದಿದೆ. ಈ ಅಧ್ಯಯನವು ಒಟ್ಟು ಐದು ಅಧ್ಯಯನಗಳಲ್ಲಿ ವಿಷಯ ಹರಡಿಕೊಂಡು ವಿಶ್ಲೇಷನೆಗೊಂಡಿದೆ.

ಮೊದಲನೆಯ ಅಧ್ಯಾಯದಲ್ಲಿ: ಅಧ್ಯಯನದ ಉದ್ದೇಶ. ಸ್ವರೂಪ. ವಿಧಾನ ಮತ್ತು ವ್ಯಾಪ್ತಿಯನ್ನು ಒಳಗೊಂಡಿದೆ. ಈ ಅಧ್ಯಯನವು ಪ್ರಸ್ತುತ ದಿನದಲ್ಲಿ ಎಷ್ಟು ಅವಶ್ಯಕತೆ ಎಂಬುದರ ಬಗ್ಗೆ ವಿವರಣೆಯನ್ನು ನೀಡಲಾಗಿದೆ. ಮತ್ತು ಅಧ್ಯಯನ ವ್ಯಾಪ್ತಿ ಸೃಷ್ಠಿ ಪಡಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ: ಭಾವಚಿತ್ರಕಲೆಯ ಒಂದು ಸ್ವತಂತ್ರವಾದ ಕಲಾಪ್ರಕಾರವಾಗಿ ಹೇಗೆ ಬೆಳೆದು ಬಂದಿದೆ. ಅದರಲ್ಲಿ ಅಂದಿನ ಆದಿಮಾನವನಿಂದ ಗುಹಾಲಯದ ಕಾಲದಲ್ಲಿ. ಭಿತ್ತಿ ಚಿತ್ರಗಳಲ್ಲಿ. ಪ್ರಾಚೀನ ಹಸ್ತಪ್ರತಿಗಳಲ್ಲಿ. ಸಾಹಿತ್ಯದಲ್ಲಿ. ಸಂಸ್ಕೃತ. ಕನ್ನಡ. ಪರ್ಶಿಯನ್ ಮುಂತಾದ ಕಾವ್ಯ ಸಾಹಿತ್ಯದಲ್ಲಿ ಭಾವಚಿತ್ರಕಲೆಯ ಕುರಿತು ಉಲ್ಲೇಖಗೊಂಡಿರುವುದನ್ನು ಹಾಗೂ ಭಾವಚಿತ್ರವು ಒಂದು ವಿಷಯವಾಗಿ ಬಂದ ಹಿನ್ನಲೆ. ಅದರ ಶಬ್ದಾರ್ಥ ಸ್ವರೂಪ ಹಾಗೂ ಐತಿಹಾಸಿಕ ಹೀಗೆ ವಿಭಿನ್ನ ಆಯಾಮದಲ್ಲಿ ಬೆಳವಣಿಗೆ ಹೊಂದಿದ ಭಾವಚಿತ್ರಕಲೆಯ ಸ್ವರೂಪವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿ :ಭಾವಚಿತ್ರ ರಚನಾ ವಿಧಿವಿಧಾನಗಳು ಮತ್ತು ಕಲಾವಿದರ ವಿವಿಧ ಮಾಧ್ಯಮದಲ್ಲಿಗಳಲ್ಲಿ ಅಂದರೆ ವರ್ಣಗಳ ಬಳಕೆಯಲ್ಲಿ ತಮ್ಮ ಸ್ವಂತಿಕೆಯನ್ನು ಭಾವಚಿತ್ರಗಳ ಮೂಲಕ ಅಭಿವ್ಯಕ್ತಗೊಂಡು ಬಗೆಯನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ:ಉತ್ತರ ಕರ್ನಾಟಕದ ಪ್ರಮುಖ ಭಾವಚಿತ್ರ ಕಲಾವಿದರಾದ ವಿಜಯ ಸಿಂಧೂರ. ವಿ.ಟಿ.ಕಾಳೆ. ಜೆ.ಎಸ್.ಖಂಡೇರಾವ್. ಕೆ.ಜಿ.ಕುಲಕರ್ಣಿ. ಎಂ.ಜಿ.ಪಾಟೀಲ. ಎಂ.ವಿ..ಚೆಟ್ಟಿ. ಆರ್.ಎಂ.ಹಡಪದ. ಎಸ್.ಎಂ.ಪಂಡಿತ. ಶಂಕರಗೌಡ ಬೆಟ್ಟದೂರ. ಡಿ.ವಿ.ಹಾಲಭಾವಿ. ಎಂ.ಆರ್. ಬಾಳಿಕಾಯಿ. ಅವರ ಕಲಾ ಜೀವನ ಹಾಗೂ ಅವರು ರಚಿಸಿದ ಭಾವಚಿತ್ರ ಕಲಾಕೃತಿಗಳ ವೈವಿಧ್ಯತೆಯ ಕುರಿತು ವಿವರವಾಗಿ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಐದನೇಯ ಅಧ್ಯಾಯನದಲ್ಲಿ : ಉತ್ತರ ಕರ್ನಾಟಕದ ಪ್ರಮುಖ ಭಾವಚಿತ್ರ ಕಲಾವಿದರುಗಳ ಮೇಲಾದ ಪ್ರಭಾವ, ಪ್ರೇರಣೆ ತಂತ್ರ ಹಾಗೂ ಶೈಲಿ ಮುಂತಾದ ಅಂಶಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ.

ಆರನೇಯ ಅಧ್ಯಾಯನದಲ್ಲಿ: ಸಮಾರೋಪವಾಗಿದ್ದು ಮೇಲಿನ ಆರು ಅಧ್ಯಾಯಗಳಿಂದ ಕಂಡುಕೊಂಡಂತಹ ಒಟ್ಟಾರೆ ಸಾರಂಶ ಹಾಗೂ ಪ್ರಮುಖ ಫಲಿತಗಳನ್ನು ಈ ಅಧ್ಯಾಯನದಲ್ಲಿ ಸಮೀಕ್ಷಿಸಲಾಗಿದೆ.

ಅಧ್ಯಯನದ ಪ್ರಮುಖ ಫಲಿತಗಳು

- ಪ್ರಸ್ತುತ ಅಧ್ಯಯನದಲ್ಲಿ ಮುಖ್ಯವಾದ ಅಂಶವೆಂದರೆ ಉತ್ತರ ಕರ್ನಾಟಕದ ಪ್ರಮುಖ ಭಾವಚಿತ್ರ ಕಲಾವಿದರ ಕುರಿತಾದ ಕಲೆ ಮತ್ತು ಬದುಕು ಅಧ್ಯಯನದ ವ್ಯಾಪ್ತಿಗೆ ಪೂರಕವಾಗಿ ಕಟ್ಟಿಕೊಡಲಾಗಿದೆ.
- ಭಾವಚಿತ್ರ ಕಲೆಯನ್ನು ಒಂದು ಸ್ವತಂತ್ರವಾದ ಅಧ್ಯಯನವಾಗಿ ಮಾಡುವ ಸಣ್ಣ ಪ್ರಯತ್ನವಿದೆ.
- ಉತ್ತರ ಕರ್ನಾಟಕ ಭಾಗದ ಕಲಾವಿದರ ಕಲಾಕೃತಿಯಲ್ಲಿ ಹಿಂದಿನಿಂದಲೂ ಭಾವಚಿತ್ರ ಕಲಾಪರಂಪರೆಯು ಇದ್ದು ಈ ಕಲಾ ಪರಂಪರೆಯು ಈ ಭಾಗದಲ್ಲಿ ಇನ್ನೂ ಜೀವಂತವಾಗಿ ಹೀಗೆ ಬೆಳೆದುಕೊಂಡು ಬಂದಿದೆ ಎಂದು ಹೇಳಲಾಗಿದೆ.
- ಭಾವಚಿತ್ರದ ಅರ್ಥ, ಸ್ವರೂಪ, ಭಾರತದಲ್ಲಿ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಈ ಕಲೆಯ ಪರಂಪರೆಯನ್ನು ಗುರುತಿಸಲಾಗಿದೆ.
- ಭಾವಚಿತ್ರಕಾರರ ಕಲಾ ಬದುಕು ಅವರ ಕಲಾಕೃತಿಯಲ್ಲಿ ಅನುಭವದ ಪ್ರಯೋಗಗಳನ್ನು ಅಧ್ಯಯನದಲ್ಲಿ ಚರ್ಚಿಸಲಾಗಿದೆ.
- ಭಾವಚಿತ್ರಗಳಲ್ಲಿ ಹಲವಾರು ಮಾಧ್ಯಮಗಳಲ್ಲಿ ಜಲವರ್ಣ ತೈಲವರ್ಣ. ಮಿಶ್ರಮಾಧ್ಯಮದಲ್ಲಿ ಪ್ರಯೋಗ ಮಾಡಿದ ಕಲಾವಿದರ ಸಾಧನೆಯ ಸ್ಥೂಲ ನೋಟವನ್ನು ಅಧ್ಯಯನದಿಂದ ಕಟ್ಟಿಕೊಡಲಾಗಿದೆ.
- ಈ ಕಲಾವಿದರ ಕಲಾಕೃತಿಗಳ ವಸ್ತು ವಿಷಯ ಕೆಲವು ಬಾರಿ ಒಂದೆಯಾದರೆ ಅವರದೇ ಆದ ಸ್ವಂತಿಕೆಯ ಅನುಭವದ ಅಂಶಗಳನ್ನು ಗುರುತಿಸಲಾಗಿದೆ.
- ಮುಂದಿನ ಜನಾಂಗಕ್ಕೆ ಈ ಕಲಾವಿದರೂ ಕಲಾಕೃತಿಗಳ ದಾಖಲೀಕರಣ ಒಂದು ಮಹತ್ವದ ಕಾರ್ಯವಾಗಿದೆ.
- ಈ ಕಲಾವಿದರ ಕಲಾಕೃತಿಗಳ ಸ್ಥೂಲತೆಯನ್ನು ತಿಳಿಸಿಕೊಡುವ ಪ್ರಯತ್ನ ಮಾಡಲಾಗಿದೆ.

- ಹೀಗೆ ಹತ್ತಾರು ಆಯಾಮದಲ್ಲಿ ಈ ಅಧ್ಯಯನವನ್ನು ಕಟ್ಟಿಕೊಡಲಾಗಿದೆ. ಈ ಅಧ್ಯಯನದಿಂದ ಮುಂದಿನ ಸಂಶೋಧಕರಿಗೆ ಹಲವಾರು ಹೊಸ ದಾರಿಗಳು ತೆರೆದುಕೊಳ್ಳುತ್ತವೆ ಎಂಬ ವಿಶ್ವಾಸವಿದೆ. ಇದು ಉತ್ತರ ಕರ್ನಾಟಕದ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸಿ ಅಧ್ಯಯನ ಮಾಡಿದ ಸಣ್ಣ ಪ್ರಯತ್ನ. ಇದೇ ರೀತಿಯ ನೂರಾರು ಜನ ಕಲಾವಿದರುಗಳ ಸಮಗ್ರವಾದ ಅಧ್ಯಯನದ ಅವಶ್ಯಕತೆ ಇದೆ. ಈ ದಿಸೆಯಲ್ಲಿ ಇದೊಂದು ಸಣ್ಣ ಪ್ರಯತ್ನ ಮಾತ್ರ.

ಅನುಬಂಧ-೧

ಸಂಕ್ಷೇಪಗಳು

- ಕ.ವಿ.ವಿ.ಧಾ. : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಕ.ವಿ..ವಿ.ಹಂ. : ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಕ.ಲ.ಅ.ಬೆಂ. : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
- ಕ.ಸಾ.ಪ.ಬೆಂ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
- ಮೈ.ವಿ.ವಿ : ಮೈಸೂರು ವಿಶ್ವವಿದ್ಯಾಲಯ
- ಚಿ.ಪ.ಬೆಂ : ಚಿತ್ರಕಲಾ ಪರಿಷತ್ತು, ಬೆಂಗಳೂರು
- ಪ್ರ.ಮೈ.ವಿ.ವಿ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
- ಪ್ರ.ಕ.ವಿ.ವಿ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
- ಪು : ಪುಟ
- ಅ.ಪ್ರ : ಅಪ್ರಕಟಿತ
- ಮ.ಪ್ರ : ಮಹಾಪ್ರಬಂಧ
- ಸಂ. : ಸಂಪಾದಕರು
- ಪ್ರ.ಸಂ. : ಪ್ರಧಾನ ಸಂಪಾದಕರು
- ಲೇ : ಲೇಖಕರು
- ಸಂ.ಪ್ರ : ಸಂಪ್ರಬಂಧ
- ಕಿ.ಪ್ರ : ಕಿರುಪ್ರಬಂಧ

ಅನುಬಂಧ-೨

ಪರಾಮರ್ಶನ ಗ್ರಂಥ

೧. **ಅಧ್ಯಯನದ ವಿಧಿವಿಧಾನಗಳು** — ಸಂ.ಡಾ.ಕೆ.ರವೀಂದ್ರನಾಥ್
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ ೨೦೧೧

೨. **ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ** — ಕೆ.ವಿ.ಕಾಳೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ ೨೦೦೦.

೩. **ನಾಡೋಜ ವಿ.ಟಿ.ಕಾಳೆ** — ಡಾ.ಎಸ್.ಸಿ.ಪಾಟೀಲ್
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ ೨೦೧೩

೪. **ನಾಡೋಜ ಜೆ.ಎಸ್.ಖಂಡೇರಾವ್** — ಡಾ.ಮಲ್ಲಿಕಾರ್ಜುನ ಸಿ. ಬಾಗೋಡಿ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ ೨೦೧೩.

೫. **ದೃಶ್ಯ ಕಲಾವಿದರು** — ಎನ್ ಮರಿಶಾಮಾಚಾರ್
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ ೨೦೦೩.

೬. **ಚಿತ್ರಕಲಾವಿದ ಡಾ.ಎಸ್.ಎಂ.ಪಂಡಿತ್** — ಡಾ.ಮೋಹನ್‌ರಾವ್ ಬಿ.ಪಾಂಚಾಳ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ ೨೦೧೦.

೭. **ಭಾರತದ ಖ್ಯಾತ ಚಿತ್ರಕಲಾವಿದ ವಿಜಯ್ ಸಿಂಧೂರ** — ಲಕ್ಷ್ಮಣ್ ರಾ ಬಗನಾಳ
ಅ.ಪ್ರಕಟಿತ ಎಂ.ವಿ.ಎ.ಕಿರುಪ್ರಬಂಧ.
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ ೨೦೦೮.

೮. **ವಿಜಯ್‌ಸಿಂಧೂರ** — ಕೆ.ವಿ.ಸುಬ್ರಹ್ಮಣ್ಯ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು.

೯. **ಕೆ.ಬಿ.ಕುಲಕರ್ಣಿ** — ಜಿ.ಎಂ.ಪಾಟೀಲ್
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೨೦೧೨

೧೦. **ದೃಶ್ಯಕಲಾ ವಿಮರ್ಶೆ** — ಪ್ರ.ಸಂ.ಪಿ.ಜಿ. ಅಂದಾನಿ.
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೧೯೯೯

೧೧ **ಎಂ.ಆರ್ ಬಾಳೆಕಾಯಿ** — ಸುರೇಶ್ ಡಿ.ಹಾಲ್‌ಭಾವಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೨೦೦೪.

೧೨ **ಎಂ.ಬಿ.ಪಾಟೀಲ್** — ಬಿ.ಎಸ್.ವೆಂಕಟ್‌ಲಕ್ಷ್ಮೀ.
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೨೦೦೦

೧೩ **ಜೆ.ಎಸ್.ಖಂಡೇರಾವ್** — ಕುಪ್ಪಣ್ಣ ಕಂದಗಲ್
ಕರ್ನಾಟಕ ಲಲಿತಕಲಾ ಅಕಾಡಮಿ
ಬೆಂಗಳೂರು. ೧೯೯೯

೧೪ **ಎಸ್.ಎಂ.ಪಂಡಿತ್** — ಪಿ.ಟಿ.ಕಾಳೆ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೧೯೮೯

೧೫ **ಮುಖಗಳೊಂದಿಗೆ ಮುಖಾಮುಖಿ** — ಕೆ.ವಿ.ಸುಬ್ರಹ್ಮಣ್ಯ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೨೦೧೨

೧೬. **ಕಲಾಕೋಶ** — ಪ್ರ.ಸಂ.ಟಿ.ಆರ್.ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೧೯೯೪.

೧೭. **ಬಿ.ಆರ್.ಕೋಟ್ಯಾಳ್‌ಕರ್** — ಜಿ.ಎಸ್.ಭೂಸಗೊಂಡ
ಕನ್ನಡ ಸಾಹಿತ್ಯ ಪರಿಷತ್
ಬೆಂಗಳೂರು ೨೦೧೩

೧೮. **ಆಟೋಗ್ರಾಫಿ** — ವಿಜಯ ಸಿಂಧೂರ

ಶ್ರೀಮತಿ ಮಹಾನಂದ ವಿಜಯಸಿಂಧೂರ್

ಜಮಖಂಡಿ ೨೦೦೯

೧೯. **ಹೈದ್ರಾಬಾದ್ ಕರ್ನಾಟಕದ ಭಾವಿಚಿತ್ರ ಕಲಾವಿದರ**

ಒಂದು ಅಧ್ಯಾಯನ ಅ ಪ್ರಕಟಿತ ಎಂ.ಫಿಲ್ ಸಂ.ಪ್ರಬಂಧ — ಅಶೋಕ.ಸಿ.ನಡುವಿನಮನಿ

ಕನ್ನಡ ವಿಶ್ವವಿದ್ಯಾಲಯ ಹಂಪಿ.೨೦೧೫.

೨೦. **ಚಿತ್ರಾಕ್ಷಿ** — ಪ್ರ.ಸಂ.ಡಾ.ಎಸ್.ಸಿ.ಪಾಟೀಲ್.

ಶ್ರೀ.ಡಿ.ವಿ.ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಧಾರವಾಡ್

ವಜ್ರ ಮಹೋತ್ಸವದ ಸ್ಮರಣ ಸಂಚಿಕೆ. ಧಾರವಾಡ ೨೦೦೫

೨೧. **ನಿಜದನೆಲೆ** — ಪ್ರ.ಸಂ.ಡಾ.ಎಸ್.ಸಿ.ಪಾಟೀಲ್.

ಡಾ.ಬಿ.ಕೆ.ಹೀರೇಮಠ್ — ಸತ್ಯಾನಂದ ಪಾತ್ರೋಟಿ.

ಅಭಿನಂದನ ಗ್ರಂಥ

ವೈರಾಗ್ಯ ಮಲ್ಲಣಾರ್ಯ ಪ್ರಕಾಶ ಬಸವೇಶ್ವರ ವಿದ್ಯಾವರ್ಧಕ ಸಂಘ

ಬಾಗಲಕೋಟೆ. ೨೦೦೩

೨೨. **ವರ್ಣಸಂಚಯ** — ಡಾ.ಎಸ್.ಸಿ.ಪಾಟೀಲ್

ವಿಜಯ ಚಿತ್ರಕಲಾ ಮಹಾ ವಿದ್ಯಾಲಯ ಇಳಕಲ್ ೨೦೦೧.

೨೩. ದೃಶ್ಯ ಬೆಳಕು — ಸಂಪಾದಕರು

ಡಾ.ಎಸ್.ಎಂ.ಪಂಡಿತ್ ಜನ್ಮ ಶತಮಾನೋತ್ಸವದ — ಡಾ.ಪಿ.ಪರಶುರಾಮ್

ವಿಶೇಷಸಂಚಿಕೆ೨೦೧೬

೨೪. **ಚೌಕಟ್ಟಿನಾಚೆ.** — ಚಿದಾನಂದ್ ಸಾಲಿ

ಜಗದ್ಗುರು ಶ್ರೀ.ಮನ್ವಾತಾಚಾರ್ಯ

ಮೂಲ ಮಹಾ ಸಂಸ್ಥಾನ

ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ಮಂತ್ರಾಲಯ

ಶ್ರೀ.ಹರಿತೀರ್ಥ ದಾಸ ಸಾಹಿತ್ಯ ಅಧ್ಯಾಯನ ಕೇಂದ್ರ

ರಾಯಚೂರು ೨೦೦೯.

೨೫. **ಮಾಟದೊಳಗಿನ ನೋಟ** — ಡಾ.ಶಿವಾನಂದ ಬಂಟನೂರು

ಪಾಟಿಪ್ರಕಾಶನ್ ಹೊಸಪೇಟೆ ೨೦೧೨.

೨೬. **ದೃಶ್ಯ ಪದದೃಶ್ಯ** — ಡಾ.ಶಿವಾನಂದ ಬಂಟನೂರು
ಅಲಕಾ ಪ್ರಕಾಶನ್
ಮೈಸೂರು ೨೦೧೩

೨೭. **ದೃಶ್ಯಸೃಷ್ಟಿ** — ಡಾ.ಶಿವಾನಂದ ಬಂಟನೂರು
ಅಲಕಾ ಪ್ರಕಾಶನ್
ಮೈಸೂರು ೨೦೦೯

೨೮. **ಕಲೆ ಮತ್ತು ರಸಸಾಧನೆ** — ಪ್ರೊ.ಎಂ.ಎಚ್.ಕೃಷ್ಣಯ್ಯ.
ಕರ್ನಾಟಕ ಲಲಿತ ಕಲಾ ಅಕಾಡೆಮಿ
ಬೆಂಗಳೂರು ೨೦೦೮

೨೯. **ಕಲಾವಿದ ಎಂ.ಎ. ಚಟ್ಟಿಅವರ ಜೀವನ ಮತ್ತು ಕಲಾಕೃತಿಗಳು** — ಡಾ. ಲಕ್ಷ್ಮೀದೇವಿ ಗವಾಯಿ
ವೀರಶೈವ ಅಧ್ಯಯನ ಅಕಾಡೆಮಿ
ಶ್ರೀ ನಾಗನೂರ ರುದ್ರಾಕ್ಷಿಮಠ, ಬೆಳಗಾವಿ-೨೦೦೩

೩೦. ಪ್ರಶಸ್ತಿ ಪಡೆದ ಕಲಾವಿದರು — ಪ್ರ.ಸಂ. ಪಿ.ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತ ಕಲಾ ಅಕಾಡೆಮಿ
ಬೆಂಗಳೂರು ೧೯೯೩

೩೧. **ದೃಶ್ಯ ಸಂಸ್ಕೃತಿ** — ಡಾ.ಮಲ್ಲಿಕಾರ್ಜುನ ಸಿ. ಬಾಗೋಡಿ
ಸರಚಂದ್ರ ಪ್ರಕಾಶನ, ಚಿತ್ತಾಪುರ ೨೦೧೧

೩೨. **ಚಿತ್ರಲೇಖ** — ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ
ಸರಚಂದ್ರ ಪ್ರಕಾಶನ, ಚಿತ್ತಾಪುರ ೨೦೦೯

೩೩. **ಕಲಾನ್ವೇಷಕ ಆರ್.ಎಂ.ಹಡಪದ** — ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ
ಲಿಂಗಾಯತ ಅಧ್ಯಾಯನ ಸಂಸ್ಥೆ.
ಜಗದ್ಗುರು ಯಡಿಯೂರು ತೋಂಟದಾರ್ಯ
ಸಂಸ್ಥಾನ ಮಠ ಡಂಬಳ, ಗದಗ-೨೦೧೦

೩೪. **ದೃಶ್ಯಾನುಭವ** — ಡಾ.ಮೋಹನ್‌ರಾವ್‌ಬಿ.ಪಾಂಚಾಳ್
ಅನ್ನಪೂರ್ಣ ಪ್ರಕಾಶನ, ಬೀದರ-೨೦೧೦

೩೫. **ಕಣ್ನೆಲೆ** — ರವಿಕುಮಾರ ಕಾಶಿ
ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ)
ಕರ್ನಾಟಕ-೨೦೧೨

೩೬. **ಚಿತ್ರಕಲಾ ಶಿಕ್ಷಣ** — ಮಂಜುನಾಥ ಕೆ. ಮಾನೆ
ಮಾನೆ ಕ್ರಿಯೇಷನ್ ವಿಜಾಪುರ-೨೦೧೧

೩೭. **ದೃಶ್ಯಕಲೆಗಳ ಗುಣ ಗ್ರಹಣ** — ಡಾ. ಅ.ಲ. ನರಸಿಂಹನ್
ಕರ್ನಾಟಕ ಲಲಿತ ಕಲಾ ಅಕಾಡೆಮಿ
ಬೆಂಗಳೂರು ೧೯೯೫

೩೮. **ಚಿತ್ರಕಲಾ ಪ್ರಪಂಚ** — ಪ್ರ.ಸಂ. ಪಿ.ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತ ಕಲಾ ಅಕಾಡೆಮಿ
ಬೆಂಗಳೂರು ೨೦೦೮

೩೯. **ಸೌಂದರ್ಯ ಶಾಸ್ತ್ರ** — ಅನುವಾದ: ಕಾಶಿನಾಥ ಅಂಬಲಗಿ
ಕರ್ನಾಟಕ ಲಲಿತ ಕಲಾ ಅಕಾಡೆಮಿ
ಬೆಂಗಳೂರು ೨೦೦೦

೪೦. **ಕಲಾ ಸಂಸ್ಕೃತಿ** — ಎಂ.ಎಚ್.ಕೃಷ್ಣಯ್ಯ
ಸ್ವಪ್ನಾ ಬುಕ್ ಹೌಸ್, ಬೆಂಗಳೂರು-೨೦೧೨

೪೧. **ಕಲಾವಿದ ವಿ.ಟಿ. ಕಾಳೆ ಬದುಕು ಮತ್ತು**
ಕಲಾಕೃತಿಗಳು ಒಂದು ಅಧ್ಯಯನ — ಸುಚಿತ್ರಾ ಜಿ ಲಿಂಗದಳ್ಳಿ
ಅಪ್ರಕಟಿತ ಪಿಎಚ್.ಡಿ ಮಹಾ ಪ್ರಭಂದ
ಕನ್ನಡ ವಿಶ್ವವಿದ್ಯಾಲಯ ಹಂಪಿ

೪೨. **ಎಂ.ಬಿ. ಪಾಟೀಲರ ಬದುಕು ಮತ್ತು** — ಎಸ್.ಎಸ್.ಗಡ್ಡಿ
ಕಲಾಕೃತಿಗಳ ಒಂದು ಅಧ್ಯಯನ
ಅಪ್ರಕಟಿತ ಪಿಎಚ್.ಡಿ ಮಹಾ ಪ್ರಭಂದ
ಕನ್ನಡ ವಿಶ್ವವಿದ್ಯಾಲಯ ಹಂಪಿ

೪೩. **ಚಿತ್ರಕಲಾವಿದ ಡಿ.ವಿ. ಹಾಲಭಾವಿ ಅವರ**
ಬದುಕು ಮತ್ತು ಕಲಾಕೃತಿಗಳು — ಶಂಕರ ಕುಂದಗೋಳ
ಎಂ.ಫಿ.ಎಲ್ ಸಂಪ್ರಭಂದ
ಕನ್ನಡ ವಿಶ್ವವಿದ್ಯಾಲಯ ಹಂಪಿ

೪೪. **ಚಿತ್ರ ಕಲಾವಿದ ಡಿ.ವಿ.ಹಾಲಭಾವಿ** — ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಶತಮಾನೋತ್ಸವದ ಕ್ಯಾಟಲಾಗ್
ಚಿತ್ರ ಕೃಪೆ ಅಂತರ್ಜಾಲ

ದೃಶ್ಯಕಲಾ ವಿಭಾಗ

ಲಲಿತಕಲಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

